# ಪುಸ್ತಕ ಪ್ರಪಂಚ

ಕುವೆಂಪು ವಿಶೇಷ ಸಂಚಿಕೆ–ಡಿಸೆಂಬರ್ 1994



## ಕೃತಜ್ಞತೆಗಳು

‘ಪುಸ್ತಕ ಪ್ರಪಂಚ’ ಹಾಗೂ ‘ಬೆಳಕು’ ಪತ್ರಿಕೆಗಳಿಗೆ ರಾಜ್ಯದಲ್ಲಿನ ಎಲ್ಲಾ ಜನಶಿಕ್ಷಣ ನಿಲಯಗಳೂ ಆಜೀವ ಸದಸ್ಯರಾಗುವಂತೆ ಶ್ರೀ ಬಿ. ಭೀಮಯ್ಯ, ಐ. ಎ. ಎಸ್., ನಿರ್ದೇಶಕರು, ಲೋಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು, ಇವರು ಆದೇಶ ಹೊರಡಿಸಿ ಪ್ರೋತ್ಸಾಹಿಸಿದ್ದಕ್ಕಾಗಿ ಅವರಿಗೆ ಕೃತಜ್ಞತೆಗಳು.

—ಸಂ.

## ಚಂದಾ ವಿವರ

| | | ಬೆಳಕು | ಪುಸ್ತಕ ಪ್ರಪಂಚ |
|---|---|---|---|
| ವಾರ್ಷಿಕ ಚಂದಾ | ವ್ಯಕ್ತಿಗೆ | ರೂ. 35-00 | ರೂ. 60-00 |
| | ಸಂಸ್ಥೆಗೆ | ರೂ. 40-00 | |
| ಆಜೀವ ಸದಸ್ಯತ್ವ | ವ್ಯಕ್ತಿಗೆ | ರೂ. 350-00 | ರೂ. 400-00 |
| | ಸಂಸ್ಥೆಗೆ | ರೂ. 500-00 | ರೂ. 600-00 |

# ಪುಸ್ತಕ ಪ್ರಪಂಚ

## ಮಾಸಿಕ

**ಸಂಪುಟ ೮೫ ಸಂಚಿಕೆ ೮**

ಪ್ರಧಾನ ಸಂಪಾದಕರು

**ಡಾ॥ ದೇ. ಜವರೇಗೌಡ**

ಸಂಪಾದಕ

**ಚಂದ್ರಶೇಖರಾರಾಧ್ಯ**

ಸದಸ್ಯರು

**ಸಿ. ಕೆ. ನೀಲಕಂಠರಾಜ್**
ಭಾ.ಆ.ಸೇ. (ಅಧ್ಯಕ್ಷರು)

**ಆರ್. ಶಾಂತರಾಜ್**
ಪ್ರಧಾನ ಕಾರ್ಯದರ್ಶಿ

**ಜಿ. ಟಿ. ನಾರಾಯಣರಾವ್**

**ರಾ. ನಂ. ಶ್ರೀನಿವಾಸಮೂರ್ತಿ**

**ಪರಮಶಿವ ನಡುಬೆಟ್ಟ**

**ಡಾ॥ ಹಾ. ತಿ. ಕೃಷ್ಣೇಗೌಡ**

**ಡಾ॥ ಪ್ರಧಾನ್ ಗುರುದತ್ತ**

**ಕೆ. ಶಿವರಾಮು**

**ಸಿ. ನಾಗಣ್ಣ**

**ಲತಾ ರಾಜಶೇಖರ್**

## ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Eductaion Council, Mysore-6. Price : Rupees Six

ಬಿಡಿಪ್ರತಿ : ರೂ. 6

ಮುಖ ಪುಟ ಕೃಪೆ :
ತಿಪ್ಪೇಸ್ವಾಮಿ

ಪ್ರಕಟಣೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು–570 006

# ಕಂಬನಿ

ಪ್ರೊ॥ ದೇಜಗೌ

ಮಹಾಕವಿಗಳೇ ವಿರಳ, ಮಹಾವ್ಯಕ್ತಿಗಳಂತು ಇನ್ನೂ ವಿರಳ: ಮಹಾಕವಿ ಮಹಾ ವ್ಯಕ್ತಿಯಾಗಿರುವುದಂತು ತೀರ ಅಪರೂಪ. ಭುವನದ ಭಾಗ್ಯದಿಂದ, ಒಂದು ಜನಾಂಗದ ಪುಣ್ಯದಿಂದ ಅಂಥ ವ್ಯಕ್ತಿ ದಶ ಶತಮಾನಕ್ಕೊಬ್ಬ ಭೂಮಿಯ ಮೇಲೆ ಜನ್ಮಧಾರಣೆ ಮಾಡಿದರೆ ಹೆಚ್ಚು. ಇಂಥ ಅಸಾಧಾರಣ ದೇವಮಾನವರಲ್ಲಿ ಕುವೆಂಪು ಒಬ್ಬರು.

ಬಾಲ್ಯದಲ್ಲಿಯೇ ನಿಸರ್ಗಮಹಿಮೆಯಿಂದ ಅಧ್ಯಾತ್ಮದ ಕಡೆಗೆ ವಾಲಿದ ಅವರು ಸ್ವಾಮಿ ಶ್ರೀ ಸಿದ್ಧೇಶ್ವರಾನಂದರ ಪ್ರೇರಣೆ ಪ್ರೋತ್ಸಾಹಗಳಿಂದ ಶ್ರೀ ರಾಮಕೃಷ್ಣಾಶ್ರಮ ವಾಸಿಯಾಗಿ, ಸ್ವಾಮಿ ಶ್ರೀ ಶಿವಾನಂದರ ದೀಕ್ಷಾಶೀರ್ವಾದ ಕೃಪೆಯಿಂದ ಶ್ರೀ ರಾಮಕೃಷ್ಣ ಪರಮಹಂಸರ ಕರಕಮಲ ಸಂಜಾತರಾಗಿ ಮಹಾ ಸಾಧನೆ ತಪಸ್ಸುಗಳಿಂದ ಸಿದ್ಧಿಯ ಶಿಖರವೇರುತ್ತಾರೆ; ಶ್ರೀ ಸ್ವಾಮಿವಿವೇಕಾನಂದರ ಆರಾಧಕರಾಗಿ, ಆರಾಧ್ಯವಸ್ತುವೇ ಆಗುತ್ತಾರೆ.

ವೇದೋಪನಿಷತ್ತುಗಳ ಕಾಲದ ಋಷಿಗಳನ್ನು ನೆನಪಿಗೆ ತರುವ, ಅಧ್ಯಾತ್ಮ ಕ್ಷೇತ್ರದಲ್ಲಿ ಅನುಭವ ಅನುಭಾವ ವಿದ್ವತ್ತುಗಳನ್ನು ಬಿತ್ತಿ ಅವರ ಸಾಹಿತ್ಯದ ಬೆಳೆಯನ್ನು ತೆಗೆದಿರುವ ಕುವೆಂಪು ಕವಿಕುಲತಿಲಕರು; ಅಧ್ಯಾತ್ಮ ಯೋಗ ಕಾವ್ಯ ಯೋಗಗಳೆರಡರಲ್ಲಿಯೂ ಸಿದ್ಧಿ ಪಡೆದ ಯೋಗಪುರುಷರವರು. ಜಗತ್ತಿಗೆ ಶುಭವಾಗಲೆಂದು, ಮನುಕುಲದ ಬದುಕು ಹೊನ್ನಾಗಲೆಂದು ಅವರು ತಪಸ್ಸಿನಲ್ಲಿ ಮುಳುಗಿ, ಕಾವ್ಯರತ್ನಗಳನ್ನು ಹೊರ ತೆಗೆದು ಚೆಲ್ಲಿದ್ದಾರೆ. ಅವರ ಹಲವು ಕಾವ್ಯ ಮಹಾಕಾವ್ಯ ಮಹಾನಾಟಕ ಮಹಾ ಕಾದಂಬರಿ ಕತೆ ಪ್ರಬಂಧಗಳಲ್ಲಿ ಅವರ ಅಲೌಕಿಕ ಪ್ರತಿಭೆ ಮತ್ತು ಪ್ರಖರ ವ್ಯಕ್ತಿತ್ವ ಜತೆಗೆ ಅವರ ಚಿರಂತನಾಲೋಚನೆ ತತ್ತ್ವ ಸಂದೇಶಗಳು ಹೆಣೆದುಕೊಂಡಿವೆ. ಜಗತ್ತಿನಲ್ಲಿ ಶಾಂತಿ ನೆಲಸಬೇಕಾದರೆ ಅವರು ನೀಡಿರುವ ವಿಶ್ವಮಾನವನ ಸಂದೇಶವನ್ನು ಮಾನವರು ಪಾಲಿಸಿದಾಗ ಮಾತ್ರ ಸಾಧ್ಯ. ಅವರ ಕೃತಿವಾಚನ ಮನನ ಆಚರಣೆಯಿಂದ ಬದುಕು ಹಸನಾಗುವುದಲ್ಲದೆ ಪ್ರತಿಯೊಬ್ಬ ಮಾನವನೂ ಯೋಗಮತಿಯಾಗುವ ಸಾಧ್ಯತೆಯಿದೆ.

ಕಾಲದೇಶ ಜನಾಂಗಗಳ ಎಲ್ಲೆಯನ್ನು ಮೀರಿದ ಇಂಥ ಋಷಿ ಕವಿ, ಮನುಕುಲದ ಗುರು ಗಂಗೋತ್ರಿಯಂತೆ ಎಲ್ಲೋ ಒಂದೆಡೆ ಹುಟ್ಟಿದರೂ ಇಡೀ ಜಗತ್ತಿನ ಆಸ್ತಿಯಾಗುಳಿದಿದ್ದಾರೆ. ಇಂಥ ಮಹಾ ತಪಸ್ವಿ

ಗಳನ್ನು ನೋಡಿದವರ ಕಣ್ಣು ಸಾರ್ಥಕ, ಅವರ ಕಾವ್ಯವನ್ನೋದಿದ ನಾಲಗೆ ಧನ್ಯ, ಅವರ ಕೃತಿಗಳನ್ನೋದಿಸಿ ಕೇಳಿದ ಕಿವಿಗೆ ಪುಣ್ಯ.

ಪ್ರಕೃತಿಯಿಂದ ಬಂದು, ಪ್ರಕೃತಿಯೊಡಲಲ್ಲಿ ಬೆಳೆದು, ಪ್ರಕೃತಿಯ ಕೃಪೆಗೆ ಪಾತ್ರರಾಗಿದ್ದ ಕುವೆಂಪು ಅವರ ಭೌತಿಕ ದೇಹ ಪ್ರಕೃತಿಯಲ್ಲಿ ಲೀನವಾಗಿದೆ. (೧೦-೧೧-೯೪) ತನ್ನ ಲೀಲಾವಿಲಾಸಕ್ಕೆ ತನ್ನ ಮಹಿಮಾಭಿವ್ಯಕ್ತಿಗೆ, ತನ್ನ ಉದ್ದೇಶದ ಈಡೇರಿಕೆಗೆ ಆ ದೇಹ ಶ್ರೀಯನ್ನು ಪ್ರವೇಶಿಸಿದ್ದ ವಿಶ್ವಚೈತನ್ಯ ಅವರ ಕೃತಿಗಳಲ್ಲಿ ತನ್ನತನದ ಮುದ್ರೆಯೊತ್ತಿ ಇದೀಗ ನಿಕೇತನದಿಂದ ಹೊರ ಬಂದು ನಿರ್ದಿಗಂತವಾಗಿ ವಿಶ್ವವ್ಯಾಪಿಯಾಗಿದೆ.

೧೦-೧೧-೧೯೯೪ರ ರಂದು ಈ ಶೋಕಾಚಾರಣೆಯ ಸಂದರ್ಭದಲ್ಲಿ ಜಗತ್ತಿನ ಸಮಸ್ತ ಕನ್ನಡಿಗರ ಕಂಬನಿಯ ಮಾಲೆಯಲ್ಲಿ ತನ್ನ ಕೃತಜ್ಞತೆಯ ಕಂಬನಿಯನ್ನೂ ಸೇರಿಸುವ ಇಚ್ಛೆಯಿಂದ ಪುಸ್ತಕ ಪ್ರಪಂಚದ ಸಂಪಾದಕರು, ಅದರ ವಾಚಕರು ಹಾಗೂ ಕರ್ನಾಟಕ ರಾಜ್ಯದ ವಯಸ್ಕ ಶಿಕ್ಷಣ ಸಮಿತಿ ಈ ವಿಶೇಷ ಸ್ಮರಣ ಸಂಚಿಕೆಯನ್ನು ಪ್ರಕಟಿಸುತ್ತಿದೆ. ಇದರ ಪ್ರಕಟಣೆಗೆ ನೆರವಾದ ಲೇಖಕ ಬಂಧುಗಳನ್ನು, ಪ್ರೋತ್ಸಾಹ ನೀಡಿದ ಅಧ್ಯಕ್ಷರನ್ನೂ, ಪ್ರಧಾನ ಕಾರ್ಯದರ್ಶಿಗಳನ್ನೂ, ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರನ್ನೂ ವಂದಿಸುತ್ತೇನೆ.

ಪ್ರಧಾನ ಸಂಪಾದಕ



ಒಣಗಿದ ಎಲೆ ಕಾಲ ಮಾಗಿದ ಮೇಲೆ ಕೆಳಗುದುರಿ ಬೀಳುವಂತೆ ಈ ಮನುಷ್ಯ ಜೀವನಕ್ಕೂ ಕೊನೆಯುಂಟು. ಆದ್ದರಿಂದ ಸದಾ ನೀನು ಎಚ್ಚರಿಕೆಯಿಂದಿದ್ದು ನಿನ್ನ ವ್ಯವಹಾರಗಳನ್ನು ನಡೆಸು.

—ಮಹಾವೀರ

# ಕವಿ ವಿಭೂತಿಗೆ ನಮೋ

ಪ್ರೊ|| ದೇಜಗೌ

ದಿನಾಂಕ ೧೦-೧೧-೧೯೯೪ರ. ಬೆಳಗಿನ ಜಾವ ೨ ಗಂಟೆ. ಫೋನಿನ ಕರೆ. ಅಕಾಲದ ಕರೆ ಅಪಾಯ ಸೂಚಕವಷ್ಟೆ. ಆ ಕರೆಯ ಸ್ತ್ರೀಧ್ವನಿ 'ಅಣ್ಣ ತೀರಿಕೊಂಡರು' ಎಂದಿತು. ಅದು ನಿಜವೆ? ಕನಸೊ ದಿಟವೊ? ಎಷ್ಟೋ ಸಲ ಅಂಥ ಕನಸು ನನಗೆ ಬಿದ್ದಿತಲ್ಲವೆ? ಹೇಳಿದವರು ಗುರುಪುತ್ರಿ ತಾರಿಣಿಯಾದ್ದರಿಂದ ನಿಜವಿರಬೇಕಲ್ಲವೆ? ತಂದೆ ತಾಯಿಯರ ಅಗಲಿಕೆಯ ಅಳಲನ್ನು ಗುರುಕೃಪೆಯಿಂದ ಸಾವರಿಸಿಕೊಂಡಿದ್ದೆ. ಗುರುಗಳ ಸಾವು ಅನಿರೀಕ್ಷಿತವಲ್ಲದಿದ್ದರೂ, ತಂದೆ ತಾಯಿ ಬಂಧು ಬಳಗ ಗುರುದೈವ ಎಲ್ಲವೂ ಆಗಿದ್ದ ಅವರು ಪ್ರಕೃತಿಯೊಂದಿಗೆ ವಿಲೀನವಾದ ನಂತರ ನಾನು ತಬ್ಬಲಿಯಾದೆನಲ್ಲವೆ? ದುಃಖ ಬಂದಾಗ ಸಾಂತ್ವನಕ್ಕಾಗಿ, ಸಮಸ್ಯೆಯೊದಗಿದಾಗ ಪರಿಹಾರಕ್ಕಾಗಿ, ಮನಸ್ಸಿಗೆ ಕಳವಳ ಕವಿದಾಗ ಬೆಳಕಿಗಾಗಿ, ದೌರ್ಬಲ್ಯ ತಲೆಯೆತ್ತಿದಾಗ ಆಶೀರ್ವಾದಕ್ಕಾಗಿ ಉದಯರವಿಗೆ ಓಡುತ್ತಿದ್ದೆ. ನಾನು ಅದಾವುದನ್ನೂ ಶಬ್ದ ಮಾಧ್ಯಮದಲ್ಲಿ ವ್ಯಕ್ತಪಡಿಸುತ್ತಿರಲಿಲ್ಲ. ಅವರ ಕೃಪಾದೃಷ್ಟಿ ನನ್ನನ್ನು ತಾಗಿದ ಕೂಡಲೆ, ಅವರ ಆಲೋಚನಾ ತರಂಗ ನನ್ನ ಅಂತರಂಗವನ್ನು ಪ್ರವೇಶಿಸಿದ ತಕ್ಷಣ ನನ್ನ ದುಃಖ ಸಮಸ್ಯೆಗಳೆಲ್ಲ ಮಾಯವಾಗುತ್ತಿದ್ದುವು; ನನ್ನ ದೌರ್ಬಲ್ಯಗಳು ಹೆಡೆಮುಚ್ಚಿಕೊಳ್ಳುತ್ತಿದ್ದುವು. ಇನ್ನು ಮುಂದೆಯೂ ಅನಂತಾಕಾಶಯಾತ್ರಿಯಾದ ಆ ದಿವ್ಯ ಚೇತನ ನನ್ನಂತರಂಗವಾಸಿಯೂ ಆಗಿ ನನ್ನ ಉದ್ಧಾರವನ್ನು ಹಾರೈಸುತ್ತದೆಂಬ ಭರವಸೆ ನನಗಿದೆ.

ಆ ಉದಯರವಿ ಅಸ್ತರವಿಯಾದರೆಂಬ ಸುದ್ದಿ ಕಿವಿದೆರೆಯನ್ನು ಅಪ್ಪಳಿಸುತ್ತಿದ್ದಂತೆ ಮೂರ್ನಾಲ್ಕು ಸಂಗತಿಗಳು ನನ್ನ ನೆನಪಿನಂಗಳದಲ್ಲಿ ಸುಳಿದು ನನ್ನ ಆಕ್ರಂದನವನ್ನು ಅಪಾರಗೊಳಿಸುತ್ತವೆ. ನನಗೆ ಪ್ರಾಧ್ಯಾಪಕ ಹುದ್ದೆ ಮತ್ತು ಕುಲಪತಿಯ ಹುದ್ದೆ ಲಭಿಸಿದಾಗ 'ನನ್ನ ಪ್ರಾರ್ಥನೆ ಸಫಲವಾಯಿತು' ಎಂದು ಹೇಳಿದ್ದು ಇನ್ನೂ ಹಸುರಾಗಿದೆ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಆರ್. ಶ್ರೀನಿವಾಸಮೂರ್ತಿಗಳು ಕನ್ನಡ ನಿಘಂಟಿನ ಸಂಪಾದಕ ಹುದ್ದೆಗೆ ನನ್ನನ್ನು ನೇಮಿಸಿಕೊಳ್ಳಲು ಕುವೆಂಪು ಅವರನ್ನು ಕೇಳಿದಾಗ, ಮುಖ್ಯ ಮಂತ್ರಿ ಕೆ. ಹನುಮಂತಯ್ಯನವರು ತಮ್ಮ ಆಪ್ತ ಕಾರ್ಯದರ್ಶಿ ಸ್ಥಾನಕ್ಕೆ ನನಗೆ ಆಹ್ವಾನವಿತ್ತಾಗ, 'ನನ್ನನ್ನು ಬಿಟ್ಟು ಹೋಗಲು ನಿಮಗೆ ಇಷ್ಟವೆ?' ಎಂದು ಗುರು ಆಡಿದ ಮಾತು ನನ್ನ ಕಿವಿಯಲ್ಲಿ ಗುಯ್ಗುಡದ ದಿನವೇ

ಇಲ್ಲ. ಈಗವರು ನನ್ನನ್ನೇ ಇಲ್ಲಿ ಬಿಟ್ಟು ಹೋಗಿದ್ದಾರೆ. ಏತಕ್ಕಾಗಿ?....

ದುರಂತವಾರ್ತೆಯನ್ನೆ ಹೊದ್ದುಕೊಂಡು ಕೂಡಲೇ ಕವಿಗುಡಿಗೆ ಮಗ ಪ್ರಸಾದ್‌ನೊಡನೆ ಹೋದೆ. ೧೯೩೫ ರಲ್ಲಿ ಚಂದ್ರ ತಾರಾದಿಗಳೆ ಒಬ್ಬುಳಿಗೊಂಡಂತಿದ್ದ ಆ ವಪು ಶ್ರೀಯೆಲ್ಲಿ? ಪ್ರಕೃತಿ ಸೌಂದರ್ಯವೇ ಮೂರ್ತಿವೆತ್ತಂತಿದ್ದ ಆ ಮೈಸಿರಿಯೆಲ್ಲಿ? ಮನ್ಮಥನಿಗೆ ರೂಪದರ್ಶಿಯಂತಿದ್ದ ಆ ಸೌಂದರ್ಯನಿಧಿಯೆಲ್ಲಿ? ಈ ಜಗತ್ತಿಗಿಳಿ ತಂದಾಗ ಪ್ರಕೃತಿಯಿಂದ ಪಡೆದಿದ್ದ ಸೌಂದರ್ಯ ಸಂಪತ್ತನ್ನೆಲ್ಲ ಹಿಂದಿರುಗಿಸಿ, ರಿಕ್ತವಿರಕ್ತನಂತೆ ತ್ಯಾಗಲೋಲ ಯೋಗಿಯಂತೆ ಪಂಚಭೂತಗಳಲ್ಲಿ ಲಯಹೊಂದಲನುವಾಗಿ, ಸೊರಗಿ ಸುರುಟುಗೊಂಡು ಬೆಳ್ಗೂದಲನ್ನು ಮರೆತರೆ ಮಗುವಿನಂತೆ ಕಾಣಿಸುವ ಈ ಮೆಯ್ಯು ಬಡತನನೆಲ್ಲಿ? ಆ ಶವಶ್ರೀಯನ್ನು ನೋಡುತ್ತಿದ್ದಂತೆ ನನ್ನ ಕಣ್ಮನಗಳೆಲ್ಲ ಕುರುಡಾದುವು; ಕೈಕಾಲು ಶಕ್ತಿಗುಂದಿದುವು. ಅಲ್ಲಿ ನಿಲ್ಲಲಾರದೆ ವರಾಂಡಕ್ಕೆ ಹೋಗಿ ಕುರ್ಚಿಯಲ್ಲಿ ಕುಸಿದೆ. ನಾಲ್ಕು ಗಂಟೆಯವರೆಗೆ ಕೊಂಟನಂತೆ ಕುಳಿತಿದ್ದೆ. ನನ್ನ ಮನ ಮರುಭರೆಯಾಯಿತು; ಕಣ್ಣು ನಿರ್ಜಲವಾಯಿತು. ಮತ್ತೆ ಬರುತ್ತೇವೆಂದು ತಾರಿಣಿ ತಾಯಿಗೆ ತಿಳಿಸಿ ನಾವು ಮನೆಗೆ ಮರಳಿದೆವು. ಆ ಮನೆಯಲ್ಲಿಯೂ ಶೂನ್ಯ ತುಂಬಿಕೊಂಡಂತಾಗಿ, ಹಾಸುಗೆಯ ಮೇಲೆ ಬಿದ್ದುಕೊಂಡು, ತಲೆದಿಂಬಿನ ಹೊದಿಕೆಯನ್ನೊದ್ದೆಗೊಳಿಸಿದೆ.

ಎಂಟು ಗಂಟೆಗೆ ಮತ್ತೆ ಉದಯರವಿಗೆ ಹೋದೆ. ಬಾನು ಮೋಡದ ಮುಸುಕನ್ನೆಳೆದುಕೊಂಡಿತ್ತು. ಅಲ್ಲಿಯ ಗಿಡಮರ ಬಳ್ಳಿಗಳು ಕಾಂತಿಹೀನವಾಗಿದ್ದುವು. ಗಾಳಿ ಸಹ ನಿಂತಂತಿತ್ತು. ಆವರಣದೊಳಗೆ ಪ್ರವೇಶಿಸಲು ಹೆದರಿಕೆಯಾಯಿತು. ನನಗೆ ಗತಿ ಮತಿ ಮುಕ್ತಿ ಎಲ್ಲವೂ ಆಗಿದ್ದ ವಸ್ತು ಬಿಟ್ಟು ಹೋದ ಈ ಪ್ರಪಂಚದೊಡನೆ ಹೊಂದಿಕೊಳ್ಳುವುದು ಸಾಧ್ಯವೆ? ಎಂದು ಮನಸ್ಸು ಚಿಂತಾಗ್ನಿಯಲ್ಲಿ ಬೇಯತೊಡಗಿತು. ಯಾರಾದರೂ ಹತ್ತಿರ ಬಂದು ಮಾತಾಡಿಸಿದರೆ ಒಂದೆರಡಕ್ಷರಗಳಲ್ಲಿಯೇ ಉತ್ತರ ಮುಕ್ತಾಯ. ಬೀದಿಗಳಲ್ಲಿ ನಿಲ್ಲಲು ಜಾಗವಿಲ್ಲ. ಮನೆಯ ಆವರಣವೆಲ್ಲ ಜನನಿಬಿಡ. ಸಾಲು ಸಾಲಾಗಿ ಜನ ದಿವಾನಖಾನೆಯಲ್ಲಿ ದೀರ್ಘನಿದ್ರೆಯಲ್ಲೊರಗಿರುವ ಮಹಾಪುರುಷನ ಪಾದಗಳಿಗೆ ಮಣಿದು ಪುಷ್ಪಾಶ್ರುಜಲ ತರ್ಪಣವನ್ನು ನಿವೇದಿಸಿ, ಮಂಚವನ್ನು ಬಳಸಿ ಬರುತ್ತಿದ್ದರು. ಎಲ್ಲರ ಮುಖದ ಮೇಲೆಯೂ ದುಃಖ ಅಚ್ಚೊತ್ತಿದಂತಿತ್ತು.

ಸ್ನೇಹಿತರ ಒತ್ತಾಯದಿಂದಾಗಿ ಆವರಣವನ್ನು ಹೊಕ್ಕು ಮನೆಯ ಎಡಭಾಗದ ನೀರು ಕಟ್ಟೆಯ ಬಳಿ ಮರದಡಿ ನಿಂತೆ. ಗಂಟೆ ಗಂಟೆಗೂ ಜನ ಪ್ರವಾಹದ ನೆರೆ ಉಕ್ಕುತ್ತಿತ್ತು. ಒಂದು ಕಡೆ ಕೃಷ್ಣರಾಜಸಾಗರದ ರಸ್ತೆಯಿಂದ, ಮತ್ತೊಂದು ಕಡೆ ಮಾತೃಮಂಡಲಿಯಿಂದ ಉದಯ ರವಿಯವರೆಗೆ ಜನ ಸಾಲುಗಟ್ಟಿತ್ತು. ಪೋಲೀಸ್ ಸಿಬ್ಬಂದಿ ಅಚ್ಚುಕಟ್ಟಾಗಿ, ಗೊಂದಲಕ್ಕವಕಾಶವಿಲ್ಲದಂತೆ ಜನ ಪ್ರವಾಹವನ್ನು ನಿಯಂತ್ರಿಸಿತ್ತು; ಘೋರ ದುರಂತದಿಂದ ಆಘಾತಗೊಂಡ ಜನ ಸಹ ಅಷ್ಟೇ ಶಿಸ್ತಿನಿಂದ ವರ್ತಿಸುತ್ತಿತ್ತು. ಶವಮಂಚದ ಬಳಿ ಯಾರೂ ಕ್ಷಣ ಸಹ ನಿಲ್ಲದಂತೆ ಪೋಲೀಸರು ಮುತುವರ್ಜಿ ವಹಿಸಿದ್ದರು. ಆದ್ದರಿಂದ ಜನ ಪಂಕ್ತಿ ಸದಾ ಚಲನೆಯಲ್ಲಿತ್ತು. ಸಾಮಾನ್ಯ

ವಾಗಿ ಭಾರಿ ಮಹತ್ವದ ಜನ ಹೆಬ್ಬಾಗಿಲಿಂದ ಗುಂಪು ಗುಂಪಾಗಿ ಬರುತ್ತಿದ್ದರು. ಸಮ ವಸ್ತ್ರದ ಶಾಲಾ ಬಾಲಕರು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬರುತ್ತಿದ್ದರು. ಹುಬ್ಬಳ್ಳಿ, ದಕ್ಷಿಣ ಕನ್ನಡ ಜಿಲ್ಲೆ, ಶಿವಮೊಗ್ಗ ಕೋಲಾರ ಬೆಂಗಳೂರು ಮೊದಲಾದ ಕರ್ನಾಟಕದ ಎಲ್ಲೆಡೆಗಳಿಂದ ಬಂದ ಸಾಹಿತ್ಯಾಭಿಮಾನಿಗಳು 'ಮಹಾಕವಿಯ ಜೀವಿತ ಕಾಲದಲ್ಲಿ ನಾವು ಬದುಕಿದ್ದುದೇ ಪುಣ್ಯ; ಅಂತಿಮ ದರ್ಶನ ವಂತು ನಮ್ಮ ನೆನಪಿನ ಭಾಗವಾಗಿ ಉಳಿಯು ಲಿದೆ' ಎಂದು ಮಾತಾಡಿಕೊಳ್ಳುತ್ತಿದ್ದರು. ಐದಾರು ವರ್ಷದ ಬಾಲಕರಿಂದ ಹಿಡಿದು ತೊಂಬತ್ತಮೂರು ವರ್ಷದ ಸ್ತ್ರೀಪುರುಷ ವೃದ್ಧರ ತನಕ ಜನ ಬಂದು ಹೋಗುತ್ತಿದ್ದರು. ಜಿಲ್ಲಾಧಿಕಾರಿ ಮತ್ತು ಪೋಲೀಸ್ ಅಧಿಕಾರಿಗಳು ದಿನವೆಲ್ಲ ಕಟ್ಟೆಚ್ಚರ ವಹಿಸಿದ್ದರು. ಸಕಲ ವ್ಯವಸ್ಥೆಗಳನ್ನು ಅಣಿಗೊಳಿಸಿದ್ದರು. ಕೆ. ಆರ್. ಆಸ್ಪತ್ರೆಯ ಸೂಪರಿಂ-ಟೆಂಡೆಂಟರು ಶವದ ಜೋಪಾನದ ಬಗ್ಗೆ ಮುತುವರ್ಜಿ ವಹಿಸಿದ್ದರು.

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಅರಣ್ಯ ಮಂತ್ರಿ, ಅಂತೆಯೇ ಹಲವು ಅಧಿಕಾರಿಗಳು, ರಾಜಕಾರಣಿಗಳು, ಸಾಹಿತಿಗಳು, ರೈತ ಕಾರ್ಮಿಕರು, ಪ್ರಾಧ್ಯಾಪಕರು— ಸಮಾಜದ ಸಮಸ್ತ ಸ್ತರಗಳ ಜನ ಗುಂಪು ಗುಂಪಾಗಿ ಬಂದು ತಮ್ಮ ಗೌರವದ, ಅಭಿಮಾನದ ರಸಖುಷಿಗೆ ಅಂತಿಮ ನಮನ ಸಲ್ಲಿಸಿದರು. ಕರ್ನಾಟಕ ರತ್ನ ಡಾ. ರಾಜಕುಮಾರ್ ಮತ್ತು ಶ್ರೀಮತಿ ಪಾರ್ವತಮ್ಮನವರು ಬಂದಾಗ ಜನೋದ್ಯಾನದಲ್ಲಿ ಸುಳಿಗಾಳಿಸಂಚಲಿಸಿದಂತಾಯಿತು. ರಾಜಕುಮಾರರ ಸದಾ ಸುಹರ್ಷಿತವದನವೂ ಮ್ಲಾನಗೊಂಡಿತ್ತು. ಅವರು ಶವಶಿವನಿಗೆ ಗೌರವ ಸಲ್ಲಿಸಿ, ನನ್ನನ್ನು ಸಾಂತ್ವನಗೊಳಿಸಲು ಬಂದಾಗ, ನಾನು ಗದ್ಗದಿತನಾದೆ. ಅವರ ಮುಖದಲ್ಲಿ ಭಾವೋದ್ವೇಗ ಮುದ್ರೆಗೊಂಡಿತ್ತು. ಕುವೆಂಪು ಅವರ ಸಹಾಧ್ಯಾಯಿ, ಅವರನಿಕಟವರ್ತಿ ಪಿ. ಮಲ್ಲಯ್ಯನವರು ಸಹ ಮುಪ್ಪಿನ ಬಳಲಿಕೆಯನ್ನು ಲೆಕ್ಕಿಸದೆ ಬಂದಿದ್ದರು. ಸಂಜೆ ೪-೩೦ ಗಂಟೆ ಹೊತ್ತಿಗೆ ಮೂರ್‍ನಾಲ್ಕು ಲಕ್ಷ ಜನ ಬಂದಿರಬಹುದು. ಸಾಲಿನ ಕೊನೆಯಲ್ಲಿ ನಿಂತು ಉದಯರವಿಗೆ ಬರುವ ಹೊತ್ತಿಗೆ ಐವತ್ತು ನಿಮಿಷವಾಯಿತೆಂದು ದರ್ಶನೋತ್ಸುಕ ಮಿತ್ರರೊಬ್ಬರು ಹೇಳಿದರು. ೪-೩೦ ಗಂಟೆಯ ನಂತರವೂ ಬೇರೆ ಬೇರೆ ಊರುಗಳಿಂದ ಜನ ಬರುತ್ತಿದ್ದರು. ಕವಿ ಮುಖ ದರ್ಶನದ ಸೌಭಾಗ್ಯ ದೊರೆಯದ ಅವರು ನಿರಾಶರಾಗಿ ದುಃಖ ತಪ್ತರಾಗಿ ಹಿಂದಿರುಗಿದರು. ಮಾರನೆಯ ಬೆಳಗಿನ ತನಕ ಶವ ಉದಯರವಿಯಲ್ಲೇ ಇದ್ದಿದ್ದಾದರೆ ಇನ್ನಷ್ಟು ಜನಕ್ಕೆ ತೃಪ್ತಿಯೊದಗುತ್ತಿತ್ತು. ಬದುಕಿದ್ದಾಗ ಅವರ ದರ್ಶನ ಲಾಭದೊರೆಯದ ಜನ ಜೀವನಾಂತ್ಯದಲ್ಲಾದರೂ ನೋಡಿ ಸಮಾಧಾನ ಹೊಂದುತ್ತಿದ್ದರು.

ಬೆಂಗಳೂರಲ್ಲಿದ್ದ ಪ್ರಧಾನಿ ನರಸಿಂಹರಾಯರು ಉದಯರವಿಗೆ ಹೋಗಿ ಮಹಾಕವಿಗೆ ಗೌರವ ಸಲ್ಲಿಸುವುದಾಗಿ ತಮ್ಮ ಸಿಬ್ಬಂದಿಗೆ ಸೂಚನೆ ನೀಡಿದರಂತೆ. ಭದ್ರತಾ ದೃಷ್ಟಿಯಿಂದ ಅಲ್ಲಿಗೆ ಹೋಗುವುದು ಸರಿಯಲ್ಲವೆಂದು ಸಿಬ್ಬಂದಿ ತಿಳಿಸಿದಾಗ ಆ ಯೋಚನೆಯನ್ನವರು ಕೈಬಿಟ್ಟರಂತೆ.

ಶವಸಂಸ್ಕಾರ ಎಲ್ಲಿ ನಡೆಯಬೇಕೆನ್ನುವ ಪ್ರಶ್ನೆ ಎರಡು ಮೂರು ಗಂಟೆ ಕಾಲ ಅನೇಕ

ರನ್ನು ಕಾಡಿತು. ಕೆಲವು ಮಿತ್ರರು ನನ್ನನ್ನು ಕಾಡಿದಾಗ, 'ನನಗೇನೂ ಗೊತ್ತಿಲ್ಲ' ಎಂದೆ. 'ಮಾನಸಗಂಗೋತ್ರಿಯಲ್ಲಾಗಬಹುದೆ ?' 'ಕವಿಶೈಲದಲ್ಲಾಗಬಹುದೆ ?' ಎಲ್ಲ ಪ್ರಶ್ನೆಗಳಿಗೂ ನನ್ನದೊಂದೇ ಉತ್ತರ. 'ಆಗಬಹುದು; ಅವರ ಮಕ್ಕಳಿಗೆ ಬಿಟ್ಟದ್ದು.' ಕೊನೆಗೆ ನೂರಾರು ಮಂದಿ ಕನ್ನಡ ಚಳುವಳಿಗಾರರು ಶವಸಂಸ್ಕಾರ ಮೈಸೂರಲ್ಲಿ, ಅದರಲ್ಲಿಯೂ ಮಾನಸಗಂಗೋತ್ರಿಯಲ್ಲಿ ಆಗಬೇಕೆಂದು ಪಟ್ಟುಹಿಡಿದರು. 'ಕುವೆಂಪು ಸುಮಾರು ಮುಕ್ಕಾಲು ಶತಮಾನ ಇಲ್ಲಿ ಬದುಕಿದ್ದಾರೆ. ಅವರು ವಿಶ್ವವಿಶಾಲವಾಗಿ ನಭೋಗಾಮಿಯಾಗಿ ಬೆಳೆದದ್ದು ಇಲ್ಲಿ. ಅವರ ಬದುಕು ಪೂರ್ಣವಾದುದೇ ಇಲ್ಲಿ.' ಇದು ಒಂದು ಅಭಿಪ್ರಾಯ. 'ಕುವೆಂಪು ಅವರ ಬಾಲ್ಯಜೀವನ ಸಾಗಿದ್ದು ಕುಪ್ಪಳ್ಳಿಯಲ್ಲಿ. ಅಲ್ಲಿಯ ಪರಿಸರವೇ ಅವರ ಕಾವ್ಯ ಜೀವನಕ್ಕೆ ಪ್ರಚೋದಿ. ಮೈಸೂರಲ್ಲಿ ವಾಸವಾಗಿದ್ದರೂ ಅವರ ಆತ್ಮ ಮಲೆನಾಡಿನಲ್ಲಿ ನಿತ್ಯ ಸಂಚರಿಸುತ್ತಿತ್ತು. ತಾವು ಪ್ರೀತಿಸಿದ, ಆತ್ಮೈಸಿಕೊಂಡಿದ್ದ ಮಲೆಯ ಬಸಿರಲ್ಲಿಯೇ ಅವರ ಸಮಾಧಿ ಉಚಿತ' ಎಂಬುದು ಮತ್ತೊಂದು ಅಭಿಪ್ರಾಯ. 'ಟ್ರಸ್ಟ್ ಭೂಮಿಯಲ್ಲಿ' ಎಂದು ಮತ್ತೆ ಯಾರೋ ನನ್ನನ್ನು ಕೇಳಿದರು. 'ನನ್ನ ಅಭಿಪ್ರಾಯದಲ್ಲಿ ಅವರ ಮಕ್ಕಳು, ಅದರಲ್ಲಿಯೂ ಮಗಳು ತಾರಿಣಿಯವರ ಮಾತೇ ನಿಲ್ಲಬೇಕು' ಎಂದೆ.

ಮೈಸೂರಿನ ಬಹುಜನರ ಆಸೆ ಕವಿ ಸಮಾಧಿ ಇಲ್ಲಿಯೇ ಇರಬೇಕು, ಅದು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಾಂಸ್ಕೃತಿಕ ನಾಯಕರ ಕಣ್ಣಿಗೆ ಬೀಳುವಂತಾಗಬೇಕು ಎಂಬುದಾಗಿತ್ತು. ಅವರಿಗೆ ನಾಲಿಗೆಯಾಗಿ ನಾಗಲಿಂಗಸ್ವಾಮಿ, ತಾಯೂರು ವಿಠಲಮೂರ್ತಿ ಹಿಡಿದ ಪಟ್ಟು ಬಿಡಲಿಲ್ಲ. ನಭವನ್ನು ಸೀಳುವಂಥ ಘೋಷಣೆಗಳನ್ನೆಬ್ಬಿಸಿದರು. ಯಾರ ಮಾತಿಗೂ ಅವರು ಸೊಪ್ಪು ಹಾಕಲಿಲ್ಲ. 'ಶವ ನಮ್ಮ ಮುಂದಿರುವಾಗ ಈ ಘೋಷಣೆ, ಈ ಪ್ರದರ್ಶನ ಸಭ್ಯವೆನಿಸಿಕೊಳ್ಳಲಾರದು' ಎಂದು ನಾನವರಿಗೆ ಕೈಮುಗಿದೆ. 'ಈ ಶವವೀಗ ಯಾರೊಬ್ಬರ ಆಸ್ತಿಯೂ ಅಲ್ಲ. ರಾಜ್ಯದ, ರಾಷ್ಟ್ರದ, ಜಗತ್ತಿನ ಆಸ್ತಿ. ಅದರ ಮೇಲೆ ಅವರ ಮನೆಯವರ ಹಕ್ಕಿಲ್ಲ' ಎಂದರು. 'ಹನ್ನೆರಡು ವರ್ಷಗಳಿಂದ ಯಾವಾಕೆ ಮಗುವಿಗಿಂತ ಮಿಗಿಲಾಗಿ ಈ ದೇಹಶ್ರೀಯನ್ನು ರಕ್ಷಿಸಿದ್ದಾರೆಯೋ ಅವರ ಮಾತಿಗೆ ಗೌರವ ಕೊಡಬೇಕಾದ್ದು ನಮ್ಮೆಲ್ಲರ ಧರ್ಮ. ಅದು ಜಗತ್ತಿನ ಆಸ್ತಿ ಎನ್ನುವುದಾದರೆ ಅದರ ಸಂಸ್ಕಾರ ಎಲ್ಲಿ ನಡೆದರೂ ಸರಿಯೆ' ಎಂದು ನಾನು ಉತ್ತರಿಸಿದೆ. ನನ್ನ ವಾದವನ್ನವರು ಒಪ್ಪಲಿಲ್ಲ. 'ಕುವೆಂಪು ಅವರಲ್ಲಿ ನಿಮಗೆ ಗೌರವವಿರುವುದಾದರೆ ಘೋಷಣೆ ನಿಲ್ಲಿಸಿ. ಹೇಗೂ ಕುಪ್ಪಳ್ಳಿಯಿಂದ ಚಿತಾಭಸ್ಮ ಬಂದೇ ಬರುತ್ತದೆ. ಅದನ್ನು ಕರಂಡಕದಲ್ಲಿಟ್ಟು ಸುಂದರವಾದ ಸ್ಮಾರಕವನ್ನು ಮೈಸೂರಲ್ಲಿಯೂ ನಿರ್ಮಿಸಬಹುದಲ್ಲ' ಎನ್ನುವಾಗ ನನ್ನ ಕಣ್ಣಲ್ಲಿ ನೀರು ಗಳಗಳನೆ ಸುರಿಯಿತು. ಚಳುವಳಿಗಾರರ ಹೃದಯ ಕರಗಿತೆಂದು ತೋರುತ್ತದೆ. ತೆಪ್ಪಗಾದರು. ಮುಖ್ಯಮಂತ್ರಿಗಳ ಮುಂದೆ ಈ ಸಲಹೆಯನ್ನಿಟ್ಟಾಗ, ಅವರು ಸಹ ಸಮ್ಮತಿ ಸೂಚಿಸಿದರು. ಶವವನ್ನು ಮೆರವಣಿಗೆ ಮಾಡಬೇಕೆಂಬ ಅವರ ಬೇಡಿಕೆ ನೆರವೇರಲಿಲ್ಲ.

೪.೩೦ ಗಂಟೆಗೆ ಸರಿಯಾಗಿ ಕುವೆಂಪು ಶವವನ್ನು ಹೊತ್ತ ವಾಹನ ಶ್ರೀರಂಗಪಟ್ಟಣ ಚನ್ನರಾಯಪಟ್ಟಣಗಳ ಮೂಲಕ ಶಿವಮೊಗ್ಗೆಯ ಕಡೆಗೆ ಹರಿಯಿತು. ದಾರಿಯುದ್ದಕ್ಕೂ ಜನ ಸಾಲು ಸಾಲಾಗಿ ಕಿಕ್ಕಿರಿದಿದ್ದರು. ಹೊತ್ತು ಮೀರಿದ್ದರೂ ಕತ್ತಲು ಬುವಿಬಾನುಗಳಿಗೆ ಮೆತ್ತಿಕೊಂಡಿದ್ದರೂ, ಅಂಬಾ ಅಂಬಾ ಎಂದು ಕೂಗುತ್ತ ಅವ್ವನಿಗಾಗಿ ಕಾಯುವ ಕರುಗಳಂತೆ, ಉದಯರವಿಗಾಗಿ ಕಾಯುವ ಚರಾಚರ ವಸ್ತುಗಳಂತೆ, ಭಗವಂತನ ಆಗಮನಕ್ಕಾಗಿ ತುದಿಗಾಲಿನಲ್ಲಿ ನಿಂತ ಕರ್ಣ್‌ರಿಸ್ಪೆಯನ್ನು ಹೊಯ್ಯುದ ಭಕ್ತರಂತೆ ಹೆದ್ದಾರಿಯುದ್ದದ ಹಳ್ಳಿ ಪಟ್ಟಣಗಳ ಜನ ನಿಂತುಕೊಂಡೇ ತಪಸ್ಸು ಮಾಡುತ್ತಿದ್ದರು. ಮೈಸೂರಿನಿಂದ ಶಿವಮೊಗ್ಗದವರೆಗಿನ ಆ ರಸ್ತೆ ಗೋಧೂಳಿ ಸಮಯದ ಊರ ಬೀದಿಯಾಗಿತ್ತು ; ಮೆರವಣಿಗೆಯ ಮಾರ್ಗವಾಗಿತ್ತು. ಅಷ್ಟೊಂದು ರೋಮಾಂಚನಕರ ವಿಸ್ಮಯಜನಕ ಸುದೀರ್ಘ ಮೆರವಣಿಗೆಯನ್ನು ಕಂಡವರು ವಿರಳ. ಪೋಲೀಸ್ ಇಲಾಖೆ ಉದ್ದಕ್ಕೂ ಶಿಸ್ತು ವ್ಯವಸ್ಥೆಯ ಬಗ್ಗೆ ಎಚ್ಚರಿಕೆ ವಹಿಸಿತ್ತು. ದೂರದಿಂದ ಶಿಬಿಕೆ ಕಣ್ಣಿಗೆ ಬೀಳುತ್ತಿದ್ದಂತೆ 'ಕುವೆಂಪು ಅಮರರಾಗಲಿ, ರಾಷ್ಟ್ರಕವಿ ಚಿರಾಯುವಾಗಲಿ!' ಎಂಬ ಶೋಕೋದ್ಗಾರ ಬಹು ಕಂಠಗಳಿಂದ ಹೊರಹೊಮ್ಮುತ್ತಿತ್ತು. ಆ ಮೆರವಣಿಗೆಯನ್ನು ನೋಡಿ ನಕ್ಷತ್ರಗಳು ಆನಂದತುಂದಿಲವಾಗಿದ್ದುವು. ಚಂದ್ರ ಆ ಮೆರವಣಿಗೆಯನ್ನೆ ಹಿಂಬಾಲಿಸುತ್ತಿದ್ದನು. ನಕ್ಷತ್ರಗಳಲ್ಲೆರಡುವೆಂಕಟಪ್ಪಗೌಡ ಸೀತಮ್ಮರಾಗಿರಬಾರದೆ?

ತಾನು ಸಾಕಿ ಸಲಹಿ ಮುದ್ದಿಸಿ ಮುಂಡಾಡಿದ ಕೊಂಡಾಡಿದ ಮಗನ ಅಂತಿಮ ದರ್ಶನಕ್ಕಾಗಿ ಇಡೀ ಶಿವಮೊಗ್ಗ–ಮಲೆನಾಡಮ್ಮ–ಭಾವೋದ್ವಿಗ್ನಳಾಗಿ ಶೋಕಕಾತರೆಯಾಗಿ, ಅಶ್ರುಪ್ರವಾಹ ನೇತ್ರೆಯಾಗಿ ಕಾಯುತ್ತಿದ್ದಳು. ರತ್ನಾಕರರ ಮನೆಯ ಮುಂದೆ ಹಾಗೂ ಪುರಭವನದ ಆವರಣದಲ್ಲಿ ಕಿಕ್ಕಿರಿದಿದ್ದ ಜನ ಪುಷ್ಪಾಶ್ರು ತರ್ಪಣವನ್ನು ಸಲ್ಲಿಸಿದರು. ಮೆರವಣಿಗೆ ಕುಪ್ಪಳ್ಳಿ ತಲುಪುವ ಹೊತ್ತಿಗೆ ನಟ್ಟಿರುಳು ಕಳೆದು, ಬೆಳಗಿನ ಜಾವ ಮೂರೂವರೆ ಗಂಟೆಯಾಗಿತ್ತು.

ಕುವೆಂಪು ಬಾಲ್ಯದಲ್ಲಿ ಆಡುತ್ತಿದ್ದ ಮನೆಯ ಮುಂದಣ ಕಣದಲ್ಲಿ ಸಮೆದ ವಸ್ತ್ರ ಚಪ್ಪರದಡಿಯ ವೇದಿಕೆಯ ಮೇಲೆ ಪುಷ್ಪರಾಶಿಯಲ್ಲಿ ಶವಪುಷ್ಪ ನಿದ್ರಿಸುತ್ತಿತ್ತು. ಸುದ್ದಿ ಮಾಧ್ಯಮಗಳ ಮೂಲಕ ಶವಸಂಸ್ಕಾರ ವಾರ್ತೆ ದೇಶವಲ್ಲೆಲ್ಲ ಹರಡಲಾಗಿ, ಬೆಳಗಾಗುವುದರೊಳಗಾಗಿ ಕಾಡು ಮೇಡುಗಳೆಲ್ಲ ಜನ ಸಮೃದ್ಧವಾಗಿದ್ದುವು. ಕೊಪ್ಪ ತೀರ್ಥಹಳ್ಳಿ ನಡುವಣ ರಸ್ತೆಯ ತುಂಬ ಕಾರು, ಕಾರು. ತನ್ನ ಬಸಿರಿಂದ ಬಂದು, ತನ್ನ ತೆಕ್ಕೆಯಲ್ಲಿ ಬೆಳೆದು, ತನಗೆ ಅಸದೃಶ ಕೀರ್ತಿಯನ್ನು ತಂದುಕೊಟ್ಟ ನಿಸರ್ಗಮಾತೆ ತನ್ನ ಸುಪುತ್ರನನ್ನು ತನ್ನೊಡಲೊಳಗೆ ಸೇರಿಸಿಕೊಳ್ಳಲು ಸಿದ್ಧವಾಗಿದ್ದಳು. ಪ್ರಕೃತಿದೇವಿಯ ಸೊಬಗು ದೇಗುಲವೂ, ಚೈತ್ರರವಿಯುದಯದಲಿ ಸಹ್ಯಾದ್ರಿಕಾನನಗಳುತ್ತಮಾಂಗವಿ ಸೃಷ್ಟಿ ದೃಶ್ಯ ವೈಕುಂಠವನೆ ನೆಯ್ದಂತಿರ್ದ ಭವ್ಯ ಸೌಂದರ್ಯದಾಗರವೂ, ಕವಿಯ ಜೀವನಾನಂದ ನಿಧಿ ಕವಿತಾ ಮನೋಹರಿಯ ಪ್ರಥಮೋತ್ತಮ ಪ್ರಣಯಿ, ವನದೇವಿಯೈಸಿರಿಯ ಪೀಠಚೂಡಾಮಣಿಯೂ ಜನಚರಣ ಚಲದ್ ಧೂಳಿ ದೂರವೂ ವೃಕ್ಷ

ಗುಲ್ಮ ಪ್ರತತಿ ಸಂವೃತವೂ, ಸೃಷ್ಟಿಯ ಆದಿಯಿಂದ ಲೋಕಗುರು ಕವಿಯವತಾರದ ಕನಸನ್ನು ಸವಿಯುತ್ತಿದ್ದ ಕವಿಶೈಲದ ಸೋಂಕಿನಲ್ಲಿ ಅನಲ ಸಂಸ್ಕಾರಕ್ಕಾಗಿ ಭವ್ಯ ಚಿತಾವೇದಿಕೆಯನ್ನು ಪೂರ್ವ ಪಶ್ಚಿಮವಾಗಿ ನಿರ್ಮಿಸಲಾಗಿತ್ತು. ರಾಜೋಚಿತವಾದ ಗೌರವಾರ್ಪಣೆಗಾಗಿ ಶ್ರೀ ಚಂದ್ರೇಗೌಡ ಮತ್ತು ಶಿವಮೊಗ್ಗ ಜಿಲ್ಲೆಯ ಉನ್ನತಾಧಿಕಾರಿಗಳ ನೇತೃತ್ವದಲ್ಲಿ ಸರ್ಕಾರ ಸಕಲ ಸಿದ್ಧತೆಗಳನ್ನು ಶ್ರದ್ಧೆ ನಿಷ್ಠೆಗಳಿಂದ ನಡೆಸಿತ್ತು. ನೂರಾರು ಜರೂರು ಜಂಬರಗಳಿದ್ದರೂ ಅವನ್ನೊತ್ತಟ್ಟಿಗಿಟ್ಟು ಮುಖ್ಯಮಂತ್ರಿ ವೀರಪ್ಪಮೊಯಿಲಿಯವರೇ ಶವಸಂಸ್ಕಾರದ ಹೊಣೆಗಾರಿಕೆಯನ್ನು ಹೊತ್ತಿದ್ದಾರೆಯೋ ಎನ್ನುವಂತೆ ಮೊದಲಿಂದ ಕೊನೆಯತನಕ ಹಾಜರಿದ್ದರು. ಕಾಡೇ ಬೆಸಲೆಯಾದಂತೆ ಎಲ್ಲೆಲ್ಲೂ ಜನ, ಜನ, ಜನ. ಕುವೆಂಪು ಗೀತಾವಾಚನ, ನಡುನಡುವೆ ಸಂಜಯ ವರದಿ ದೂರ ಬಹುದೂರದ ತನಕ ಕೇಳಿಸುತ್ತಿತ್ತು. ವರ್ಣಾಕೀರ್ಣ ಪುಷ್ಪಾಲಂಕೃತ ಶಿಬಿಕೆ ಹಲವು ಹೆಗಲುಗಳ ಮೇಲೆ ಹಾಯ್ದು, ಕುಪ್ಪಳ್ಳಿ ಮನೆಯಿಂದ ಶೋಕ ಮೆರವಣಿಗೆಯಲ್ಲಿ, ದುಃಖ ಧ್ವಾನ ಶೋಕ ವಾದ್ಯಗಳ ನಡುವೆ ಸುಮಾರು ೧೧ ಗಂಟೆಯ ವೇಳೆಗೆ ಚಿತಾವೇದಿಕೆಯ ಬಳಿ ಬಂದಿತು. ಶ್ರೀಗಂಧಕಾಷ್ಠ ನಿರ್ಮಿತ ಭವ್ಯ ಮಂಚದ ಮೇಲೆ ಕಳೇಬರವನ್ನಿಳಿಸಿದ ನಂತರ ಕುವೆಂಪು ಬಂಧುಗಳು ಪೂಜೆ ಸಲ್ಲಿಸಿದರು. ಮುಂದೆ ಸರ್ಕಾರದ ಪರವಾಗಿ ಮುಖ್ಯಮಂತ್ರಿಗಳೂ, ರಾಜ್ಯಪಾಲರ ಪರವಾಗಿ ಜಿಲ್ಲಾಧಿಕಾರಿಗಳೂ, ಇತರ ಮಂತ್ರಿಗಳೂ ಉನ್ನತಾಧಿಕಾರಿಗಳೂ, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಪರವಾಗಿ ಅದರ ಅಧ್ಯಕ್ಷರೂ ವಿಹಿತ ಕ್ರಮದಲ್ಲಿ ಪುಷ್ಪಗುಚ್ಛಗಳನ್ನರ್ಪಿಸಿದರು. ಅನಂತರ ಪೋಲಿಸರು ಮೂರು ಸುತ್ತು ಗುಂಡು ಹಾರಿಸಿ,ಬಂದೂಕುಗಳನ್ನು ಹಿಂದುಮುಂದು ಮಾಡಿ ಗೌರವ ರಕ್ಷೆ ನೀಡಿದರು. ಕೊನೆಗೆ ಕುವೆಂಪು ಅವರ ಜ್ಯೇಷ್ಠ ಪುತ್ರ ಪೂರ್ಣಚಂದ್ರ ತೇಜಸ್ವಿ ಕಿಚ್ಚು ಹೊತ್ತಿಸಲಾಗಿ ಚೈತ್ರ ಸಪ್ತಾರ್ಚಿ ಗಗನಚುಂಬಿ ಗೋಪುರವಾಯಿತು. ಭೂನಭಗಳು ಶೋಕಮೂಕವಾದುವು. ತಮ್ಮ ಮಾನಸ ಪುತ್ರನ ಅಗ್ನಿಯಾತ್ರೆಯನ್ನು ಶ್ರೀರಾಮಕೃಷ್ಣರವಿಂದ ರಮಣಾದಿ ಲೋಕಗುರುಗಳು ಹಾಗೂ ಅವರ ಮಾತಾಪಿತರು ಸೂಕ್ಷ್ಮ ಚೈತನ್ಯ ರೂಪದಲ್ಲಿ ಸಂವೀಕ್ಷಿಸುತ್ತಿದ್ದರು. ಏಳು ದಶಕಗಳ ಕಾಲ ಸಾಹಿತ್ಯ ಕ್ಷೇತ್ರದ ಸಮ್ರಾಟರಾಗಿ ಮೆರೆದ, ಅಧ್ಯಾತ್ಮ ಕ್ಷೇತ್ರದ ಮಹರ್ಷಿಗಳಾಗಿ ರಾರಾಜಿಸಿದ, ಸಾಮಾಜಿಕ ಕ್ಷೇತ್ರದ ಕ್ರಾಂತಿವೀರರಾಗಿ ವಿಜೃಂಭಿಸಿದ ಕುವೆಂಪು ದೇಹ ಪಂಚಭೂತಗಳಲ್ಲಿ ವಿಲೀನವಾಗುತ್ತಿದ್ದಂತೆ ಒಂದು ಮಹಾಯುಗ ಅಂತ್ಯಗೊಂಡಂತಾಯಿತು, ನಿಜ, ಕೇವಲ ಲೌಕಿಕ ದೃಷ್ಟಿಯಿಂದ; ಬ್ರಾಹ್ಮೀ ದೃಷ್ಟಿಯಿಂದ ಅವರು ಚಿರಸ್ಥಾಯಿಯೆನ್ನುವುದನ್ನು ಮರೆಯಲಾಗದು. ಕುವೆಂಪು ಸತ್ತಿಲ್ಲ; ಸತ್ತು ಬದುಕಿದ್ದಾರೆ; ನಿಕೇತನ ಮುಕ್ತರಾಗಿ ಸರ್ವತ್ರ ವ್ಯಾಪಿಸಿಕೊಂಡಿದ್ದಾರೆ.

ತಮ್ಮ ಔರಸ ಮತ್ತು ಕೃತಿ ಸಂತಾನದ ಮೂಲಕ ಕುವೆಂಪು ಅವರು ಬದುಕಿದ್ದಾರೆ. ಆ ಸಂತಾನದ ಮೂಲಕ ಅವರು ನಾಡಿಗೆ, ಜಗತ್ತಿಗೆ ಬಿಟ್ಟಿರುವ ಹರಿಕೊಡಿಗೆ ಅತ್ಯಮೂಲ್ಯವಾದದ್ದು. ನಾಲ್ವರು ಔರಸ ಪುತ್ರಪುತ್ರಿಯರು: ಪೂರ್ಣಚಂದ್ರ ತೇಜಸ್ವಿ,

ಕೋಕಿಲೋದಯ ಚೈತ್ರ, ಇಂದುಕಲಾ ಮತ್ತು ತಾರಿಣಿ. ತೇಜಸ್ವಿಯ ತೇಜಸ್ಸು ಈಗಾಗಲೇ ಅವರ ಕೃತಿಗಳ ಮೂಲಕ ಕನ್ನಡ ನಾಡಿನಲ್ಲೆಲ್ಲ ಹರಡಿಕೊಂಡಿದೆ. ಚೈತ್ರ ಯಂತ್ರಜ್ಞ; ಇಂದುಕಲಾ ಉತ್ತಮ ಲೇಖಕಿ. ಮಾತೃವಾತ್ಸಲ್ಯವೇ ಮೂರ್ತಿವೆತ್ತಂತಿದ್ದ ತಾರಿಣಿ ತಂದೆಯ ಪಾಲಿಗೆ ಭವತಾರಿಣಿಯೆ ಸರಿ. ಅವರ ಸುಮಾರು ಎಪ್ಪತ್ತು ಕೃತಿಗಳು ಅವರ ಪ್ರತಿಭಾ ಮತ್ತು ದಾರ್ಶನಿಕ ವೈಭವದ ಪ್ರತಿಮೆಗಳಾಗಿವೆ. ಅವರ ಅಪೂರ್ವ ವಿಶಿಷ್ಟ ತಾತ್ತ್ವಿಕ ಚಿಂತನೆಗಳು, ಲೌಕಿಕಾಲೌಕಿಕಾನುಭವಗಳು, ಲೋಕೋತ್ತರ ಸಂದೇಶಗಳು, ಅವರು ಸೃಷ್ಟಿಸಿರುವ ಭಾಷೆ, ಉಪಮೆ, ರೂಪಕ, ಪ್ರತಿಮೆಗಳು, ಛಂದೋರೂಪಗಳು, ಅವರು ಶಿಲ್ಪಿಸಿರುವ ಪಾತ್ರಗಳು—ಒಂದೇ ಎರಡೇ ನೂರೇ ಸಾವಿರವೆ, ಅಸಂಖ್ಯ ಸಂಗತಿಗಳು ನಾಡಿನ ಹಾಗೂ ಜಗತ್ತಿನ ಅಮೂಲ್ಯ ಸಂಪತ್ತಾಗಿವೆ; ಸದಾ ಅವರ ನೆನಪನ್ನು ಕೆರಳಿಸುತ್ತವೆ. ಅವರು ರೂಪಿಸಿರುವ ಶಿಷ್ಯ ಸಂಪತ್ತು ಸಹ ಕಡಿಮೆಯೇನಲ್ಲ. ಅಂಥ ಕವಿ ಮಹರ್ಷಿಯನ್ನು ವಿಶ್ವಮಾನವನನ್ನು ಪಡೆದ ನಾಡು ಧನ್ಯ!

ಯುಗದ ಕವಿಗೆ
ಜಗದ ಕವಿಗೆ
ಶ್ರೀರಾಮಾಯಣದರ್ಶನದಿಂದಲೆ ಕೈ
ಮುಗಿದ ಕವಿಗೆ-ಮಣಿಯದವರು ಆರು?

—ಬೇಂದ್ರೆ



ಈ ಜಗತ್ತಿನಲ್ಲಿ ಒಬ್ಬರನ್ನೊಬ್ಬರು ದ್ವೇಷಿಸಲು ಬೇಕಾದಷ್ಟು ಧರ್ಮಗಳಿವೆ. ಆದರೆ ಒಬ್ಬರನ್ನೊಬ್ಬರು ಪ್ರೀತಿಸಲು ಸಾಧಕವಾಗುವ ಧರ್ಮಗಳು ಮಾತ್ರ ಸಾಕಷ್ಟಿಲ್ಲ.

—ಡಾ. ರಾಧಾಕೃಷ್ಣನ್

# ಹೀಗಿದ್ದರು ನಮ್ಮ ಕುವೆಂಪು

**ಜಿ. ಟಿ. ನಾರಾಯಣರಾವ್**

**ಅಮೂರ್ತ ಮೌಲ್ಯಗಳು ಆಕಾಶಸಂಚಾರಿಗಳಾಗಿದ್ದು ತಮ್ಮ ಅಸ್ತಿತ್ವ ಪ್ರದರ್ಶನಾರ್ಥ ಮಾನವ ಮಾಧ್ಯಮಗಳನ್ನು ಆಯುತ್ತವೆ: ಸಂದ ಯುಗಗಳ ಮಹಾಪುರುಷರ ಜೀವನ ಚರಿತ್ರೆಗಳನ್ನು ಓದುವಾಗ ಈ ಭಾವನೆ ಸಹಜವಾಗಿ ಸ್ಫುರಿಸುತ್ತದೆ. ಇಂಥ ಒಬ್ಬ ಮೂರ್ತಮಾನವ ಮಾಧ್ಯಮ, ಆತನ ಜೀವಿತಾವಧಿಯಲ್ಲಿ, ಆ ಮೌಲ್ಯಗಳಿಗಾಗಿ ಬಾಳುತ್ತಾನೆ, ತನ್ನ ಪ್ರತಿಭಾಮೂಸೆಯಲ್ಲಿ ಅವುಗಳಿಗೆ ಹೊಸ ಆಯಾಮ ನೀಡಿ ಬಿತ್ತರಿಸುತ್ತಾನೆ ಮತ್ತು "ಅಂತಕನ ದೂತರು" ಕಿಂಚಿತ್ತು ದಯೆಯಿಲ್ಲದೇ ಬಂದೆಳೆದೊಯ್ಯುವಾಗ ಮೂರ್ತ ಜರಾಯುವನ್ನು ತೊರೆದು ಚಿರಾಯುವಾಗುತ್ತಾನೆ—ಏಕೆಂದರೆ ಮೌಲ್ಯಗಳಿಗೆ ಮರಣವಿಲ್ಲ. ಇಂಥ ಒಬ್ಬ ಮೌಲ್ಯ ಪ್ರತಿಪಾದಕರು ನಿರ್ಮಾಪಕರು ಮತ್ತು ಪ್ರಸಾರಕರು ಕನ್ನಡಡಿಂಡಿಮ ಬಾರಿಸಿದ ನಮ್ಮ ಕುವೆಂಪು ಅವರ ಸಮಕಾಲೀನವಾಗಿ ಬೆಳೆದ ಒಬ್ಬ ತರುಣನ ಮೇಲೆ ಕುವೆಂಪು ಪ್ರಭಾವ ಏನು ಮಾಡಿತು ಎಂಬ ಅನುಭವವನ್ನು ಈ ಲೇಖನದಲ್ಲಿ ಓದಿ.**

ನನ್ನ ಓರಗೆಯ ಶಾಲಾವಿದ್ಯಾರ್ಥಿಗಳು ಕನ್ನಡದಲ್ಲಿ ಅಕ್ಷರಜ್ಞಾನ–ಅಂತಸ್ತಿನಿಂದ ಪದಾರ್ಥಗ್ರಹಣ-ಅಂತಸ್ತಿಗೆ ಬಡ್ತಿ ಪಡೆದಾಗ, ೧೯೩೦ರ ದಶಕ, ನಮ್ಮನ್ನು ಕುವೆಂಪುಮೋಡಿ ಗಾಢವಾಗಿ ಆವರಿಸಿತು–ಬೊಮ್ಮನ ಹಳ್ಳಿಯ ಕಿಂದರಿಜೋಗಿಯ ಪದಗಳ ಗತಿಲಯ ಹಾಗಿತ್ತು!

ಮೊದಲು ನಮ್ಮ ಗಮನ ಸೆಳೆದದ್ದು ಅವರ ಕವನಗಳಲ್ಲಿ ಪುಟಿಯುತ್ತಿದ್ದ ನಾದ ಸುಖ: "ತುಂಗಾ ತೀರದ ಬಲಗಡೆಯಲ್ಲಿ। ಹಿಂದಲ್ಲಿದ್ದುದು ಬೊಮ್ಮನ ಹಳ್ಳಿ" ಅಥವಾ ನಾನು ನುಡಿಯ ಕಲಿತ ಮನೆ। ನಾನು ನಡಿಗೆಯರಿತ ಮನೆ." ಇಂಥ ಲಯಪುಂಜಗಳು ನಮ್ಮನ್ನು ಮರುಳು ಮಾಡಿದ್ದುವು. ಐದನೆಯ ಅಥವಾ ಆರನೆಯ ತರಗತಿಯಲ್ಲಿದ್ದ ನಮಗೆ ಅವು ಅರ್ಥವಾದುವೆಂದು ಹೇಳಲಾರೆ. ಆದರೆ ಅವನ್ನು ಗಟ್ಟಿಯಾಗಿ ಓದುವುದರಲ್ಲಿ, ಅವುಗಳ ಓಘದ ಜೊತೆ ಹೆಜ್ಜೆ ಹಾಕುವುದರಲ್ಲಿ ("ಜಡಿಯ ಗೆಜ್ಜೆ ನಡುಗೆ, ಹೆಜ್ಜೆಯಿಡುತ ಸುಗ್ಗಿ ಬರುತಿದೆ। ಸುಗ್ಗಿ ಬರೆ ಹಿಗ್ಗಿ ತಿರೆ ಸಗ್ಗ ಸೊಗವ ತರುತಿದೆ।") ಮತ್ತು ಅಂಥವೇ ಸಾಲುಗಳನ್ನು ಅನುಕರಿಸುವುದರಲ್ಲಿ (ರಾಜಾಸೀಟಿನ ನಂದೀ ಮರದಲಿ ತಾಪಸಿಯಾಗಿಹ

ನೀನಾರು? ಭೂತ ಭವಿಷ್ಯಗಳನು ಬೆಸೆಯುತ್ತಿಹ ಓ ಚಿರಮೌನಿಯೆ ಮೈದೋರು!) ಒಂದು ತೆರನಾದ ಅನಿರ್ವಚನೀಯ ಸುಖವಿತ್ತು.

ಕ್ರಮೇಣ, ಈ ಪಂಕ್ತಿಗಳಲ್ಲಿ 'ಮರಸು ಕುಳಿತಿರ್ದ' ಅರ್ಥ ಅರಿವಾದಂತೆ ಹೊಸ ಹಸುರು ಕಂಡ ಅನುಭವವಾಯಿತು: "ಮಿಂಚು ಥಳಿಸಲಿ ಗರ್ಜಿಸಲಿ ಗುಡುಗು ಘೋರ....ಗರ್ಜಿಸುತ ನಡೆ ಮುಂದೆ ನಿರ್ಭಯದಿ ನಡೆ ಮುಂದೆ" ಅಥವಾ "ಬಾಳನು ಬೈಯದೆ ಎದೆಗುಂದದವಳದೆ.... ಶಾಂತಿಯ ಬಲವೆನಗಿರಲಿ ಸದಾ." ಇಂಥ ರಚನೆಗಳು ಬೋಧಿಸುತ್ತಿದ್ದ ಪ್ರವೃತ್ತ ಜೀವನ ದೃಷ್ಟಿ ಆಪ್ಯಾಯಮಾನವಾಗಿತ್ತು.

ಮೂರನೆಯ ಒಂದು ಸ್ತರದಲ್ಲಿಯೂ ಕುವೆಂಪು ಕವನಗಳು ನಮಗೆ ಅರ್ಥಪೂರ್ಣವಾದುವು: ಅನುಭವದ ಸೆಲೆಗಳು, ಸವಾಲಿನ ಪಂಥಾಹ್ವಾನಗಳು ಮತ್ತು ಆನಂದದ ಆಕರಗಳು ನಮ್ಮ ಪರಿಸರದಲ್ಲಿಯೇ ಇವೆ, ಇನ್ನೆಲ್ಲಿಗೋ ಹೋಗಿ ಅವನ್ನು ಅರಸಬೇಕಾಗಿಲ್ಲ ಎಂಬ ಅರಿವು. ಅವರು ಮಲೆನಾಡಿನ ಪ್ರಫುಲ್ಲ ಪುಷ್ಪ, ಅರಳಿ ಪರಿಮಳಿಸಿ ನಾಲ್ದೆಸೆಗಳಿಗೆ ಪಸರಿಸಿದ್ದ ದಿವ್ಯ ಬಾಷ್ಪ.* ನಾವೋ? ಅದೇ ಮಲೆನಾಡಿನ ಇನ್ನೊಂದು ಕೋಣದ ಕೊಡಗಿನ ಎಳೆ ಕುಡಿಗಳು, ಮಾವಿನ ಮಿಡಿಗಳು! "ನೇಗಿಲ ಕುಳದೊಳಗಡಗಿದೆ ಕರ್ಮ। ನೇಗಿಲ ಮೇಲೆಯೆ ನಿಂತಿದೆ ಧರ್ಮ।" ಅಥವಾ "ಕಲ್ಲ ಕುಂಡದಿ ನೆಟ್ಟ ಅಶ್ವತ್ಥ ಸಸಿಯಂತೆ। ಕಿಮುಳ್ಚಿ ಗುಜ್ಜಾಗುತಿದೆ ಸೊಳೆವ ಚೈತನ್ಯ। ಭೂಮಿಯಲಿ ಬೇರೂರಿ ಬಾನೆಡೆಗೆ ತಲೆಯೆತ್ತಿ ನಿಲುವವರಿಗೇತಕೀದಾಸ್ಯದೈನ್ಯ?" ಇಂಥ ಮಂತ್ರಗಳು ನಮ್ಮನ್ನು ನೇರ ವಾಸ್ತವತೆಗೆ ಒಯ್ದು ಅಲ್ಲಿಂದ ಕಲ್ಪನೆಯ ನೌಕೆಯಲ್ಲಿ ಎತ್ತರಕ್ಕೆ ಉಡಾಯಿಸಿ ಧ್ವನ್ಯರ್ಥಗಳ ವಿಶಾಲಾಕಾಶದಲ್ಲಿ ಸ್ವಚ್ಛಂದವಾಗಿ ವಿಹರಿಸುವಂತೆ ಮಾಡುತ್ತಿದ್ದುವು.

ಹೀಗೆ ಕನ್ನಡದ ಸೊಗಸು, ಸೊಗಡು ಮತ್ತು ಸೊಬಗು ಅರಿತು ಬದುಕಿಗೆ ಅನ್ವಯಿಸಿ, ಹೊಸ ಅನುಭವ ಗಳಿಸಿ, ವಾಙ್ಮಯ ವಾಹಿನಿಗೆ ನಮ್ಮ ಕೊಡುಗೆ ಹನಿಸಿ ಕೃತಾರ್ಥತೆ ಪಡೆವ ದಿಶೆಯತ್ತ ಕುವೆಂಪು ಕೃತಿಗಳು ನಮ್ಮನ್ನು ಪ್ರೇರಿಸಿದುವು.

ಇಂಥ ಪರಿಸರದಲ್ಲಿ ಬೆಳೆದ ನಾನು ಕನ್ನಡದಲ್ಲಿ ಹೊಸತೊಂದು ಪ್ರಯೋಗ ತೊಡಗಿದೆ. ಆಗ (೧೯೫೦) ನಾನು ಕಾಲೇಜಿನಲ್ಲಿ ಗಣಿತೋಪನ್ಯಾಸಕ. ಇಂಗ್ಲಿಷಿನಲ್ಲಿ ಆಕರ ಗ್ರಂಥಗಳನ್ನೂ ಜನಪ್ರಿಯ ವಿಜ್ಞಾನ ಪುಸ್ತಕಗಳನ್ನೂ ಓದಿ ಆ ಮಾದರಿಯ ರಚನೆಗಳನ್ನು ಕನ್ನಡದಲ್ಲಿ ಪ್ರವರ್ತಿಸಬೇಕೆಂದು ಬಯಸಿದ್ದೆ. ಆರ್. ಎಲ್. ನರಸಿಂಹಯ್ಯ, ಬೆಳ್ಳಾವೆ ವೆಂಕಟನಾರಾಯಣಪ್ಪ, ಕೋಟ ಲಕ್ಷ್ಮೀನಾರಾಯಣಕಾರಂತ ಮೊದಲಾದ ಹಿರಿಯ ಲೇಖಕರು ಆಗಲೇ ಕನ್ನಡದಲ್ಲಿ ತಕ್ಕಷ್ಟು ಕೃಷಿ ಮಾಡಿದ್ದರು. ಕುವೆಂಪು ಅವರ ಮಾನಸಗರಡಿಯಲ್ಲಿ ಪಳಗಿ ಸಿದ್ಧವಾಗಿದ್ದ ಆಧುನಿಕ ಕನ್ನಡ ನನಗೆ ವರದಾನವಾಗಿ ಒದಗಿತ್ತು. ಇಂಗ್ಲಿಷಿನಿಂದ ಪರಿಕಲ್ಪನೆ, ಕುವೆಂಪು ಅವರಿಂದ ಕನ್ನಡ ಮತ್ತು ಆರ್ ಎಲ್ ಎನ್ ಮೊದಲಾದವರಿಂದ

* ಬಾಷ್ಪ : ವಿಜ್ಞಾನದಲ್ಲಿ ಪಾರಿಭಾಷಿಕ ಪದವಾಗಿ 'ಪರಿಮಳ' ಅಥವಾ 'ಸುಗಂಧ.'

ಉತ್ಸಾಹ ಪಡೆದು ಕಳಕ್ಕೆ ದುಮುಕಿಯೇ ಬಿಟ್ಟೆ!

ಅಂದಿನ "ಕರ್ಮವೀರ"ದಲ್ಲಿ ಪ್ರಕಟವಾದ ನನ್ನ ಒಂದು ಜನಪ್ರಿಯ ವಿಜ್ಞಾನ ಲೇಖನವನ್ನು ಓದಿದ ಹಿರಿಯ ಸಾಹಿತಿಯೊಬ್ಬರು ಆಡಿದ ನುಡಿ ಈಗಲೂ ನೆನಪಿನಲ್ಲಿದೆ: "ಕೆ. ವಿ. ಪುಟ್ಟಪ್ಪನವರು ವಿಜ್ಞಾನಕ್ಕೂ ಪ್ರವೇಶಿಸಿದರೇ?" ಪ್ರಾಚೀನ ಸಂಪ್ರದಾಯಸ್ಥರಾದ ಇವರು ಉಸುರಿದ ಈ ವ್ಯಂಗ್ಯೋಕ್ತಿ ಅಂದಿನಂತೆ ಇಂದು (೧೯೯೪) ಕೂಡ "ನಾನು ತಪ್ಪು ಹಾದಿ ಹಿಡಿದಿಲ್ಲ" ಎಂಬ ಶಿಫಾರಸು ಎಂದು ಭಾವಿಸಿದ್ದೇನೆ. ಬೌದ್ಧಿಕವಾಗಿ ಮೂರು ರೀತಿಗಳಲ್ಲಿ ಕುವೆಂಪು ಪ್ರಭಾವ ನನ್ನನ್ನು ಬೆಳೆಸಿತು: ಕನ್ನಡದ ಬಗ್ಗೆ ಗಾಢ ಪ್ರೇಮ, ಕನ್ನಡದಲ್ಲಿ ವಿಜ್ಞಾನ ಕೃಷಿ ಮಾಡಲು ಸಮರ್ಥ ಸುಪುಷ್ಟ ಮಾಧ್ಯಮ, ಮತ್ತು ಇದೊಂದೇ ನನಗೆ ಬೆಳೆಯಲು ಇರುವ ಹಾದಿ ಎಂಬ ಸಂದೇಶ.

ಆ ದಶಕದಲ್ಲಿ (೧೯೫೦) ಕುಲಪತಿ ಕೆ. ವಿ. ಪುಟ್ಟಪ್ಪನವರು ನಾನಿದ್ದ ಕಾಲೇಜಿಗೆ (ಮಡಿಕೇರಿ) ವಾರ್ಷಿಕೋತ್ಸವದ ಅಧ್ಯಕ್ಷರಾಗಿ ಬಂದಿದ್ದರು. ಈ ವಾಙ್ಮಯ ತಪಸ್ವಿಯನ್ನು ಅದೇ ಮೊದಲ ಸಲ ನಾನು ನೋಡಿದ್ದು. "ನಾಗರಿಕತೆ" (civilization) ಮತ್ತು "ಸಂಸ್ಕೃತಿ"(culture) ನಡುವಿನ ವ್ಯತ್ಯಾಸವನ್ನು ಅವರು ಅಂದು ವಿವರಿಸಿದ ಪರಿ ಇಂದಿಗೂ ನೆನಪಿಗೆ ಬರುತ್ತದೆ: "ಒಳ್ಳೆಯ ಕ್ಷೌರಿಕ, ಮೋಚಿ ಮತ್ತು ದರ್ಜಿ ಯಾರನ್ನೂ ನಾಗರಿಕ ವ್ಯಕ್ತಿಯಾಗಿ ಮಾರ್ಪಡಿಸಬಲ್ಲರು, ಆದರೆ ಸುಸಂಸ್ಕೃತನನ್ನಾಗಿ ಅಲ್ಲ. ವಿದ್ಯೆ, ವಿನಯ, ನಿಸ್ಪೃಹತೆ, ಪರೋಪಕಾರ ಮುಂತಾದವು ಸಂಸ್ಕೃತಿಯ ಮೂಲದ್ರವ್ಯಗಳು. ಇವು ಆಂತರಂಗಿಕ ಸಂಸ್ಕಾರದಿಂದ ಮಾತ್ರ ಸಿದ್ಧಿಸಬಲ್ಲಂಥವು. ನಮ್ಮ ಶಾಲಾ ಕಾಲೇಜುಗಳು ಇತ್ತ ಕಡೆ ವಿಶೇಷ ಲಕ್ಷ್ಯ ಹರಿಸುವುದು ಇಂದು ತುರ್ತು ಅಗತ್ಯವಾಗಿದೆ."

೧೯೬೯ ಜೂನ್‌ನಲ್ಲಿ ನಾನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಗೆ "ಕನ್ನಡ ವಿಶ್ವಕೋಶ"ದ ವಿಜ್ಞಾನ ಸಂಪಾದಕನಾಗಿ ಬಂದೆ. ದೇಜಗೌ ಅವರ ಛಲ ಮತ್ತು ಪ್ರೀತಿ ಹಿನ್ನೆಲೆಯ ಪ್ರೇರಕ ಬಲಗಳು. ಈ ಸುದ್ದಿಯನ್ನು ಕುವೆಂಪು ಅವರಿಗೆ ದೇಜಗೌ ತಿಳಿಸಿದಾಗ "ವಿಶ್ವಕೋಶದ ಕನಸು ಇನ್ನು ಖಂಡಿತವಾಗಿಯೂ ನನಸಾಗುತ್ತದೆ" ಎಂದರಂತೆ. ಇಂಥ ಸದಾಶಯದ ತಳದಲ್ಲಿ ಕುವೆಂಪು ಅವರ ಗಾಢ ಕನ್ನಡ ಪ್ರೇಮ ಕೆಲಸ ಮಾಡಿರಬೇಕೆಂದು ಭಾವಿಸಿದ್ದೆ. ಇದು ಪೂರ್ತಿ ನಿಜವಾಗಿರಲಿಲ್ಲ!

ಆ ತರುಣದಲ್ಲಿ ಹಾ.ಮಾ. ನಾಯಕರು ನನ್ನನ್ನು ಕುವೆಂಪು ಅವರಲ್ಲಿಗೆ "ಅಧಿಕೃತವಾಗಿ" ಕರೆದೊಯ್ದರು—ಕನ್ನಡದ ಕಣ್ವರಲ್ಲಿಗೆ ಈ ಕಿಣ್ವನನ್ನು. ನನ್ನ ಜೀವನದಲ್ಲಿಯ ಮುಖ್ಯ ತಿರುವುಗಳನ್ನೂ ವಿಜ್ಞಾನ ಕೃಷಿಯಲ್ಲಿಯ ವೈಶಿಷ್ಟ್ಯವನ್ನೂ ಅವರು ಗುರುತಿಸಿ ವಿವರಿಸಿದ ಪರಿ "ಪರಗುಣ ಪರಮಾಣುವುದುಂ ಗಿರಿಗೈದುರ್ಬುವ" ಸುಜನರಿಗೆ ಮಾತ್ರ ಮೀಸಲಾದದ್ದು. ಕನ್ನಡ ಮತ್ತು ಕನ್ನಡಿಗರ ಬಗೆಗಿನ ಪ್ರೀತಿ ಆ ಮಟ್ಟದಲ್ಲಿತ್ತು ಅವರಲ್ಲಿ.

ಕನ್ನಡದಲ್ಲಿ ವಿಜ್ಞಾನ ವಾಙ್ಮಯ ರಚನೆ ನನ್ನ ವೃತ್ತಿ. ಸಾಹಿತ್ಯ ಮತ್ತು ಸಂಗೀತಾರಾಧನೆ ಪ್ರವೃತ್ತಿ. ಎಂದೇ ಉತ್ತಮವು

ಸಾಹಿತ್ಯ ಕೃತಿಗಳಲ್ಲಿ ವಿಜ್ಞಾನದ ಹೊಳಹುಗಳೂ ಉತ್ಕೃಷ್ಟ ವಿಜ್ಞಾನ ಕೃತಿಗಳಲ್ಲಿ ಸಾಹಿತ್ಯದ ಮಿಡಿತಗಳೂ ನನಗೆ ಸುಲಭಗೋಚರವಾಗುತ್ತವೆ—ಉಭಯ ಪ್ರಕಾರಗಳಿಗೂ ತಳರೂಪಿಕೆಯಲ್ಲಿ ಸಾಮಾನ್ಯವಾಗಿ ಇರುವುದು ಸಂಗೀತ (ಅಭಿಜಾತಕಲೆ) ಎಂದೂ ನನಗೆ ಗೊತ್ತಿದೆ. ಉದಾಹರಣೆಗೆ "ಜಡವೆಂದರೇನು? ಸೃಷ್ಟಿಯಲಿ ಚೇತನ ಸುಪ್ತಿ." ಡಿವಿಜಿಯವರ ಈ ಮಂಕುತಿಮ್ಮ ಉವಾಚದಲ್ಲಿ ಆಧುನಿಕ ಭೌತವಿಜ್ಞಾನದ ಛಾಯೆ ಎದ್ದು ಕಾಣುತ್ತದೆ (ಶಕ್ತಿ-ರಾಶಿ ಸಮಾನತೆ, $E=mc^2$).

ಈ ವಿಚಾರವನ್ನು ಖುದ್ದು ಡಿವಿಜಿಯವರ ಜೊತೆಯೇ ನಾನು ಪ್ರಸ್ತಾವಿಸಿದಾಗ (೧೯೬೭) ಅವರೆಂದರು: "ನಾನು ಕಾಲೇಜು ಮೆಟ್ಟಿಲು ಹತ್ತಿದವನಲ್ಲ. ವಿಜ್ಞಾನ ತಿಳಿಯದು. ಆದರೆ ಜೀವನ ಧರ್ಮ ಮತ್ತು ತತ್ತ್ವಶಾಸ್ತ್ರಗಳಿಗೆ ಸಂಬಂಧಿಸಿದ ಸಮಸ್ತ ಚಿಂತನ ಪ್ರಕಾರಗಳಲ್ಲಿಯೂ ಆಸಕ್ತಿ ತಳೆದವನು. ಈ ದಿಶೆಯಲ್ಲಿ ನನ್ನ ಅನುಭವ ಸಾರವನ್ನು ಯಥಾಮತಿ ಯಥಾಶಕ್ತಿ ನಿರೂಪಿಸಿದ್ದೇನೆ, ಅಷ್ಟೆ. ಇದು ಆಧುನಿಕ ವಿಜ್ಞಾನ ರಂಗದಲ್ಲಿಯೂ ಪ್ರಸ್ತುತವಾಗಿದೆಯೆಂದರೆ ನನಗಾದ ಸತ್ಯದರ್ಶನ, ಭಾಗಶಃವೇ ಆದರೂ, ಮತ್ತು ನಾನದನ್ನು ಅರಿತು ಅದಕ್ಕೆ ನೀಡಿರುವ ವ್ಯಾಖ್ಯಾನ ತಪ್ಪಾಗಿಲ್ಲವೆಂದು ತಿಳಿಯುತ್ತೇನೆ. ಜ್ಞಾನಮೇರು ಅಭಿಯಾನಕ್ಕೆ ಚಿಂತನೆಗಳು ಎಷ್ಟೋ ಮಾರ್ಗಗಳು ಅಷ್ಟು. ಈಗ, ತತ್ತ್ವಶಾಸ್ತ್ರಿ ಮತ್ತು ವಿಜ್ಞಾನಿ ತಮ್ಮ ತಮ್ಮ ಪಥಗಳಲ್ಲಿ ಆರೋಹಿಸುತ್ತಿರುವಾಗ ಉಭಯರಿಗೂ ಗೋಚರವಾಗುವ ಕೆಲವು ಸಾಮಾನ್ಯ ದೃಶ್ಯಗಳಿರುತ್ತವೆ. ಈ ಕಾರಣದಿಂದಲೇ ತತ್ತ್ವಶಾಸ್ತ್ರದಲ್ಲಿಯ ಒಂದು ದರ್ಶನ ವಿಜ್ಞಾನದಲ್ಲಿಯೂ, ವಿಲೋಮವಾಗಿ, ವಿಜ್ಞಾನದಲ್ಲಿಯ ಒಂದು ದರ್ಶನ ತತ್ತ್ವಶಾಸ್ತ್ರದಲ್ಲಿಯೂ ಧ್ವನ್ಯರ್ಥ ನೀಡುವುದಾಗಿದೆ."

"ಸಾಹಿತ್ಯದಲ್ಲಿ ವಿಜ್ಞಾನ" ಎಂಬ ನವ "ಆಯುಧ"ದಿಂದ ಸಜ್ಜಿತನಾಗಿ ನಾನು, ಕೇವಲ ಸ್ವಸಂತೋಷಾರ್ಥ, "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯವನ್ನು ಓದುತ್ತಿದ್ದೆ, ಇದರಲ್ಲಿಯ ವೈಜ್ಞಾನಿಕ ಹೊಳಹುಗಳನ್ನು ಗುರುತು ಮಾಡಿಕೊಳ್ಳುತ್ತಿದ್ದೆ. "ನೆಯ್ದಾಳುತಿದೆ ಜಗವನೊಂದತಿ ವಿರಾಣ್ಮನಂ! ಸೂಕ್ಷ್ಮಾತಿಸೂಕ್ಷ್ಮ ತಂತ್ರದಿ ಬಿಗಿದು ಕಟ್ಟಿಯುಂ! ಜೀವಿಗಳ್ಗಿಚ್ಛೆಯಾಸ್ವಾತಂತ್ರ್ಯ ಭಾವಮಂ! ನೀಡಿ...." ಭೌತ ಜಗತ್ತನ್ನು ಸರ್ವವ್ಯಾಪಿಸಿರುವ ಗುರುತ್ವಾಕರ್ಷಣ ನಿಯಮದ ತಾತ್ತ್ವಿಕ ಮುಖ ಇದರಲ್ಲಿ ಪ್ರಕಟವಾಗುತ್ತದೆ.

ಕುವೆಂಪು ಅವರ ಎಪ್ಪತ್ತೆರಡನೆಯ ಹುಟ್ಟುಹಬ್ಬದಂದು ದೇಜಗೌ ಅವರ ಪ್ರಧಾನ ಸಂಪಾದಕತ್ವದಲ್ಲಿ 'ಸಹ್ಯಾದ್ರಿ' ಎಂಬ ಹೆಸರಿನ ಅಭಿನಂದನ ಗ್ರಂಥವನ್ನು ಯುಗದ ಈ ಮಹಾಚೇತನಕ್ಕೆ ಅರ್ಪಿಸಲಾಯಿತು (೨೯–೧೨–೧೯೭೫). ದೇಜಗೌ ತಮ್ಮ ಎಂದಿನ ಅಭಿಮಾನದಿಂದ ನನಗೂ ಒಂದು ಲೇಖನ ಬರೆಯಬೇಕು ಎಂಬ ಸೂಚನೆ ಕಳಿಸಿದರು. "ಶ್ರೀ ರಾಮಾಯಣ ದರ್ಶನಂ ಮಹಾ ಕಾವ್ಯದಲ್ಲಿ ವೈಜ್ಞಾನಿಕಾಂಶಗಳು" ಲೇಖನ ಬರೆಯಬಹುದೇ ಎಂದು ಅಳುಕಿನಿಂದ ಪ್ರಶ್ನಿಸಿದೆ—ಗಂಧವನ್ನು ತೇಯುವಲ್ಲಿ ನೊಣಕ್ಕೇನು ಕೆಲಸ! ಅವರು ನನ್ನ ಕೋರಿಕೆಯನ್ನು ಆತ್ಮೀಯತೆಯಿಂದ ಸ್ವಾಗತಿಸಿದರು.

ಲೇಖನ ಬರೆಯುತ್ತಿದ್ದಾಗ ಆರೇಳು ಸಲ ನೇರ ಮಹಾಕವಿಯವರಲ್ಲಿಗೇ ಹೋಗಿ ನನ್ನ ಹಲವಾರು ಸಂದೇಹಗಳಿಗೆ ಪರಿಹಾರಗಳನ್ನು ಪಡೆದಿದ್ದೇನೆ. ಇಂಥ ಒಂದೊಂದು ಸಂದರ್ಭದಲ್ಲಿಯೂ ಅವರು ನನ್ನ ಜೊತೆ ವರ್ತಿಸಿದ ರೀತಿ ಗಂಭೀರೋದಾತ್ತವಾದದ್ದು —ನಾನೇ ಅವರಿಗೇನೋ ಉಪಕಾರ ಗೈಯುತ್ತಿರುವೆನೋ ಎಂಬಂತೆ. ಯಥಾ ಕಾಲದಲ್ಲಿ 'ಸಹ್ಯಾದ್ರಿ' ಅವರಿಗೆ ಅರ್ಪಿತವಾಯಿತು. ಹಲವಾರು ತಿಂಗಳು ಸಂದುವು. ಒಂದು ಸಂಜೆ ಆಗ ತಾನೇ ಮನೆಗೆ ಬಂದಿದ್ದೆ. ದೂರವಾಣಿ ಮಿಡಿಯಿತು.

"ನಮಸ್ಕಾರ! ಜಿ. ಟಿ. ನಾರಾಯಣ ರಾವ್" ಎಂದೆ ಎಂದಿನಂತೆ.

ಅಜ್ಞಾತವಾಣಿ: "ನಾನು ಕುವೆಂಪು ಮಾತನಾಡುತ್ತಿದ್ದೇನೆ—ನಮಸ್ಕಾರ...."

ಎಂದೂ ಭಾವುಕನಲ್ಲದ ನಾನು ಆ ಗಳಿಗೆ ಅತಿಶಯಭಾವದೀಪ್ತನಾಗಿ "ಏನು ಸಾರ್? ನನ್ನಿಂದೇನಾಗಬೇಕು ಸಾರ್?" ಎಂದೆ.

"ಈಗ ತಾನೇ 'ಸಹ್ಯಾದ್ರಿ'ಯನ್ನು ಆಮೂಲಾಗ್ರ ಓದಿ ಮುಗಿಸಿದೆ. ನಿಮ್ಮ ಲೇಖನ ಮತ್ತು ಎ.ಎಸ್. ಧರಣೇಂದ್ರಯ್ಯನವರ ಲೇಖನ ['ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಮನೋವೈಜ್ಞಾನಿಕ ಹೊಳಹುಗಳು] ನನಗೆ ತುಂಬ ಪ್ರಿಯವಾದುವು. ಕೃತಜ್ಞತೆ ತಿಳಿಸೋಣವೆಂದು ಫೋನ್ ಮಾಡಿದೆ, ಅಷ್ಟೆ."

'ವಿದ್ಯುದಾಲಿಂಗನ' ಸನ್ನಿವೇಶ. "ಅತೀವ ಆದವೆಂದು ಭಾವಿಸಿದ್ದೇನೆ." ಈ ಅರ್ಥದ ಮಾತು ಹೇಳಿ ನನ್ನ ಕಾಣಿಕೆ ಸಲ್ಲಿಸಿದೆ. ನಿಜ—"ಋತದ ಪರಿಮುದ್ರೆ ಸರಳತೆ! ಸತ್ಯದ ಪ್ರಕಾಶ ಸೌಂದರ್ಯ!!" (The simple is the seal of the true. Beauty is the splendour of truth.)

ಆಕಾಶಕಾಯಗಳ ಬಗ್ಗೆ ಅವರಿಗೆ ಅಪಾರಾಸಕ್ತಿ. ನನಗೆ ಆಗ ಈಗ ದೂರವಾಣಿಸಿ ತಮ್ಮ ಸಂದೇಹಗಳನ್ನು ಹೇಳುತ್ತಿದ್ದರು: ಮೂಲ ಚಿಂತಕನ ತಾತ್ತ್ವಿಕ ಸಂಘರ್ಷಗಳವು, ಆಧುನಿಕ ಖಭೌತ ವಿಜ್ಞಾನದ ಮುಂಚೂಣಿ ಸಮಸ್ಯೆಗಳವು.

ಕನ್ನಡ ಪ್ರಾಧ್ಯಾಪಕರೊಬ್ಬರು ದೂರವಾಣಿಯಲ್ಲಿ ಹೇಳಿದರು: "ಈ ಸಲದ ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ನೀವು 'ಆಧುನಿಕ ಕನ್ನಡ ಕಾವ್ಯದಲ್ಲಿ ಅಧ್ಯಾತ್ಮ ವಿಜ್ಞಾನ' ಎಂಬ ಪ್ರಬಂಧ ಮಂಡಿಸಬೇಕು; ವಿಷಯವನ್ನೂ ನಿಮ್ಮ ಹೆಸರನ್ನೂ ಸೂಚಿಸಿದವರು ಕುವೆಂಪು."

ನಾನೆಂದೆ: "ಅಧ್ಯಾತ್ಮ ವಿಜ್ಞಾನ? ಅಧ್ಯಾತ್ಮದ ವಿಚಾರ ನನಗೇನೂ ತಿಳಿಯದು. ನಾನು ಈ ಹೊಣೆ ಹೊರಲಾರೆ."

"ನೀವೇ ಈ ಕಾರ್ಯ ನಿರ್ವಹಿಸಲು ಸಮರ್ಥರೆಂದು ಕುವೆಂಪು ಮತ್ತೆ ಮತ್ತೆ ಹೇಳಿದ್ದಾರೆ."

ಹನುಮಂತ, ತಾತ್ತ್ವಿಕವಾಗಿಯಾದರೂ, ಬ್ರಹ್ಮಾಸ್ತ್ರಕ್ಕೆ ಮಣಿಯಬೇಕಾಯಿತು: "ಅವರನ್ನೇ ಕೇಳಿ ನಿರ್ಧರಿಸುತ್ತೇನೆ."

ಮರು ಸಂಜೆ ಕುವೆಂಪು ಅವರಲ್ಲಿಗೆ ಹೋಗಿ "ಅಧ್ಯಾತ್ಮ ವಿಜ್ಞಾನವೆಂದರೇನು ಸಾರ್?" ಎಂದು ಕೇಳಿದೆ.

ಹಾರ್ದಿಕವಾಗಿ ನಕ್ಕರು. ("ಮಲೆನಾಡಿನ ಗಿರಿಬನಗಳ ಮೇಲೆ ಬಾಲವಿನೇಶನ ಕೋಮಲ ಲೀಲೆ" ನೆನಪಿಗೆ ಬಂತು.) "ಅಧ್ಯಾತ್ಮ ಬೇರೆ, ವಿಜ್ಞಾನ ಬೇರೆ.

ಆಧ್ಯಾತ್ಮ ವಿಜ್ಞಾನವೆಂಬ ಸಂಕರಶಿಶು ನಾನರಿಯೆ!"

ಹಿರಿಯರ ಹೆಸರನ್ನು ವಿನಾಕಾರಣ ಎಳೆ ತಂದು ನನ್ನನ್ನು 'ಬಗ್ಗಿಸಲು' ಪ್ರಯತ್ನಿಸಿದ ಅಧ್ಯಾಪಕರಿಗೆ ಶೀತಲ ಖಚಿತತೆಯಿಂದ ವಿಷಯ ತಿಳಿಸಿದೆ.

"ನಡೆಯಿರಿ ಈ ಕ್ಷಣ. ಖುದ್ದು ಅವರ ಸಮಕ್ಷಮವೇ ಸಂಗತಿ ಇತ್ಯರ್ಥವಾಗಲಿ" ಎಂದು ಅವರು ಸೆಟೆದೆದ್ದು ಪಂಥ ಹೂಡಿದರು.

ನಾನೆಂದೆ "ಎಂಬತ್ತರ ಹಿರಿ ಎತ್ತರದಲ್ಲಿರುವ ಈ ಯುಗ ಪ್ರತಿಭೆಯನ್ನು ಈ ವಿಚಾರದಲ್ಲಿ ಬಳಲಿಸುವುದು ಬೇಡ. ನಾನು ಪ್ರಬಂಧ ಬರೆಯುತ್ತೇನೆ, ಆಧ್ಯಾತ್ಮ ವಿಜ್ಞಾನ ಎಂಬುದಿಲ್ಲ, ಆಧ್ಯಾತ್ಮ ಬೇರೆ ವಿಜ್ಞಾನ ಬೇರೆ ಎಂಬ ಅವರ ಸೂಕ್ತಿಯಿಂದಲೇ ತೊಡಗುತ್ತೇನೆ."

ನಡೆದದ್ದೇನಿರಬಹುದು? ಅಧ್ಯಾತ್ಮದಲ್ಲಿಯೂ ವಿಜ್ಞಾನದಲ್ಲಿಯೂ ಕುವೆಂಪು ಅವರಿಗೆ ಸಮಾನಾಸಕ್ತಿ. ನನ್ನ ಬಗ್ಗೆ ಅಭಿಮಾನ. ಈ ಎಲ್ಲ ವಿಚಾರಗಳ ಪ್ರಸ್ತಾವನೆ ಪ್ರಾಧ್ಯಾಪಕರ ಮನೋಮೂಸೆಯಲ್ಲಿ ರಸಪಾಕಗೊಂಡು ಈ ವಿಚಿತ್ರ ಸಂಕರಶಿಶು 'ಅವತರಿಸಿ'ರಬೇಕು!

"Generations to come, it may be, will scarce believe that such a one as this ever in flesh and blood walked upon this earth." (ಇಂಥವನೊಬ್ಬ ಎಂದಾದರೂ ಈ ನೆಲದ ಮೇಲೆ ರಕ್ತಮಾಂಸಭರಿತನಾಗಿ ಅಡ್ಡಾಡಿದುದು ನಿಜವಿರಬಹುದೇ ಎಂದು ಮುಂಬಳಿರುವ ಪೀಳಿಗೆಗಳು ಸಂದೇಹಿಸುವುದು ಸಾಧ್ಯ.) Einstein on Gandhi.



ಉಚ್ಚ ಮನುಷ್ಯತ್ವವನ್ನು ಹೊಂದಬೇಕಾದರೆ ನ್ಯಾಯವನ್ನು ಯಾವಾಗಲೂ ನಿರ್ಭೀತಿಯಿಂದ ಸಾರಿರಿ. ಅದರಿಂದ ಘೋರ ಅಪಾಯವನ್ನು ಎದುರಿಸುವ ಪ್ರಸಂಗ ಬಂದರೂ ಬರಲಿ.

—ಕಬೀರದಾಸ

# ಗುರುಗಳು : ಕೆಲವು ನೆನಪುಗಳು

ಡಾ|| ಜೆ. ಶಶಿಧರಪ್ರಸಾದ್

ಶ್ರೀ ಕುವೆಂಪು ಅವರನ್ನು ನಮ್ಮ ಕುಟುಂಬ ವರ್ಗದವರೆಲ್ಲ ಸಾಮಾನ್ಯವಾಗಿ ಗುರುಗಳೆಂದೇ ಗುರುತಿಸುತ್ತಾ ಬಂದಿದ್ದೇವೆ. ಅವರು ನನ್ನ ತಂದೆ ದೇಜಗೌ ಅವರಿಗೆ ಗುರುಗಳಾಗಿದ್ದರು. ಆದರೆ 'ಗುರು' ಶಬ್ದದ ಅರ್ಥವ್ಯಾಪ್ತಿ ಸಾಮಾನ್ಯ ಅರ್ಥವ್ಯಾಪ್ತಿಯನ್ನು ಮೀರಿದುದಾಗಿದೆ.

ನನಗೆ ನೆನಪಿರುವಂತೆ ನಾನು ಹಾಗೂ ನನ್ನ ತಂಗಿ ಸೌ|| ಶಶಿಕಲಾ ಚಿಕ್ಕವರಿದ್ದಾಗ ಉದಯರವಿಗೆ ಅಮ್ಮನೊಡನೆ ಹೋಗುತ್ತಿದ್ದೆವು. ನಂತರ ನಾವು ಮಾಧ್ಯಮಿಕ ಶಾಲೆಗೆ ಹೋಗುತ್ತಿದ್ದ ಸಮಯದಿಂದ ಹಲವಾರು ವರ್ಷಗಳ ಕಾಲ ಗುರುಗಳ ಮನೆಗೆ ವಾರಕ್ಕೆ ಒಂದೆರಡು ಬಾರಿ ಸಂಜೆ ಆಟವಾಡಲು ಹೋಗುತ್ತಿದ್ದೆವು. ಉದಯರವಿಯಲ್ಲಿ ಗುರುಗಳು ಉತ್ತರದ ವರಾಂಡದಲ್ಲಿ ಆಸೀನರಾಗಿರುತ್ತಿದ್ದರು. ನಾವು ಗೇಟಿನ ಬಳಿ ಹೋಗುತ್ತಿದ್ದಂತೆ ಅಕ್ಕಂದಿರಾದ ಕಲಾ ತಾರಿಣಿಯರಿಗೆ ನಾವು ಬಂದ ವರ್ತಮಾನ ನೀಡುತ್ತಿದ್ದರಲ್ಲದೆ, ಅವರ ಮನೆಯಲ್ಲಿದ್ದ ದೊಡ್ಡ ಆಲ್‌ಶೇಷಿಯನ್ ನಾಯಿಗೆ ಹೆದರಿ ನಾವು ಒಳಹೊಗಲು ಹಿಂಜರಿಯುತ್ತಿದ್ದಾಗ ಹಲವೊಮ್ಮೆ ಹೊರ ಬಂದು ಒಳಕ್ಕೆ ಕರೆದುಕೊಂಡು ಹೋಗುತ್ತಿದ್ದ ದೃಶ್ಯ ಇನ್ನೂ ಕಣ್ಮುಂದೆ ಕಟ್ಟಿದಂತಿದೆ. ನಾವು ಮನೆಯ ತಾರಸಿಯ ಮೇಲೆ ಆಟವಾಡಿಕೊಳ್ಳುತ್ತಿದ್ದಾಗ ಗುರುಗಳು ಉದಯರವಿಯಲ್ಲಿನ ಒತ್ತಾಗಿ ಬೆಳೆದು ಹಸಿರು ಹಣ್ಣುಗಳಿಂದ ತುಂಬಿಕೊಂಡಿರುತ್ತಿದ್ದ ತೋಟದ ಮಧ್ಯೆ ವಿಹರಿಸುತ್ತಿದ್ದರು.

ನಾವು ದೊಡ್ಡವರಾದಂತೆ, ನಮ್ಮ ಶಾಲಾ-ಕಾಲೇಜುಗಳ ಚಟುವಟಿಕೆ ತೀವ್ರಗೊಂಡಂತೆ ಉದಯರವಿಗೆ ಭೇಟಿ ವರ್ಷಕ್ಕೆ ೨-೩ ಬಾರಿಗೆ ಇಳಿಯಿತು. ನಾನು ನನ್ನ ವ್ಯಾಸಂಗವನ್ನು ಮುಗಿಸಿ ಕೆಲಸಕ್ಕೆ ಸೇರಿದ ಮೇಲೆ ಮನೆಗೆ ಹೋದಾಗ ನನ್ನ ಸಂಶೋಧನಾ ಚಟುವಟಿಕೆಯ ಬಗ್ಗೆ ವಿಚಾರಿಸಿ ಚರ್ಚಿಸುತ್ತಿದ್ದರು. ಅವರ ಮನೆಗೆ ಹೋದಾಗಲೆಲ್ಲಾ ನಮಗೆ ಶ್ರೀ ಕುವೆಂಪು ದಂಪತಿಗಳಿಂದ ಸಿಗುತ್ತಿದ್ದ ದೈವೀ ಪ್ರೀತಿ-ಆಶೀರ್ವಾದಗಳ ಅನುಭವಗಳನ್ನು ಮರೆಯುವಂತಿಲ್ಲ. ಅವರ ಮನೆಯಲ್ಲಿ ಸವಿಯುತ್ತಿದ್ದ ಹಾಗೂ ನಮ್ಮ ಮನೆಗೂ ತಲುಪುತ್ತಿದ್ದ ತಿಂಡಿ-ತೀರ್ಥ, ಹಣ್ಣು-ಹಂಪಲುಗಳ ಆಸ್ವಾದವನ್ನು ನಾಲಿಗೆಗಳು ಮರೆತಿಲ್ಲ. ಹಲವಾರು ಸಂಜೆಗಳಲ್ಲಿ ಶ್ರೀಗುರುವಿನೊಡನೆ ಸಂಜೆಯ ಉಪಾಹಾರವನ್ನು ಮಾಡಿದ ನೆನಪು ಮಾಸದಂತಿದೆ.

೧೯೬೪ರ ಅಕ್ಟೋಬರ್ ತಿಂಗಳಿನಲ್ಲಿ ನಮ್ಮ ಮನೆಯ ಗೃಹಪ್ರವೇಶದ ಪೂಜೆಗೆ ಗುರುಗಳು ಮನೆಗೆ ಬಂದು ಪೂಜಾ ಕೋಣೆಯ ಮುಂದೆ ಕುರ್ಚಿಯಲ್ಲಿ ಕುಳಿತು ಪೂಜೆಯಲ್ಲಿ ಭಾಗವಹಿಸಿ, ಲಘು ಉಪಾಹಾರ ಸ್ವೀಕರಿಸಿ, ನಮ್ಮೆಲ್ಲರೊಡನೆ ನಮ್ಮ ಇಷ್ಟದಂತೆ ಫೋಟೋಗಳನ್ನು ತೆಗೆಸಿಕೊಂಡು ಒಂದೆರಡು ಗಂಟೆಗಳನ್ನು ನಮ್ಮೊಡನೆ ಕಳೆದು ಆಶೀರ್ವದಿಸಿದ ನೆನಪು ಈಗಲೂ ರೋಮಾಂಚನವನ್ನುಂಟುಮಾಡುತ್ತದೆ. ಆ ಗುರುಕೃಪೆಯ ಪಾದಸ್ಪರ್ಶ ಇನ್ನೂ ಹಚ್ಚ ಹಸುರಾಗಿ ನಮ್ಮನ್ನು ರಕ್ಷಿಸುತ್ತಿದೆ. ಅವರು ಮನೆಗೆ ಹಿಂದಿರುಗಿದ ಮೇಲೆ ಅಕ್ಕ ತಾರಿಣಿಯವರ ಹತ್ತಿರ "ಎಲ್ಲರೂ ದೇವರ ಕೋಣೆಯನ್ನು ಯಾವುದೋ ಒಂದು ಮೂಲೆಗೆ ಸೇರಿಸಿ ಪ್ರಾಮುಖ್ಯತೆಯನ್ನು ನೀಡದೇ ಎರಡನೆಯ ದರ್ಜೆಗೆ ಇಳಿಸಿರುತ್ತಾರೆ. ಶಿವು ಮನೆಯಲ್ಲಿ ಅದು ಕೇಂದ್ರ ಸ್ಥಾನದಲ್ಲಿದೆ" ಎಂದು ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದರೆಂಬುದು ತಿಳಿದುಬಂದಾಗ ನಮ್ಮ ಸಂತೋಷ ಗರಿಗೆದರಿ ಕುಣಿದಾಡಿತು.


೧೯೮೮ರಲ್ಲಿ ನಾನು ಕನ್ನಡಕ್ಕೆ ಭಾಷಾಂತರಿಸಿದ ಕಿಟಲ್‌ರ "ಘನಸ್ಥಿತಿ ಭೌತಶಾಸ್ತ್ರ ಪ್ರವೇಶಿಕೆ" ಗ್ರಂಥವನ್ನು ಕೊಡಲು ಹೋಗಿದ್ದೆ. ಅದನ್ನು ಅವರು ಕೈಯಲ್ಲಿ ಹಿಡಿದು ಬಹಳ ತೂಕವಾಗಿದೆ. ಈ ಬೃಹತ್ ಗ್ರಂಥವನ್ನು ಭಾಷಾಂತರಿಸಲು ಶ್ರಮವಾಗಿರಬೇಕಲ್ಲವೇ ಎಂದು ಹೇಳಿ ತಮಗೆ ಅರ್ಥವಾಗದ ವಿಷಯವಾದರೂ, ಕನ್ನಡದಲ್ಲಿ ಕ್ಲಿಷ್ಟ ವೈಜ್ಞಾನಿಕ ವಿಷಯಗಳನ್ನು ತಿಳಿಸಬಹುದೆಂಬುದು ಸಂತೋಷವನ್ನು ನೀಡುತ್ತದೆಂದು ಹರ್ಷಿಸಿದರು.

ಈಗ ೧೦-೧೫ ವರ್ಷಗಳಿಂದ ಉದಯರವಿಗೆ ನನ್ನ ಭೇಟಿ ವರ್ಷಕ್ಕೊಮ್ಮೆ ಮಾತ್ರ. ಅಮೆರಿಕಾದಿಂದ ರಜೆಯಲ್ಲಿ ನನ್ನ ತಂಗಿ ಬಂದಾಗ, ಅಮ್ಮ, ರೇವು, ಕಲಾ ಮತ್ತು ಮಕ್ಕಳೆಲ್ಲರೊಡನೆ ಹೋಗುತ್ತಾ ಬಂದಿದ್ದೇನೆ. ಆಗ ಶ್ರೀ ಕುವೆಂಪು ಅವರು ಅಮೆರಿಕಾದ ಜೀವನ, ಮುಂದುವರೆದಿರುವ ರೀತಿ ಮುಂತಾದ ಹಲವಾರು ವಿಷಯಗಳ ಬಗ್ಗೆ ಬಹಳ ಕುತೂಹಲದಿಂದ ಚರ್ಚಿಸುತ್ತಿದ್ದರು. ಪ್ರತಿಬಾರಿಯೂ ಹೊರಡುವ ಮುಂಚೆ ಅವರಿಗೆ ಶಿರಬಾಗಿಸಿ ವಂದಿಸಿದಾಗ ಅವರ ಬಾಯಿಂದ ಹೊರಡುತ್ತಿದ್ದ "ಜೈಗುರು" "ಜಯ್ ಶ್ರೀಗುರು" ವಾಣಿ ನನ್ನ ಕಿವಿಯಲ್ಲಿ ಮಾರ್ದನಿಗೊಳ್ಳುತ್ತಿರುತ್ತದೆ. ಕಳೆದ ೨-೩ ವರ್ಷಗಳಿಂದ ಅವರ ಆರೋಗ್ಯ ಕ್ಷೀಣಿಸಿ ಅವರು ಅಂತರ್ಮುಖಿಯಾಗಿರುತ್ತಿದ್ದರು. ಬಂದವರನ್ನು ನೋಡಲು ಇಚ್ಛೆ ಇದ್ದಂತಿರಲಿಲ್ಲ. ಕಳೆದ ವರ್ಷ ಅವರ ಮನೆಗೆ ಹೋಗಿದ್ದಾಗ ಅಕ್ಕ ತಾರಿಣಿ ಅವರ ಕಿವಿಯಲ್ಲಿ "ಅಣ್ಣ, ಶಿವು ಬಂದಿದ್ದಾನೆ ನೋಡಿ" ಎಂದಾಗ ವಿಶಾಲವಾಗಿ ಕಣ್ತೆರೆದು ನನ್ನನ್ನು ನೋಡಿ ಕೈ ಹಿಡಿದುಕೊಂಡಿದ್ದನ್ನು ನೆನೆದಾಗ ಮನಸ್ಸು ತುಂಬಿಬರುತ್ತದೆ.

ಶ್ರೀ ಕುವೆಂಪು ಅವರನ್ನು ಸ್ಪರ್ಶಿಸಿದಾಗಲೆಲ್ಲಾ ಒಂದು ರೀತಿಯ ರೋಮಾಂಚನವಾಗಿ ಮೈ ನವಿರೇಳುತ್ತಿತ್ತು. ಹೃದಯದ ಪರಿಭಾಷೆಯನ್ನು ಅರಿಯುವ ವಿಕಾಸ ಹೊಂದಿರದ ಕಪಟ ವಿಚಾರವಾದಿಗಳಿಗೆ ಇಂಥ ಅನುಭವ ಕ್ಷುಲ್ಲಕವೆನಿಸಬಹುದು. ಇನ್ನೂ ಪ್ರಪಂಚದ ಬಗ್ಗೆ ಎಳ್ಳಷ್ಟೂ ಪ್ರಜ್ಞೆ ಇಲ್ಲದ ಹಸುಗೂಸು ತನ್ನ ತಾಯಿಯ ಸ್ಪರ್ಶ

ಮಾತ್ರದಿಂದಲೇ ನೆಮ್ಮದಿ-ಶಾಂತಿಯನ್ನು ಗಳಿಸುತ್ತದೆಂಬುದು ವೈದ್ಯಕೀಯ ವಿಜ್ಞಾನದಲ್ಲಿ ಗೊತ್ತಿದೆ. ವೀಣೆಯೊಂದರ ಸ್ವಾಭಾವಿಕ ಕಂಪನಸಂಖ್ಯೆಗೆ ಸರಿಸಮನಾಗಿ ಶೃತಿಗೊಳಿಸಲ್ಪಟ್ಟ ಹತ್ತಿರದಲ್ಲಿರುವ ಇತರ ವೀಣೆಗಳು ಮೀಟದೆಯೇ ಅನುರಣನೆಗೊಳ್ಳುತ್ತವೆಂಬುದು ಭೌತವಿಜ್ಞಾನಕ್ಕೆ ಗೊತ್ತಿದೆ. ಹಲವಾರು ಕ್ಲಿಷ್ಟ ವೈಜ್ಞಾನಿಕ ವಿಷಯಗಳನ್ನು ಅರಿತು ಸ್ಪಂದಿಸಲು ನಮ್ಮ ಬುದ್ಧಿ-ಜ್ಞಾನದ ಬೆಳವಣಿಗೆ ಹೇಗೆ ಅವಶ್ಯಕವೋ ಹಾಗೆಯೇ ಆಧ್ಯಾತ್ಮಿಕ ಶಕ್ತಿಗೆ ಸ್ಪಂದಿಸಲು ನಿರ್ದಿಷ್ಟ ಬೆಳವಣಿಗೆ ಅವಶ್ಯಕ.

ಗುರು ಕುವೆಂಪು ಅವರ ಪ್ರಭೆ (ಕೀರ್ಲಿಯನ್ ಫೋಟೋಗ್ರಾಫಿಯಿಂದ ವಸ್ತುಗಳ ಜ್ಯೋತಿ ಪ್ರಭೆಗಳನ್ನು ಚಿತ್ರಿಸಬಹುದೆಂಬುದು ಗೊತ್ತಿದೆ) ಜಾತಿ, ಮತ, ಲಿಂಗ, ವಯಸ್ಸು ಮತ್ತು ಸಾಮಾಜಿಕ ಅಂತಸ್ತುಗಳೆಲ್ಲವನ್ನು ಮೀರಿ ಎಲ್ಲರನ್ನು ಆಕರ್ಷಿಸುವ ಶಕ್ತಿಯನ್ನು ಹೊಂದಿತ್ತೆಂಬುದು ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆಯಲು ಬಂದವರನ್ನು ಗಮನಿಸಿದಾಗ ಗೊತ್ತಾಗುತ್ತಿತ್ತು. ಇವರು ಅರವಿಂದರು ವಿವರಿಸುವ ಪರಿಪೂರ್ಣವಾಗಿ ವಿಕಾಸಗೊಂಡ ಲೋಕಾತೀತ ಪುರುಷರಿರಬೇಕೆಂದು ಮನಸ್ಸಿಗೆ ಬರುತ್ತದೆ. ವಿಶ್ವಮಾನವರಾದ ಶ್ರೀಗುರು ಅವರ ಭೌತಿಕ ಶರೀರವನ್ನು ಬಿಟ್ಟುಹೋಗಿದ್ದಾರೆ ದಿಟ, ಆದರೆ ಅವರ ಚೇತನ ವಿಶ್ವಪ್ರಜ್ಞೆಯ ಶಾಂತ ಸಾಗರದಲ್ಲಿ ಪ್ರಭಾವೀತರಂಗಗಳನ್ನು ನಿರಂತರವಾಗಿ ಸೃಷ್ಟಿಸುತ್ತಾ, ಕಾಲಾತೀತವಾಗಿ ಉಳಿದು ನಮ್ಮೆಲ್ಲರಲ್ಲಿ ಸ್ಫೂರ್ತಿಯನ್ನು-ಅರಿವನ್ನು ಮೂಡಿಸುತ್ತಿರುತ್ತದೆಂಬುದರಲ್ಲಿ ಸಂಶಯವಿಲ್ಲ. ಅವರಿದ್ದ ಕಾಲದಲ್ಲಿ ಬಾಳಿ ಅವರ ಸಂಪರ್ಕಕ್ಕೆ ಪ್ರತ್ಯಕ್ಷವಾಗಿಯೋ-ಪರೋಕ್ಷವಾಗಿಯೋ ಬಂದಿದ್ದವರೆಲ್ಲರೂ ಧನ್ಯರೆಂದೇ ನನ್ನ ಭಾವನೆ.



ಮನುಷ್ಯನ ದೇಹಕ್ಕೆ ಎರಡು ಕಣ್ಣುಗಳಿರುವಂತೆ ಅವನ ಧರ್ಮಕ್ಕೆ ಇರುವ ಎರಡು ಕಣ್ಣುಗಳು ಅಹಿಂಸೆ, ಸತ್ಯ.

—ಭಗವಾನ್ ಬುದ್ಧದೇವ

# ಮಾನವತಾವಾದಿ-ರಸಋಷಿ ; ಕುವೆಂಪು

ಡಾ|| ಕಮಲಾ ಹಂಪನಾ

'ನಾನೆ ಪತಿ-ನೀನೆ ಸತಿ,

ಒಂದೆ ದಂಪತಿ'–ಎಂದು ಹಾಡಿ ದಾಂಪತ್ಯ ಸೂತ್ರವನ್ನು ವಿಶ್ವಕ್ಕೆ ನುಡಿದ ದ್ರಷ್ಟಾರ ಕವಿ ಕುವೆಂಪು ತಮ್ಮ ಬದುಕಿನ ಆಟ ಮುಗಿಸಿ ಅನಿಕೇತನದಲ್ಲಿ ಲೀನವಾದರು. ಜಗದಕವಿ, ಯುಗದ ಕವಿ, ರಾಷ್ಟ್ರಕವಿ, ರಸ ಋಷಿ,ಪ್ರಕೃತಿ ಕವಿ,ಕ್ರಾಂತಿಕಾರ,ಬಂಡಾಯ ಕಾರ ಎನ್ನುವ ಇಂಥ ಹತ್ತಾರು ಪ್ರಶಸ್ತಿ ಗಳನ್ನು,ತನ್ನನ್ನು ಪ್ರೀತಿಸುವ ಜನತೆಯಿಂದ ಪಡೆದ ದಿವ್ಯಜೀವಿ. ಜ್ಞಾನಪೀಠ ಪ್ರಶಸ್ತಿ, ಪದ್ಮಭೂಷಣ, ಪದ್ಮವಿಭೂಷಣ, ಕರ್ನಾಟಕ ರತ್ನ–ಮೊದಲಾದ ಗೌರವ ಪ್ರಶಸ್ತಿಗಳ ಪ್ರಥಮ ವಾರಸುದಾರರಾಗಿ ಕನ್ನಡ ಸಾಹಿತ್ಯ, ಕನ್ನಡ ನಾಡಿಗೆ ಕೀರ್ತಿ ಕಳಸ ವನ್ನಿಟ್ಟ ಅಪರೂಪದ ಕವಿ.

'ಕೀರ್ತಿಶನಿ' ತೊಲಗಾಚೆ ಎಂದು ಗುಡುಗಿ ಕೀರ್ತಿದೇವಿಯನ್ನು ದೂರ ದೂಡಿದಷ್ಟು ಆಕೆ ಹತ್ತಿರ ಹತ್ತಿರ ಸಮೀಪಿಸಿ ಗೌರವದ ಮಾಲೆಗಳನ್ನು ತೊಡಿಸಿ ಕುವೆಂಪು ಅವರ ಕಿರೀಟಕ್ಕೆ ಬಣ್ಣ ಬಣ್ಣಗಳ ಪುಕ್ಕಗಳನ್ನು ಸಿಕ್ಕಿಸಿ ಆನಂದಿಸಿದಳು. ಇದನ್ನು ಕಂಡು ಕೇಳಿದ ಜನ ಆನಂದತುಂದಿಲರಾದರು, ತಮಗೇ ಆ ಪ್ರಥಮ ಪ್ರಶಸ್ತಿಗಳು ದೊರೆ ತಂತೆ ಹೆಮ್ಮೆಪಟ್ಟರು, ಬೀಗಿದರು.ಗೌರವದ ಟೊಪ್ಪಿಗೆ ಧರಿಸಿ ಮೆರೆದರು.

'ತುಂಗಾತೀರದ ಬಲಗಡೆಯಲ್ಲಿ ಹಿಂದಲ್ಲಿ ದ್ದುದು ಬೊಮ್ಮನಹಳ್ಳಿ'–ಎಂದು ಕಿಂದರಿ ಜೋಗಿ ಕಥನಕವನದ ಮೂಲಕ ಆ ಕಥೆಗೆ, ಆ ನುಡಿ ಸೊಗಸಿಗೆ ಮಾರುಹೋಗುವಂತೆ ನನ್ನಲ್ಲಿ ಚಿಕ್ಕಂದಿನಿಂದಲೇ ಪ್ರಭಾವ ಬೀರಿದ ವರು. ಕವಿ, ಕಥೆಗಾರ ಕುವೆಂಪು ಅವರು. ಸುಪ್ತ ಪ್ರತಿಭೆಯಲ್ಲಿ ಗೂಡು ಕಟ್ಟಿದವರು, 'ಟುವ್ವಿ ಟುವ್ವಿ' ಎಂದು ಹಾಡಿದವರು.

ವರುಷಗಳು ಕಳೆದಂತೆ, ಅವರ ಕೃತಿ ಗಳನ್ನು ಓದುತ್ತಾ ಅವರ ಬದುಕಿನ ರೀತಿ–ನೀತಿಗಳನ್ನು ಕೇಳುತ್ತಾ ಅವರ ಸುತ್ತ ಪ್ರಭಾವಳಿಯನ್ನು ನಿರ್ಮಿಸಿಕೊಳ್ಳುತ್ತ, ವಿಸ್ಮಯ ತಾಳುತ್ತ ಅವರೊಬ್ಬ 'ದೇವ ಮಾನವ' ರೆಂಬ ಭಾವನೆ ನನ್ನಲ್ಲಿ ದಟ್ಟ ವಾಗಿ ಮೂಡಿತ್ತು.

ತುಮಕೂರಿನ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಇಂಟರ್‌ಮೀಡಿಯೇಟ್ ತರಗತಿ ಯಿಂದ ೧೯೫೫ನೆಯ ಇಸವಿಯಲ್ಲಿ ನಾನು ತೇರ್ಗಡೆ ಹೊಂದಿದೆ. ಅದೇ ಕಾಲೇಜಿನಲ್ಲಿ ಸಸ್ಯಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕಿಯಾಗಿದ್ದ ಶ್ರೀಮತಿ ಟಿ. ಎಸ್. ಅನ್ನಪೂರ್ಣ ಅವರು

ನನ್ನಲ್ಲಿ ಮನೆ ಮಾಡಿದ್ದ ಕನ್ನಡದ ಅಲ್ಪ ಸ್ವಲ್ಪ ಪ್ರೀತಿಯನ್ನು ಗುರುತಿಸಿದ್ದರು. ಅವರು ನನ್ನನ್ನು ಮೈಸೂರಿನಮಹಾರಾಜಾ ಕಾಲೇಜಿನಲ್ಲಿ ಕನ್ನಡ ಆನರ್ಸ್ ತರಗತಿಗೆ ಸೇರಲು ತಿಳಿಹೇಳಿ ಒತ್ತಾಯಿಸಿದರು. ಅದೇ ಸಮಯಕ್ಕೆ ಕವಿ ಕುವೆಂಪು ಅವರು ಮಹಾ ರಾಜಾ ಕಾಲೇಜಿನ ಪ್ರಿನ್ಸಿಪಾಲರಾಗಿದ್ದುದು ಆ ವೇಳೆಗೆ ನನಗೆ ತಿಳಿದಿತ್ತು. ನನ್ನಲ್ಲಿ ಗೂಡು ಕಟ್ಟಿದ್ದ ಕನ್ನಡದ ಹಕ್ಕಿ ರೆಕ್ಕೆ ಬಡಿಯಿತು. ಒಡನೆಯೆ ಕನ್ನಡ ವಿಭಾಗದ ಮುಖ್ಯಸ್ಥ ರಾಗಿದ್ದ ಪ್ರೊ॥ ಸಿ. ಮಹಾದೇವಪ್ಪನವರ ಬಳಿ ಓಡಿದೆ. ಅವರಿಂದ ಕುವೆಂಪು ಅವರಿಗೆ ನನ್ನ ಬಗೆಗೆ ಒಂದು ಶಿಫಾರಸು ಪತ್ರವನ್ನು ಪಡೆದು ಮೈಸೂರಿಗೆ ದೌಡಾಯಿಸಿದೆ. ನನಗೆ ಆ ಕ್ಷಣದ ಪ್ರಥಮ ಪ್ರಮುಖ ಉದ್ದೇಶ ವಿದ್ದುದು ಹಿರಿಯ ಕವಿ, ಉದಾತ್ತಚೇತನ ನನ್ನ ದೃಷ್ಟಿಯಲ್ಲಿ 'ದೇವಮಾನವ'ರಾಗಿ ಮೂಡಿದ್ದ ರಸಋಷಿ ಕುವೆಂಪು ಅವರನ್ನು ಸಂದರ್ಶಿಸುವುದು. ಅನಂತರದ್ದು ನನ್ನ ಆನರ್ಸ್ ವಿದ್ಯಾಭ್ಯಾಸದ ಸಂಗತಿಯಾಗಿತ್ತು.

ಸಂಕೋಚ, ಭಯ, ಉತ್ಸಾಹ, ಆತುರ ಗಳ ಸಮ್ಮಿಶ್ರ ಭಾವದೊಡನೆ ಪ್ರಿನ್ಸಿಪಾಲರ ಕೊಠಡಿಯನ್ನು ಪ್ರವೇಶಿಸಿದೆ. ಅವರನ್ನು ನೋಡಿದೊಡನೆ ಮೂಡಿದ ಭಾವನೆ ರೋಮಾಂಚಕಾರಿಯಾದುದು. ನನ್ನ ಕಲ್ಪ ನೆಯ ಉದಾತ್ತತೆಯನ್ನು ಮೀರಿ ಬೆಳೆದ ಗೊಮ್ಮಟ ಸದೃಶ ವ್ಯಕ್ತಿತ್ವ ಅವರ ದಾಗಿತ್ತು. ಭಯ ಭಕ್ತಿಗಳಿಂದ ನಮಿಸಿ, ಪ್ರೊ॥ ಮಹಾದೇವಪ್ಪನವರ ಪತ್ರವನ್ನು ಅವರಿಗೆ ಕೊಟ್ಟೆನು. ಕುಳಿತುಕೊಳ್ಳಲು ಹೇಳಿದರು. ಹೆದರಿ ಮುದುಡಿ ಕುಳಿತೆ. ಕಾಗದವನ್ನು ಓದಿ ನೋಡಿದ ಅವರು ಪುನಃ ನನ್ನ ಹೆಸರು,ಊರು,ಎಲ್ಲವನ್ನೂ ವಿಚಾರಿಸಿ ಕೊಂಡರು. 'ಕನ್ನಡ ಆನರ್ಸ್ ಓದಲು ತುಂಬ ಆಸೆ ಇದೆಯೇ '?–ಎಂದು ಪ್ರಶ್ನಿಸಿ ದರು. ಒಣಗಿದ ನಾಲಿಗೆಯಲ್ಲಿಯೇ ತೊದ ಲಿದೆ 'ಹೌದು ಸಾರ್ ತುಂಬ ಇಷ್ಟವಿದೆ, ನಿಮ್ಮ ಶಿಷ್ಯಳಾಗಬೇಕು' ಎಂದೆ. ಅವರು ಒಂದು ಅರ್ಜಿಫಾರಂ ಅನ್ನು ತರಿಸಿಕೊಟ್ಟು ಭರ್ತಿಮಾಡಿಕೊಡಿ' ಎಂದರು. ಭರ್ತಿಮಾಡಿ ಕೊಟ್ಟೆ. ಅದನ್ನು ಪಡೆದು ಅದರ ಮೇಲೆ ಏನೋ ಬರೆದರು. ಅನಂತರ ಫಾರಂಅನ್ನು ನನಗೆ ಕೊಟ್ಟು 'ತರಗತಿಗೆ ಸೇರಲು ಇಂದೇ ಕಡೆಯ ದಿವಸ, ಇವತ್ತೇ ಸೇರಿಕೊಳ್ಳಿ, 'ಚೆನ್ನಾಗಿ ಓದಿ' ಎಂದು ಹೇಳಿದರು.

ಅಂಥ ಹಿರಿಯರು ನನ್ನಂಥ ವಿದ್ಯಾರ್ಥಿ ಯನ್ನು ಬಹುವಚನದಲ್ಲಿ ಮಾತನಾಡಿಸಿದ್ದು ನನ್ನ ಸಂಕೋಚವನ್ನು ಮತ್ತೂ ಹೆಚ್ಚು ಮಾಡಿದಂತೆ, ಅವರಲ್ಲಿ ನನಗೆ ಇದ್ದ ಪೂಜ್ಯ ಗೌರವ ಭಾವನೆಯನ್ನು ಇಮ್ಮಡಿಸಿತ್ತು. ಧನ್ಯವಾದ ತಿಳಿಸಿ ಈಚೆ ಬಂದೆ. ಅರ್ಜಿಫಾರಂ ಮೇಲೆ, 'ಪ್ರವೇಶಕ್ಕೆ ಅಪ್ಪಣೆ ನೀಡಲಾಗಿದೆ' ಎಂದು ಬರೆದಿದ್ದುದನ್ನು ನೋಡಿದೆ. ಒಬ್ಬ ವ್ಯಕ್ತಿಯನ್ನು ಮತ್ತೊಬ್ಬ ವ್ಯಕ್ತಿ ಹೇಗೆ ನೋಡಿ–ನುಡಿಸಬೇಕೆಂಬ ಪಾಠವನ್ನು ಅಂದು ನಾನು ಕಲಿತೆ. ನನ್ನ ಹಾಗೆ ಅನೇ ಕರು ಅನೇಕ ರೀತಿಯಲ್ಲಿ ಅವರಿಂದ ಪಾಠ ಕಲಿತಿದ್ದಾರೆ ಎನ್ನುವುದಕ್ಕೆ ಅನೇಕ ನಿದರ್ಶನ ಗಳು ದೊರೆತಿವೆ.

ಕುವೆಂಪು ಅವರು ಶಿಸ್ತು ಪರಿಪಾಲಕರು, ಸಮಯ ಪರಿಪಾಲಕರು. ಅವರು ಪ್ರತಿ ದಿವಸ ಬೆಳಿಗ್ಗೆ ೧೦.೩೫ ಕ್ಕೆ ಸರಿಯಾಗಿ ಕಾಲೇಜಿಗೆ ಆಗಮಿಸುತ್ತಿದ್ದರು. ತಮ್ಮ ಕಾರಿ ನಿಂದ ಕಾಲೇಜಿನ ದಕ್ಷಿಣದ ದ್ವಾರದಿಂದ

ಪ್ರವೇಶಿಸಿ ಕಾರಿಡಾರಿನಲ್ಲಿ ನಡೆದು ಹೋಗಿ ಪೂರ್ವದ ಮಹಡಿ ಮೆಟ್ಟಲಿನ ಕಡೆಗೆ ತಿರುಗುತ್ತಿದ್ದರು. ಮಹಾರಾಜಾ ಕಾಲೇಜಿಗೆ ಸೇರಿದ ನನ್ನ ಹಾಗೂ ನನ್ನಂಥ ಹಲವಾರು ವಿದ್ಯಾರ್ಥಿಗಳ ದೈನಂದಿನ ಬೆಳಗಿನ ಕಾರ್ಯವೆಂದರೆ ೧೦.೨೦ಕ್ಕೆ ಕುವೆಂಪು ಅವರು ಬರುತ್ತಿದ್ದ ಕಾರಿಡಾರಿನಲ್ಲಿ ಕೈಮುಗಿದು ನಿಂತಿದ್ದು ಅವರು ಬರುತ್ತಿದ್ದಂತೆ, ಅವರನ್ನು ನೋಡಿ ನಮಸ್ಕರಿಸಿ ಗೌರವ ಸಮರ್ಪಿಸುತ್ತಿದ್ದುದು. ಅನಂತರ ತಮ್ಮ ತಮ್ಮ ಇಷ್ಟದೈವವನ್ನು ಪ್ರತ್ಯಕ್ಷ ನೋಡಿದ ಒಂದು ಸಂತೃಪ್ತಿಯಿಂದ ತಮ್ಮ ತಮ್ಮ ತರಗತಿಗಳಿಗೆ ಹೋಗುತ್ತಿದ್ದುದು ಆಗಿತ್ತು.

ಹೀಗೆ ನನ್ನಲ್ಲಿ ದೇವ ಮಾನವರಾಗಿ ನೆಲಸಿದ ಅವರು ನನ್ನಲ್ಲಿ ವಿಸ್ಮಯಗಳನ್ನು ಮೂಡಿಸಿದ್ದರು. ನನ್ನ ವಿದ್ಯಾರ್ಥಿ ದೆಸೆಯಲ್ಲಿಯೇ ಅವರ ಸುತ್ತ ಅನೇಕ ದಂತಕಥೆಗಳು ಹೆಣೆದಿದ್ದವು. ಅಚ್ಚರಿಯಿಂದ ಅವುಗಳನ್ನು ಕೇಳುತ್ತಾ ನನ್ನ ಅವರ ಅಂತರವನ್ನು ಮಾನವ ಸಂಬಂಧವನ್ನು ಬಿಟ್ಟು, ನೆಲ–ಮುಗಿಲಿಗೆ ಹೋಲಿಸಿಕೊಂಡಿದ್ದುಂಟು.


ಅನಂತರ ಅವರ ಪರಿಚಯ ಗಾಢವಾದಂತೆ, ಅವರ ಬದುಕು ಬರಹದ ಸಾಮೀಪ್ಯ, ಅವರೊಡನಾಡಿದ ಮಾತುಕಥೆಗಳು,ಸಾಹಿತ್ಯಕ ಜಿಜ್ಞಾಸೆಗಳು,ವಿಮರ್ಶೆಯ ನೆಲೆಗಳು, ಬದುಕನ್ನು ಅವರು ಅರ್ಥಮಾಡಿಕೊಂಡಿದ್ದ ರೀತಿ, ಅದಕ್ಕೆ ಬದ್ಧರಾಗಿ ನಡೆದ ಸತ್ಯ ನಿಷ್ಠುರತೆ, ಇವೆಲ್ಲವುನನ್ನೂ ಗುರುತಿಸುತ್ತಾ ಹೋದಂತೆ 'ನನ್ನ 'ದೇವಮಾನವ' ಕಲ್ಪನೆಯ ಭ್ರಮೆಯನ್ನು ಕಿತ್ತೊಗೆದೆ ; 'ಮಹಾಮಾನವತಾವಾದಿಯನ್ನು, ಅವರಲ್ಲಿದ್ದ 'ಮಾನವತ್ವ'ವನ್ನು ಗುರುತಿಸಿದೆ. 'ದೇವ–ಮಾನವಗಿಂತ ಮಾನವ ದೊಡ್ಡವ' ಎನ್ನುವುದನ್ನು ಅರಿತೆ. ಅಂದಿನಿಂದ ಇಂದಿನವರೆಗೂ ಕುವೆಂಪು ನನ್ನ ದೃಷ್ಟಿಯಲ್ಲಿ ತ್ರಿವಿಕ್ರಮನಂತೆ ಬೆಳೆಯುತ್ತಲೇ ಹೋದರು.

ಒಬ್ಬ ವ್ಯಕ್ತಿ ದೊಡ್ಡವನಾಗುವುದು ಅವನು ಏನನ್ನು ಬರೆಯುವನೊ, ಏನನ್ನು ಪ್ರತಿಪಾದಿಸುವನೋ ಅದರಂತೆ ನಡೆದಾಗ ಮಾತ್ರ. ನುಡಿದಂತೆ ನಡೆದ ಮಹಾ ಆದರ್ಶವಾದಿ ಕುವೆಂಪು. ನಡೆ-ನುಡಿ ಒಂದಾದ ಅವರ ಬದುಕು–ಬರಹ ಬಹುದೊಡ್ಡದು.

ಅವರು, ಪುರೋಹಿತಶಾಹಿ ಧೋರಣೆಯನ್ನು ವಿರೋಧಿಸಿದರು; ಅವರು ಮಕ್ಕಳ ಮದುವೆಯನ್ನು ನಡೆಸಿದ ರೀತಿ, ಒಳ್ಳೆಯ ಉದಾಹರಣೆ. ದೇವಾಲಯದ ಕಲ್ಲುದೇವರುಗಳನ್ನು ನಿರಾಕರಿಸಿದರು; ಮೂಢನಂಬಿಕೆಗಳನ್ನು ಕಟುವಾಗಿ ಖಂಡಿಸಿದರು, ಅವರೆಂದೂ ಮೂಢನಂಬಿಕೆಗೆ ಒಳಗಾಗಲಿಲ್ಲ. ಸೈದ್ಧಾಂತಿಕ ಕಾರಣಗಳಿಂದ, ಪ್ರಾಥಮಿಕ ಹಂತದಲ್ಲಿ ಮೊದಲು, ಅನಂತರ ಇತರ ಹಂತಗಳಲ್ಲಿಯೂ ಶಿಕ್ಷಣ ಮಾಧ್ಯಮ ಕನ್ನಡ ಆಗಬೇಕೆಂದು ಆಗ್ರಹಪಡಿಸಿದರು. ತಮ್ಮ ಮಕ್ಕಳನ್ನು ಕನ್ನಡ ಮಾಧ್ಯಮ ತರಗತಿಗಳಲ್ಲಿ ಓದಿಸಿದರು. ಜಾತಿ-ಮತ-ಪಂಥಗಳಿಂದ ಹೊರಬರಬೇಕೆಂದರು. ಅದೇ ರೀತಿ ಬಾಳಿದರು. ಹೀಗೆ ಬದುಕು–ಬರಹವನ್ನು ಒಂದಾಗಿ ಬೆಸೆದುಕೊಂಡ ಇವರು ಕನ್ನಡದ ಮೊದಲ ಬಂಡಾಯ ಕವಿ; ಕ್ರಾಂತಿಕಾರ ಕವಿಯಾಗಿದ್ದರು. ದಶಕಗಳ ಹಿಂದೆಯೇ ಜಾತಿ ವ್ಯವಸ್ಥೆಯ ವಿರುದ್ಧ ಕ್ರಾಂತಿಕಹಳೆಯನ್ನು ಊದಿದರು. ವೈಚಾರಿಕತೆಯ ಜೊತೆಗೆ ವೈಜ್ಞಾನಿಕ ಮನೋಭಾವವನ್ನು ಬೆಳಸಿಕೊಳ್ಳಲು ಕರೆಕೊಟ್ಟರು.

ಕುವೆಂಪು ಅವರ ಕನ್ನಡ ನಾಡು-ನುಡಿಯ ಬಗೆಗಿನ ಪ್ರೀತಿ ಅನ್ಯಾದೃಶವಾದುದು. ಕುವೆಂಪು ಅವರ ಮತ್ತೊಂದು ವಿಶೇಷ ಗುಣವೆಂದರೆ ಹೆಣ್ಣನ್ನು ಅತ್ಯಂತ ಗೌರವದಿಂದ ಕಂಡದ್ದು. ಕುವೆಂಪು ಅವರನ್ನು ಹೊರತುಪಡಿಸಿ ಹೆಣ್ಣನ್ನು ಈ ದೃಷ್ಟಿಯಿಂದ ಕಂಡ ಮತ್ತೊಬ್ಬ ಸಾಹಿತಿಯನ್ನು ಮತ್ತೊಬ್ಬ ವ್ಯಕ್ತಿಯನ್ನು ಕನ್ನಡ ಸಾಹಿತ್ಯದಲ್ಲಿ ಕಾಣುವುದು ಸಮಾಜದಲ್ಲಿ ಕಾಣುವುದು ಅಸಾಧ್ಯ. ಕೇವಲ ಕೃತಿಗಳಲ್ಲಿ ಮಾತ್ರ ಸ್ತ್ರೀಪಾತ್ರಗಳನ್ನು ಉದಾತ್ತೀಕರಿಸಿಲ್ಲ. ಸಮಾಜದ ತನ್ನ ಸುತ್ತಲಿನ ಮಹಿಳೆಯರನ್ನು ಕಂಡ ರೀತಿ ಅನನ್ಯವಾದುದು. ತಮ್ಮ ಪತ್ನಿ ಹೇಮಾವತಿಯನ್ನು ಅವರು ಮೊದಲಿನಿಂದಲೂ ನಡೆಸಿಕೊಂಡ ರೀತಿ, ಒಬ್ಬ ಗಂಡ ತನ್ನ ಪತ್ನಿಯೊಡನೆ ಹೇಗೆ ನಡೆದುಕೊಳ್ಳಬೇಕು ಎಂಬುದಕ್ಕೆ ಒಂದು ಸೂತ್ರವನ್ನು ನೇದಿದೆ; ಒಂದು ಪಾಠವನ್ನು ಹೇಳಿದೆ; ಜಗತ್ತಿನ ದಾಂಪತ್ಯಕ್ಕೆ ಮಾದರಿಯನ್ನು ಒದಗಿಸಿದೆ.

ಕುವೆಂಪು ಅವರು ಹೋಲಿಕೆಗಳನ್ನು ಮೀರಿ ಬೆಳೆದ ಹೈಮಾಚಲೋನ್ನತ ವ್ಯಕ್ತಿತ್ವದಿಂದ ಕಂಗೊಳಿಸಿದವರು. ಲಕ್ಷೋಪಲಕ್ಷ ಜನಮನದಲ್ಲಿ ಚಿರಸ್ಥಾಯಿಯಾಗಿ ನೆಲೆನಿಂತ ಆ ಕವಿಚೇತನಕ್ಕೆ ಮರಣವೆಲ್ಲಿದೆ?



ಅನಾಥರ ಕಣ್ಣೀರನ್ನೊರೆಸಲಾರದ, ತಬ್ಬಲಿಯ ಬಾಯಿಗೆ ಒಂದು ತುಣುಕು ರೊಟ್ಟಿಯನ್ನು ಒದಗಿಸಲಾರದಂಥ, ಧರ್ಮದಲ್ಲಾಗಲಿ ದೇವರಲ್ಲಾಗಲಿ ನಾನು ವಿಶ್ವಾಸವಿಡಲಾರೆನು.

—ವಿವೇಕಾನಂದ

ಆತ್ಮತ್ಯಾಗವಿಲ್ಲದವನ ಧರ್ಮಬೋಧನೆಯು, ನಿರ್ಜನ ಕಾಡಿನಲ್ಲಿ ಡಮರು ಬಾರಿಸಿದಂತೆ ವ್ಯರ್ಥವಾದುದು.

—ಗೀತಾ

# ಕುವೆಂಪು ಮತ್ತು ವಯಸ್ಕರ ಶಿಕ್ಷಣ ಸಮಿತಿ

ಚಂದ್ರಶೇಖರಾರಾಧ್ಯ

ವಯಸ್ಕರ ಶಿಕ್ಷಣ ಸಮಿತಿಯು ಹಿಂದೆ ನಡೆಸುತ್ತಿದ್ದ ವಯಸ್ಕರ ಶಿಕ್ಷಣ ಕೇಂದ್ರಗಳಲ್ಲಿ ಜನರು ಓದು ಬರಹ ಕಲಿತರೂ ಸಹ ತಾವು ಗಳಿಸಿದ ಸಾಕ್ಷರತೆಯನ್ನು ಉಳಿಸಿಕೊಂಡು, ಬೆಳೆಸಿಕೊಳ್ಳಲು ಸಹಕಾರಿಯಾದ ಸಮರ್ಪಕ ಸಾಕ್ಷರೋತ್ತರ ವ್ಯವಸ್ಥೆಯು ರೂಪಗೊಂಡಿರಲಿಲ್ಲ. ಈ ಕಾರಣದಿಂದ ಕಲಿತವರು ಓದುಬರಹವನ್ನು ಕಾಲಾನುಕ್ರಮದಲ್ಲಿ ಮರೆತು ಅನಕ್ಷರತೆಗೆ ಹಿಂದಿರುಗುತ್ತಿದ್ದರು. ಈ ಕೊರತೆಯನ್ನು ತುಂಬಿಕೊಳ್ಳಲು ಸಮಿತಿಯು ಪುಸ್ತಕ ಭಂಡಾರಗಳನ್ನು ತೆರೆಯಿತು. ಈ ಪುಸ್ತಕ ಭಂಡಾರಗಳ ಮೂಲಕ ನವ ಸಾಕ್ಷರರಿಗೆ ವಯಸ್ಕರ ಶಿಕ್ಷಣ ಮಾಲೆಯ ಪುಸ್ತಕಗಳನ್ನು ವಿತರಿಸುವ ಸಂದರ್ಭದಲ್ಲಿ ಅನೇಕರು ನಮಗೆ ರಾಮಾಯಣ, ಭಾರತಗಳನ್ನು ಕೊಡಿ ಎಂದು ಕೇಳುತ್ತಿದ್ದರು.

ಜನರ ಈ ಬೇಡಿಕೆಯಲ್ಲಿ ವಾಸ್ತವತೆ ಇರುವುದು ಸಮಿತಿಗೆ ಮನದಟ್ಟಾದರೂ ಸಹ ಗ್ರಾಮೀಣ ವಯಸ್ಕರಿಗೆ,ಅದರಲ್ಲಿಯೂ ಹೊಸದಾಗಿ ಅಕ್ಷರ ಕಲಿತವರಿಗೆ ವ್ಯಾಸ ವಾಲ್ಮೀಕಿಗಳನ್ನು ಎಟಕುವಂತೆ ಮಾಡುವುದು ಸುಲಭ ಸಾಧ್ಯವಾಗಿರಲಿಲ್ಲ. ಆದರೆ ವಯಸ್ಕರ ಶಿಕ್ಷಣದಲ್ಲಿ ಹೊಸ ಹೊಸ ಪ್ರಯೋಗಗಳನ್ನು ಮಾಡಿ ತನ್ನದಾಗಿಸಿಕೊಳ್ಳುತ್ತಾ ಬಂದ ವಯಸ್ಕರ ಶಿಕ್ಷಣ ಸಮಿತಿಗೆ ಈ ಕೆಲಸ ಅಸಾಧ್ಯವಾಗಿ ಕಾಣಲಿಲ್ಲ. ಈ ದಿಸೆಯಲ್ಲಿ ಕಾರ್ಯಪ್ರವೃತ್ತವಾಗಿ ವಾಲ್ಮೀಕಿ ರಾಮಾಯಣವನ್ನು ಮೊದಲು ಪ್ರಕಟಿಸಲು ಕಾರ್ಯೋನ್ಮುಖವಾಯಿತು. ಪುಸ್ತಕ ಪ್ರಕಟಣೆಗೆ ಧನ ಸಹಾಯ ನೀಡಲು ಧರ್ಮ ಪ್ರಕಾಶ ಶ್ರೀ ಎಲ್. ಎಸ್. ವೆಂಕಾಜಿರಾಯರು ಮುಂದೆ ಬಂದರು. ಹಣ ದೊರೆಯಿತು. ಆದಿ ಕವಿ ವಾಲ್ಮೀಕಿ ರಾಮಾಯಣವನ್ನು ಸರಳ ಕನ್ನಡದಲ್ಲಿ ರಚಿಸಿಕೊಡುವಂತೆ ಯುಗದ ಕವಿ ಕುವೆಂಪು ಅವರಿಗೆ ಸಮಿತಿ ಮೊರೆಯಿಟ್ಟಿತು. ಕವಿ ಒಪ್ಪಿದರು. ಕರಡು ಪ್ರತಿಯನ್ನು ಜನಸಾಮಾನ್ಯರ ಮುಂದೆ ಓದಿ ಅವರ ಅಭಿಪ್ರಾಯ ಸಂಗ್ರಹಿಸಬೇಕೆಂಬ ಮತ್ತೊಂದು ಮನವಿಗೂ ಕವಿಪುಂಗವರಿಂದ ಸಮ್ಮತಿ ದೊರೆಯಿತು.

ನಿಗದಿಯಾದ ಅವಧಿಗೆ ಕುವೆಂಪು ಅವರು "ಜನಪ್ರಿಯ ವಾಲ್ಮೀಕಿ ರಾಮಾಯಣ"ದ ಹಸ್ತಪ್ರತಿಯನ್ನು ಈ ಸಾರಾಂಶ ಒಳಗೊಂಡ ಪತ್ರದ ಜೊತೆಯಲ್ಲಿ ಸಮಿತಿಗೆ ಕಳುಹಿಸಿ

ಕೊಟ್ಟರು. "ಅಧ್ಯಾಯ ವಿಭಾಗಗಳನ್ನು ಆದಷ್ಟೂ ಸಣ್ಣವಾಗಿರುವಂತೆ ನೋಡಿಕೊಂಡಿದ್ದೇನೆ. ಅಲ್ಲದೆ ಅತಿ ಸರಳತೆಯ ಸೌಲಭ್ಯವೂ ಅತಿ ಪಾಂಡಿತ್ಯದ ಕ್ಲಿಷ್ಟತೆಯಂತೆಯೇ 'ಅವಜ್ಞೆ'ಗೆ ಗುರಿಯಾಗುತ್ತದೆಂದು ಎಣಿಸಿ ಅಲ್ಲಲ್ಲಿ ಮೂಲ ರಾಮಾಯಣದ ರಸವತ್ತಾದ ಪದ ಮತ್ತು ಪದಪುಂಜ ಪ್ರಯೋಗಗಳನ್ನು ಹೆಚ್ಚು ಬದಲಾಯಿಸದೆ ಹಾಗೆಯೆ ಇಟ್ಟಿದ್ದೇನೆ. ಹಳ್ಳಿಗನಿಗೂ ಮನಸ್ಸಿನ ಸಾಹಸವಿಲ್ಲದಿದ್ದರೆ ರುಚಿಸುವುದಿಲ್ಲ. ಆಲಿಸುವ ಗ್ರಾಮಸ್ಥರನ್ನು ಕೇಳಿ, ಅವರ ಅಭಿಪ್ರಾಯಗಳಲ್ಲಿ ಏನಾದರೂ ಗ್ರಾಹ್ಯವಾಗಬಹುದಾದುದು ಇದ್ದರೆ ಅದನ್ನು ನನಗೆ ತಿಳಿಸಿ....ನೀವು ಓದಿದ ಮೇಲೆ ಅದು ಉಂಟುಮಾಡುವ ಪರಿಣಾಮವನ್ನು ಆಶೆಯಿಂದ ನಿರೀಕ್ಷಿಸುತ್ತೇನೆ. ಏಕೆಂದರೆ ವಯಸ್ಕರಿಗಷ್ಟೆ ಅದು ; ಆ ಜನರೇ ನಿಕಷ."—ಕುವೆಂಪು ಅವರು ಜನಸಾಮಾನ್ಯರನ್ನು ನೋಡಿದ ದೃಷ್ಟಿ ಇದು.

ಜನಪ್ರಿಯ ವಾಲ್ಮೀಕಿ ರಾಮಾಯಣ ಗ್ರಂಥ ಬಿಡುಗಡೆ ಸಮಾರಂಭವು ೧೯೫೦ನೆಯ ಅಕ್ಟೋಬರ್ ೨ರಂದು ನಡೆಯಿತು. ರಾಜ್ಯದ ಅಂದಿನ ಮುಖ್ಯಮಂತ್ರಿಗಳಾಗಿದ್ದ ದಿವಂಗತ ಕೆ. ಚಂಗಲರಾಯರೆಡ್ಡಿ ಅವರು ಗ್ರಂಥ ಬಿಡುಗಡೆ ಮಾಡಿದರು. ಈ ಸಮಾರಂಭದಲ್ಲಿ ಗ್ರಂಥಕರ್ತೃ ರಸಋಷಿ ಕುವೆಂಪು ಅವರು ಪಾಲ್ಗೊಂಡು ತಮ್ಮದೇ ಆದ ಶೈಲಿಯ ವಿದ್ವತ್ಪೂರ್ಣ ಸ್ಫೂರ್ತಿಯುತ ಭಾಷಣದಲ್ಲಿ ಈ ರೀತಿ ತಿಳಿಸಿದರು—"ಯಾವ ಮಹಾ ಪುರುಷ ಹಗಲೂ ರಾತ್ರಿಯೂ ರಾಮರಾಜ್ಯದ ಕನಸನ್ನು ಕಾಣುತ್ತಿದ್ದನೋ, ಯಾವ ಮಹಾ ಪುರುಷ 'ರಘುಪತಿ ರಾಘವ ರಾಜಾರಾಮ್ ಪತಿತ ಪಾವನ ಸೀತಾರಾಮ್' ಎಂದು ಮೈಮರೆತು ಹಾಡುತ್ತಿದ್ದನೋ, ಯಾವ ವ್ಯಕ್ತಿಗೆ ರಾಮನಾಮವೇ ಸಂಜೀವಿನಿಯಾಗಿತ್ತೋ, ಯಾವ ವ್ಯಕ್ತಿ ತನ್ನ ಎದೆಗೆ ಗುಂಡು ತಗುಲಿದಾಗಲೂ 'ಹಾ ರಾಮ್, ಹಾ ರಾಮ್' ಎಂದು ನುಡಿದನೋ ಆ ಮಹಾ ಪುರುಷನ ಜನ್ಮದಿನ ಇದು. ಇಂತಹ ಪವಿತ್ರವಾದ ದಿನದಲ್ಲಿ ಆತನಿಗೆ ಪ್ರಿಯವಾಗಿದ್ದ ರಾಮಾಯಣ ಮಹಾಕಾವ್ಯದ ಪ್ರಕಟಣೆ ಕೈಗೊಂಡಿರುವುದು ಹೆಚ್ಚು ಸೂಕ್ತವಾಗಿದೆ. ರಾಮಾಯಣ ಬಹಳ ಅಮೂಲ್ಯವಾದ ಗ್ರಂಥ. ಸಹಸ್ರಾರು ವರ್ಷಗಳಿಂದ ಸೇವೆ ಮಾಡುತ್ತಿರುವ ಮಂತ್ರಿಮಂಡಲದಂತಿದೆ ಈ ಕಾವ್ಯ. ಈ ಕಾವ್ಯದ ಬೆಳಕಿನಲ್ಲಿ ದಾರಿಕಾಣುವ ನಮ್ಮ ಜನರ ಬಾಳಿನ ಝರಿ ಅಡ್ಡದಾರಿಗೆ ಹೋಗದೆ ಹರಿಯುತ್ತದೆ. ಆದರೆ ಅವರಿಗೆ ಅರ್ಥವಾಗುವ ರೀತಿಯಲ್ಲಿ ಸರಳವಾದ ಗದ್ಯದಲ್ಲಿ ಬರೆದ ಇಂಥ ಗ್ರಂಥಗಳು ಅಪರೂಪವಾಗುತ್ತಿವೆ. ಆ ದೃಷ್ಟಿಯಿಂದ ಬರೆದು, ಸಮಿತಿ ಅಚ್ಚುಮಾಡಿಸಿದ ಈ ಮಹಾ ಕಾವ್ಯವನ್ನು ಈ ಉತ್ಸವದ ಮೂಲಕ ಪ್ರಕಟಿಸುವುದು ಮಹತ್ವಪೂರ್ಣವಾಗಿದೆ. ಇದು ಒಂದು ಬರೀ ಪುಸ್ತಕದ ಪ್ರಕಟಣೆಯಲ್ಲ. ನಮ್ಮ ಜನರ ಬಾಳನ್ನು, ಜೀವನವನ್ನು ನೇರ್ಪುಗೊಳಿಸುವ ಒಂದು ಶಕ್ತಿಯ ಪ್ರಕಟನ ಮಹೋತ್ಸವ. ಇದೊಂದು ಮಂತ್ರಿಮಂಡಲದ ಪ್ರತಿಷ್ಠಾಪನಾ ಮಹೋತ್ಸವದಷ್ಟೇ ಮುಖ್ಯವಾದುದು" ಎಂದು, ರಾಮಾಯಣದ ಮಹತ್ವವನ್ನೂ ರಾಮಾಯಣದ ಪ್ರಕಟನ ಮಹೋತ್ಸವದ ವಿಶೇಷತೆಯನ್ನೂ ಪ್ರಕಟಣೆಗೆ ಗೊತ್ತುಮಾಡಿದ ಅಕ್ಟೋಬರ್

೨ನೆಯ ತಾರೀಕಿನ ಮಹತ್ವವನ್ನೂ ಶ್ರೀ ಕುವೆಂಪು ಅವರು ವಿವರಿಸಿದರು.

೧೯೫೦ರಂದು ಮೊದಲನೆಯ ಮುದ್ರಣದಲ್ಲಿ ಪ್ರಕಟಣೆಗೊಂಡ ಜನಪ್ರಿಯ ವಾಲ್ಮೀಕಿ ರಾಮಾಯಣ ಇಂದು ಸಮಿತಿಯಲ್ಲಿ ೯ನೆಯ ಮುದ್ರಣವಾಗುತ್ತಿರುವುದು ಈ ಕೃತಿಯ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಅಂತೆಯೇ ಕುವೆಂಪು ಅವರ ಅನುಮತಿಯ ಮೇರೆಗೆ 'ಮಲೆನಾಡಿನ ಚಿತ್ರಗಳು' ಎಂಬ ಅವರ ಕಥಾ ಸಂಕಲನದಲ್ಲಿನ 'ಪುಟ್ಟಾಚಾರಿಯ ಕಾಡು ಕೋಳಿ' ಎಂಬ ಸಣ್ಣ ಕಥೆಯು ನವಸಾಕ್ಷರರಿಗೆ ಸಹಕಾರಿಯಾಗುವಂತೆ ಸೂಕ್ತ ಮಾರ್ಪಾಡುಗಳೊಂದಿಗೆ ವಯಸ್ಕರ ಶಿಕ್ಷಣ ಮಾಲೆಯ ಮೂಲಕ ಪ್ರಕಟಗೊಂಡಿರುತ್ತದೆ.

'ದಿನಾಂಕ ೧೮-೩-೧೯೫೮' ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ನಂಜನಗೂಡು ವಿದ್ಯಾಪೀಠಕ್ಕೆ ಶುಭ ದಿನ. ಆ ದಿನ ನಂಜನಗೂಡು, ಹಾಸನ, ಬೆಳ್ಳೂರ, ಕೆಂಗೇರಿ, ಶಿವಾರಗುಡ್ಡ ವಿದ್ಯಾಪೀಠಗಳಲ್ಲಿ ತರಬೇತಿ ಪಡೆದ ಶಿಕ್ಷಣಾರ್ಥಿಗಳಿಗೆ ಪ್ರಶಸ್ತಿ ನೀಡಿ, ಬೀಳ್ಕೊಡುವ ಸಮಾರಂಭದ ಅಧ್ಯಕ್ಷತೆ ವಹಿಸಿ ಶಿಕ್ಷಣಾರ್ಥಿಗಳಿಗೆ ಪ್ರಶಸ್ತಿಪತ್ರ ವಿತರಿಸಿದವರು ರಾಷ್ಟ್ರಕವಿ ಕುವೆಂಪು ಅವರು. ಸಭೆ, ಸಮಾರಂಭ ಸನ್ಮಾನಗಳಿಂದ ಗಾವುದ ದೂರದಲ್ಲಿದ್ದ ಕುವೆಂಪು ಅವರು ಅಂದಿನ ಕಾರ್ಯಕ್ರಮಕ್ಕೆ ಪ್ರೀತಿಯಿಂದ ಬಂದು ವಿದ್ಯಾಪೀಠದ ಪ್ರಶಾಂತ ವಾತಾವರಣವನ್ನು ಮೆಚ್ಚಿಕೊಂಡರು.

ಶಿಕ್ಷಣಾರ್ಥಿಗಳನ್ನು ಕುರಿತು ಕವಿವರ್ಯರು ಮಾತನಾಡುತ್ತಾ "ಈಗಿನ ಕಾಲೇಜು ವಿದ್ಯಾರ್ಥಿಗಳು ಪಟ್ಟಣಗಳ ಕೃತಕ ವೈಭವದ ಮೋಹಕ್ಕೆ ಆಸೆಪಟ್ಟು ತಮ್ಮ ಹಳ್ಳಿಗಳನ್ನು ಮರೆಯುತ್ತಿದ್ದಾರೆ. ಇದರಿಂದ ನಮ್ಮ ದೇಶದ ಬೆನ್ನು ಮೂಳೆಯಾದ ಹಳ್ಳಿಗಳಿಗೂ ನಮ್ಮ ಮುಖ್ಯ ಕಸುಬಾದ ವ್ಯವಸಾಯಕ್ಕೂ ಧಕ್ಕೆ ತಗುಲಿದೆ. ಈ ವಿದ್ಯಾಪೀಠಗಳ ಧ್ಯೇಯದಂತೆ ವಿದ್ಯಾರ್ಥಿಗಳು ನಡೆದುಕೊಳ್ಳಬೇಕು. ಶಿಕ್ಷಣ ಮುಗಿದ ನಂತರ ಹಳ್ಳಿಗಳಿಗೆ ಹಿಂದಿರುಗಿ ಅಲ್ಲಿಯ ಜನರೊಡನೆ ಬೆರೆತು ಅಲ್ಲಿಯ ಜೀವನವನ್ನು ಹಸನು ಮಾಡಲು ಪ್ರಯತ್ನಿಸಬೇಕು." ಎಂದು ನುಡಿದರು.

ಈ ರಾಷ್ಟ್ರಕವಿಯನ್ನು ಆ ದಿನ ನಂಜನಗೂಡು ವಿದ್ಯಾಪೀಠವೇ ಅಲ್ಲದೆ, ಮಾರ್ಗ ಮಧ್ಯದಲ್ಲಿನ ಗ್ರಾಮಗಳೂ ಸಹ ಹಸಿರು ತಳಿರು ತೋರಣಗಳಿಂದ ಶೃಂಗಾರಗೊಂಡು ಸ್ವಾಗತಿಸಿದುವು. ಸುತ್ತಮುತ್ತಲ ಗ್ರಾಮದ ಜನರು ಎತ್ತಿನಗಾಡಿ, ಕಾಲ್ನಡಿಗೆಯಿಂದ ಬಂದು ಕವಿಯನ್ನು ಹತ್ತಿರದಲ್ಲಿ ಕಂಡು, ಕವಿವಾಣಿಯನ್ನು ಕೇಳಿ ಧನ್ಯತಾ ಭಾವದಿಂದ ಬೀಗುತ್ತಿದ್ದ ದೃಶ್ಯ, ಕಂಡವರ ಸ್ಮೃತಿ ಪಟಲದಲ್ಲಿ ಇಂದಿಗೂ ಹಚ್ಚಹಸುರಾಗಿ ಉಳಿದಿದೆ.

೧೯೫೯ನೆಯ ಜನವರಿ ೧೮ರಂದು ವಯಸ್ಕರ ಶಿಕ್ಷಣ ಸಮಿತಿ ವತಿಯಿಂದ ಮೈಸೂರು ನಗರದಲ್ಲಿ ಸಾರ್ವಜನಿಕ ಪುಸ್ತಕ ಭಂಡಾರ ಒಂದನ್ನು ತೆರೆದು, ಕನ್ನಡ ಪುಸ್ತಕಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ಗ್ರಂಥ ಭಂಡಾರದ ಪ್ರಾರಂಭೋತ್ಸವ ಮಾಡಿ, ಪುಸ್ತಕ ಪ್ರದರ್ಶನದ ಉದ್ಘಾಟನೆಯನ್ನು ಕುವೆಂಪು ಅವರು ನೆರವೇರಿಸಿದರು. ಅಂದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಾ "ಭಾರತ ಸ್ವತಂತ್ರವಾದ ಮೇಲೆ, ಆರ್ಥಿಕ ಸಂಪತ್ತನ್ನು ಹೆಚ್ಚಿಸಲು ಅನೇಕ ಯೋಜನೆಗಳನ್ನು ಕೈಗೊಳ್ಳಲಾಗಿದೆ. ಆ ರಂಗದಲ್ಲಿ


ಸಾಕಷ್ಟು ಪ್ರಗತಿಯನ್ನೂ ಸಾಧಿಸಿದೆ. ಭಾರತಕ್ಕೆ ಬಂದಿರುವ ವಿದೇಶಿಯರು ಈ ಬಗ್ಗೆ ಒಳ್ಳೆಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಆರ್ಥಿಕ ಸಂಪತ್ತನ್ನು ಹೆಚ್ಚಿಸುವುದರ ಜೊತೆಗೆ ವ್ಯಕ್ತಿಯ ಜ್ಞಾನ ಸಂಪತ್ತನ್ನೂ ಹೆಚ್ಚಿಸಬೇಕಾದುದು ಆವಶ್ಯಕ. ಅನ್ನ ಬಟ್ಟೆ ಮೊದಲು, ಆಮೇಲೆ ಜ್ಞಾನಾರ್ಜನೆ ಎಂದು ಜನ ಹೇಳುತ್ತಾರೆ. ಆದರೆ ಅನ್ನ ಬಟ್ಟೆಗಳಿಗಿಂತಲೂ ಜ್ಞಾನ ಸಂಪತ್ತು ಮನುಷ್ಯನಿಗೆ ಅತ್ಯಗತ್ಯ. ಜ್ಞಾನ ಸಂಪತ್ತಿಗಿಂತ ಮಿಗಿಲಾದ ಸಂಪತ್ತು ಇನ್ನಿಲ್ಲ. ಒಂದು ಸಾವಿರ ವರುಷಗಳ ಹಿಂದೆ ಬೆಳೆದ ಬತ್ತ ನಮಗೆ ಇಂದು ಉಪಯೋಗಕ್ಕೆ ಬರುವುದಿಲ್ಲ. ಆದರೆ ಒಂದು ಸಾವಿರ ವರುಷದ ಹಿಂದೆ ಸೃಷ್ಟಿಯಾದ ಸಾಹಿತ್ಯ, ಜ್ಞಾನ ಭಂಡಾರ ಇಂದಿಗೂ ಹೊಸದಾಗಿದೆ, ತುಂಬ ಉಪಯುಕ್ತವಾಗಿದೆ. ವಸ್ತುದಾನಕ್ಕೂ ಜ್ಞಾನ ದಾನಕ್ಕೂ ಇನ್ನೊಂದು ವ್ಯತ್ಯಾಸ ಇದೆ. ವಸ್ತುವನ್ನು ದಾನಮಾಡುವವನಲ್ಲಿ ಅಷ್ಟು ವಸ್ತು ಕಡಮೆ ಆಗುತ್ತದೆ. ಅವನ ವಸ್ತು ಸಂಪತ್ತು ಹೆಚ್ಚುವುದಿಲ್ಲ. ಆದರೆ ಜ್ಞಾನ ದಾನಮಾಡುವವನಲ್ಲಿ ಜ್ಞಾನ ಸಂಪತ್ತು ಸ್ವಲ್ಪವೂ ಕಡಮೆಯಾಗುವುದಿಲ್ಲ. ಅಲ್ಲದೆ ದಾನ ಮಾಡುವಾಗ ಅವನು ಮಾಡುವ ಅಭ್ಯಾಸದಿಂದ ಅವನ ಜ್ಞಾನ ಸಂಪತ್ತು ಇನ್ನೂ ಹೆಚ್ಚುತ್ತದೆ. ಆದ್ದರಿಂದ ವಸ್ತು ದಾನಕ್ಕಿಂತ ಜ್ಞಾನದಾನ ಮಿಗಿಲಾದುದು. ಈ ಜ್ಞಾನದಾನ ಕಾರ್ಯದಲ್ಲಿ ಪುಸ್ತಕ ಮುಖ್ಯ ಸಾಧನವಾಗಿದೆ" ಎಂದು ಕವಿವಾಣಿಯಲ್ಲಿ ಹೇಳಿದರು.

ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ಸಲ್ಲಿಸಿದ ಸೇವೆಯನ್ನು ಗುರುತಿಸಿ ೧೯೭೦ ನೆಯ ಸಾಲಿನ ನೆಹರು ಸಾಕ್ಷರತಾ ಪ್ರಶಸ್ತಿಯು ಸಮಿತಿಗೆ ದೊರೆಯಿತು. ಸಮಿತಿಯ ಪರವಾಗಿ ಅಂದಿನ ಅಧ್ಯಕ್ಷರಾಗಿದ್ದ ಶ್ರೀ ಪಿ. ಎನ್. ಜವರಪ್ಪಗೌಡ ಅವರು ದೆಹಲಿಯಲ್ಲಿ ಈ ಪ್ರಶಸ್ತಿ ಸ್ವೀಕರಿಸಿ, ಮೈಸೂರು ತಲುಪಿದ ಕೂಡಲೇ ಉದಯರವಿಗೆ ದೌಡಾಯಿಸಿದರು. ಸಮಿತಿಗೆ ಸಂದ ಗೌರವ ಪ್ರಶಸ್ತಿಯನ್ನು ಕವಿವರ್ಯ ಕುವೆಂಪು ಅವರಿಗೆ ತೋರಿಸಿದರು. ಸ್ಪರ್ಧೆ ವಿಜೇತ ವಿದ್ಯಾರ್ಥಿ ತನಗೆ ಬಂದ ಪ್ರಶಸ್ತಿಯಿಂದ ಬೀಗುವಂತೆ ಕುವೆಂಪು ಅವರು ನೆಹರು ಸಾಕ್ಷರತಾ ಪ್ರಶಸ್ತಿಯನ್ನು ನೋಡಿ ಆನಂದಪಟ್ಟರು. ಪ್ರಶಸ್ತಿ, ಸನ್ಮಾನಗಳಿಗೆ ಕೀರ್ತಿಶನಿ ಪಟ್ಟಕಟ್ಟಿ ಬಹುದೂರ ಅಟ್ಟಿದ್ದ ಕುವೆಂಪು ಅವರು ಪ್ರಶಸ್ತಿ ಸಮಿತಿಗೆ ಬಂದಾಗ ನೋಡಿ, ಮೆಚ್ಚಿ ಸಂತೋಷಪಟ್ಟಿದ್ದರು.

ದಿವಂಗತ ಶ್ರೀಕೃಷ್ಣ ಆಲನಹಳ್ಳಿ ಅವರ ಗೌರವ ಸಂಪಾದಕತ್ವದಲ್ಲಿ ಪುಸ್ತಕ ಪ್ರಪಂಚ ಮಾಸ ಪತ್ರಿಕೆಯು ೧೯೮೭ರಲ್ಲಿ ನವೀಕರಣಗೊಂಡಿತು. ನವೀಕೃತ ಪುಸ್ತಕ ಪ್ರಪಂಚದ ಪ್ರಥಮ ಸಂಚಿಕೆಯನ್ನು ತಾ|| ೮-೩-೧೯೮೭ ರಂದು ಕುವೆಂಪು ಅವರು ಉದಯರವಿಯಲ್ಲಿ ಬಿಡುಗಡೆ ಮಾಡಿ "ಮಾತು ಕಲಿ, ಮೌನ ನನ್ನ ನೆಲೆ, ನಿಮ್ಮ ಔದಾರ್ಯ ಬಂದಂತೆ ಅರ್ಥ ಕಲ್ಪಿಸಿಕೊಳ್ಳಿ" ಎಂದು ತಿಳಿಸಿ ಪುಸ್ತಕ ಪ್ರಪಂಚಕ್ಕೆ ಯಶ ಹಾರೈಸಿದರು.

ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಕಾರ್ಯಕ್ರಮದಲ್ಲಿ ಕುವೆಂಪು ಅವರು ಪಾಲ್ಗೊಂಡ ಕೊನೆ ಕಾರ್ಯಕ್ರಮ ಇದಾಯಿತು.





ಸಮಿತಿ ಏರ್ಪಡಿಸಿದ್ದ 'ಜನಪ್ರಿಯ ವಾಲ್ಮೀಕಿ ರಾಮಾಯಣ'—ಕೃತಿ ಬಿಡುಗಡೆ
ಸಮಾರಂಭದಲ್ಲಿ ಶ್ರೀ ಕುವೆಂಪು ಅವರು.






ನಂಜನಗೂಡು ವಿದ್ಯಾಪೀಠದಲ್ಲಿ ಶಿಕ್ಷಣಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ
ಶ್ರೀ ಕುವೆಂಪು ಅವರು.



ಪುಸ್ತಕ ಪ್ರದರ್ಶನ ಉದ್ಘಾಟಿಸಿ ಸಮಿತಿ ಕಾರ್ಯಕರ್ತರೊಂದಿಗೆ ಶ್ರೀ ಕುವೆಂಪು ಅವರು.



ಸಮಿತಿಯ ಅಧ್ಯಕ್ಷರಾಗಿದ್ದ ದಿವಂಗತ ಶ್ರೀ ನ. ಭದ್ರಯ್ಯನವರೊಂದಿಗೆ ಸಮಿತಿ
ಮುದ್ರಣಾಲಯ ವೀಕ್ಷಿಸುತ್ತಿರುವ ಶ್ರೀ ಕುವೆಂಪು ಅವರು.

# ಕುವೆಂಪು : ಅಧಿ ಆತ್ಮದ ಸಿರಿ ಅಲಂಪು

ಡಾ|| ಅರವಿಂದ ಮಾಲಗತ್ತಿ

ಅಧಿಕಾರ ಅಂತಸ್ತು ಉಳ್ಳ ಕೆಲವರು ಹೇರಿಕೆಯಿಂದ ಸ್ಮರಿಸಿಕೊಳ್ಳುವಂತೆ ಮಾಡುತ್ತಾರೆ. ಬುದ್ಧಿಬಲವನ್ನೇ ಬಂಡವಾಳ ಮಾಡಿಕೊಂಡು ಬದುಕುವವರು ಒತ್ತಾಯಪೂರ್ವಕವಾಗಿ ಸ್ಮರಿಸಿಕೊಳ್ಳುವಂತೆ ಮಾಡುತ್ತಾರೆ. ಇನ್ನೂ ಕೆಲವರು ಎಲ್ಲವೂ ಇದ್ದು, ಇಲ್ಲದಂತೆಯೇ ಬದುಕಿ ಜನಮನದಲ್ಲಿ ನೆಲೆನಿಂತು ಬಿಡುತ್ತಾರೆ. ಸ್ಮರಿಸಿಕೊಳ್ಳುವುದಕ್ಕೆ ಸೀಮಾತೀತರಾಗಿ ಜನಮಾನದ ಎದೆಯನ್ನು ಆಳುತ್ತಾರೆ. ಇಂಥವರು ತುಂಬ ಅಪರೂಪಕ್ಕೆ ಕಾಣಿಸಿಕೊಳ್ಳುತ್ತಾರೆ. ಕುವೆಂಪು ಅವರು ಇಂಥ ಮೂರನೇ ವರ್ಗಕ್ಕೆ ಸೇರಿದ ಒಬ್ಬ ವಿಭೂತಿ ಪುರುಷ.

ಧೀರೋದಾತ್ತ ವ್ಯಕ್ತಿ ಕಾಣಿಸಿಕೊಳ್ಳುವುದು ಅಪರೂಪವಾದರೂ, ಒಂದು ಸಾಂಸ್ಕೃತಿಕ ಸಂದರ್ಭ ಇಂಥ ಅವಕಾಶವನ್ನು ಒದಗಿಸಿಕೊಡುತ್ತದೆ. ಸಾಮರ್ಥ್ಯವುಳ್ಳವರು ಈ ಅವಕಾಶವನ್ನು ಬಳಸಿಕೊಳ್ಳುತ್ತಾರೆ ಮತ್ತು ಒಂದು ಯುಗದ ವಕ್ತಾರರಾಗಿ ನಿಲ್ಲುತ್ತಾರೆ. ಕುವೆಂಪು ಅವರು ಒಂದು ಸಾಂಸ್ಕೃತಿಕ ಸಂದರ್ಭವನ್ನು ಸಮರ್ಥವಾಗಿ ಬಳಸಿಕೊಂಡ ವಕ್ತಾರರು. ಇಲ್ಲಿ ಒಂದು ಸಾಂಸ್ಕೃತಿಕ ಸಂದರ್ಭ ಎನ್ನುವ ಮಾತು, ಚಾರಿತ್ರಿಕ ಸ್ಥಿತ್ಯಂತರವನ್ನು ಪಡೆದು ಯುಗಾಂತರದ ಸಾಲಿಗೆ ಸೇರುವಂತಹದು ಎನ್ನುವುದನ್ನು ಗಮನದಲ್ಲಿಟ್ಟುಕೊಂಡು ಗುರುತಿಸುತ್ತಿರುವುದು.

ವ್ಯಕ್ತಿಯನ್ನು ವ್ಯಕ್ತಿಯನ್ನಾಗಿಯೇ ನೋಡಿದಾಗ ವಿಮರ್ಶೆ ಸಾಧ್ಯ. ವ್ಯಕ್ತಿಯನ್ನು ಕೇವಲ ಶಕ್ತಿಯನ್ನಾಗಿ ಪರಿಗಣಿಸಿದಾಗ ವಿಮರ್ಶೆ, ಆರೋಗ್ಯಕರವಾದ ಸಂವಾದಗಳಿಲ್ಲದೆ ಸೊರಗುತ್ತದೆ. ಆಗ ವ್ಯಕ್ತಿ ಕಲ್ಲಾಗುತ್ತಾನೆ. ವ್ಯಕ್ತಿಯ ವಿಚಾರಗಳ ಕುರಿತು ಮಾತನಾಡದಿರುವುದು ಎಂದರೆ; ಆ ವ್ಯಕ್ತಿಯನ್ನು ನಿಶೇಷವಾಗಿಸಿದಂತೆ. ಹಾಗೆಯೇ ವ್ಯಕ್ತಿಯನ್ನು ಬರಿಶಕ್ತಿಯನ್ನಾಗಿ ಪರಿಗಣಿಸುವುದು ಎಂದರೆ; ಇದೂ ಕೂಡ ಅವರ ಇನ್ನೊಂದು ಮುಖವಾಗುತ್ತದೆ. ವ್ಯಕ್ತಿಯ ವಿಚಾರಗಳ ವಸ್ತುನಿಷ್ಠ ವಿಮರ್ಶೆ, ವ್ಯಕ್ತಿಯನ್ನು ಸದಾಕಾಲ ಜೀವಂತವಾಗಿಡುತ್ತದೆ. ಕುವೆಂಪು ಅವರ ಸಾಹಿತ್ಯ ಸಾರ್ವಕಾಲಿಕವಾಗಿ ಜೀವಂತಿಕೆಯಿಂದ ನೆಲೆ ನಿಲ್ಲುವ ಸತ್ವವುಳ್ಳದ್ದು, ಅದನ್ನು ಸಮಗ್ರವಾಗಿ ಮತ್ತು ಸಮರ್ಥವಾಗಿ ಮಥಿಸುವ ಸಾಮರ್ಥ್ಯವುಳ್ಳವರನ್ನು ನಿರೀಕ್ಷಿಸುತ್ತಿದೆ ಮತ್ತು ಅದು ಕುವೆಂಪು ಅವರ ಶಕ್ತಿಶಾಲಿ ವಿಚಾರಧಾರೆಯ ಸ್ವರೂಪವನ್ನು ಪ್ರತಿನಿಧಿಸುತ್ತದೆ.

ಕುವೆಂಪು ಅವರು ಸಾಹಿತ್ಯ-ಸಾಹಿತ್ಯೇತರ ಎರಡೂ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡ ವಿಶೇಷ ಚೇತನ. ಅವರ ಸಾಹಿತ್ಯದಲ್ಲಿ ಅತೀ ಮುಖ್ಯವಾದ ನಾಲ್ಕು ಪ್ರಧಾನ ತೊರೆಗಳನ್ನು ಅಥವಾ ಮಜಲುಗಳನ್ನು ಕಾಣುತ್ತೇವೆ. ಪುಟ್ಟಪ್ಪನವರ ಆರಂಭದ ಬರವಣಿಗೆ ಸಂಪೂರ್ಣವಾಗಿ. "ಮೌಲ್ಯಾಧಾರಿತ ಚಿಂತನೆಯ ತೊರೆ." ಎಂದರೆ ಸತ್ಯ, ಧರ್ಮ, ನ್ಯಾಯ, ಸಾತ್ವಿಕತೆ ಇಂಥ ಸಾರ್ವತ್ರಿಕ ಮತ್ತು ಸಾರ್ವಕಾಲಿಕ ಮೌಲ್ಯಗಳನ್ನು ಕುರಿತು ಚಿಂತಿಸಿ ಪ್ರತಿಪಾದಿಸಿದ ನೆಲೆಯನ್ನು ಕಾಣುತ್ತೇವೆ. ಯಮನ ಸೋಲು, ನನ್ನ ಗೋಪಾಲ, ಜಲಗಾರ ಮುಂತಾದ ಕೃತಿಗಳು ಇದಕ್ಕೆ ಸಾಕ್ಷಿಯಾಗುತ್ತವೆ. "ವರ್ಣಾಧಾರಿತ ಚಿಂತನೆಯ ತೊರೆ" ಎರಡನೆಯ ಘಟ್ಟದ್ದು. ಇದು ನೇರವಾಗಿ ವಾಸ್ತವದ ಬದುಕಿನೊಟ್ಟಿಗೆ ಸಂಬಂಧವುಳ್ಳದ್ದು. ಹೀಗೆ ಸಮಾಜವನ್ನು ಸ್ಪಂದಿಸಲು ಹೊರಟಾಗ ತೀವ್ರತರವಾದ ಮತ್ತು ಅಷ್ಟೇ ಸಂಯಮದ ಚಿಂತನೆಯ ಅಭಿವ್ಯಕ್ತಿಯನ್ನು ಕಾಣುತ್ತೇವೆ. ಇದು ಶೂದ್ರ ತಪಸ್ವಿ, ಬೆರಳ್ಗೆ ಕೊರಳ್‌ಗಳಂತಹ ಕೃತಿಗಳಲ್ಲಿ ಒಡೆದು ಕಾಣುವಂತಹದು. ಮೌಲ್ಯಾಧಾರಿತ ಮತ್ತು ಆದರ್ಶವಾದಿ ಸಾಹಿತ್ಯದ ಪ್ರವಾಹದ ಸಂದರ್ಭದಲ್ಲಿ ಈ ಬಗೆಯ ನಡಿಗೆ ಕನ್ನಡ ಸಾಹಿತ್ಯಕ್ಕೆ ಆಘಾತಕರವಾಗಿತ್ತು. ಹೀಗಾಗಿ ಕುವೆಂಪು ಅವರು ತೀಕ್ಷ್ಣವಾದ ಪ್ರತಿಕ್ರಿಯೆಯನ್ನು ಎದುರಿಸಬೇಕಾಯಿತು.

ಮೂರನೆಯ ತೊರೆ: "ಸಂಸ್ಕೃತಿಯ ಪ್ರತಿಪಾದನೆಯ ಚಿಂತನ ತೊರೆ" ಕಾನೂರು ಸುಬ್ಬಮ್ಮ ಹೆಗ್ಗಡತಿ ಮತ್ತು ಮಲೆಗಳಲ್ಲಿ ಮದುಮಗಳು ಇವು ಈ ನೆಲೆಯಲ್ಲಿ ತಮ್ಮತನವನ್ನು ಸಾರಿಕೊಳ್ಳುವ ಕೃತಿಗಳು. ವ್ಯಕ್ತಿಯ ಅಥವಾ ಸಮಾಜದ ಅಸ್ತಿತ್ವವನ್ನು ಗುರುತಿಸಿಕೊಳ್ಳಲು ಅನಿವಾರ್ಯತೆ ಮತ್ತು ಅವಶ್ಯಕತೆಯನ್ನು ತಂದೊಡ್ಡಿದ ಕಾಲವದು. ಇಲ್ಲಿಯ ಕುವೆಂಪು ಅವರ ಸಾಹಿತ್ಯ, ವರ್ಣಾಧಾರಿತ ಚಿಂತನ ಧಾರೆಗಿಂತ ಭಿನ್ನವಾದುದು. ಸಮನ್ವಯತೆಯ ಜೊತೆಗೆ ವಾಸ್ತವತೆಯ ಸತ್ಯಕ್ಕೆ ಆದ್ಯತೆ ಕೊಡುವುದನ್ನು ಕಾಣುತ್ತೇವೆ ಹಾಗೂ ಬೆಳೆದು ನಿಂತ ಸಮಾಜವ ಸಂಸ್ಕೃತಿಗಳೊಂದಿಗೆ ಇತರ ಸಮಾಜದ ಸಂಸ್ಕೃತಿಯನ್ನು ಕಟ್ಟುವ ಕೆಲಸಕ್ಕೆ ಮುಂದಾಗಿದ್ದಾರೆ. ಈ ನೆಲೆಯಲ್ಲಿ ಮೇಲಿನ ಕೃತಿಗಳು ಭಾರತೀಯ ಸಂಸ್ಕೃತಿಯನ್ನೇ ಪ್ರತಿನಿಧಿಸುವಂಥವು. ಇನ್ನು ಕೊನೆಯದು, 'ವೈಜ್ಞಾನಿಕ ಅಧ್ಯಾತ್ಮದ ಚಿಂತನ ತೊರೆ.' ಅಧ್ಯಾತ್ಮ ಮತ್ತು ವಿಜ್ಞಾನ ಎರಡೂ ಬೇರೆ ಬೇರೆ. ವಿಜ್ಞಾನಕ್ಕೆ ಮುಂದೇನು? ಎನ್ನುವ ಪ್ರಶ್ನೆ ಇದ್ದರೆ ಇಂಥ ಪ್ರಶ್ನೆ ಅಧ್ಯಾತ್ಮಕ್ಕೆ ಇಲ್ಲ, ಹೀಗಾಗಿ ಅಧ್ಯಾತ್ಮ ವಿಜ್ಞಾನಕ್ಕಿಂತ ದೊಡ್ಡದು. ಹೀಗೆ ವಾದ-ವಿವಾದಗಳಿದ್ದ ಸಂದರ್ಭದಲ್ಲಿ 'ಅಧ್ಯಾತ್ಮ ಸತ್ಯ. ಹೀಗಾಗಿ ವಿಜ್ಞಾನ ಸತ್ಯವಾಗಿದೆ' ಎಂದು ಸಾಧಿಸಿ, ಅಧ್ಯಾತ್ಮವೆಂಬ ಹಾಲಿನಲ್ಲಿ ವಿಜ್ಞಾನವೆಂಬ ಬೆಣ್ಣೆ ಅಡಗಿದೆ— ಎನ್ನುವುದನ್ನು ತಮ್ಮದೇ ಆದ ನೆಲೆಯಲ್ಲಿ ಸಾವಯುವ ಸಂಬಂಧ ಗುರುತಿಸುತ್ತ ವ್ಯಾಖ್ಯಾನವನ್ನು ಮಾಡಿದ್ದಾರೆ. 'ಮೌಲ್ಯಾಧಾರಿತ ಚಿಂತನ ತೊರೆ' ಮತ್ತು ವೈಜ್ಞಾನಿಕ ಅಧ್ಯಾತ್ಮ ಚಿಂತನ ತೊರೆ' ಇವು ಎರಡೂ ಘಟ್ಟಗಳಲ್ಲಿ ಕಾಣಿಸಿಕೊಳ್ಳುವ ಚಿಂತನ ಮಾರ್ಗ ಒಂದು ಉತ್ಕೃಷ್ಟವಾದರೆ ಮತ್ತೊಂದು ಅತ್ಯುತ್ಕೃಷ್ಟವಾದುದು. ಒಂದು

ಮಗುವಿನ ಮನಸ್ಸಾದರೆ ಮತ್ತೊಂದು ಮುಪ್ಪಾವಸ್ಥೆಯಲ್ಲಿ ತಾಳುವ ಮಗುವಿನ ಮನಸ್ಸು. ಇದು ಮಾನವನ ಭಾರತೀಯ ಅಸ್ತಿತ್ವದಲ್ಲಿಯೇ ಪೂರ್ಣತ್ವದ ಬಗೆ. ಇಲ್ಲಿಯೇ ಕುವೆಂಪು ಅವರಿಗೆ ಧನ್ಯತೆಯ ಇಮ್ಮು.

ಈ ಒಟ್ಟು ಬೆಳವಣಿಗೆಯಲ್ಲಿ ಕುವೆಂಪು ಅವರು ಭೌತ ಮತ್ತು ಅಭೌತದೊಂದಿಗೆ ಲೀನರಾಗುತ್ತಾರೆ. ಜೊತೆಗೆ ತಮ್ಮ ಸಾಂಸ್ಕೃತಿಕ ಸಂದರ್ಭದ ಇತರೇ ಅವರಣ ಗಳೊಂದಿಗೆ ಎಂದರೆ, ಭಾಷೆ, ರಾಷ್ಟ್ರ, ರಾಜ್ಯ, ಪ್ರಕೃತಿ, ಪ್ರಣಯ, ಇತಿಹಾಸ ಮುಂತಾದವು ಗಳೊಂದಿಗೆ ಸಂವಾದಿಸುತ್ತಾರೆ. ಹೀಗಾಗಿ 'ಕುವೆಂಪು' ಎನ್ನುವ ಶಬ್ದಕ್ಕೆ ಕುವೆಂಪು ಅವರೇ ಅರ್ಥೈಸುವುದು ಹೀಗೆ:

> ಅಧಿ ಆತ್ಮದ ಸಿರಿ ಅಲಂಪು
> ಎಲ್ಲವೊಂದಗೂಡಲೆಂದು
> ವಿಧಿಯ ಮನಸು ಕಡೆದ ಕನಸು
> ಕಾಣ್ಬ ಕಣಸೆ, ಕಾಣ್: ಕುವೆಂಪು

ಯಾವುದೇ ವ್ಯಕ್ತಿಯ ಅಸ್ತಿತ್ವದ ಮೌಲ್ಯವನ್ನು ಅರಿಯಬೇಕಾದರೆ ಅವರ ಸಮಕಾಲಿನ ವ್ಯಕ್ತಿಗಳ ಮೌಲ್ಯಗಳೊಂದಿಗೆ ಹೋಲಿಸಿ ನೋಡಿದಾಗ ಚಿಂತನೆ ನೆಲೆಗಳ ಅಥವಾ ಮಜಲುಗಳ ಅರಿವಾಗುತ್ತದೆ. ಶಿವರಾಮ ಕಾರಂತರಂತಹ ಲೇಖಕರು ಕೊನೆಯವರೆಗೂ ವಿಚಾರವಾದಿ ಲೇಖಕ ರಾಗಿಯೇ ಕಾಣಿಸಿಕೊಂಡರೂ ಆ ವೈಚಾರಿ ಕತೆಯ ತಳಹದಿಯಲ್ಲಿಯೇ ವಿಭಿನ್ನ ಸ್ತರ ಗಳಿವೆ. ಪ್ರಗತಿಶೀಲತೆಯ ಗುಣವನ್ನು ಆರಂಭ ದಿಂದಲೇ ಅರಗಿಸಿಕೊಂಡದ್ದು ಕಂಡು ಬಂದರೂ ಅನಂತರ ಇವರೂ ವರ್ಣ ನಿಷ್ಠತೆಯ ಕುರಿತು ಅಧಿಕೃತವಾಗಿ ಮಾತ ನಾಡುತ್ತಾರೆ. ನವೋದಯದ ಲೇಖಕ ರಲ್ಲಿ ಈ ಸಂಗತಿಯನ್ನು ವಿವಾರಿಸಿಂತ ಲೇಖಕರು ಅಲಭ್ಯ. ಇದಕ್ಕೆ ಮುಖ್ಯಕಾರಣ ಅಂದಿನ ಸಾಂಸ್ಕೃತಿಕ ಹಾಗೂ ರಾಜಕೀಯ ಚಿಂತನ ಮಾರ್ಗಗಳೇ ಆಗಿವೆ. ಸ್ವಾತಂತ್ರ್ಯದ ಕುರಿತು ಹೊಂದಿದ್ದ ಪರಿಕಲ್ಪನೆ, ವಸ್ತು ಸ್ಥಿತಿಯಲ್ಲಿ ಇದಿರಾಗುವ ಅನಪೇಕ್ಷಿತ ರಾಜಕೀಯ ವಿಚಾರ ಎಲ್ಲ ಸಾಹಿತಿಗಳನ್ನು ಕಂಗಾಲಾಗಿಸಿದ್ದರ ಪರಿಣಾಮವೇ ಅದಾ ಗಿತ್ತು. ಹೀಗಾಗಿ ವರ್ಣಪರವಾಗಿ ಮಾತ ನಾಡದಿರುವುದು ಅಸಾಧ್ಯವಾಗಿತ್ತು. ನವೋದಯ ಕಾಲದ 'ವರ್ಣಾಧಾರಿತ ಚಿಂತನೆಯ ತೊರೆ'ಯಲ್ಲಿ ಆಯಾ ಸಾಹಿತಿ ಗಳ ಅಂತರಾತ್ಮ ಬೆತ್ತಲಾಗಿರುವುದು ಗಮನಕ್ಕೆ ಬಾರದಿರದು. ಸಾಮಾನ್ಯವಾಗಿ ಹೇಳಬಹುದಾದ ಒಂದು ಮಾತೆಂದರೆ, ತಮ್ಮ ವರ್ಣಗಳ ಕುರಿತು ತಾಳುವ ಚಿಂತನೆ 'ಸುಧಾರಣವಾದಿ' ನೀತಿಯದ್ದಾದರೆ ಅನ್ಯ ವರ್ಣಗಳ ವಿಚಾರ ಬಂದಾಗ ಸ್ಪಂದಿಸುವ ಸ್ತರಗಳಲ್ಲಿ ವ್ಯತ್ಯಾಸವಾಗುತ್ತವೆ. ಎಂದರೆ 'ಅರೆ ಸುಧಾರಣವಾದಿ'ಗಳಾಗಿ ನಿಲ್ಲುತ್ತಾರೆ. ದ.ರಾ. ಬೇಂದ್ರೆಯವರಂತಹ ಕೃತಿಕಾರರು ಗಾಂಧೀಜಿಯವರ ಸಾಂಪ್ರದಾಯಿಕ ಪರಿಷ್ಕರಣದ ನೆಲೆಯನ್ನೇ ಅಪ್ಪಿಕೊಂಡು ಮುನ್ನಡೆದರೆ, ಅನುಭವಕ್ಕೆ ಪ್ರಾಧಾನ್ಯತೆ ಕೊಟ್ಟು ತನ್ನ ಅರಿತೆಯನ್ನು ತಾನೇ ವಿವಾರ ಬೇಕು ಎನ್ನುವ ಧೋರಣೆ ಹೊಂದಿದ ಶಿವರಾಮ ಕಾರಂತರಂಥವರು ಅಧಿಕೃತವಾಗಿ ಭೌತವಾದದ ನೆಲೆಯನ್ನೇ ಅಪ್ಪಿಕೊಂಡು ಹೋಗುವುದನ್ನು ಕಾಣುತ್ತೇವೆ. ಕುವೆಂಪು ಅವರು ಭೌತ-ಅಭೌತಗಳ ಸಮನ್ವಯತೆಯ

ಮಾರ್ಗವನ್ನು ಹಿಡಿಯುತ್ತಾರೆ. ಒಂದೇ ಕಾಲ ಘಟ್ಟದ ಪ್ರಮುಖ ಲೇಖಕರಲ್ಲಿ ಕಾಣಿಸಿಕೊಳ್ಳುವ ಈ ಮಾರ್ಗಗಳು ತುಂಬ ಆಶ್ಚರ್ಯವೆನಿಸಿದರೂ ಅನಪೇಕ್ಷಿತವೇನಲ್ಲ. ಏಕೆಂದರೆ ಅವರು ಹುಟ್ಟಿಬೆಳೆದ ಪರಿಸರ ಮತ್ತು ಆ ಪರಿಸರಕ್ಕಿರುವ ಪರಂಪರೆ ಅವರ ಆಲೋಚನ ಕ್ರಮಕ್ಕೆ ಬೆನ್ನೆಲುಬಾಗಿರುತ್ತವೆ. ಹೀಗಾಗಿಯೇ ಏಕಕಾಲದಲ್ಲಿಯೇ ಭಿನ್ನಮಾರ್ಗಗಳು ಕಾಣಿಸಿಕೊಳ್ಳುತ್ತವೆ.*

* ಮೈಸೂರು ವಿಶ್ವವಿದ್ಯಾನಿಲಯದ ಮಾನವಿಕ ಸಭಾಂಗಣದಲ್ಲಿ ದಿನಾಂಕ: ೧೭-೧೧-೯೪ ರಂದು ನಡೆದ 'ಕುವೆಂಪು ಅವರ ಶ್ರದ್ಧಾಂಜಲಿ' ಸಮಾರಂಭದಲ್ಲಿ ಮಾತನಾಡಿದ ಮಾತುಗಳ ವಿಸ್ತೃತ ರೂಪವೇ ಈ ಲೇಖನ.



ತಪ್ಪು ಮಾಡದಿರುವುದು ಮಾತ್ರ ನ್ಯಾಯವಾದಿತ್ವವಲ್ಲ. ಆದರೆ ತಪ್ಪು ಮಾಡಲು ಹಲವು ಅವಕಾಶಗಳಿದ್ದರೂ ಹಾಗೆ ಮಾಡದಿರುವದೇ ನಿಜವಾದ ನ್ಯಾಯವಾದಿತ್ವವಾಗಿರುವದು.

—ಕಂಬರಲ್ಯಾಂಡ

ಇತರರ ತಪ್ಪುಗಳನ್ನು ದೊಡ್ಡ ಧ್ವನಿಯಿಂದ ಹೇಳುತ್ತೀ. ನಿನ್ನ ತಪ್ಪುಗಳನ್ನು ಸದಾ ಮುಚ್ಚಿಡಲು ಪ್ರಯತ್ನಿಸುತ್ತೀ. ಮೊದಲು ನಿನ್ನ ತಪ್ಪುಗಳನ್ನು ಒದರಿ ಹೇಳಿಕ್ಷಮೆ ಬೇಡು. ಇತರರ ತಪ್ಪುಗಳ ಗೊಡವೆಗೆ ಎಂದಿಗೂ ಹೋಗಬೇಡ. ಹೋದರೆ ನೀನೇ ಆ ತಪ್ಪಿನ ಬಲೆಯಲ್ಲಿ ಸಿಕ್ಕಿ ಬೀಳಬಹುದು.

—ಸ್ವಾಮಿ ಚೈತನ್ಯ

# ಕಿರಣದ ಕಣಕಣವೂ ಬೆಳಕು

ಡಾ. ಕೆ. ಚಿದಾನಂದಗೌಡ

"ನಾನು ಸಂಧಿಸುವ ಮಹಾತ್ಮರು ಸಣ್ಣ ಕೆಲಸವನ್ನು ಹೇಗೆ ಮಾಡುತ್ತಾರೆ ಎಂಬುದನ್ನು ನಾನು ಗಮನಿಸುತ್ತಾ ಬಂದಿದ್ದೇನೆ. ನೀವು ವ್ಯಕ್ತಿಯೊಬ್ಬನ ಚಾರಿತ್ರ್ಯವನ್ನು ತಿಳಿಯಲು ಅವನು ಮಾಡಿದ ಯಾವುದೋ ಒಂದು ದೊಡ್ಡ ಕಾರ್ಯವನ್ನು ಪರಿಶೀಲಿಸಿದರೆ ಸಾಲದು. ಯಾಕೆಂದರೆ ಎಂಥ ಸಾಮಾನ್ಯನೂ ಒಂದಲ್ಲ ಒಂದು ಅವಕಾಶ ದೊರೆತಾಗ ಮಹಾ ವೀರನಂತೆ ವರ್ತಿಸಬಹುದು. ಮನುಷ್ಯನು ದಿನವೂ ಮಾಡುವ ಸಾಮಾನ್ಯ ಕೆಲಸಗಳು ಅವನ ಉನ್ನತ ಚಾರಿತ್ರ್ಯದ ಕುರಿತು ಸ್ಪಷ್ಟಚಿತ್ರ ನೀಡಬಲ್ಲವು. ನಿಜವಾದ ಮಹಾತ್ಮನು ಎಲ್ಲಾ ಸಂದರ್ಭಗಳಲ್ಲೂ—ಜನರು ಅವನನ್ನು ಪರಿಶೀಲಿಸಲಿ, ಬಿಡಲಿ—ಒಂದೇ ತೆರನಾಗಿರುವನು."

ಮೇಲಿನ ಮಾತುಗಳನ್ನು ಹೇಳಿದವರು ಸ್ವಾಮಿ ವಿವೇಕಾನಂದರು. ಕಲ್ಲುಸಕ್ಕರೆಯ ಪ್ರತಿಯೊಂದು ಕಣವೂ ಸಿಹಿಯಾಗಿರುತ್ತದೆ; ಬೆಳಗಿನ ಕಿರಣದ ಕಣಕಣವೂ ಬೆಳಗುತ್ತಿರುತ್ತದೆ. ಅದೇ ರೀತಿ ದೊಡ್ಡ ವ್ಯಕ್ತಿಯೊಬ್ಬನ ದೊಡ್ಡತನವು ಅವನು ಮಾಡುವ ಸಣ್ಣ ಸಣ್ಣ ಕೆಲಸಗಳಲ್ಲೂ ಕಾಣಿಸುತ್ತಿರುತ್ತದೆ.

ಅದೊಂದು ದಿನ ಸಂಜೆ ಕಳೆದು ರಾತ್ರಿ ಸಮಾಪಿಸುತ್ತಿದ್ದ ಹೊತ್ತು. ಆತ್ಮೀಯ ವಲಯಕ್ಕೆ ಸೇರಿದ ಮೂರು ಮಂದಿ ಅತಿಥಿಗಳು ಮನೆಗೆ ಬಂದಿದ್ದರು. ಅವರೊಡನೆ ಲೋಕಾಭಿರಾಮವಾಗಿ ಮಾತಾಡುತ್ತಾ ಕುಳಿತಿದ್ದೆ. ಕೆಲವು ವರ್ಷಗಳ ಹಿಂದೆ ತೀರಿಹೋಗಿದ್ದ ಗಂಗೋತ್ರಿಯ ಒಬ್ಬ ಪ್ರಾಧ್ಯಾಪಕರ ಜೀವನದ ಸುತ್ತ ನಮ್ಮ ಸಂಭಾಷಣೆ ತಿರುಗತೊಡಗಿತು. ನಮ್ಮೆಲ್ಲರ ಗೌರವಕ್ಕೆ ಪಾತ್ರರಾಗಿದ್ದ ಅವರಲ್ಲಿ ಸಣ್ಣಪುಟ್ಟ ವ್ಯಕ್ತಿವೈಲಕ್ಷಣ್ಯಗಳಿದ್ದುವು. ನಾವು ಅವರ ವಿಲಕ್ಷಣ ಸ್ವಭಾವಕ್ಕೆ ಸಂಬಂಧಿಸಿದ ಕೆಲವು ಘಟನೆಗಳನ್ನು ಮೆಲುಕು ಹಾಕುತ್ತಾ ನಗುವಿನ ಕಡಲಿನಲ್ಲಿ ತೇಲುತ್ತಿದ್ದೆವು. ಆಗ ಸಂಧ್ಯಾಪ್ರಾರ್ಥನೆಯನ್ನು ಮುಗಿಸಿ ದೇವರ ಮನೆಯಿಂದ ಹೊರ ಬಂದ ಶ್ರೀ ಕುವೆಂಪುರವರು ನಾವೆಲ್ಲಾ ಕುಳಿತಿದ್ದ ಹಜಾರಕ್ಕೆ ಬಂದು ತಾವು ನಿತ್ಯ ಕುಳಿತುಕೊಳ್ಳುತ್ತಿದ್ದ ಬೆತ್ತದ ಕುರ್ಚಿಯ ಮೇಲೆ ಆಸೀನರಾದರು.

ನಾವು ಯಾರ ವಿಲಕ್ಷಣ ಸ್ವಭಾವದ ಕುರಿತು ಮಾತಾಡಿಕೊಳ್ಳುತ್ತಿದ್ದೆವು ಎಂಬುದನ್ನು ನಮ್ಮಲ್ಲೊಬ್ಬರು ಅವರಿಗೆ ವಿವರಿಸಿದೆವು. ಅವರು ಮುಗುಳ್ನಗೆಗೆ ಹೊರತಾದ

ಯಾವುದೇ ಬೇರೆ ಪ್ರತಿಕ್ರಿಯೆಯನ್ನು ಪ್ರಕಟಪಡಿಸಲಿಲ್ಲ.

"ಕೆಲವು ವಿಲಕ್ಷಣ ಸ್ವಭಾವಗಳಿದ್ದರೂ ಅವರು ತುಂಬಾ ಮೇಲ್ಮಟ್ಟದ ವ್ಯಕ್ತಿಗಳಾಗಿದ್ದರು" ಎಂದು ನಮ್ಮಲ್ಲೊಬ್ಬರು ಹೇಳಿದರು.

ಆಗ ಕುವೆಂಪುರವರು, "ಹೌದು. ಹಾಗಾಗಿ ನಾನು ಹಾಸ್ಯಕ್ಕಾಗಿ ಕೂಡ ಅವರ ವಿಷಯ ಲಘುವಾಗಿ ಮಾತಾಡಲು ಇಚ್ಛಿಸುವುದಿಲ್ಲ" ಎಂದು ಹೇಳಿ ನಾವು ಮಾಡುತ್ತಿದ್ದ ಪರಚರ್ಚೆಗೆ ಪೂರ್ಣವಿರಾಮ ಹಾಕಿಸಿದರು.

ಸುಮಾರು ಇಪ್ಪತ್ತು ವರ್ಷಗಳ ಕಾಲ ಬಹಳ ಹತ್ತಿರದಿಂದ ಅವರನ್ನು ನೋಡುತ್ತಿದ್ದ ಅವಧಿಯಲ್ಲಿ ಅವರು ವ್ಯಕ್ತಿಗಳ ಕುರಿತಾಗಿ ಮಾತಾಡುವುದು ಅಥವಾ ಪರನಿಂದೆ ಅಥವಾ ಪರಚರ್ಚೆಯಲ್ಲಿ ತೊಡಗಿರುವುದು ಒಮ್ಮೆಯೂ ನನಗೆ ಕಂಡುಬರಲಿಲ್ಲ. ಅವರ ಮಾತುಗಳು ಏನಿದ್ದರೂ ವ್ಯಕ್ತಿಯ ನೆಲೆಯಿಂದ ಮೇಲೆ ಬಂದು ತಾತ್ವಿಕ ನೆಲೆಯಲ್ಲಿ ಓಡಾಡುತ್ತಿದ್ದುವು. ಕೆಲವು ವೇಳೆ ಬಹಿರಂಗವಾಗಿ ಅವರನ್ನು ಟೀಕಿಸಿದವರ ವ್ಯಕ್ತಿತ್ವದ ಕುರಿತು ಕೂಡ ಅವರು ಕಟುವಾಗಿ, ಹೋಗಲಿ ಲಘುವಾಗಿ ಕೂಡ, ಮಾತಾಡುತ್ತಿರಲಿಲ್ಲ. ಇದನ್ನು ಗಮನಿಸಿದಾಗಲೆಲ್ಲಾ ನನಗೆ, "ಕ್ಷುಲ್ಲಕ ವ್ಯಕ್ತಿಗಳು ಇತರರ ವೈಯಕ್ತಿಕ ವಿಷಯಗಳ ಕುರಿತು ಮಾತಾಡುತ್ತಾರೆ; ಸಾಮಾನ್ಯರು ಘಟನೆಗಳ ಕುರಿತು ಮಾತಾಡುತ್ತಾರೆ; ದೊಡ್ಡ ವ್ಯಕ್ತಿಗಳು ತತ್ವಗಳ ಕುರಿತು ಮಾತಾಡುತ್ತಾರೆ" ಎಂಬ ಇಂಗ್ಲೀಷಿನ ನುಡಿಗಟ್ಟು ಜ್ಞಾಪಕಕ್ಕೆ ಬರುತ್ತದೆ.

ನವೆಂಬರ್ ೨೩ ರಂದು, ಕುವೆಂಪುರವರು ದೇಹತ್ಯಾಗ ಮಾಡಿದ ಹದಿಮೂರನೆಯ ದಿನ, ಪ್ರಸಿದ್ಧ ಕಾದಂಬರಿಕಾರರಾದ ಶ್ರೀ ಚದುರಂಗರವರು 'ಉದಯರವಿ'ಗೆ ಬಂದಿದ್ದರು. ಮಾತಿನ ಮಧ್ಯದಲ್ಲಿ ಅವರು ಹೇಳಿದರು :

"ತಾವು ವಾಕಿಂಗಿಗೆ ಹೋಗುವಾಗ ಎಷ್ಟೋ ದಿನ ಕುವೆಂಪುರವರು ತಮ್ಮೊಡನೆ ನನ್ನನ್ನೂ ಕರೆದುಕೊಂಡು ಹೋಗುತ್ತಿದ್ದರು. ಆದರೆ ಅವರು ಯಾವತ್ತೂ ವ್ಯಕ್ತಿಗಳ ನೆಲೆಯಿಂದ ಮಾತಾಡುವುದನ್ನು ನಾನು ಕೇಳಿಲ್ಲ. ಅವರ ಮಾತುಗಳು ಏನಿದ್ದರೂ ತಾತ್ವಿಕ ನೆಲೆಯಲ್ಲಿರುತ್ತಿದ್ದುವು. ನಾನು ಕಂಡ ಸಾಹಿತಿಗಳ ಪೈಕಿ ವ್ಯಕ್ತಿಗಳ ಕುರಿತಾಗಿ ಮಾತಾಡದಿದ್ದವರು ಇಬ್ಬರೇ ಇಬ್ಬರು. ಅವರಲ್ಲಿ ಕುವೆಂಪು ಒಬ್ಬರು.

ನಾನು ಗಮನಿಸಿದುದನ್ನು ತಾನೂ ಗಮನಿಸಿದ್ದೆ ಎಂದು ನನ್ನೊಡನೆ ಹೇಳಿದವರೊಬ್ಬರು ಆ ದಿನ ದೊರಕಿದರು. ಇದನ್ನು ಗಮನಿಸಿದವರು ಇನ್ನೆಷ್ಟೋ ಮಂದಿ ಇರಬಹುದು.

---

ವಿಚಾರ ಮಾಡುವದು ಸುಲಭವಾದ ಕೆಲಸವೇನಲ್ಲ ಮತ್ತು, ಅದು ಕಠಿಣವಾದುದರಿಂದಲೇ ವಿಚಾರಮಾಡಲು ಕೇವಲ ಕೆಲವೇ ಜನರು ಮುಂದಾಗುತ್ತಾರೆ.

—ಫೋರ್ಡ್

# ಕುವೆಂಪು ಅವರ ಸನ್ನಿಧಿಯಲ್ಲಿ

**ಪ್ರೊ|| ತಿಪ್ಪೇಸ್ವಾಮಿ**

ಕನ್ನಡಿಗರ ಕಣ್ಮಣಿಗಳಾಗಿದ್ದ ರಸಋಷಿ ಕುವೆಂಪು ಅವರು ಈ ಶತಮಾನದ ಭಾರತೀಯ ಸಾಹಿತ್ಯ ಕಂಡ ಅಪರೂಪದ ಕವಿಯಾಗಿದ್ದರು. ಶತಮಾನದ ಉತ್ತುಂಗ ಶಿಖರವಾಗಿದ್ದರು, ಮಹೋನ್ನತ ಸಾಹಿತಿಗಳಾಗಿದ್ದರು. ಲೆಕ್ಕವಿಡದಷ್ಟು ಸಭೆ-ಸಮಾರಂಭಗಳಿಗೆಂದು ಇಡೀ ದೇಶ ಸುತ್ತುವ 'ಜಂಗಮ' ಸ್ವಭಾವದಿಂದ ಸದಾಕಾಲ ದೂರ ಉಳಿದಿದ್ದ ಕುವೆಂಪು ದೇಶದ ಬುದ್ಧಿಜೀವಿಗಳ, ಸಾಹಿತಿಗಳ, ಅಂತೆಯೇ ಸಾಮಾನ್ಯರ ಗಮನ ಸೆಳೆದದ್ದು ತಮ್ಮ ಅಸಾಧಾರಣ ಮಹಾಕಾವ್ಯ ಶ್ರೀ ರಾಮಾಯಣ ದರ್ಶನದಿಂದ, ಕವಿತೆಗಳಿಂದ, ಕಾದಂಬರಿ-ಕತೆಗಳಿಂದ, ವೈಚಾರಿಕ ನಿಲುವುಗಳಿಂದ. ಹೀಗಾಗಿ ಕನ್ನಡಬಲ್ಲ ನಮ್ಮಂಥ ಹಿಂದೀ ಅಧ್ಯಾಪಕರು ಹೊರಗೆ ಹೋದಾಗ, ಸಾಹಿತಿ ಮಿತ್ರರನ್ನು ಭೇಟಿಯಾದಾಗ ಕುವೆಂಪು ಸಾಹಿತ್ಯ ಚರ್ಚೆಯ ವಿಷಯವಾಗುತ್ತಿತ್ತು. ಜತೆಗೆ ಮೈಸೂರಿಗೆ ಬಂದ ಯಾವೊಬ್ಬ ಲೇಖಕರೇ ಆಗಲಿ "ಚಾಮುಂಡಿಯ ಜೊತೆ ಜೊತೆಗೆ ಸಾಹಿತ್ಯಲೋಕದ ಈ 'ಹಿಮಗಿರಿ'ಯ ದರ್ಶನಭಾಗ್ಯಕ್ಕಾಗಿ, ಅವರೊಡನೆ ಒಂದಷ್ಟುಹೊತ್ತು ಮಾತನಾಡುವ ಅಪೂರ್ವ ಯೋಗಕ್ಕಾಗಿ ಅಪೇಕ್ಷಿಸುತ್ತಿದ್ದರು. ಹೀಗೆ ಅವರು ನಮ್ಮ ಕುವೆಂಪು ಅವರನ್ನು ನೋಡಲು ಅಪೇಕ್ಷಿಸಿದಾಗ ಸಹಜವಾಗಿಯೇ ನಾವು ಹೆಮ್ಮೆಯಿಂದ ಬೀಗುತ್ತಿದ್ದೆವು.

ಐದಾರು ವರ್ಷಗಳ ಹಿಂದೆ ಹಿಂದಿಯ ಪ್ರಸಿದ್ಧ ಕಾದಂಬರಿಕಾರ, ಕತೆಗಾರ, ಚಿಂತಕ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ವಿಜೇತ ಲೇಖಕರಾದ ನಿರ್ಮಲ್ ವರ್ಮಾ ಮೈಸೂರಿಗೆ ಬಂದಿದ್ದರು. ಅವರು 'ಧ್ವನ್ಯಾಲೋಕ'ದಲ್ಲಿ ತಂಗಿದ್ದರು ಅವರೊಡನೆ ಒಂದೆರಡು ದಿನ ಕಳೆಯುವ, ಚರ್ಚಿಸುವ ಅವಕಾಶ ನನಗೆ ಒದಗಿತ್ತು. ನಮ್ಮ ಭೇಟಿಯ ಮೊದಲ ದಿನವೇ ನಿರ್ಮಲ್ ವರ್ಮಾ ಅವರು ಕುವೆಂಪು ಅವರನ್ನು ನೋಡಬೇಕೆಂಬ ತಮ್ಮ ಅಭೀಪ್ಸೆಯನ್ನು ವ್ಯಕ್ತಪಡಿಸಿದರು. ಹೇಗಾದರೂ ಮಾಡಿ ಅವರ ದರ್ಶನಕ್ಕೆ ವ್ಯವಸ್ಥೆ ಮಾಡಬೇಕೆಂದು ವಿನಂತಿಸಿದರು. ಆದರೆ ಕುವೆಂಪು ಅವರ ಬಳಿ ನಾನೇ ಅವರನ್ನು ಕರೆದುಕೊಂಡು ಹೋಗುವಷ್ಟು ಸಂಪರ್ಕ ನನಗಿರಲಿಲ್ಲ. ಆಗ ಇಂಗ್ಲೀಷ್ ಪ್ರಾಧ್ಯಾಪಕ, ವಿಮರ್ಶಕ ಹಾಗೂ ನನ್ನ ಆತ್ಮೀಯ ಮಿತ್ರರಾದ ಕೆ. ಎಸ್. ಭಗವಾನ್ ನೆನಪಾದರು. ಭಗವಾನ್ ಮತ್ತು ಕುವೆಂಪು ಅವರ ಒಡನಾಟ ನನಗೆ ಗೊತ್ತಿತ್ತು. ಯಾವುದೇ ಪೂರ್ವಾನುಮತಿ ಪಡೆಯದೆ ಕುವೆಂಪು ಅವರ ನಿವಾಸಕ್ಕೆ ಹೋಗುವಷ್ಟು ಸ್ವಾತಂತ್ರ್ಯ

ವನ್ನು ಕುವೆಂಪು ಅವರಿಗೆ ಕೊಟ್ಟಿದ್ದು ನನಗೆ ಗೊತ್ತಿತ್ತು. ಹೀಗಾಗಿ ಭಗವಾನ್ ಅವರೊಂದಿಗೆ ನಿರ್ಮಲ್ ವರ್ಮಾರ ಬಯಕೆಯನ್ನು ಹೇಳಿದಾಗ ತುಂಬ ಸಂತೋಷದಿಂದಲೇ 'ಅದಕ್ಕೇನಂತೆ, ಹೋಗೋಣ' ಎಂದು ಹೇಳಿದ್ದೇ ಕುವೆಂಪು ಅವರ ಮನೆಗೆ ಫೋನ್ ಮಾಡಿ, ನಿರ್ಮಲ್ ವರ್ಮಾರನ್ನು ಕರೆ ತರುತ್ತಿರುವ ವಿಚಾರವನ್ನು ತಿಳಿಸಿದರು. ಕುವೆಂಪು 'ಬನ್ನಿ' ಅಂದರು.

ಸಂಜೆ ನಾಲ್ಕು ಗಂಟೆ. ನಿರ್ಮಲ್ ವರ್ಮಾ ಅವರೊಂದಿಗೆ ಭಗವಾನ್ ಮತ್ತು ನಾನು ಕುವೆಂಪು ಅವರ ನಿವಾಸಕ್ಕೆ ಹೋಗಿ, ಗೇಟ್ ತೆಗೆದು ಒಳಗೆ ಹೋಗಿ ಬಾಗಿಲ ಬಳಿಗೆ ತಲುಪುತ್ತಿದ್ದಂತೆಯೇ, ಕುವೆಂಪು ನಡುಮನೆಯಿಂದ ಹೊರಗೆಬಂದು, 'ಬನ್ನಿ....ಬನ್ನಿ' ಎಂದು ಸ್ವಾಗತಿಸಿ ನಡುಮನೆಗೆ ಕರೆದುಕೊಂಡು ಹೋಗಿ 'ಕೂಡಿ' ಅಂದು ತಾವೂ ಕುಳಿತುಕೊಂಡರು. ನಿರ್ಮಲ್ ವರ್ಮಾ ದೇವರ ಮುಂದೆ ಭಕ್ತ ಕೈಜೋಡಿಸಿ ನಿಲ್ಲುವಂತೆ ತಮ್ಮ ಎರಡು ಕೈಗಳನ್ನು ಜೋಡಿಸಿ ಕೈಮುಗಿದರು. ನಾನು ಮತ್ತು ಭಗವಾನ್ ನಿರ್ಮಲ್ ವರ್ಮಾರನ್ನು ಪರಿಚಯಿಸಿದೆವು. ಕುವೆಂಪು ಅವರು ನಿರ್ಮಲ್ ವರ್ಮಾರನ್ನು ಕುರಿತು 'ನೀವು ಬಂದದ್ದು ತುಂಬಾ ಸಂತೋಷದ ಸಂಗತಿಯಾಗಿದೆ, ಮೈಸೂರು ಏನನ್ನಿಸಿತು?' ಎಂದರು. ಇಬ್ಬರೂ ಉಭಯ ಕುಶಲೋಪರಿ ಮಾತನಾಡಿದರು. ಹಿಂದಿ ಸಾಹಿತ್ಯದ ಇತ್ತೀಚಿನ ಪ್ರವೃತ್ತಿಗಳನ್ನು ಕುರಿತಂತೆ ಕುವೆಂಪು ಕೆಲವು ಮಾಹಿತಿಗಳನ್ನು ಪಡೆದುಕೊಂಡರು. ನಿರ್ಮಲ್ ವರ್ಮಾ ಕುವೆಂಪು ಅವರ ಭೂಮ ವ್ಯಕ್ತಿತ್ವಕ್ಕೆ ಮಾರುಹೋಗಿದ್ದರು. ತುಂಬ ನಮ್ರತೆಯಿಂದ ಅವರ ಪ್ರಶ್ನೆಗಳಿಗೆ ಮಿತವಾದ ಮಾತುಗಳಲ್ಲಿ ಉತ್ತರಿಸಿದರು.

ಸುಮಾರು ಅರ್ಧಗಂಟೆ ಕಾಲದ ಆ ಭೇಟಿ ಅಪೂರ್ವವಾದುದಾಗಿತ್ತು. ಮಾತಿನ ಮಧ್ಯೆ ನಿರ್ಮಲ್ ವರ್ಮಾ 'ಈಗಿನ ಕನ್ನಡ ಸಾಹಿತ್ಯದಲ್ಲಿ ನೀವು ಮೆಚ್ಚುವ ಕವಿಗಳು ಯಾರು?' ಅಂದರು. ಕುವೆಂಪು ಒಂದು ನಿಮಿಷ ಮೌನವಾಗಿದ್ದು 'ಪ್ರೊ. ಶಿವರುದ್ರಪ್ಪ ಮತ್ತು ಪ್ರೊ. ಸುಜನಾರ ಹೆಸರನ್ನು ನೀವು ಕೇಳಿದ್ದೀರಲ್ಲವೆ? ಇವರಿಬ್ಬರೂ ನನ್ನ ಶಿಷ್ಯರು' ಅಂದರು. ಸರಿ, ನಾವು ಹೊರಡಲು ಸಿದ್ಧರಾದೆವು. ನಾನು, 'ಸರ್, ತಮ್ಮ ಜತೆಯಲ್ಲಿ ಒಂದೆರಡು ಫೋಟೋ....' ಅಂದೆ. ಕುವೆಂಪು ಅವರು ಮುಗುಳ್ನಗುತ್ತ ಆಯಿತು ಅಂದು ಸಮ್ಮತಿಸಿದರು. ನಿರ್ಮಲ್ ವರ್ಮಾ ಮತ್ತು ನಾವಿಬ್ಬರೂ ಇನ್ನೊಮ್ಮೆ ಅವರಿಗೆ ವಂದಿಸಿ ಹೊರ ಬಂದಾಗ ಧನ್ಯತೆಯ ಭಾವ ನಮ್ಮೆಲ್ಲರಿಗೂ ಆಗಿತ್ತು.

ಕುವೆಂಪು ನನ್ನ ಪ್ರಿಯ ಕವಿಗಳಲ್ಲೊಬ್ಬರು. ಪ್ರೈಮರಿ ಶಾಲೆಯಿಂದ ಅವರ ಕಾವ್ಯದ ಮೋಡಿಗೆ ಸಿಲುಕದ ಕನ್ನಡಿಗರುಂಟೆ? ಮುಂದೆ, ಬಿ.ಎ. ತರಗತಿಗೆ ಬಂದಾಗ ಅವರ 'ಪಕ್ಷಿಕಾಶಿ' ನಮಗೆ ಪಠ್ಯವಾಗಿತ್ತು. ಈ ಕವಿತೆಗಳ ಪಾಠ ಹೇಳುತ್ತಿದ್ದವರು ಕಳೆದ ಮೈಸೂರು ವಿಶ್ವವಿದ್ಯಾಲಯದ ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆಯ ನಿರ್ದೇಶಕರಾಗಿ ನಿವೃತ್ತರಾದ ಶ್ರೀ ಜೆ. ಎಸ್. ಪರಶಿವಮೂರ್ತಿ ಅವರು. ಈ ಸಂಕಲನ ಕವಿತೆಗಳನ್ನು ಅನುಭವಿಸಿ ಅವರು ಎಷ್ಟು ಮನೋಜ್ಞವಾಗಿ ಪಾಠ ಹೇಳುತ್ತಿದ್ದರೆಂದರೆ ಅವನ್ನು ಕೇಳಲು ವಿದ್ಯಾರ್ಥಿಗಳು ತರಗತಿಗಳಿಗೆ ಮುಗಿಬೀಳುತ್ತಿದ್ದರು. ಹೀಗೆ ಕುವೆಂಪು ಅವರ ಕಾವ್ಯಕೋಶಕ್ಕೆ ಪ್ರವೇಶಿಸಲು ಪಕ್ಷಿಕಾಶಿ ಒಂದು ಗವಾಕ್ಷವಾಯಿತು. ಹಿಂದಿ ವಿಷಯವನ್ನು ತೆಗೆದುಕೊಂಡು ಬಿ.ಎ.

ಮಾಡುತ್ತಿದ್ದ ನನಗೆ ಕನ್ನಡದ ಕುವೆಂಪು ಕಾವ್ಯ ಮಾಡಿದ ಮೋಡಿಯನ್ನು ಹಿಂದಿಯ ಸುಮಿತ್ರಾನಂದನ್ ಪಂತ್ ಅವರ ಕಾವ್ಯ ಮಾಡಿತು. ಕುವೆಂಪು ಕನ್ನಡದ ಗೌರವವಾದರೆ ಪಂತ್ ಹಿಂದಿಯ ಗೌರವವಾಗಿದ್ದರು. ಕನ್ನಡಕ್ಕೆ ಮೊಟ್ಟಮೊದಲು ಜ್ಞಾನಪೀಠ ಪ್ರಶಸ್ತಿಯನ್ನು ಕುವೆಂಪು ತಂದುಕೊಟ್ಟರೆ, ಹಿಂದಿಗೆ ಮೊಟ್ಟಮೊದಲ ಜ್ಞಾನಪೀಠ ಪ್ರಶಸ್ತಿಯನ್ನು ಸುಮಿತ್ರಾನಂದನ್ ಪಂತ್ ತಂದುಕೊಟ್ಟರು. ಹಿಂದಿಯಲ್ಲಿ ಕುವೆಂಪು ಅವರಿಗೆ ಸರಿಸಮಾನರಾಗಿ ನಿಲ್ಲುವ ಕವಿಯೆಂದರೆ ಪಂತ್. ಈ ಮಹಾಕವಿಗಳ ಕಾವ್ಯವನ್ನು ಅಭ್ಯಸಿಸುತ್ತ ಬಂದ ನನಗೆ ಇಬ್ಬರ ಕಾವ್ಯ ಸಂವೇದನೆಯಲ್ಲಿ ಅದ್ಭುತವಾದ ಹಾಗೂ ಬೆರಗುಗೊಳಿಸುವಂಥ ಸಮಾನಾಂಶಗಳು ಕಂಡವು. ಹೀಗಾಗಿ ಎಂ.ಎ. ಆದ ಮೇಲೆ ನನ್ನ ಪಿ.ಎಚ್.ಡಿ ಪದವಿಗೆ ಅಧ್ಯಯನಮಾಡಲು ಡಾ. ಮ.ಸು. ಕೃಷ್ಣಮೂರ್ತಿ ಅವರ ಮಾರ್ಗದರ್ಶನದಲ್ಲಿ ಹೆಸರನ್ನು ನೊಂದಾಯಿಸಿಕೊಂಡು ಕಾರ್ಯಪ್ರವೃತ್ತನಾದೆ. ಈ ಸಂಬಂಧವಾಗಿ ಸುಮಿತ್ರಾ ನಂದನ್ ಪಂತ್ ಅವರನ್ನು ಭೇಟಿಯಾಗಲು ಅಲಹಾಬಾದ್‌ಗೆ ಹೋದೆ. ಮೊದಲ ದಿನ ಪರಿಚಯಮಾಡಿಕೊಂಡು 'ನಾನು ತಮ್ಮ ಹಾಗೂ ನನ್ನ ಭಾಷೆಯ ಮಹಾಕವಿ ಕುವೆಂಪು ಅವರ ಕಾವ್ಯಗಳ ತುಲನಾತ್ಮಕ ಅಧ್ಯಯನ ಮಾಡುತ್ತಿದ್ದೇನೆ' ಅಂದಾಗ ಕುವೆಂಪು ಅವರ ಹೆಸರನ್ನು ಕೇಳಿಯೇ ತುಂಬಾ ಸಂತೋಷಪಟ್ಟರು ಪಂತ್. ಇಬ್ಬರ ಕಾವ್ಯದ ಮೂಲ ಸೆಲೆಗಳನ್ನು, ಪ್ರವೃತ್ತಿಗಳನ್ನು ಬೆಳವಣಿಗೆಯನ್ನು ಹಾಗೂ ಇಲ್ಲಿನ ಸಮಾನಾಂಶಗಳನ್ನು ಹೇಳಿದಾಗ ಆಸಕ್ತಿಯಿಂದ ಕೇಳಿಸಿಕೊಂಡರು. ಅವರೊಡನಿದ್ದ ಐದಾರು ದಿನಗಳ ಕಾಲ ಪಂತ್ ತಮ್ಮ ಬಗೆಗೆ ಮಾತನಾಡಿದ್ದಕ್ಕಿಂತ ಕುವೆಂಪು ಅವರ ಬಗೆಗೆ ತಿಳಿದುಕೊಂಡದ್ದೇ ಹೆಚ್ಚು. ಕವಿಗೆ ಕವಿ ಮೆಚ್ಚುತ್ತಿದ್ದ ಆ ಕ್ಷಣಗಳು ಇಂದಿಗೂ ನನ್ನ ನೆನಪಲ್ಲಿ ಹಸಿರಾಗಿವೆ. ಪಂತ್ ಅವರ ಸಂದರ್ಶನ ಹಾಗೂ ಅವರ ಸ್ವಹಸ್ತಾಕ್ಷರಗಳಲ್ಲಿ ನೀಡಿರುವ ಪ್ರಮಾಣ ಪತ್ರ ನನ್ನ ಅಮೂಲ್ಯ ಸಂಪತ್ತಾಗಿದೆ.

ಈಗ, ಕುವೆಂಪು ಅವರನ್ನು ಭೇಟಿಯಾಗಿ ಅವರ ಸಂದರ್ಶನವನ್ನು ಪಡೆದುಕೊಳ್ಳಬೇಕಿತ್ತು. ಕುವೆಂಪು ಅವರನ್ನು ಹೇಗೆ ಭೇಟಿ ಮಾಡುವುದು ಎಂಬ ಚಿಂತೆಯಲ್ಲಿದ್ದಾಗ ಪ್ರಿಯ ಮಿತ್ರರಾದ ಶ್ರೀ ಭಗವಾನ್ ಅವರು ಮತ್ತೆ ನೆರವಿಗೆ ಬಂದರು. ಭಗವಾನ್ ಅವರಿಗೆ ಕುವೆಂಪು ಅವರ ಮನೆಗೆ ಹೋಗುವುದೆಂದರೆ ಎಲ್ಲಿಲ್ಲದ ಸಂಭ್ರಮ. ಬೇರೆ ಎಷ್ಟೆ ಕೆಲಸಗಳಿದ್ದರೂ ಅವನ್ನು ಪಕ್ಕಕ್ಕೆ ಸರಿಸಿ ಕುವೆಂಪು ಅವರ ಮನೆಗೆ ಹೋಗುವಷ್ಟು ಆಸ್ಥೆ ಅವರಿಗೆ. ನನ್ನ ಉದ್ದೇಶ ಮತ್ತು ಚರ್ಚೆಯ ಬಗೆಗೆ ಹೇಳಿದಾಗ, ಭಗವಾನ್ ಅವರು 'ಬನ್ನಿ ಹೋಗೋಣ' ಎಂದು, ಮೊದಲೇ ಫೋನಿನಲ್ಲಿ ಮಾತನಾಡಿ, ವೇಳೆಯನ್ನು ನಿರ್ಧರಿಸಿದರು. ಆ ಸಮಯಕ್ಕೆ ಸರಿಯಾಗಿ ನಾನು ಮತ್ತು ಭಗವಾನ್ ಕುವೆಂಪು ಅವರ ಮನೆಗೆ ಹೋದಾಗ ಅವರು ಬೆತ್ತದ ಕುರ್ಚಿಯಲ್ಲಿ ಕುಳಿತು ವಿರಮಿಸಿಕೊಳ್ಳುತ್ತಿದ್ದರು. ನಾನು ಸಾಷ್ಟಾಂಗ ನಮಸ್ಕರಿಸಿದೆ. ಅವರು ಪ್ರೀತಿಯಿಂದ 'ಬನ್ನಿ ಕುಳಿತ್ಕೊಳ್ಳಿ' ಅಂದರು. 'ಭಗವಾನ್ ಅವರನ್ನು ಉದ್ದೇಶಿಸಿ—'ಭಗವಾನ್, ಹೇಗಿದ್ದೀರಿ: ನೋಡಿ.ತುಂಬ ದಿನಗಳಾದುವಲ್ಲ?' ಎಂದು ಮೃದುವಾಗಿ ಆಕ್ಷೇಪಿಸಿದರು. ಭಗವಾನ್ ಒಂದು ನಿಮಿಷ ಸುಮ್ಮನಿದ್ದು,

ನಂತರ 'ಸರ್, ಇವರು ತಿಪ್ಪೇಸ್ವಾಮಿ ಅಂತ. ಗಂಗೋತ್ರಿಯಲ್ಲಿ ಹಿಂದಿ ಅಧ್ಯಾಪಕ ರಾಗಿದ್ದಾರೆ. ಪಿ.ಎಚ್.ಡಿ.ಗಾಗಿ ತಮ್ಮ ಹಾಗೂ ಹಿಂದಿಯ ಸುಮಿತ್ರಾನಂದನ್ ಪಂತ್‌ರ ಕಾವ್ಯಗಳ ತುಲನಾತ್ಮಕ ಅಧ್ಯಯನ ನೆಡೆಸುತ್ತಿದ್ದಾರೆ, ತಮ್ಮ ಸಂದರ್ಶನ ಮಾಡ ಬೇಕು ಅಂದರು, ಕರೆದುಕೊಂಡು ಬಂದೆ ಎಂದು ಹೇಳಿದರು. ಕುವೆಂಪು ಅವರು ನನ್ನ ಕಡೆ ನೋಡಿದರು, ನೋಡುತ್ತ 'ನೋಡಿ ಭಾರತೀಯ ಸಾಹಿತ್ಯ ಅಂದ್ರೆ ಅದೊಂದು ಸಮಷ್ಟಿ ಧ್ವನಿ. ನಾವು ಬೇರೆ ಬೇರೆ ಭಾಷೆ ಗಳಲ್ಲಿ ಬರೆಯುತ್ತಿದ್ದರೂ ನಮ್ಮ ಚಿಂತನೆಯ ಮೂಲ ಸೆಲೆ ಹೆಚ್ಚು–ಕಡಿಮೆ ಒಂದೇ ಆಗಿದೆ. ಇದನ್ನು ಬೇರೆ ಬೇರೆ ಭಾಷೆ ಗಳಲ್ಲಿ ನಮ್ಮ ಕವಿಮಿತ್ರರು ಹೇಗೆ ಅಭಿ ವ್ಯಕ್ತಿಸಿದ್ದಾರೆ ಎಂಬುದನ್ನು ನಾವು ಅವಶ್ಯ ತಿಳಿದುಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದ ಇವತ್ತು ತುಲನಾತ್ಮಕ ಅಧ್ಯಯನಗಳು ಆಗಬೇಕು. ನೀವು ಒಳ್ಳೆಯ ಕೆಲಸ ಮಾಡು ತ್ತಿದ್ದೀರಿ' ಎಂದು ನುಡಿದರು. ಆ ಮೇಲೆ ಪಂತ್ ಅವರ ಬಗೆಗೆ ವಿಚಾರಿಸಿಕೊಂಡರು. ತಮ್ಮ ಹಾಗೂ ಪಂತ್ ಅವರ ಕಾವ್ಯದಲ್ಲಿನ ಸಮಾನ ಬಿಂದುಗಳಾವುವು ಎಂಬುದನ್ನು ಆಸಕ್ತಿಯಿಂದ ಕೇಳಿದರು. ನಾನು ಹೇಳುತ್ತಾ ಹೋದೆ. ಕುವೆಂಪು ಅವರು ತಲೆದೂಗುತ್ತ 'ಹಾಗಾ? ಹಾಗಾ?' ಅನ್ನುತ್ತಿದ್ದರು.

ನಾನು ಮೊದಲೇ ತಯಾರುಮಾಡಿ ಕೊಂಡು ಹೋಗಿದ್ದ ಪ್ರಶ್ನಾವಳಿಯನ್ನು ಅವರ ಕೈಗಿಟ್ಟೆ. ಅದರ ಮೇಲೆ ಕಣ್ಣಾಡಿಸಿ, 'ನೀವು ಪ್ರಶ್ನೆಗಳನ್ನು ಕೇಳುತ್ತ ಹೋಗಿ, ನಾನು ಉತ್ತರಿಸುತ್ತೇನೆ' ಅಂದರು. ನಾನು ಮೊದಲ ಪ್ರಶ್ನೆಯಾಗಿ, 'ಸರ್, ಪಂತ್ ಅವರಿಗೆ ಅಲ್ಮೋಡಾ, ನಿಮಗೆ ಮಲೆನಾಡು. ಮಲೆನಾಡು ನಿಮ್ಮ ಸೃಷ್ಟಿಕ್ರಿಯೆ ಎಂಥ ಪ್ರಭಾವ ಬೀರಿತು?' ಎಂಬ ಆಶಯದ ಪ್ರಶ್ನೆಯನ್ನು ಕೇಳಿದೆ, ಕುವೆಂಪು ಮಲೆನಾಡ ಹೆಸರನ್ನು ಕೇಳುತ್ತಿದ್ದಂತೆಯೇ ಕುರ್ಚಿಗೆ ಒರಗಿದ್ದವರು ಮುಂದಕ್ಕೆ ಬಾಗಿದರು. ನನ್ನ 'ಪಕ್ಷಿಕಾಶಿ' ಓದಿದ್ದೀರಲ್ಲ? ಎಂದು ಕೇಳಿ, ಎದ್ದು ಒಳಗೆ ಹೋಗಿ 'ಪಕ್ಷಿಕಾಶಿ'ಯ ಪ್ರತಿ ಯೊಂದನ್ನು ತಂದು ಮಲೆನಾಡಿನ ಕವಿಶೈಲ, ಸೂರ್ಯೋದಯ, ವನಸಿರಿಯ ಸೌಂದರ್ಯ ವನ್ನು ಪುನರನುಭವಿಸುತ್ತ, ಅಲ್ಲಿನ ಕವಿತೆ ಗಳನ್ನು ಅಲ್ಲಲ್ಲಿ ಓದಿ ವ್ಯಾಖ್ಯಾನಿಸುತ್ತ ರಸ ವಶರಾದರು. ಮುಂದೆ ನನ್ನ ಇನ್ನೊಂದೆರಡು ಪ್ರಶ್ನೆಗಳಿಗೆ ಉತ್ತರಿಸಿದರು. 'ದೇವರು ರುಜು ಮಾಡಿದನು' ಕವಿತೆಯನ್ನು ಓದಿದರು.

ಅಷ್ಟು ಹೊತ್ತಿಗಾಗಲೇ ಸಂಜೆಯಾಗಿತ್ತು. ಕುವೆಂಪು ಅವರಿಗೆ ಹೆಚ್ಚು ಶ್ರಮವಾಗಬಾರ ದೆಂದು ನಾನು ಮತ್ತು ಭಗವಾನ್ ಕಣ್ಣಿ ನಲ್ಲೇ ಮಾತನಾಡಿಕೊಂಡು ಎದ್ದೆವು. ನಮಸ್ಕರಿಸಿದೆವು, 'ಮತ್ತೆ ಬನ್ನಿ ಮಾತ ನಾಡೋಣ' ಅಂದರು ಕುವೆಂಪು.

ನನ್ನ ಈ ಎರಡು ಭೇಟಿಗಳಲ್ಲಿ ಕುವೆಂಪು ಅವರ ದಿವ್ಯ ಸನ್ನಿಧಿಯನ್ನು ಆನಂದಿಸಿ ದ್ದೇನೆ. ಈ ಯುಗದ ಮಹಾನ್ ಚೇತನ ಹಾಗೂ ಹಿಮಗಿರಿಯೊಂದಿಗೆ ನಾನೂ ಮಾತನಾಡಿದ್ದೇನೆ ಎಂಬ ನೆನಪೇ ಒಂದು ಅನುಭವ. ಕುವೆಂಪು ಅವರ ಭೌತಿಕ ದೇಹ ಈಗಿಲ್ಲ, ಅಷ್ಟೆ. ಆದರೆ ಅವರನ್ನು ಕಂಡವರ ಮತ್ತು ಓದಿದವರ ಹೃದಯ ಮಂದಿರಗಳಲ್ಲಿ ಕುವೆಂಪು ಇದ್ದಾರೆ, ಸದಾ ಕಾಲಕ್ಕೂ ಇರುತ್ತಾರೆ.

# ಅನಂತತೆಯ ದರ್ಶನ

ಲತಾ ರಾಜಶೇಖರ್

ವಿಶ್ವಸಾಹಿತ್ಯಾಗಸದ ರವಿ, ಜಗದ ಕವಿ, ಯುಗದ ಕವಿ ರಸಋಷಿ ಕುವೆಂಪು ಅವರು ಕನ್ನಡದ ಪುಣ್ಯವಾಗಿದ್ದರು, ಭುವನದ ಭಾಗ್ಯವಾಗಿದ್ದರು. ಅವರ ಬದುಕು ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿಗೆ ನಿದರ್ಶನ. ಅವರ ಬರಹ ವಿಶ್ವಮಾನವತ್ವ, ಅನಿಕೇತನ ತತ್ವಗಳನ್ನೊಳಗೊಂಡ ಒಂದು ವಿಶಿಷ್ಟ ದರ್ಶನ; ಎಲ್ಲ ತತ್ವದ ಎಲ್ಲೆ ಮೀರಿದ ಅನಂತತೆಯ ಸಂದರ್ಶನ.

ಇಂಥ ಮಹಾ ಚೇತನ, ವಿಶ್ವಾತ್ಮರಾದ ದಾರ್ಶನಿಕ ಕವಿ ಕುವೆಂಪು ಅವರನ್ನು ಅವರು ಬದುಕಿದ್ದಾಗ ಕಾಣುವ, ಅವರ ಸನಿಹದಲ್ಲಿ ಕುಳಿತು ಅವರ ಮಾತನ್ನು ಕೇಳುವ ಸುವರ್ಣಾವಕಾಶ ಕಿಂಚಿತ್ತಾದರೂ ನನಗೆ ಲಭ್ಯವಾಗಿದ್ದು ತುಂಬು ಅಭಿಮಾನದ, ಅನನ್ಯ ಧನ್ಯತೆಯ ಸಂಗತಿ.

ಬಾಲ್ಯದಿಂದಲೂ ನಾನು ಕುವೆಂಪು ಅವರ ಕವಿತೆಗಳನ್ನು ಪತ್ರಿಕೆ ಪುಸ್ತಕಗಳಲ್ಲಿ ಓದುತ್ತಿದ್ದೆ. ಹೈಸ್ಕೂಲಿಗೆ ಬಂದಾಗ ಅವರ 'ಕಾನೂರು ಹೆಗ್ಗಡತಿ' ಕಾದಂಬರಿಯನ್ನು ಓದಿದೆ. ನನ್ನ ಸುಪ್ತ ಮನಸ್ಸಿನಲ್ಲಿ ಕುವೆಂಪು ಅವರ ಪ್ರಭಾವ ಗುಪ್ತಗಾಮಿನಿಯಾಗಿ ಪ್ರವಹಿಸತೊಡಗಿತು. ನನ್ನ ಹದಿನೈದನೇ ವಯಸ್ಸಿನ ಹೊತ್ತಿಗೆ ಕವಿತೆಗಳನ್ನೂ, ಸಣ್ಣ ಕತೆಗಳನ್ನೂ ಬರೆಯಲಾರಂಭಿಸಿದೆ. ನಾನು ಆಗ ಪಿ.ಯು.ಸಿ ತರಗತಿಯಲ್ಲಿ ಓದುತ್ತಿದ್ದೆ. ಕುವೆಂಪು ಅವರ ಬಗೆಗೆ ಪತ್ರಿಕೆಗಳಲ್ಲಿ, ಪುಸ್ತಕಗಳಲ್ಲಿ ಓದುತ್ತಿದ್ದೆ. ಅವರ 'ಶ್ರೀ ರಾಮಾಯಣ ದರ್ಶನಂ' ಕೃತಿಯ ಬಗ್ಗೆ ಬಹಳವಾಗಿ ಕೇಳಿದ್ದ ನನಗೆ ಅದನ್ನು ಓದಬೇಕೆಂದು ಅನ್ನಿಸಿತು.

ಆಗ ನಾವು ಹುಣಸೂರಿನಲ್ಲಿ ಇದ್ದೆವು. ಇಂಜನಿಯರ್ ಆಗಿದ್ದ ನಮ್ಮ ತಂದೆಯವರಿಗೆ ಅಲ್ಲಿಗೆ ವರ್ಗವಾಗಿತ್ತು. ನಮ್ಮ ತಂದೆಗೆ ಹೇಳಿ 'ಶ್ರೀ ರಾಮಾಯಣ ದರ್ಶನಂ' ಅನ್ನು ಮೈಸೂರಿನಿಂದ ತರಿಸಿಕೊಂಡೆ. ಅದನ್ನು ನೋಡಿ ನನಗೆಷ್ಟು ಸಂತೋಷವಾಯಿತೆಂದು ಹೇಗೆ ಹೇಳುವುದು ? ಆನಂದದಿಂದ ನಾನು ಪುಳಕಿತಳಾಗಿದ್ದೆ.

ಶ್ರೀ ರಾಮಾಯಣದರ್ಶನಂ ಅಂಥ ಮಹತ್ ಕೃತಿಯನ್ನು ಸಾಧಾರಣವಾದ ರೀತಿಯಲ್ಲಿ ಸಾಮಾನ್ಯವಾದ ಹಗಲಲ್ಲಿ ಓದುವುದೆ?! ಹಾಗೆ ಮಾಡುವುದು ನನಗೆ ಸರಿ ಕಾಣಲಿಲ್ಲ. ಮನಸ್ಸಿಗೆ ಮುದ ನೀಡುವ, ಚೇತೋಹಾರಿಯಾದ ಮುಂಜಾನೆ ಹಾಗೂ ಏಕಾಗ್ರತೆಗೆ ಭಂಗತಾರದ ಬೆಳದಿಂಗಳ ರಾತ್ರಿಗಳಲ್ಲಿ ಮನೆಯ ಹಿಂದಿನ ಕಾಂಪೌಂಡಿನಲ್ಲಿ ಕುಳಿತು ಬಹಳ ಭಕ್ತಿ ಶ್ರದ್ಧೆ, ಆಸಕ್ತಿಗಳಿಂದ

ಅದನ್ನು ಓದತೊಡಗಿದೆ. ಸರಿಯಾಗಿ ಗೊತ್ತಾಗದೆ ಹೋದ ಭಾಗಗಳನ್ನು ಎರಡೆರಡು ಸಲ ಓದಿ ತಿಳಿದುಕೊಳ್ಳುತ್ತಿದ್ದೆ. ಅದೊಂದು ಬಹಳ ಸುಂದರವಾದ ಅನುಭವ. ಕನಸು ತುಂಬಿದ ಕಣ್ಣುಗಳಿಂದ ಕಾವ್ಯ ದರ್ಶನವನ್ನು ಪಡೆಯುವ ವಿಶಿಷ್ಟ ಅನುಭವ, ಹೀಗೆ 'ಶ್ರೀ ರಾಮಾಯಣ ದರ್ಶನಂ' ಮಹಾ ಕಾವ್ಯವನ್ನು ನಾನು ಆ ಎಳೆಯ ವಯಸ್ಸಿನಲ್ಲಿ ಎರಡು ಸಲ ಓದಿ ಮುಗಿಸಿದಾಗ ಬದುಕು ಸಾರ್ಥಕ ಅನಿಸಿತ್ತು.

ಮುಂದೆ ಕುವೆಂಪು ಅವರು ಬರೆದ 'ಶ್ರೀ ರಾಮಕೃಷ್ಣ ಪರಮಹಂಸ', 'ಸ್ವಾಮಿ ವಿವೇಕಾನಂದ' ಜೀವನ ಚರಿತ್ರೆಗಳನ್ನು ಓದಿದೆ. ಇವು ನನ್ನೊಳಗಿನ ಅಧ್ಯಾತ್ಮಿಕ ಹಂಬಲವನ್ನು ಚಿಗುರಿಸಿದವು. ಅನಂತರ ಶ್ರೀ ಕುವೆಂಪು ಅವರ ಹೆಸರು ನನಗೆ ನಿತ್ಯ ಮಂತ್ರವಾಯಿತು. ಒಂದು ಸಲ ಮನೆಯ ಹಿಂದೆ ಮಣ್ಣಲ್ಲಿ 'ಕುವೆಂಪು' ಎಂದು ಬರೆದು ಅದಕ್ಕೆ ಮೆಂತ್ಯದ ಬೀಜಗಳನ್ನು ಉದುರಿಸಿದೆ. ಮೆಂತ್ಯದ ಗಿಡಗಳು ಸೊಂಪಾಗಿ ಬೆಳೆದು ನಿಂತಾಗ ಆ ಮಹಾ ಕವಿ ಚೇತನ ನನ್ನ ಕಣ್ಣಮುಂದೆಯೇ ಬಂದು ನಿಂತಂತೆ ಅನ್ನಿಸಿ ಸಂತಸಪಟ್ಟಿದ್ದೆ. ನಾನು ಅದುವರೆಗೂ ನೋಡದ ಕುವೆಂಪು ಅವರನ್ನು ಏಕಲವ್ಯನಂತೆ ನಾನು ಆರಾಧಿಸತೊಡಗಿದೆ.

ಅನಂತರ ಸ್ವಲ್ಪ ಕಾಲದಲ್ಲಿ ನನ್ನ ವಿವಾಹವಾಯಿತು. ಮೈಸೂರಿನಲಿದ್ದ ನನ್ನ ಪತಿ ಡಾ. ರಾಜಶೇಖರ್ ಅವರೊಂದಿಗೆ ನಾನು ನೆಲೆಸಿದೆ. ಆ ಸಮಯದಲ್ಲಿ ಒಂದು ಸಲ ನಾವು ಇಲ್ಲಿನ ರಾಮಕೃಷ್ಣಾಶ್ರಮಕ್ಕೆ ಹೋದೆವು. ನಾವು ಅಲ್ಲಿಗೆ ಹೋಗುವುದಕ್ಕೂ ಕುವೆಂಪು ಅವರು ತಮ್ಮ ಕಾರಿನಲ್ಲಿ ಗೇಟಿನಿಂದ ಹೊರಗೆ ಬರುವುದಕ್ಕೂ ಒಂದೇ ಆಯಿತು. ನನಗೆ ಅದು ಕುವೆಂಪು ಅವರ ಕಾರು ಎಂದು ಗೊತ್ತಾಗಲಿಲ್ಲ. ಡಾ. ರಾಜಶೇಖರ್ ಅವರು 'ನೋಡು, ಕುವೆಂಪು ಹೋಗುತ್ತಿದ್ದಾರೆ' ಎಂದು ಕಾರಿನ ಕಡೆಗೆ ಕೈ ತೋರಿಸಿದರು. ಆಶ್ಚರ್ಯದಿಂದ ತಕ್ಷಣ ಆ ಕಡೆ ನೋಡಿದೆ. ಬೆಳ್ಳಿ ತಲೆಗೂದಲಿನ, ತುಂಬು ಚೆಲುವಿನ ಸ್ನಿಗ್ಧ ನಗೆಯ ಸಿರಿ ಮೊಗ ನನ್ನ ಕಣ್ಣು ತುಂಬಿತು. ಕುವೆಂಪು ಅವರೇ ಕಾರನ್ನ ಡ್ರೈವ್ ಮಾಡುತ್ತಿದ್ದರು. ಅದು ಒಂದು ಕ್ಷಣ ಮಾತ್ರ ಮರುಗಳಿಗೆಯಲ್ಲಿ ಕಾರು ಮುಂದೆ ಸರಿದು ಮರೆಯಾಯಿತು. ಆ ತೇಜಃಪುಂಜ ವದನ ನನ್ನ ಕಣ್ಣೆದುರು ಮಿಂಚಿ ಮಾಯವಾಗಿತ್ತು. ಆ ಅದ್ಭುತ ತೇಜಸ್ಸಿನ ಮುಖ ಇನ್ನೂ ನನ್ನ ಕಣ್ಣಿಗೆ ಕಟ್ಟಿದಂತಿದೆ.

ಕೆಲವು ವರ್ಷಗಳ ನಂತರ ನಾನು ಮತ್ತೆ ಬರೆಯಲು ಪ್ರಾರಂಭಿಸಿದೆ. ಕುವೆಂಪು ಅವರನ್ನು ಕಂಡು, ಮಾತಾಡಿಸಬೇಕೆಂಬ ಹಂಬಲ ತೀವ್ರವಾಗುತ್ತಿತ್ತು. ಸುಮಾರು ಆರೇಳು ವರ್ಷಗಳ ಹಿಂದೆ ನಾನು, ಡಾ. ರಾಜಶೇಖರ್ ಇಬ್ಬರೂ ಅವರನ್ನೂ ನೋಡಲೆಂದು ಉದಯರವಿಗೆ ಹೋದೆವು. ಹಿಂದಿನ ದಿನವೇ ಅವರ ಮನೆಗೆ ಫೋನ್ ಮಾಡಿ ನಾವು ಅವರನ್ನ ಕಾಣಲು ಬರುವ ವಿಚಾರವನ್ನು ಅವರ ಮಗಳು ಶ್ರೀನುತಿ ತಾರಿಣಿ ಅವರಿಗೆ ಹೇಳಿದೆ. ಅವರು ಮರುದಿನ ಬೆಳಗ್ಗೆ ೯ ಗಂಟೆಯ ಹೊತ್ತಿಗೆ ಬರಲು ತಿಳಿಸಿದರು. ಅದರಂತೆ ಅಲ್ಲಿಗೆ ಹೋದಾಗ ಕುವೆಂಪು ಅವರು ವರಾಂಡದ ಒಂದು ಸೋಫಾದ ಮೇಲೆ ಕುಳಿತಿದ್ದರು. ಶುಭ್ರ ಶ್ವೇತ ವಸ್ತ್ರಧಾರಿಗಳಾಗಿದ್ದ ಅವರು ಉದಾ ಬಣ್ಣದ

ಸ್ವೆಟರ್ ಹಾಕಿದ್ದರು. ದೈಹಿಕವಾಗಿ ಸಾಕಷ್ಟು ದುರ್ಬಲರಾಗಿದ್ದರೂ ಮುಖದಲ್ಲಿ ಬೆಳದಿಂಗಳ ಕಾಂತಿ ಹರಡಿತ್ತು, ಶಾಂತಿ ನೆಲೆಸಿತ್ತು.

ನಾವು ಅವರಿಗೆ ನಮಸ್ಕರಿಸಿ ಕುಳಿತೆವು. ಅವರು ಹೂವು ಅಲುಗಿದಷ್ಟು ಮೃದುವಾಗಿ ಮಾತಾಡಿದರು. ಅವರಿಗೆ ನಮ್ಮ ಪರಿಚಯ ಮಾಡಿಕೊಂಡೆವು. ಅವರು ನಿಧಾನವಾಗಿ, ಸ್ಪಷ್ಟವಾಗಿ, ತುಂಬ ಮೃದುವಾಗಿ ಮಾತಾಡುತ್ತಿದ್ದರು. ಅವರು ತಾವು ನೀಡಿರುವ ವಿಶ್ವಮಾನವ ಸಂದೇಶದ ಬಗ್ಗೆ ಹೇಳಿದರು. ಅದರ ಅವಶ್ಯಕತೆ, ಮಹತ್ವವನ್ನು ಕುರಿತು ಸ್ವಲ್ಪ ಹೊತ್ತು ಮಾತಾಡಿದರು. ನಮಗೆ ವಿಶ್ವಮಾನವ ಸಂದೇಶದ ಕೆಲವು ಪ್ರತಿಗಳನ್ನು ನೀಡಿ, ಸಾಧ್ಯವಾದರೆ ಇದನ್ನು ಪ್ರಕಟಿಸಿ, ಜನರಿಗೆ ಹಂಚಲು ತಿಳಿಸಿದರು. ಅನಂತರ ಒಂದು ಸಲ ಅವರ ಬಳಿಗೆ ಬಂದ ಚಿಕ್ಕ ಮಗು ವಿಶ್ವಮಾನವ ಗೀತೆಯನ್ನು ಬಹಳ ಚೆನ್ನಾಗಿ ಹಾಡಿದ್ದನ್ನು ಬಹಳ ಸಂತೋಷದಿಂದ ಸ್ಮರಿಸಿಕೊಂಡರು. ವಿಶ್ವಮಾನವ ಸಂದೇಶ ಆದಷ್ಟೂ ಹೆಚ್ಚು ಜನರನ್ನು ತಲುಪಬೇಕು. ನಾವೆಲ್ಲರೂ ವಿಶ್ವಮಾನವರಾಗಬೇಕು ಎಂಬ ತಮ್ಮ ಅಪೇಕ್ಷೆಯನ್ನು ವ್ಯಕ್ತಪಡಿಸಿದರು. ಹೀಗೆ ಸುಮಾರು ಅರ್ಧಗಂಟೆಗಳ ಕಾಲ ನಾವು ಅವರೊಂದಿಗೆ ಇದ್ದೆವು.

ಅಲ್ಲಿಂದ ಹೊರಡುವ ಮೊದಲು ನಮ್ಮ ಕ್ಯಾಮರಾದಲ್ಲಿ ಕುವೆಂಪು ಅವರೊಡನೆ ನಿಂತು ಕೆಲವು ಫೋಟೋಗಳನ್ನು ತೆಗೆದು ಕೊಳ್ಳಲು ಹೋದೆವು ಆದರೆ ಹಾಗೆ ಮಾಡಿದರೆ ಕ್ಯಾಮರಾದ ಫ್ಲಾಶ್ ಲೈಟಿನಿಂದಾಗಿ ಕುವೆಂಪು ಅವರ ಕಣ್ಣಿಗೆ ತೊಂದರೆ ಆಗುವುದೆಂದು ತಿಳಿಯಿತು. ನಮಗೆ ನಿರಾಶೆಯಾಗಿತ್ತು. ಆದರೆ ಅಷ್ಟರಲ್ಲಿ ಅಲ್ಲಿಗೆ ಬಂದ ಡಾ. ಚಿದಾನಂದಗೌಡ ಅವರು ನಮ್ಮ ಮನದಿಂಗಿತವನ್ನು ತಿಳಿದು ಕೆಲವು ಫೋಟೋವನ್ನು ತೆಗೆಯಲು ಅವಕಾಶ ಮಾಡಿಕೊಟ್ಟರು. ಶ್ರೀ ಕುವೆಂಪು ಅವರು ಮೌನವಾಗಿ ತಮ್ಮ ಸಮ್ಮತಿಯನ್ನು ಸೂಚಿಸಿದರು. ಡಾ. ಚಿದಾನಂದಗೌಡರು ನಮ್ಮಿಬ್ಬರನ್ನು ಅವರ ಬಳಿ ನಿಲ್ಲಿಸಿ ಕೆಲವು ಫೋಟೋಗಳನ್ನು ತೆಗೆದರು. ಶ್ರೀ ಚಿದಾನಂದ ಅವರ ವಿಶ್ವಾಸ, ಔದಾರ್ಯಗಳ ಕುರುಹಾಗಿ ಆ ಭಾವಚಿತ್ರಗಳು ಇಂದು ನಮ್ಮೊಡನೆ ಇವೆ. ನಾವು ಕುವೆಂಪು ಅವರಿಗೆ ನಮಸ್ಕರಿಸಿ ಅಲ್ಲಿಂದ ಹೊರಟಾಗ ಬಹಳ ಕಾಲದ ಬಯಕೆಯೊಂದು ಈಡೇರಿದ ಸಂತೃಪ್ತಿ, ಧನ್ಯತೆಯ ಭಾವ ನಮ್ಮ ಹೃದಯವನ್ನು ತುಂಬಿ ಕೊಂಡಿತ್ತು.

ಇನ್ನೊಂದು ಸಲ ನನ್ನ ಮೊದಲ ಕವನ ಸಂಕಲನ 'ಕೋಗಿಲೆ ಕೂಗಿದಂತೆ' ಕೃತಿಗೆ 'ರಾಷ್ಟ್ರಕವಿ ಕುವೆಂಪು ಸಾಹಿತ್ಯ ಪ್ರಶಸ್ತಿ' ದೊರಕಿತು. ಆಗ ಪ್ರಶಸ್ತಿ ಪ್ರಧಾನ ಸಮಾರಂಭದ ದಿನ, ಕೆಲವು ಮಿತ್ರರೊಂದಿಗೆ ಹೋಗಿ ಅವರನ್ನು ಕಂಡೆ. ಆ ಕವನ ಸಂಕಲನವನ್ನೂ ಅವರಿಗೆ ನೀಡಿ ನಮಸ್ಕರಿಸಿದೆ. ಅವರು ಪುಸ್ತಕವನ್ನು ನೋಡಿ, ಪುಟಗಳನ್ನು ತಿರುವಿಹಾಕಿದರು. ಅನಂತರ "ನಿಮಗೆ ಒಳ್ಳೆಯದಾಗಲಿ" ಎಂದು ಆಶೀರ್ವದಿಸಿದರು. ಅವರ ಆಶೀರ್ವಾದದ ಅಮೃತವನ್ನು ಎದೆಯಲ್ಲಿ ತುಂಬಿಕೊಂಡು ಅಲ್ಲಿಂದ ಹಿಂತಿರುಗಿದ್ದೆ.

ಅನಂತರ ಕುವೆಂಪು ಅವರನ್ನು ಅವರು ಬದುಕಿದ್ದಾಗ ಮತ್ತೆ ನಾನು ನೋಡಲಾಗ

ಲಿಲ್ಲ. ನವೆಂಬರ್ ಹತ್ತನೇ ತಾರೀಕಿನಂದು ಅವರು ತೀರಿಕೊಂಡ ಸುದ್ದಿ ಕೇಳಿ ನನಗೆ ದುಃಖವಾಯಿತು. ಅವರ ಸಾವು ಒಂದು ರೀತಿಯಲ್ಲಿ ನಿರೀಕ್ಷಿತವೇ ಆಗಿದ್ದರೂ ನನಗೆ ಒತ್ತಿ ಬಂದ ದುಃಖವನ್ನು ತಡೆಯಲಾಗ ಲಿಲ್ಲ. ಉದಯರವಿಗೆ ಹೋಗಿ ಕುವೆಂಪು ಅವರ ಅಂತಿಮ ದರ್ಶನ ಪಡೆದೆ. ಆ ದಿನ ಅಲ್ಲಿಗೆ ಅಲೆ ಅಲೆಯಂತೆ ಸಾಗಿ ಬರುತ್ತಿದ್ದ ಶೋಕತಪ್ತ ಜನಸಾಗರ, ಮೈಲುದ್ದದ ಸಾಲುಗಳಲ್ಲಿ ಕಾದು ಮಹಾ ಕವಿಯ ಅಂತಿಮ ದರ್ಶನ ಪಡೆಯುತ್ತಿದ್ದ ಜನರು.... ಮಕ್ಕಳಿಂದ ಹಿಡಿದು ವೃದ್ಧರವರೆಗೆ, ಸಾಮಾನ್ಯರಿಂದ ಹಿಡಿದು ಅತಿಗಣ್ಯರವರೆಗೆ ಸಮಾಜದ ಎಲ್ಲ ವಯಸ್ಸಿನ, ಎಲ್ಲ ವರ್ಗದ ಜನ ಅಲ್ಲಿಗೆ ಬಂದಿದ್ದರು. ಅವರೆಲ್ಲರ ಪಾಲಿಗೆ ಕುವೆಂಪು ದೇವಮಾನವರಾಗಿದ್ದರು. ಮಹೋನ್ನತ ವ್ಯಕ್ತಿತ್ವದ ಮಹಾಪುರುಷ ರಾಗಿದ್ದರು....

ಮರುದಿನ ಮಲೆನಾಡಿನ ಪ್ರಕೃತಿಯ ಮಡಿಲಾದ ಕವಿಶೈಲದಲ್ಲಿ ಅವರ ಅಂತಿಮ ಸಂಸ್ಕಾರ ನಡೆಯಿತು. ಅವರ ಚಿತೆಗೆ ಅಗ್ನಿ ಸ್ಪರ್ಶವಾದಾಗ ನನ್ನ ಕಣ್ಣಲ್ಲಿ ನೀರು ಹರಿ ಯಿತು. ಸಾಹಿತ್ಯಾಕಾಶದ ಅಗಣಿತ ತಾರಾ ಗಣಗಳ ನಡುವಿನ ಧ್ರುವತಾರೆಯಾಗಿದ್ದ ಅವರನ್ನು ಕಳೆದುಕೊಂಡ ನನ್ನನ್ನು ಒಂದು ಬಗೆಯ ಅನಾಥ ಪ್ರಜ್ಞೆಯ ಕತ್ತಲು ಆವರಿ ಸಿತು. ಕುವೆಂಪು ಅವರನ್ನು ನಾನು ಕೆಲವೇ ಸಲ ನೋಡಿದ್ದರೂ, ಅವರೊಂದಿಗೆ ಕೆಲವೇ ಮಾತುಗಳನ್ನಷ್ಟೆ ಆಡಿದ್ದರೂ ಪರಮಗುರು ಸ್ವರೂಪರಾದ ಅವರ ಬಗ್ಗೆ ನನಗಿದ್ದ ಭಾವ ನಾತ್ಮಕ ಸಂಬಂಧ, ವಾತ್ಸಲ್ಯ ಬಂಧ ಅತ್ಯಂತ ಗಾಢವಾದುದು. ಕುವೆಂಪು ಅವರ ನೆನಪು ನನ್ನ ಭಾವಕೋಶದ ಒಂದು ಅವಿಭಾಜ್ಯ ಅಂಗವೂ ಹೌದು.

ಕವಿಶೈಲದಿಂದ ಹಿಂತಿರುಗುವಾಗ ದಾರಿ ಯಲ್ಲಿ ಕುವೆಂಪು ಅವರನ್ನು ಸ್ಮರಿಸುತ್ತ ಪೂಜ್ಯ ದೇಜಗೌ ಅವರು "ಕುವೆಂಪು ಅವರು ಈಗನಮ್ಮೊಡನೆ ಇಲ್ಲ. ಆದರೆ ಅಮರರವಾದ ಅವರ ದಿವ್ಯ ಚೇತನ ನಮಗೆಲ್ಲ ದಾರಿ ತೋರಿಸುತ್ತದೆ, ಮುನ್ನಡೆಸುತ್ತದೆ...." ಎಂದು ಹೇಳಿದರು. ಅವರ ಮಾತುಗಳು ನನಗೆ ಹೊಸ ಭರವಸೆಯ ಸಾಂತ್ವನ ನೀಡಿ ದವು.

ಅನಿಕೇತನರಾದ ವಿಶ್ವಕವಿಯ ಅಮರ ಆತ್ಮದೀಪ್ತಿ ನಮ್ಮೆಲ್ಲರಿಗೂ ಮಾರ್ಗದರ್ಶಿ. ಕುವೆಂಪು ಅವರು ಕಾವ್ಯಾಕಾಶದಲ್ಲಿ ಚಿರಕಾಲ ಬೆಳಗುತ್ತಿರುವ ದಿವ್ಯ ಅನಂತ ಜ್ಯೋತಿ.

---

ಅಪರೋಕ್ಷ ಜ್ಞಾನ ಸಾಧಿಸುವವರೆಗೂ ಜನಸೇವೆ ಮಾಡಬೇಕು. ರಾಗದ್ವೇಷವಿರ ಬಾರದು. ಸ್ವಾರ್ಥವೂ ಇರಬಾರದು. ಭಗವಂತನ ಪ್ರೀತಿಗಾಗಿ ಜನಹಿತ ಮಾಡಬೇಕು.

—ಪರಮಹಂಸ

# ಮುಡಿಬಾಳ್ವೆಯ ರಸತಪಸ್ವಿ

ಸುಜನಾ

ಶ್ರೀರಾಮಾಯಣ ದರ್ಶನಂ ಕಾವ್ಯದ ಪ್ರಾರಂಭದಲ್ಲಿ ಹೋಮರನೇ ಮೊದಲಾದ ಜಗತ್ತಿನ ಕಲಾಚಾರ್ಯರೆಲ್ಲರಿಗೂ, ಕಾಲದೇಶದ ನುಡಿಯ ಜಾತಿಯ ವಿಭೇದವನ್ನು ಲೆಕ್ಕಿಸದೆ ಮುಡಿಬಾಗಿ ಮಣಿದು ಕವಿ ಕೈಜೋಡಿಸುತ್ತಾರೆ. ಜ್ಯೋತಿಯಿರುವ ಎಲ್ಲೆಡೆಯಲ್ಲೂ ಭಗವಂತನ ವಿಭೂತಿಯನ್ನು ಕಾಣುತ್ತಾ, ಲೋಕ ಗುರುಕೃಪೆಯನ್ನೂ ಲೋಕ ಕವಿ ಕೃಪೆಯನ್ನೂ, ಲೋಕ ಹೃದಯದ ಬಯಕೆಯ ಆಶೀರ್ವಾದವನ್ನೂ ಆಹ್ವಾನಿಸುತ್ತಾರೆ. ಇದರ ಉದ್ದೇಶವಾದರೂ ಏನು? "ಮತ್ತೆ ಮುಡಿಯಾಗಿರಲಿ ಬಾಳ್ವೆ, ಜಯಿಸುಗೆ ರಸತಪಸ್ಯೆ, ದೊರೆಕೊಳುಗೆ ಚಿರಶಾಂತಿ, ಸಿರಿಗನ್ನಡಂ ಗೆಲ್ಗೆ!" ಎಂಬುದೆ ಆಗಿದೆ. ನನಗೆ ತಿಳಿದಂತೆ ಮತ್ತೊಬ್ಬ ಕನ್ನಡ ಕವಿ ಅಥವಾ ಇಂಗ್ಲಿಷ್, ಸಂಸ್ಕೃತದ ಕವಿ ಈ ಬಗೆಯ ಪ್ರಾರ್ಥನೆಯನ್ನು ಮಾಡಿಲ್ಲ. ಕಾಲದೇಶದ, ನುಡಿಯ, ಜಾತಿಯ ವಿಭೇದವನ್ನು ಲೆಕ್ಕಿಸದೆ ಜ್ಯೋತಿಯಿರುವೆಡೆಯೆಲ್ಲಾ ಭಗವತ್ ವಿಭೂತಿಯನ್ನು ದರ್ಶಿಸುವುದು, ಜಾತಿಬದ್ಧವಾದ ಭಾರತೀಯ ಸಮಾಜಕ್ಕೆ ಹಿಂದೆಂತೊ ಇಂದೂ ದುಸ್ಸಾಧ್ಯವಾಗಿದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ, ಕವಿಗೆ ತನ್ನ ಮಹಾಕೃತಿ ಲೋಕ ಬಯಕೆಯ ಸಮಷ್ಟಿಯ ಸಿದ್ಧಿಯಾಗಬೇಕೆಂಬುದೂ ಆಗಿದೆ. ಈ ಸಾಧನೆಯ ಫಲದಿಂದ ಏನು ಬರಬೇಕು? ರಸತಪಸ್ಯೆ ಜಯಿಸಬೇಕು, ಚಿರಶಾಂತಿ ದೊರಕಬೇಕು. ಎಲ್ಲಕ್ಕಿಂತ ಮಿಗಿಲಾಗಿ ಬಾಳ್ವೆ ಮುಡಿಯಾಗಿರಬೇಕು. ವೈಯಕ್ತಿಕವಾದ ಹಾಗೂ ಸಾಮೂಹಿಕವಾದ ಬಾಳ್ವೆ ಮುಡಿಯಾಗಿರಬೇಕು ಎನ್ನುವ, ತನ್ಮೂಲಕವಾಗಿ ಚಿರಶಾಂತಿ ದೊರಕಬೇಕು ಎನ್ನುವ ಉತ್ಕಟ ಕಾಂಕ್ಷೆ ಅಸಾಧಾರಣವಾದದ್ದು.

ಬಾಳ್ವೆ ಮುಡಿಯಾಗಿರಬೇಕು ಎಂದು ಸಾಧಿಸಿದ ಶ್ರೇಷ್ಠ ಕವಿ ಶ್ರೀ ಕುವೆಂಪು. ಮುಡಿಮಾಡುವ ಕೆಲಸವನ್ನು ಜಾತಿಬದ್ಧವಾದ ಸಮಾಜ ಅಗಸನಿಗೆ ಒಪ್ಪಿಸಿದುದರಿಂದ ಕೊಳೆಮಾಡುವ ಕೆಲಸವಷ್ಟನ್ನೇ ತಾನು ಉಳಿಸಿಕೊಂಡಿತು. ಶ್ರೀರಾಮಾಯಣ ದರ್ಶನಂ ಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂದ ಸಂದರ್ಭದಲ್ಲಿ ಆಗ ಮೈಸೂರಿನಲ್ಲಿ ಕಾರ್ಯಶೀಲವಾಗಿದ್ದ 'ಸಾಹಿತಿಗಳ ಸಂಘ' ಶ್ರೀ ಕುವೆಂಪು ಅವರಿಗೆ ದಾಸಪ್ರಕಾಶ್ ಹೋಟೆಲಿನಲ್ಲಿ ಒಂದು ಸನ್ಮಾನವನ್ನು ಏರ್ಪಡಿಸಿತ್ತು. ಆ ಸಂಘದ ಸದಸ್ಯರಲ್ಲಿ ಕತೆಗಾರರಾದ ಆನಂದರು, ಕವಿ ಗೋಪಾಲಕೃಷ್ಣ ಅಡಿಗರು ಪ್ರಮುಖರು,

ಸಭೆಗೆ ಕುವೆಂಪು ಅವರನ್ನು ಸ್ವಾಗತಿಸುವ ಹೊಣೆ ಅಡಿಗರದಾಗಿತ್ತು. ಅವರು ಆ ವೇಳೆಗಾಗಲೆ ನವ್ಯ ಕಾವ್ಯದ ದಾರಿಯಲ್ಲಿ ಮುನ್ನಡೆದಿದ್ದರು. ನನಗೆ ತಿಳಿದಂತೆ ಅವರಿಗೆ ಕುವೆಂಪು ಬಗೆಗಾಗಲಿ, ಶ್ರೀರಾಮಾಯಣ ದರ್ಶನದ ಬಗೆಗಾಗಲೀ ಸದಭಿಪ್ರಾಯವಿರಲಿಲ್ಲ. ಆದರೂ ಅವರು ಹೊಣೆಗಾರಿಕೆಯನ್ನು ಅರ್ಥಗರ್ಭಿತವಾದ ಮಾತಿನಿಂದಲೇ ಪ್ರಾರಂಭಿಸಿದರು. "ಕಾವ್ಯ ರಚನೆಯನ್ನು ತಪಸ್ಸಾಗಿ ಸಾಧಿಸಿದವರಲ್ಲಿ ಕುವೆಂಪು ಅವರು ಪ್ರಮುಖರು"—ಎಂದು ಹೇಳಿ ತಮ್ಮ ರೀತಿಯಲ್ಲಿ ವಿವರಿಸಿದರು. ಕುವೆಂಪು ಅವರು ತಮ್ಮ ಉತ್ತರವನ್ನು ಆ ಮಾತಿನಿಂದಲೇ ಪ್ರಾರಂಭಿಸಿದರು "ಶ್ರೀ ಅಡಿಗರು ನಾನು ಕಾವ್ಯ ರಚನೆಯನ್ನು ತಪಸ್ಸಾಗಿ ಮಾಡಿಕೊಂಡಿದ್ದೇನೆ ಎಂದು ಹೇಳಿದರು; ನಾನು ತಪಸ್ಸು ಏನನ್ನೂ ಮಾಡಿದವನಲ್ಲ. ಚೆನ್ನಾಗಿ ಬದುಕಬೇಕು ಎನ್ನುವುದು, ಕಾವ್ಯ ಬರೆಯಬೇಕು ಎನ್ನುವುದು ಎರಡೂ ಒಂದೇ ನನಗೆ. ಚೆನ್ನಾಗಿ ಬದುಕುವುದನ್ನು ಬಿಟ್ಟು ಕಾವ್ಯವಿಲ್ಲ; 'ನಾನು ಚೆನ್ನಾಗಿ ಬದುಕುತ್ತಿ', ಎನ್ನುವಾಗ ನನ್ನ ಕಾವ್ಯ ಹುಟ್ಟಿತು. ಅದರ ಜೊತೆಯಲ್ಲಿ ಚೆನ್ನಾಗಿ ಬದುಕುತ್ತಿದ್ದೇನೆ ಎನ್ನುವುದು ಸೇರಿಕೊಂಡಿತು. ನಾವೆಲ್ಲರೂ ಕವಿಗಳು ಬರಹಗಾರರು ಮನುಷ್ಯರೇ ಆದರೂ, ನಮ್ಮ ಆಶೆ ಆಕಾಂಕ್ಷೆಗಳು, ಅಭೀಪ್ಸೆಗಳು ಮನಸ್ಸಂಸ್ಕಾರಗಳು ಒಂದೇ ಆಗಿರುವುದು ಸಾಧ್ಯವಿಲ್ಲ. ಭಾವಗಳು, ಅನುಭವಗಳು ಬೇರೆಯಾಗಿರುತ್ತವೆ. ಇವಕ್ಕನುಗುಣವಾಗಿ ನಮ್ಮ ನಮ್ಮ ಆಕಾರಗಳು ಇರುವುದಾಗಿದ್ದರೆ ಆಗ ಇಲ್ಲಿರುವ ಒಬ್ಬೊಬ್ಬರೂ ಒಂದೊಂದು ರೀತಿಯಾಗಿರಬೇಕಾಗಿತ್ತು! ದೇವರ ದಯೆದಿಂದ ಅದು ತಪ್ಪಿದೆ!" ಈ ಅರ್ಥಪೂರ್ಣವಾದ, ವ್ಯಂಗ್ಯ ಸಿಂಚಿತವಾದ ಮಾತಿಗೆ ಇಲ್ಲಿ ವ್ಯಾಖ್ಯಾನ ಅಗತ್ಯವಿಲ್ಲ. ಗಮನಿಸಬೇಕಾದ ಅಂಶ ಇಷ್ಟೆ: ಕುವೆಂಪು ಚೆನ್ನಾಗಿ ಬದುಕಬೇಕು ಎಂಬುದನ್ನು (ಚೆನ್ನಾಗಿ ಎಂದರೆ ಮಜಾ ಎಂದಲ್ಲ) ವ್ರತವಾಗಿ ಇಟ್ಟುಕೊಂಡವರು. ಅದೇ ಮಡಿಯಾಗಿರುವುದು, ಎಂದರ್ಥ.

ಸಂಸಾರ ಜೀವನವನ್ನು ಕುವೆಂಪು ಯೋಗವೆಂದು ತಿಳಿದರು. ಅವರ ಸಾಧನೆಗೆ ತಾಯಿ ಹೇಮಾವತಿಯವರು ಹಿನ್ನೆಲೆಯಾದರು, ವೇದಿಕೆಯಾದರು. ಅವರ ಸಾವಿನಲ್ಲಿ ಕುವೆಂಪು ತಮ್ಮ ಸೃಷ್ಟಿ ಶಕ್ತಿಯನ್ನೇ ಕಳೆದುಕೊಂಡಂತೆ ಆದರು. ಎಷ್ಟೋ ಬಾರಿ ಅವರು ಹೇಳಿದ್ದುದುಂಟು: "ಅಮ್ಮ ಹೋದ ಮೇಲೆ ನನ್ನ ಸೃಷ್ಟಿ ಶಕ್ತಿ ಸಮಸ್ತವೂ ತಿರೋಹಿತವಾಯಿತು." ಈ ಮಾತು ಕಠೋರ ಸತ್ಯವೇ ಆಗಿ ಪರಿಣಮಿಸಿತು. ಅವರ ಭಾಗಕ್ಕೆ ಹೇಮಾವತಿಯವರು ತಮ್ಮನ್ನು ಉದ್ಧಾರ ಮಾಡಲು ಬಂದ ಭಗವತಿಯೇ ಆಗಿದ್ದರು. ಆ ತಾಯಿ ದಿವಂಗತರಾದ ದಿನದ ಒಂದು ಚಿತ್ರ ನನ್ನ ಕಣ್ತುಂಬಾ ತುಂಬಿಕೊಂಡಿದೆ. ಆ ತಾಯಿಯ ಪಾರ್ಥಿವ ಶರೀರವನ್ನು ಸೋಫಾದ ಮೇಲೆ ಮಲಗಿಸಿದ್ದರು. ಅಲ್ಲಿದ್ದ ಕೆಲವರು ಪ್ರಾರ್ಥನಾ ಗೀತೆಗಳನ್ನು ಹಾಡಿದ ಮೇಲೆ ಶ್ರೀ ಕುವೆಂಪು ಅವರು ಆ ತಾಯಿಯ ಪಾದದ ಬಳಿಯಲ್ಲಿ ಕುಳಿತು:

ಸರ್ವಮಂಗಲಮಾಂಗಲ್ಯೆ ಶಿವೇ ಸರ್ವಾರ್ಥ
ಸಾಧಿಕೇ ।
ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣಿ
ನಮೋಽಸ್ತುತೇ ॥

ಸೃಷ್ಟಿಸ್ಥಿತಿವಿನಾಶಾನಾಂ ಶಕ್ತಿಭೂತೇ ಸನಾತನಿ।
ಗುಣಾಶ್ರಯೇ ಗುಣಮಯೇ ನಾರಾಯಣಿ
ನಮೋಽಸ್ತು ತೇ ॥
ಶರಣಾಗತ-ದೀನಾರ್ತ-ಪರಿತ್ರಾಣಪರಾಯಣೇ ।
ಸರ್ವಸ್ಯಾರ್ತಿಹರೇ ದೇವಿ ನಾರಾಯಣಿ
ನಮೋಽಸ್ತು ತೇ ॥

ಎಂದು ಹೃದಯ ಮಿಡಿಯುವಂತೆ ಸ್ತುತಿಸುತ್ತಾ, ಅವರ ಪಾದದ ಮೇಲೆ ತಮ್ಮ ಹಣೆಯನ್ನಿಟ್ಟುಕೊಂಡು ಮೌನವಾದರು. ಶ್ರೀರಾಮಕೃಷ್ಣ ಶಾರದಾದೇವಿಯವರು ಆ ದಿವ್ಯದೃಶ್ಯವನ್ನು ಕಂಡು ಅತೀವ ಸಮಾಧಾನಗೊಂಡಿರಬೇಕು. ವಿಚಾರ ಶೀಲ ಕುವೆಂಪು ಅವರನ್ನು ಗಮನಿಸುವಾಗ ನಾವು ಅವರ ಈ ಶ್ರದ್ಧಾಭಕ್ತಿಯ ನಿರ್ಮಲವೂ ಉತ್ಕಟವೂ ಆದ ದಾಂಪತ್ಯ ಯೋಗದ ಕುವೆಂಪುವನ್ನು ಮಬ್ಬುಗಾಣುತ್ತಿರುತ್ತೇವೆ. ಈ ದೃಷ್ಟಿಯಿಂದಲೂ ಕುವೆಂಪು ಒಂದು ಸರಳವಾದ ನೋಟಕ್ಕೆ ದಕ್ಕದವರು.

ತಾವು ತಮ್ಮ ಬದುಕಿನಲ್ಲಿ ಸ್ವೀಕರಿಸಿಕೊಂಡ ಮಡಿಬಾಳಿನ ಆದರ್ಶವನ್ನು ಶ್ರೀ ರಾಮಕೃಷ್ಣ ಶ್ರೀ ಶಾರದಾದೇವಿಯವರಿಂದ, ಶ್ರೀ ಸೀತಾರಾಮರಿಂದ ಹೆಚ್ಚು ದೃಢಪಡಿಸಿಕೊಂಡಂತೆ ಕಾಣುತ್ತದೆ. ಸಂಸಾರಪ್ರೀತಿಯ ಪಾವಿತ್ರ್ಯವನ್ನು ಒಂದು ಸಹಜ ವ್ರತವಾಗಿ ಪಾಲಿಸುತ್ತಾರೆ. ಸೀತಾರಾಮರ ಅನ್ಯೋನ್ಯನಿಷ್ಠವಾದ ಪ್ರೇಮವನ್ನು ಹೀಗೆ ಚಿತ್ರಿಸುತ್ತಾರೆ:

"ಹದಿಬದೆಗೆ ತೋರ್ದಪುದು ತನ್ನಿನಿಯ
ನೊರ್ವನೊಳೆ
ಸರ್ವ ಮನುಜರ, ಮತ್ತೆ ಸರ್ವಲೋಕದ ಸರ್ವ
ವೈವಿಧ್ಯಮುಂ, ಪ್ರೇಮನಿಷ್ಠೆಯ ಪತಿಗುಮಂತೆ
ತನ್ನ ಸತಿಯೊಳೆ ತೋರ್ದಪುದು ಸರ್ವ
ಲಲನೆಯರ
ಸರ್ವ ಶೃಂಗಾರಮುಂ!"

ವಿಚಿತ್ರವೆಂಬಂತೆ ಇತ್ತೀಚಿನ ಯುಗಕ್ಕೆ ಕಾಣುವ ಈ ಮಾತನ್ನು ರಾಮಚಂದ್ರನು ಶೂರ್ಪನಖಿಗೆ ಹೇಳುತ್ತಾನೆ. ರಾಮಚಂದ್ರ ಹಾಗೆಯೆ ಅವನ್ನು ಬಾಳುತ್ತಾನೆ. ರಾವಣ ದಾರಿತಪ್ಪಿರುತ್ತಾನೆ. ತನಗೆ ಒಲಿಯದ ಹೆಣ್ಣೇ ಇಲ್ಲ, ಜಗತ್ತಿನಲ್ಲಿ ಪತಿವ್ರತೆಯರೇ ಇಲ್ಲ, ಎಂದು ಕಟ್ಟುಕಿತ್ತ ಜೀವನಕ್ಕೆ ರಹದಾರಿಯನ್ನು ಪಡೆದಂತೆ ವರ್ತಿಸುವ ರಾವಣನು ತನಗಿದ್ದ ಪತಿವ್ರತಾ ಸತಿಯ ಪಾತಿವ್ರತ್ಯವನ್ನೇ ತಿಳಿದಿರುವುದಿಲ್ಲ. ಶುಭ್ರಜೀವನದ ಮೌಲ್ಯವನ್ನೇ, ಅದು ಇಲ್ಲದ್ದು ಎಂದು ತಿರಸ್ಕರಿಸುತ್ತಾ ಹೋದ ರಾವಣನಿಗೆ ಕಡೆಗೆ ಅವನ ಸತಿ ಹಾಗೂ ಸೀತಾದೇವಿಯರು ಶ್ರದ್ಧೆ ಮೂಡಿಸುತ್ತಾರೆ. ನಷ್ಟ ಚೇತನನಾಗಿ ಉದ್ಧೃತ ಚೇತನನಾಗುತ್ತಾನೆ. ಶ್ರೀ ಕುವೆಂಪು ಅವರಿಗೆ ರಾವಣನ ವಧೆಯೆ ರಾಮಾಯಣ ದರ್ಶನಂ ಕಾವ್ಯದ ಮೂಲೋದ್ದೇಶವಲ್ಲ. ನಷ್ಟಾತ್ಮನ ಉದ್ಧಾರವೇ, ಮೌಲ್ಯ ಶ್ರದ್ಧೆಯ ಉದ್ಧಾರವೇ ಈ ಕಾವ್ಯದ ಒಂದು ದರ್ಶನವಾಗಿದೆ. ಸೀತಾದೇವಿ ಅಗ್ನಿಪರೀಕ್ಷೆಗೆ ತನ್ನನ್ನು ಒಡ್ಡಿಕೊಂಡ ಹಿಂದೆಯೆ, ತಾನೂ ಅಗ್ನಿಕುಂಡವನ್ನು ಪ್ರವೇಶಿಸುವ ಶ್ರೀರಾಮ ದಾಂಪತ್ಯ ಜೀವನದ ಉಭಯತ್ರ ಪಾವಿತ್ರ್ಯವನ್ನು ಮಾತಿಲ್ಲದ ಕ್ರಿಯಾರೂಪದಲ್ಲಿ ಪ್ರತಿಪಾದಿಸುತ್ತಾನೆ. ಶ್ರೀಕುವೆಂಪು ತಮ್ಮ ಜೀವನದಲ್ಲಿ ಪಾವಿತ್ರ್ಯವನ್ನು ಘನಮೌಲ್ಯವನ್ನು ಒಪ್ಪಿಕೊಳ್ಳದಿದ್ದರೆ ಈ ಚಿತ್ರಣವೇ ಸಾಧ್ಯವಿರುತ್ತಿರಲಿಲ್ಲ.

"ನನ್ನ ನ್ಯೂನತೆಯೆಲ್ಲ ನಿನ್ನ ಪೂರ್ಣತೆಗಾಗಿ
ನೋಯಲಿ ಸದಾ;
ನನ್ನ ನಶ್ವರವೆಲ್ಲ ನಿನ್ನ ನಿತ್ಯತೆಗಾಗಿ
ಸಾಯಲಿ ಸದಾ!"

ಇಲ್ಲಿ ವ್ಯಕ್ತವಾಗುವ ಭಕ್ತಿ ಅತ್ಯಂತ ಅಸಾಧಾರಣವಾದುದು. ಇದು ಸುಲಭ ವ್ಯಾಖ್ಯಾನಕ್ಕೆ ಅರ್ಥವಾಗದೆಯೂ ಉಳಿಯ ಬಹುದು. ಎಷ್ಟೋ ಬಾರಿ ಈ ಪಂಕ್ತಿಗಳು ನನಗೆ ನೆನಪಾದಾಗ ಎದೆ ದಸಕ್ ಎನಿಸಿದೆ, ಕಣ್ಣು ತುಂಬಿಕೊಂಡಿದೆ. ತನ್ನ ಇಷ್ಟ ದೈವದ ನಿತ್ಯತೆಗಾಗಿ ತನ್ನ ನಶ್ವರಗಳನ್ನು ಸಾಯಿಸಿ ಕೊಳ್ಳುತ್ತಾ ಹೋಗುವ, ಅದರ ಪೂರ್ಣತೆ ಗಾಗಿ ತನ್ನ ನ್ಯೂನತೆಗಳೆಲ್ಲವನ್ನೂ ನೋವಿ ಗೀಡು ಮಾಡಿಕೊಳ್ಳುತ್ತಾ ಹೋಗುವ ಪರಮಾರ್ಪಣಾಭಕ್ತಿ ಇದು. ಇಂಥವರು ನಿರಂಕುಶ ಮತಿಗಳಾಗಿ ಎಂದು ಹೇಳಿದಾಗ ಆ ಮಾತಿಗೆ ಗಂಭೀರವಾದ ಅರ್ಥವೇ ಇರು ತ್ತದೆ. "ಇಹಕ್ಕೊಬ್ಬ ಗಂಡ, ಪರಕ್ಕೊಬ್ಬ ಗಂಡ; ಈ ಸಾವನೋವ ಗಂಡಂದಿರನೆಲ್ಲ ಒಲೆಯೊಳಗಿಕ್ಕು" ಎಂದ ಅಕ್ಕಮಹಾದೇವಿ ಶಿವನನ್ನು ತನ್ನ ಗಂಡನನ್ನಾಗಿ ಮಾಡಿ ಕೊಂಡು, ಆ ಶಿವದ ಭದ್ರ ನೆಲೆಯಲ್ಲಿ ನಿಂತು ಈ ಮಾತನ್ನಾಡುತ್ತಾಳೆ. ಹಾದಿಯಲ್ಲಿ ಹೋಗುವವರ ಮೇಲೆ ಕಣ್ಣಿಟ್ಟುಕೊಂಡು ಜಾರಿ ಹೋದ ಹೆಣ್ಣಿನ ಮಾತಿನಂತಲ್ಲ ಇದು. ಹಾಗೆಯೇ ಶ್ರೀ ಕುವೆಂಪು ಅವರ ಆಧ್ಯಾತ್ಮಿಕತೆಯನ್ನೂ, ಭಕ್ತಿಯನ್ನೂ ಮರೆತು ಅವರ ವಿಚಾರವಾದವನ್ನಷ್ಟನ್ನೇ ಹಿಡಿದುಕೊಳ್ಳುತ್ತೇನೆ ಎಂದು ಹೊರಟ ಓದುಗನಿಗೆ ಅವರ ಕಥೆ ಕಾದಂಬರಿಗಳೂ ಅರ್ಥವಾಗುವುದಿಲ್ಲ. ಇವರಷ್ಟು ಸಂಕೀರ್ಣ ವಾದ ಕವಿ, ವಿಪುಲ ಸತ್ವದ ಕವಿ ವಿರಳ. ಇವರನ್ನು ಓದ ಹೊರಟಾಗ ಸರಳವಾಗಿ ಒಮ್ಮೊಮ್ಮೆ ತೋರಿದರೂ ಗೂಢವೂ ಗಾಢವೂ ಆಗಿ ಉಳಿದುಕೊಳ್ಳುತ್ತಾರೆ. ಪರಸ್ಪರ ವಿರೋಧಗಳನ್ನು ದೈವೀ ಪೂರ್ಣ ತೆಯ ಗೊಮ್ಮಟದಲ್ಲಿ ಸಂಲಗ್ನ ಮಾಡಿಸಿರುವ ಅಪರೂಪದ ಕವಿ ಇವರು. ಗಾತ್ರ ಭವ್ಯತೆಯ ಆರಾಧಕರೆಂಬಂತೆ ಒಮ್ಮೆ ಕಂಡರೆ, ಅತ್ಯಂತ ಯಃಕಶ್ಚಿತ್ ಆದ ದೈನಂದಿನ ಸಾಮಾನ್ಯದಲ್ಲೂ ಭೂಮಾನುಭೂತಿ ಯನ್ನು ಕಾಣಿಸುವ ವಿಶೇಷ ನೋಟದ ಕವಿ ಆಗಿದ್ದಾರೆ ಇವರು. ಕಾವ್ಯದಲ್ಲಿ ಪ್ರತಿಮಾ ವೈಭವವನ್ನು ಸೃಷ್ಟಿಸಿದಂತೆ ನಿಷ್ಠುರ ವಾಸ್ತವವನ್ನೂ ಅದೇ ಗಾಂಭೀರ್ಯ ತನ್ಮಯತೆ ಯಿಂದ ಚಿತ್ರಿಸುತ್ತಾರೆ. ಪ್ರಾಚೀನತೆಯಲ್ಲಿ ನಿತ್ಯವರ್ತಮಾನವನ್ನೂ ಕಾಣುವ ವಿಶೇಷ ದೃಷ್ಟಿಯಿರುವಂತೆಯೆ ವರ್ತಮಾನದ ವಾಸ್ತವದಲ್ಲಿ ನಿತ್ಯವರ್ತಮಾನವನ್ನೂ ಕಾಣುತ್ತಾರೆ. ಮೌಢ್ಯಗಳನ್ನು, ಅವಿಚಾರಿತ ರಮಣೀಯತೆಯನ್ನು ಉಗ್ರವಾಗಿ ಪ್ರತಿ ಭಟಿಸುವಂತೆಯೇ ಭಗವತ್ ಭಕ್ತಿಯ ನಮ್ರತೆಯನ್ನೂ ವಿನಯವನ್ನೂ ತೋರು ತ್ತಾರೆ. ಶೋಷಣೆಗಳ ಬಗೆಗೆ—ಅದು ಧಾರ್ಮಿಕವಾದದ್ದು, ಜಾತೀಯವಾದದ್ದು, ಆರ್ಥಿಕವಾದದ್ದು ಆಗಿರಬಹುದು—ವ್ಯಗ್ರ ವಾಗುತ್ತಾರೆ. ಮೇಲು ನೋಟಕ್ಕೆ ಬ್ರಾಹ್ಮಣ್ಯದ ಶೋಷಕ ಪ್ರತಿಷ್ಠೆಗಳ ಮೇಲೆ ಬಾರುಕೋಲು ಎತ್ತಿರುವಂತೆಯೆ, ಕಾದಂಬರಿ ಗಳಲ್ಲಿ ಕೆಳವರ್ಗದವರ ದೀನ ಅಸಹಾಯ ಕತೆಯನ್ನು ಮನಮುಟ್ಟುವಂತೆ ಚಿತ್ರಿ ಸುತ್ತಾ, ತನ್ನವರ ಕ್ರೌರ್ಯವನ್ನೆ ಬಯಲು ಮಾಡುತ್ತಾರೆ. ನನಗೆ ತಿಳಿದಂತೆ ಕನ್ನಡದ ಮತ್ತೊಬ್ಬ ಬರಹಗಾರ ಈ 'ವ್ಯಾಸೀಯ ಪ್ರತಿಭೆಯ' ಅಸಾಧಾರಣತೆಯನ್ನು ತೋರಿಲ್ಲ. ಕ್ರೌರ್ಯಗಳನ್ನೂ, ಶೋಷಣೆ ಗಳನ್ನೂ ಲೈಂಗಿಕ ಪತನವನ್ನೂ ಚಿತ್ರಿಸು ವಾಗ, ನಮ್ಮ ಇತರ ಮಹಾ ಸಾಹಿತಿಗಳು

ಗೊತ್ತಿದ್ದೊ ಗೊತ್ತಿಲ್ಲದಂತೆಯೊ ತಮ್ಮ ಜಾತಿಗೆ ಬೇರೆಯಾದ ಇತರ ಜಾತಿ ವರ್ಗದ ಪಾತ್ರಗಳನ್ನೇ ಸೃಷ್ಟಿಸುತ್ತಾರೆ. ಈ ದೃಷ್ಟಿಯಿಂದ ಯಾರಾದರೂ ನಿಷ್ಠುರ ಸಂಶೋಧಕರು ಸತ್ಯದ ಅನಾವರಣವನ್ನು ಮಾಡಬೇಕಾಗಿದೆ. ಪರಸ್ಪರ ವಿರೋಧಗಳು ಗಣಪತಿಯ ಪ್ರತಿಮೆಯಲ್ಲಿ ಸಮ್ಮಿಳಿತಗೊಂಡಿರುವುದನ್ನು ಕಾಣುತ್ತೇವೆ. ಬೃಹತ್ ಶರೀರ, ಪುಟ್ಟ ಇಲಿಯನ್ನು ವಾಹನವನ್ನಾಗಿ ಮಾಡಿಕೊಂಡಿರುವುದಾಗಲಿ, ಇಲಿಯನ್ನು ತಿಂದು ಬದುಕುವ ಹಾವನ್ನು ಸೊಂಟಕ್ಕೆ ಸುತ್ತಿಕೊಂಡಿರುವುದಾಗಲೀ, ಆನೆಯ ಮುಖವಾಗಲಿ ಅದಕ್ಕೆ ಆತಂಕ ಉಂಟುಮಾಡುವ ಅಂಕುಶವಾಗಲಿ ಒಂದೇ ಪಾತ್ರದ ಮಹಾ ಸೂತ್ರದಲ್ಲಿ ಕೋದುಕೊಂಡಿವೆ. ಈ ಗಾಣಪತ್ಯದ ಸತ್ವದ ಒಂದಂಶ ಇಲ್ಲದಿದ್ದವನು ಕುವೆಂಪು ಸತ್ವವನ್ನು ಪಡೆದಿರಲಾರ.

ಕುವೆಂಪು ಅವರ ಮೇಲೆ ಮಿಲ್ಟನ್, ವರ್ಡ್ಸ್‌ವರ್ತ್‌ರ ಪ್ರಭಾವವಾಗಿದ್ದರೂ ಅವರಿಗಿಲ್ಲದ ವಿಪುಲ ಸಂಕೀರ್ಣತೆ ಕುವೆಂಪು ಅವರಲ್ಲಿ ಇದೆ, ಎಂಬುದನ್ನು ನಮ್ಮ ವಿಮರ್ಶಕರು ಇನ್ನೂ ಕಾಣಬೇಕಾಗಿದೆ. ಮಹಾ ಶೈಲಿ, ಮಹಾ ಛಂದಸ್ಸು, ಮಹೋಪಮೆ, ಪೌರಾಣಿಕ ಪಾತ್ರಗಳಲ್ಲೇ ವಿಹರಿಸುವ ಮಿಲ್ಟನ್‌ನಿಗೆ ಕುವೆಂಪು ಕಾದಂಬರಿಯ ಸಾಮಾನ್ಯ ಪಾತ್ರಗಳನ್ನೂ ಚಿತ್ರಿಸುವುದು ಸಾಧ್ಯವಿತ್ತೇ, ಯೋಚಿಸಬೇಕು. ಪ್ರಕೃತಿಯಲ್ಲಿ ಭಗವದಂಶವನ್ನು ಕಂಡ ವರ್ಡ್ಸ್‌ವರ್ತ್, ಮಾನವ ಮನಸ್ಸಿನ ಸರಳ ಸೌಂದರ್ಯಗಳಷ್ಟನ್ನೇ ಚಿತ್ರಿಸಿದನೇ ಹೊರತು, ಅದರ ಕ್ರೌರ್ಯಗಳನ್ನಾಗಲೀ, ದೈವೀ ಶೌರ್ಯವನ್ನಾಗಲೀ ಜಟಿಲಕುಟಿಲತೆಯನ್ನಾಗಲೀ ಚಿತ್ರಿಸಿಲ್ಲ. ಆಶ್ಚರ್ಯವೆಂದರೆ ವರ್ಡ್ಸ್‌ವರ್ತನ ಕಾವ್ಯದಲ್ಲಿ ಪ್ರಣಯಪ್ರೇಮಗಳ ಚಿತ್ರಣವೇ ಇಲ್ಲ. ಅವನು ಕಿಂಚಿತ್ತೂ ನಗಲಾರ (ಮಿಲ್ಟನ್ ಕೂಡ ನಗಲಾರ); ವ್ಯಂಗ್ಯ ಕಟಕಿಗಳನ್ನು ಬಳಸಲಾರ. ಪೌರಾಣಿಕ ಪ್ರತಿಮೆಗಳನ್ನು ನಿರ್ವಹಿಸುವ ಅಗತ್ಯವನ್ನೇ ಕಾಣಲಿಲ್ಲ. ಆದುದರಿಂದ ಕುವೆಂಪು ಸತ್ವವನ್ನು ತೂಗಿನೋಡುವಾಗ ಈ ಅಂಶವನ್ನು ಮರೆಯಬಾರದು. ಅವರಷ್ಟು ಪಾಶ್ಚಾತ್ಯ ಕಾವ್ಯದರ್ಶನಗಳಿಗೆ ತೆರೆದುಕೊಂಡ ಮಹಾ ಸತ್ವದ ಕವಿ ವಿರಳ. ಅಂತೆಯೇ ಹಾಗೆ ತೆರೆದುಕೊಂಡೂ ಅವರೆಲ್ಲರಿಗಿಂತ ಬೇರೆಯಾಗಿ ಮೀರಿ ಬೆಳೆದ ನಿದರ್ಶನಗಳೂ ಅತಿ ವಿರಳ.

ಪ್ರಾಚೀನ ಪರಂಪರೆಯನ್ನು ಅದರ ಲೋಕೋದ್ಧಾರಕ ರೂಪದಲ್ಲಿ ಕಂಡುಕೊಂಡವರು, ಅದನ್ನು ಕಬಳಿಸುವಂತೆ ಬೆಳೆದುಕೊಂಡಿದ್ದ ಶೈವಲಾರಣ್ಯವನ್ನು ನಿರ್ದಯವಾಗಿ ಕತ್ತರಿಸಿದವರೂ ಅಪರೂಪ. ಭಾರತೀಯ ಸನಾತನತೆ ಜಾಗತಿಕ ಜಾಗರದಲ್ಲಿ ವಿಜ್ಞಾನಾವರಣದಲ್ಲಿ ಸರ್ವಸಮಾನತಾ ಅಭೀಪ್ಸೆಯ ಸಿದ್ಧಿಗಾಗಿ ಮಾಡುತ್ತಿರುವ ವ್ಯಕ್ತಾವ್ಯಕ್ತ ಸಂಘರ್ಷಗಳು ನಡುವೆ ಹೇಗೆ ಬೆಳೆದು ಬರಬೇಕು, ಎನ್ನುವ ನಿಚ್ಚಳ ದರ್ಶನವನ್ನೂ ಉಳ್ಳ ಅಪ್ರತಿಮ ದ್ರಷ್ಟಾರ ಕವಿ. ನವ್ಯದ ಹೆಸರಿನಲ್ಲಿ, ಪ್ರಗತಿಯ ಹೆಸರಿನಲ್ಲಿ, ಬೌದ್ಧಿಕತೆಯ ಹೆಸರಿನಲ್ಲಿ ಪ್ರಾಚೀನ ವರ್ಣಾಶ್ರಮ ನಿಷ್ಠವಾದ ರೋಗಿಷ್ಠ ಮೌಲ್ಯಗಳನ್ನೇ ನಾನಾ ರೀತಿಯಲ್ಲಿ ಪೋಷಿಸಿಕೊಂಡು ಬರುತ್ತಿರುವ ಪ್ರಸಿದ್ಧ ಬರಹಗಾರರನ್ನು ಕಂಡಾಗ ಕುವೆಂಪು ಅವರ ವೈಶಿಷ್ಟ್ಯ ದೈವ ಕೃಪೆ

ಯಾಗಿ ತೋರುತ್ತದೆ. ಸ್ವಾತಂತ್ರ್ಯ ನಂತರದ ದಿನಗಳಲ್ಲಿ ಏಕಾದರೂ ಆ ವರ್ಗದ ಜನ ವಿಷಾದಗ್ರಸ್ತವೂ, ವ್ಯಗ್ರವೂ ಸಿನಿಕವೂ ಆಯಿತು ಎನ್ನುವುದನ್ನು ನೆನೆದರೆ, ಹಾಗೂ ತನ್ನ ಆ ನೇತ್ಯಾತ್ಮಕವಾದ ವಿಷೋಪವು ವಾದ ನಷ್ಟಮನಸ್ಸನ್ನೇ, ಪ್ರಪ್ರಥಮ ಬಾರಿಗೆ ವಿದ್ಯಾಭ್ಯಾಸದ, ಪ್ರಜಾಪ್ರಭುತ್ವದ ಸ್ವಾತಂತ್ರ್ಯವನ್ನು ಕಾಣುತ್ತಾ ಉಲ್ಲಸಿತ ವಾಗಿರಬೇಕಾಗಿದ್ದ ತರುಣ ಬರಹಗಾರ ವರ್ಗದ ಮೇಲೂ ಹೇರುವಲ್ಲಿ ಯಶಸ್ವಿ ಯಾಯಿತು ಎನ್ನುವುದನ್ನ ನೆನೆದರೆ, ಕುವೆಂಪು ಹೊರತಾದವರ ಕಾವ್ಯ ಸೃಷ್ಟಿಯ ಕೊಡಿಗೆ ಏನು ಎನ್ನುವುದನ್ನು ಅರ್ಥ ಮಾಡಿಕೊಂಡಂತಾಗುತ್ತದೆ. ಈಗ ಅರ್ಥ ವಾಗದಿದ್ದರೆ ನಾಳೆ ತಿಳಿಯುವ ಯತ್ನ ಮಾಡಬೇಕಾಗುತ್ತದೆ. ಆಗ ಶ್ರೀ ರಾಮಾ ಯಣ ದರ್ಶನದ ಹಾಗೂ ಅದರ ಕವಿಯ ಲೋಕೋತ್ತರವಾದ ಕೊಡುಗೆಯ ಅರಿ ವಾಗುತ್ತದೆ. ಅದು ಆಗದಂತೆ ನೋಡಿ ಕೊಳ್ಳಲು ಶ್ರೀ ರಾಮಾಯಣ ದರ್ಶನಂ ಕಾವ್ಯವನ್ನು ಘೋರ ಅವಜ್ಞೆಗೆ ಈಡು ಮಾಡುವಲ್ಲಿ ಒಂದು ವ್ಯವಸ್ಥಿತವಾದ ಸಮೂಹ ಪ್ರತಿರೋಧವೇ ಕೆಲಸ ಮಾಡುತ್ತಾ ಬಂದಿದೆ ಎನಿಸುತ್ತದೆ. ಆಧು ನಿಕ ಭಾರತವಲ್ಲಂತೂ ಪ್ರಪಂಚದ ಉಳಿದ ಎಲ್ಲ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲೂ, ಅಸಾ ಧಾರಣವೂ ಅಪೂರ್ವವೂ ಆದ ಮಾನವ ಮನಸ್ಸಿನ ಶಕ್ತಿ ಬಿಡುಗಡೆಯಾಗುತ್ತಿದೆ. ಆ ಜನತೆ ಹಿಂದಿಲ್ಲದ ಸ್ವಾತಂತ್ರ್ಯವನ್ನೂ ಉಕ್ತಿಯನ್ನೂ ಶಕ್ತಿಯನ್ನೂ ಪಡೆದು ಕೊಳ್ಳುತ್ತಿದೆ. ಈ ಬಿಡುಗಡೆಯ ಆತುರ ದಲ್ಲಿ ತನ್ನ ಪೂರ್ವಸ್ಥಿತಿಯಾದ ಜಡಸ್ಥಿತಿಯ ಸಹಜಗುಣವಾದ ನಿರುತ್ಸಾಹವನ್ನೂ ನಿಷ್ಕ್ರಿಯತೆಯನ್ನೂ ಕಿತ್ತೊಗೆದು ಅತ್ಯು ತ್ಸಾಹವನ್ನೂ ಅತಿರತಿಯನ್ನೂ ಅವಿವೇಕ ವನ್ನೂ ಸಹಜವಾಗಿ ಪ್ರದರ್ಶಿಸುತ್ತಿದೆ. ಹಿಂದೆ ಪ್ರಭುತ್ವವನ್ನು ಮಾಡುತ್ತಿದ್ದ, ಇಂದು ಅದನ್ನು ಕಳೆದುಕೊಂಡಿರುವ ಹತಾಶ ಬಲಿಷ್ಠ ವರ್ಗ ತನ್ನ ವಿಷಾದವನ್ನೂ ವಿರೋಧವನ್ನೂ ಈ ವಾಹಿನಿಗೆ ಕೂಡಿಸಿದೆ. ಹಳೆಯ ವಿಧಿನಿಷೇಧಗಳ ಕಟ್ಟುಕಟ್ಟಳೆಯ ಬಿಗುವಿನಲ್ಲಿ ಸುಭದ್ರವಾಗಿದ್ದಂತೆ ಇದ್ದ ವರ್ಗಗಳೂ ಕೂಡ ಹೊಸ ಸ್ವಾತಂತ್ರ್ಯ ದಿಂದ ಹೊಸ ಹಸಿವೆಗೆ ತುತ್ತಾಗಿವೆ. ಅದರ ಪೂರೈಕೆಯಲ್ಲಿ ಲಜ್ಜೆಗೆಟ್ಟಂತೆ ವರ್ತಿಸುತ್ತಿವೆ. ತನ್ನ ನಿರ್ಲಜ್ಜತೆಯನ್ನು ಬಾಧಿಸಬಹುದಾದ ಮೌಲ್ಯಪ್ರಜ್ಞೆಯನ್ನೇ ನಿಶ್ಚೇಷ್ಟಗೊಳಿಸುವ ಯತ್ನವನ್ನೂ ಮಾಡಿದೆ. ಇಂಥ ಆಧುನಿಕ ಮನಸ್ಸನ್ನು ಕುವೆಂಪು ಅವರ ರಾಮಾಯಣ ದರ್ಶನಂ ಕಾವ್ಯದ ರಾವಣನಿಗಿಂತ ಸಮರ್ಥ ವಾಗಿ, ಸಮಗ್ರವಾಗಿ ಪ್ರತಿಬಿಂಬಿಸುವ ಮಹಾ ಕಾವ್ಯ ಪಾತ್ರವಾದರೂ ಯಾವುದು? ಮೇಲ್ಪದರದಲ್ಲಿ ಜಗತ್ತು ಗೊಂದಲ ಮಯವೂ ಪ್ರಳಯ ಮುಖಿಯೂ ಆಗಿರು ವಂತೆ ತೋರಿದರೂ, ಅಂತರಂಗದಲ್ಲಿ ಅವಕ್ಕೆ ವಿರುದ್ಧವಾದ ಶಕ್ತಿಗಳು ವಿರುದ್ಧವಾದ ದಿಕ್ಕಿನಲ್ಲಿ ಕೆಲಸ ಮಾಡುತ್ತಿವೆ. ತನ್ನ ಉದ್ಧಾರಕ್ಕಾಗಿಯಾದರೂ ಅನಿವಾರ್ಯ ವಾಗಿ ತನಗಾಗದವರ ಉದ್ಧಾರವನ್ನೂ ಗಮನಿಸಬೇಕಾದ ಒತ್ತಾಯ ಜಾಗತಿಕ ಸ್ತರದಲ್ಲಿ ನಡೆಯುತ್ತಿದೆ. ಇಡೀ ರಾಮಾಯಣದರ್ಶನಂ ಮಹಾಕಾವ್ಯ ಇವಕ್ಕೆ ಸೃಷ್ಟಿಸಿದ ಮಹಾ ಪ್ರತಿಮೆಯಾಗಿದೆ. ಇಂಥ ಮಹಾಕೃತಿಯನ್ನೂ ಕಾವ್ಯಪ್ರಪಂಚ ಸರಿ ಯಾಗಿ ಗ್ರಹಿಸಿಕೊಳ್ಳದೆ ನಷ್ಟಗೊಂಡಿತು.

ಕುವೆಂಪು ಕೃತಿಗಳೆಲ್ಲದರಲ್ಲೂ ಒಂದು ದೊಡ್ಡ ಕೈ ನಿರ್ಮಿಸಿದ ಅಚ್ಚಿದ್ದರೂ ಆ ಎಲ್ಲವೂ ಒಂದೇ ಹದದಲ್ಲಿ ಮಾಗಿಲ್ಲ, ಆಗಿಲ್ಲ. ಅವರ ಗಾಢವಾದ ಅನುಭವಗಳೂ ಮಾತಾಳಿಯಾಗುವುದುಂಟು. ಅದರಿಂದಾಗಿ ಪರಿಣಾಮದಲ್ಲಿ ಸೋಲುವುದೂ ಉಂಟು. ಹೀಗೆ ಬೇರೊಬ್ಬ ಕಡಿಮೆ ಸತ್ವದ ಕವಿ ಸೋತರೆ, ಮತ್ತೆ ಚೇತರಿಸಿಕೊಳ್ಳಲಾರದಷ್ಟು ನಷ್ಟವಾಗಿರುತ್ತದೆ. ಆದರೆ ವೈನತೇಯ ಶಕ್ತಿಯ ಕುವೆಂಪು ಬಿದ್ದ ಗಳಿಗೆಯಲ್ಲೇ ಎದ್ದಿರುತ್ತಾರೆ. ಆದರೆ ಅದು ಸಾಮಾನ್ಯ ದೃಷ್ಟಿಗೆ ಎಷ್ಟೋ ಬಾರಿ ಅಗೋಚರವಾಗಿರುತ್ತದೆ. ಕುವೆಂಪು ಅವರಿಗೆ ಶುದ್ಧ ಕಾವ್ಯದ ಧ್ವನಿಸಾರ್ಥಕ್ಯಕ್ಕಿಂತ ಅವರ ದರ್ಶನ ವಿಶದತೆಯ ಬಗೆಗೆ ಹೆಚ್ಚು ಗಮನವುಂಟು. ಇದಕ್ಕೊಂದು ನಿದರ್ಶನವನ್ನಿಲ್ಲಿ ನೀಡಬಹುದು : ಶ್ರೀರಾಮ ಸೀತಾ ಲಕ್ಷ್ಮಣರು ಕಾಡಿನಿಂದ ಹಿಂತಿರುಗಿದ ಶುಭವಾರ್ತೆಯನ್ನು ಊರ್ಮಿಳಾದೇವಿಗೆ ಭರತಸತಿಯಾದ ಮಾಂಡವಿ ತಿಳಿಸುತ್ತಾ, "ಬೇಗಮೇಳ್...." ಎನ್ನುತ್ತಾಳೆ. ಮೀಯದೆ ಉಡದೆ ತೊಡದೆ ಹಾಗೆಯೇ ಅವರ ಬಳಿ ಹೋಗುವುದು ಮಂಗಳವಲ್ಲ ಎಂದು ಹೇಳಿದ ಊರ್ಮಿಳೆಗೆ, ಹಸಿರನುಭವದ ಮಾಂಡವಿ, "ನೋಡಬಾರದೆ ಅವರ್ ನಿನ್ನ ನಿಡುಕಡು ಸೋಂಪಿಯನ್" ಎನ್ನುತ್ತಾಳೆ. ಅದಕ್ಕೆ ಊರ್ಮಿಳಾದೇವಿ "ಚೀ ! ಕಡಲ್ಗಿದಿರ್ ಪಸಿಗೇಂ ಪ್ರದರ್ಶನಂ ? ದೇವರ ತಪಕ್ಕಿದಿರ್ ನಮ್ಮದೊರ್ ತೃಣಮಲ್ತೆ ! ಸಂತೋಷ ಸಮಯದೊಳ್ ತೋರ್ಪುದನುಚಿತವೆನ್ಮ ಕಷ್ಟಮಂ ! ತನ್ನತಾನ್ ಇಲ್ಲೈವುದೆ ಎಲ್ಲ ಸಾಧನೆಗೆ ಕೊನೆಯ ಗುರಿ ; ಪೇಳ್ ತಪಕೆ ಕೇಳ್, ತಂಗೆ, ಪರಮಪ್ರಯೋಜನಂ !" ಈ ಬಹು ಸುಂದರವಾದ ಮಾತುಗಳಲ್ಲಿ ಕಡೆಯದಾದ "ತನ್ನ ತಾಂ.........ಪರಮಪ್ರಯೋಜನಂ !" ಎನ್ನುವ ಮಾತು ಅಗತ್ಯವಿರಲಿಲ್ಲ ಎಂದು, ನನಗನ್ನಿಸಿದುದನ್ನು ಕುವೆಂಪು ಅವರಲ್ಲಿ ೨೫ ವರ್ಷಕ್ಕೆ ಹಿಂದೆ ಮನವಿ ಮಾಡಿಕೊಂಡೆ. ಅದನ್ನು ಒಪ್ಪಿದ ಕವಿ ಸ್ಪಷ್ಟವಾದ ತಮ್ಮ ಅಭಿಪ್ರಾಯವನ್ನು ಹೇಳಿದರು–"ನನ್ನ ಕಾವ್ಯಧ್ವನಿಗಿಂತಲೂ ನನಗೆ, ದರ್ಶನದ ವಿಶದತೆ ಓದುಗರಿಗೆ ಮನವಟ್ಟಾಗುವುದು ಮುಖ್ಯ !" ಈ ಕಾಳಜಿಗಾಗಿ ಆಗುವ ಎಷ್ಟೇ ನಷ್ಟಗಳಿದ್ದರೂ ಲಾಭವೂ ಉಂಟು. ಅವರು ಯಾವ ವಿಶೇಷಣಗಳನ್ನೂ ಕೊಡದೆ, ಒಂದು ಹೆಚ್ಚು ಮಾತೂ ಆಡದೆ ರೇಖಾಚಿತ್ರದ ರೂಪದಲ್ಲಿ ಚಿತ್ರಿಸಿಬಿಟ್ಟಿರುವ ಅಸಂಖ್ಯ ಸನ್ನಿವೇಶಗಳು ಅವರ ಕಾವ್ಯದಲ್ಲುಂಟು. ಆದರೆ ಅವು ಇನ್ನೂ ಅಜ್ಞಾತವಾಗಿ ಉಳಿದುಕೊಂಡಿವೆ. ಸೀತಾರಾಮ ಲಕ್ಷ್ಮಣರು ಕಾಡಿಗೆ ಹೋದ ಸನ್ನಿವೇಶದಲ್ಲಿ ಒಂದು ಚಿತ್ರಣ ಬರುತ್ತದೆ. ಎಂದಿನಂತೆ ಹೊಲ ಕೆಲಸದಿಂದ ಹಿಂದಿರುಗುತ್ತಿದ್ದ ಒಕ್ಕಲು ಮಗನೊಬ್ಬ ದೂರದಲ್ಲಿ ಸಾಯಂಕಾಲದ ಹೊಂಬಣ್ಣವನ್ನೂ ಮೀರಿಸುವ ಕೆಂದೂಳಿಯನ್ನು ಕಾಣುತ್ತಾನೆ. ತಲೆಯ ಮೇಲಿದ್ದ ತನ್ನ ಹುಲ್ಲಿನ ಹೊರೆಯನ್ನು ಹೆದ್ದಾರಿ ಬದಿಯಲ್ಲಿ ಇಳುಕಿ, ಏನೂ ತಿಳಿಯದೆ ನೋಡುತ್ತಾ ಇರುತ್ತಾನೆ. ರಾಜಬೀದಿಯನ್ನು ತುಂಬಿ ಹರಿದಿದ್ದ ಮೆರವಣಿಗೆಯನ್ನೂ ಓಡುತ್ತಿದ್ದ ರಥವನ್ನೂ ಹಿಂಬಾಲಿಸುತ್ತಿದ್ದ ಜನತೆಯನ್ನೂ ಕಾಣುತ್ತಾನೆ. ಎದೆ ಬಡಿದುಕೊಂಡು ಕೂಗುವವರನ್ನೂ ಮುಡಿಜಡೆಯನ್ನು ಕಿತ್ತುಕೊಳ್ಳುವವ

ರನ್ನೂ, ಉಡಿಗೆತೊಡಿಗೆಯನ್ನು ಹರಿದು ಕೊಳ್ಳುವವರನ್ನೂ ಹೊಟ್ಟೆ ಬಾರಿಸಿ ಕೊಳ್ಳುತ್ತಾ ಗೋಳಿಡುವವರನ್ನೂ ಬೆರಗು ಗೊಂಡು ನೋಡುತ್ತಿರುತ್ತಾನೆ. "ವಿಸ್ಮಿತ ಕೃಷೀವಲಂ ವಿಸ್ಮಯ ಸಮಾಧಿಯಿಂದೆಳ್ವ-ನಿತರೊಳ್ ಮರೆಯಾಯ್ತು ಚಿತ್ರಮಯ-ದುಸ್ಸಾಮ್ರದದುತ್ಸವಂ, ಪ್ರೋಳಲತ್ತಣಿಂ ಪೊರ ಗಣ್ಗೆ ಪರಿದು." ಇದು ಬಹು ಸುಂದರವಾದ ಒಂದು ಪ್ರತಿಮೆ. ರಾಮನ ವನವಾಸವನ್ನು ತಿಳಿಯದ ಎಷ್ಟೋ ಮಂದಿ ಅಯೋಧ್ಯೆ ಯಲ್ಲಿ ಇದ್ದರು ಎಂದೊ, ವನವಾಸದ ಬೆಳವಣಿಗೆ ಯಾರಿಗೂ ತಿಳಿಯದಷ್ಟು ಹಠಾ ತ್ತನೆ ನಡೆಯಿತು ಎಂದೊ, ರಾಮ ಕಾಡಿಗೆ ಹೋದರೂ ರೈತ ತನ್ನ ಹೊರೆಯನ್ನು ತಾನೇ ಹೊರಬೇಕು ಎಂದೊ, ಆ ಯಾವ ಘಟನಾ ಪ್ರವಾಹ ವನ್ನೂ ತಡೆಯಲಾರದೆ ಗ್ರಹಿಸಲಾರದೆ ತಾನು ಕೇವಲ ವೀಕ್ಷಕನಾಗಿ ಮಾತ್ರ ಬೆರಗುಗೊಂಡು ನೋಡುತ್ತಿರ ಬೇಕು ಎಂದೊ—ಈ ಪ್ರತಿಮೆ ಧ್ವನಿಸು ತ್ತದೆ ಎಂದು ಕೊಂಡರೂ, ಇದು ಇನ್ನೂ ಧ್ವನಿತರಂಗವನ್ನು ಮಿಡಿಯುತ್ತಾ ಅಬಾಧಿತವಾಗಿ ಉಳಿದಿರುತ್ತದೆ.

ಈ ಬಗೆಗಿನ ಸಾಮಾನ್ಯ ಚಿತ್ರಗಳಿಂದೊಡ ಗೂಡಿದ ಧ್ವನಿಪ್ರತಿಮೆಗಳಿಂದ ಮಾತ್ರವಲ್ಲ ಪೌರಾಣಿಕ ಪ್ರಮಾಣದ ಪ್ರತಿಮೆ ಗಳಿಂದಲೂ,ಆಧ್ಯಾತ್ಮಿಕ ಪ್ರತಿಮೆಗಳಿಂದಲೂ ಶ್ರೀ ರಾಮಾಯಣದರ್ಶನಂ ತುಂಬಿದೆ. ಸಾಮಾನ್ಯನಂತಿದ್ದ ಆಂಜನೇಯ 'ಪ್ರಾರ್ಥನಾ ಸೃಷ್ಟ'ನೂ, 'ಸ್ತೋತ್ರ ಸಂಪುಷ್ಟ'ನೂ ಆಗಿ ಮುಗಿಲೆತ್ತರ ಬೆಳೆದಾಗ ಪಕ್ಕದಲ್ಲಿದ್ದವರಿಗೆ ಅವನ ಭವ್ಯಗಾತ್ರ ಕಾಣಿ ಸದೆ ಜಂಘೆಯರೋಮ ದರ್ಶನ ಮಾತ್ರ ಲಭಿಸಿತು. ಅವನ ಮುಖದರ್ಶನ ಬಯಸಿದವರು ದೂರಕ್ಕೆ ಸರಿದರು: "ಪಿರಿದಕಶಿ ನಿಕಟ ವಿರಲದರ ಜಂಘೆಯ ರೋಮ ರೂಕ್ಷತೆಯ ದರ್ಶನಮೆ ಪರಮಗತಿಯಲ್ತೆ ಲಘುಚೇತ ಸದ ಮತಿಗಳಿಗೆನುತೆ, ದೂರದೂರಕ್ಕೆ ಸರಿ ದುದಾ ಮಾರುತಿಯ ಮುಖತೇಜಸದ ದರ್ಶನಾಕಾಂಕ್ಷಿ ಕಪಿಕುಲಬಲದ ಜಲಧಿ:" ಸಮಕಾಲೀನ ರಾಗದ್ವೇಷಗಳ ಸೆಳೆತಗಳಿಂದ ಬಿಡಿಸಿಕೊಂಡು ಕ್ಷೇಮ ದೂರದಲ್ಲಿ ನಿಂತು ನೋಡದಿದ್ದರೆ, ವರ್ತಮಾನವನ್ನೂ ಮೀರಿ ಬೆಳೆದ ಕೃತಿಗಳಾಗಲಿ, ವ್ಯಕ್ತಿಶಕ್ತಿಗಳಾಗಲಿ ಗೋಚರವಾಗುವುದೇ ಇಲ್ಲ. ಈ ಪ್ರತಿಮೆ ಮನನಯೋಗ್ಯ.

ಶ್ರೀ ಕುವೆಂಪು ಅವರು ಕನ್ನಡದ ಕಾವ್ಯ ವಷ್ಟನ್ನೇ ಅಲ್ಲ ಒಟ್ಟಾರೆ ಕಾವ್ಯಲೋಕ ವನ್ನೇ ಶ್ರೀಮಂತಗೊಳಿಸಿದ ಅನನ್ಯ ಕವಿ. ಅವರು ಮಕ್ಕಳಿಂದ ಹಿಡಿದು ವೃದ್ಧ ಸಮೃದ್ಧರ ತನಕ, ಶ್ರದ್ಧಾವಂತರಿಂದ ಬಂಡಾಯಗಾರರ ತನಕ, ಪ್ರತಿಮಾರಾಧಕ ರಿಂದ ಹಿಡಿದು ವಸ್ತುನಿಷ್ಠ ವಾಸ್ತವತಾ ವಾದಿಗಳ ತನಕ, ಎಲ್ಲ ಸ್ತರದ ಓದುಗರಿಗೂ ಮುಟ್ಟುವ ಎಲ್ಲ ಪ್ರಕಾರದ ಕೃತಿಗಳನ್ನು ಕೊಟ್ಟವರು. ಇವುಗಳೆಲ್ಲ ಒಂದೇ ಹದದಿಂದ ಬಂದವಲ್ಲ ಎಂಬುದನ್ನ ಒಪ್ಪಿಕೊಂಡರೂ ಅವರು ಏರಿರುವ ಸಿದ್ಧಿ ಶೈಲಗಳು ಅನೇಕ. "ಬಾರಿಸು ಕನ್ನಡ ಡಿಂಡಿಮವ" ಎನ್ನುವ ಸುಂದರವೂ ಅರ್ಥಗರ್ಭಿತವೂ ಆದ ಹಾಡಿ ನಲ್ಲಿ ಬರುವ ಆ ಮೊದಲ ನಾಲ್ಕು ಪಂಕ್ತಿ ಗಳನ್ನು ಅವರ ಕಾವ್ಯದ ನಾಲ್ಕು ಸ್ಥಲ ಗಳಾಗಿ ಪರಿಗಣಿಸಬಹುದು. "ಸತ್ತಂತಿಹರನು ಬಡಿದೆಚ್ಚರಿಸು, ಕಚ್ಚಾಡುವರನು ಕೂಡಿಸಿ ಒಲಿಸು, ಹೊಟ್ಟೆಯ ಕಿಚ್ಚಿಗೆ ಕಣ್ಣೀರ್

ಸುರಿಸು, ಒಟ್ಟಿಗೆ ಬಾಳುವ ತೆರದಲಿ ಹರಸು!" ನಾಡಿನ ಹಾಗೂ ನಮ್ಮ ಹೃದಯದ ಶಿವ ತನ್ನ ಡಿಂಡಿಮವನ್ನ ಬಾರಿಸಿ ಸತ್ತಂತಿರುವ ನಮ್ಮ ಚೇತನವನ್ನು ಎಚ್ಚರಗೊಳಿಸುವುದು ಒಂದು ಘಟ್ಟ. ಮಲಗಿದ್ದವರು ಎಚ್ಚತ್ತೊಡನೆಯೆ ಹಿಂದಿಲ್ಲದ ಜಟಿಲ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಮೂಕರಿಗೆ ಮಾತು ಕಲಿಸಿದರೆ ಅವರು ಬೈಯುತ್ತಾರೆ. ಹಾಗೆಂದು ಅವರಿಗೆ ಮಾತನ್ನೇ ಕಲಿಸದಿರುವುದು ಪಾಪ. ಮಾತು ಕಲಿಸುವಾಗ ಮಂತ್ರವನ್ನೂ ಕಲಿಸಬೇಕಾಗುತ್ತದೆ. ಅದನ್ನ ಕಲಿಸಿಯೂ ಕಲಿತವರು ದುರ್ಮಂತ್ರಿಗಳಾದರೆ ಆಗ ಅವರನ್ನು ಚತುರೋಪಾಯದಿಂದ ನಿಯಂತ್ರಿಸಬೇಕಾಗುತ್ತದೆ. ಹಾಗೆ ಮಾಡಿದಾಗ ಅಂಥವರ ಹೊರಕಿಚ್ಚು ಒಳಕಿಚ್ಚಾಗುತ್ತದೆ, ಹೊಟ್ಟೆಯ ಕಿಚ್ಚಾಗುತ್ತದೆ. ಈ ಹೊಟ್ಟೆಯ ಕಿಚ್ಚಿಗೆ ನಮ್ಮ ಎದೆಯ ಅಧಿದೈವವಾದ ಶಿವನೇ–ಹಣೆಗಣ್ಣನೇ ಕಣ್ಣೀರು ಸುರಿಸಬೇಕಾಗುತ್ತದೆ. ತಾನೇ ತನ್ನ ಡಮರು ನಾದದಿಂದ ಬಡಿದೆಚ್ಚರಿಸಿದ ಜನರೇ ಹೀಗಾದರಲ್ಲ ಎಂದೂ ಅವರ ಹೊಟ್ಟೆಯ ಕಿಚ್ಚನ್ನು ನಂದಿಸಲು ತನ್ನ ಜಟೆಯ ಗಂಗೆಗೂ ಸಾಧ್ಯವಿಲ್ಲವೆಂದು ತನ್ನ ಉರಿಗಣ್ಣಿನಲ್ಲಿ ಕಂಬನಿ ಗರೆಯಬೇಕಾಗುತ್ತದೆ. ಹೀಗೆ ಮಾಡುವ ಮೂಲಕ ತಾನೇ ಎಚ್ಚರಿಸಿದ ಜನರನ್ನು ಒಟ್ಟಿಗೆ ಬಾಳುವಂತೆ ಹರಸಬೇಕಾಗುತ್ತದೆ. ಒಂದು ಜನಾಂಗದ ಕವಿ ಬಂಡಾಯಗಾರ ಮಾತ್ರನಾದರೆ ಅವನು ತನ್ನ ಜನತೆಯನ್ನು ಬಡಿದೆಚ್ಚರಿಸಬಹುದು. ಆದರೆ ಅವನು ತನ್ನ ಜನರನ್ನು ಮುಂದಣ ಮೆಟ್ಟಿಲುಗಳಲ್ಲೂ ನಡೆಸಬೇಕಾಗುತ್ತದೆ. ಅಲ್ಲದಿದ್ದರೆ ತಾನೇ ಎಚ್ಚರಿಸಿದ ಜನ ತತ್ತರಿಸಿ ಬೀಳುವುದಕ್ಕೆ ಎಡೆಕೊಟ್ಟಂತಾಗುತ್ತದೆ. ಬಲೆಯಲ್ಲಿ ಬಿದ್ದಿರುವ ಮೃಗವನ್ನು ಬಿಡಿಸಿದರೆ ಅದು ಬಿಡುಗಡೆಯ ಉತ್ಸಾಹದಲ್ಲಿ ಓಡುತ್ತಾ ಆಳವಾದ ಕುಳಿಯಲ್ಲಿ ಬಿದ್ದಿತು, ಎನ್ನುವ ಚಿತ್ರವನ್ನು ಕುಮಾರವ್ಯಾಸ ನೀಡುತ್ತಾನೆ. ಆ ದುರಂತದಿಂದ ತನ್ನ ಜನರನ್ನು ಕವಿ ಪಾರುಮಾಡಬೇಕಾಗುತ್ತದೆ. ಈ ಅರ್ಥದಲ್ಲಿ ಕವಿ ಕುವೆಂಪು ಅಧ್ಯಯನವಾಗಬೇಕಾಗಿದೆ.

ಇಂಥ ಕವಿ ನಾಡಿನ ಜನ ಗೌರವವನ್ನು ಅಯಾಚಿತರಾಗಿ ಪಡೆದರಾದರೂ, ಬುದ್ಧಿಜೀವಿಗಳೆನಿಸಿಕೊಂಡ ಜನವರ್ಗದ ಅಕುಟಿಲ ಪ್ರೀತಿಯನ್ನು ಪಡೆದುಕೊಂಡಂತೆ ಕಾಣುವುದಿಲ್ಲ. ಉಳಿದಾವ ಕವಿಗೂ ಈ ಪ್ರಮಾಣದ ನಷ್ಟವಾಗಿಲ್ಲ. ಕವಿಗೆ ನಷ್ಟವಾಯಿತು ಎನ್ನುವುದು ತಪ್ಪುಮಾತು. ಆದ ನಷ್ಟ ಅವರಿಗೇ ಎನ್ನುವುದು ಸರಿಯಾದ ಮಾತು. ಈ ಸಂದರ್ಭದಲ್ಲಿ ೨೧–೧೧–೯೪ರ ದಿ ಹಿಂದೂ ಪತ್ರಿಕೆಯಲ್ಲಿ ಅಂಕಣಕಾರರಾದ ಸಿ. ಎಚ್. ಪ್ರಹ್ಲಾದರಾವ್ ಬರೆದಿರುವ ಬರಹವನ್ನು ಇಲ್ಲಿ ಉದ್ಧರಿಸಬಹುದು. "You have had a surfeit of Dr. K. V. Puttappa, specially on Doordarshan. One remembers the passing of B. M. Srikantiah, of Thyagaraja Paramshiva Iyer Kailasam, of Dattatreya Ramachandra Bendre, of Govinda Pai. They were so quiet, the parting both sad and universally-felt.

It sounds odd. All his life Dr. Puttappa remained

a sort of recluse (he was called Rasarishi; sages live in seclusion), and very appropriately, he recieved very little attention. He was ill for two years, and there was hardly a mention of his health. The question is, would he have approved all the noise and demonstration, the sandal wood for the funeral?

Not all knew Dr. Puttappa, even in this part of the country. A gentleman, whose mother tongue is not Kannada, innocently asked me: who was Dr. Puttappa? Even among the millions who claim Kannada as their mother tongue, how many knew Dr. Puttappa? They knew he was a recipient of numerous honours, he was our Rashtrakavi, but nothing beyond that.

My own recollection of Dr. Puttappa goes back to my high school days. In 1937, his novel 'Kanuru Subbamma Heggaditti' was a sensation; it circulated feverishly as forbidden reading does; his biography of Ramakrishna Paramahansa was universal reading. My own acquaintance was limited to his 'Kindara jogi', a poem that came to flowering in native soil. His poem on Kumara vyasa communicates the poet's enthusiasm.

To me Dr. Puttappa has always remained remote, but chance once brought me face to face with the poet. I was asked to meet Dr. Puttappa, and talk to him about the language problem. I normally write in English, but to Dr. Puttappa I worte in conventional Kannada, seeking an appointment. It arrived promptly.

Dr. Puttappa spoke to me, at his residence Udaya Ravi with sincerity, with conviction, with passion. His understanding struck me. Are you convinced, he would ask me? For a part-

ing gift he gave me his 'Ramayana Darshanam.'"

("ಡಾ॥ ಪುಟ್ಟಪ್ಪನವರ ಬಗೆಗೆ ದೂರ ದರ್ಶನವಲ್ಲಿ ಕಟ್ಟರೆಯಾಗುವಷ್ಟು ನೀವು ಕಂಡಿದ್ದೀರಿ. ಬಿ. ಎಂ. ಶ್ರೀಕಂಠಯ್ಯನವರು, ತ್ಯಾಗರಾಜ ಪರಮಶಿವ ಐಯರ್ ಕೈಲಾಸಂ, ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಗೋವಿಂದ ಪೈ ಅವರ ನಿಧನವು ಇಲ್ಲಿ ನೆನಪಾಗುತ್ತದೆ. ಆ ಎಲ್ಲವೂ ಸದ್ದುಗದ್ದಲವಿಲ್ಲದೆ, ಅವರ ಅಗಲಿಕೆ ದುಃಖ ಮಯವೂ ಸಾರ್ವತ್ರಿಕವಾಗಿ ಅನುಭವ ಗೊಂಡುದೂ ಆಗಿತ್ತು. ದೇಶದ ಈ ಭಾಗ ದಲ್ಲೂ ಎಲ್ಲರಿಗೂ ಡಾ॥ ಪುಟ್ಟಪ್ಪ ಗೊತ್ತಿರ ಲಿಲ್ಲ. ಕನ್ನಡ ತಾಯಿನುಡಿಯಲ್ಲದ ಸಜ್ಜನ ನೊಬ್ಬ ಮುಗ್ಧನಾಗಿ ನನ್ನನ್ನು ಕೇಳಿದ: 'ಡಾ॥ ಪುಟ್ಟಪ್ಪ ಎಂದರೆ ಯಾರು?' ತಾಯಿ ನುಡಿ ಕನ್ನಡವಾಗಿರುವ ಲಕ್ಷಾಂತರ ಮಂದಿ ಯಲ್ಲೂ ಎಷ್ಟು ಜನಕ್ಕೆ ಡಾ॥ ಪುಟ್ಟಪ್ಪ ಗೊತ್ತಿತ್ತು? ಅವರು ಅಸಂಖ್ಯ ಗೌರವ ಪ್ರಶಸ್ತಿಯನ್ನು ಪಡೆದವರು, ಅವರು ನಮ್ಮ ರಾಷ್ಟ್ರಕವಿ ಎಂದಷ್ಟೇ ಗೊತ್ತಿತ್ತು. ಅದ ಕ್ಕಿಂತ ಒಂದಿಷ್ಟೂ ಹೆಚ್ಚಿಲ್ಲ. ವಿಚಿತ್ರವೆನಿಸುತ್ತದೆ. ತಮ್ಮ ಜೀವನದುದ್ದಕ್ಕೂ ಡಾ॥ ಪುಟ್ಟಪ್ಪ ಒಂದು ರೀತಿಯ ಏಕಾಂತ ವಾಸಿಯಾಗಿದ್ದರು (ಅವರನ್ನು ರಸಋಷಿ ಎಂದು ಕರೆಯುತ್ತಿದ್ದರು. ಋಷಿಗಳು ಏಕಾಂತವಾಸಿಗಳು.) ಇದಕ್ಕೆ ಸರಿಯಾಗಿಯೆ ಅವರು ತುಂಬಾ ಕಡಿಮೆ ಜನಗಮನವನ್ನು ಸೆಳೆದರು. ಎರಡು ವರ್ಷದ ತನಕ ಅವರು ಖಾಯಿಲೆ ಇದ್ದರು. ಅವರ ಆರೋಗ್ಯದ ಬಗೆಗೆ ಏನೊಂದೂ ಸಮಾಚಾರವೇ ಇರಲಿಲ್ಲ. ಪ್ರಶ್ನೆ ಇದು: ಅವರು ತಮ್ಮ ಅಂತ್ಯ ಯಾತ್ರೆಗೆ ಸದ್ದುಗದ್ದಲವನ್ನಾಗಲಿ, ಪ್ರದರ್ಶನವನ್ನಾಗಲಿ, ಗಂಧದ ಚಿತೆಯನ್ನಾಗಲಿ ಬಯಸುತ್ತಿದ್ದರೆ?

ಡಾ॥ ಪುಟ್ಟಪ್ಪನವರ ಬಗೆಗಿನ ನನ್ನದೇ ಆದ ನೆನಪು ನನ್ನ ಹೈಸ್ಕೂಲ್ ದಿನಗಳಷ್ಟು ಹಿಂದಕ್ಕೆ ಹೋಗುತ್ತದೆ. ೧೯೩೭ ರಲ್ಲಿ ಅವರ ಕಾದಂಬರಿ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಒಂದು ರೋಚಕ ಭಾವೋದ್ರೇಕವಾಗಿತ್ತು. ನಿಷಿದ್ಧ ಕೃತಿಯಂತೆ ಅದು ಬಿಸಿಬಿಸಿಯಾಗಿ ಚಲಾವಣೆಗೊಂಡಿತು. ರಾಮಕೃಷ್ಣ ಪರಮ ಹಂಸರನ್ನು ಕುರಿತ ಅವರು ಬರೆದ ಜೀವನ ಚರಿತ್ರೆ ಸಾರ್ವತ್ರಿಕ ಓದಾಗಿತ್ತು. ನನ್ನ ಸ್ವಂತ ಪರಿಚಯ ಅವರ ಕಿಂದರಿಜೋಗಿ ಕವಿತೆಗಷ್ಟೇ ಮಿತವಾಗಿತ್ತು. ನಾಡಿನ ನೆಲ ದಲ್ಲಿ ಅರಳಲು ಬಂದ ಹೂವಾಗಿತ್ತು ಅದು. ಕುಮಾರವ್ಯಾಸ ಎನ್ನುವ ಅವರ ಕವಿತೆ ಅವರ ಉತ್ಸಾಹವನ್ನು ಮುಟ್ಟಿಸುತ್ತದೆ.

ನನಗೆ ಯಾವಾಗಲೂ ಡಾ॥ ಪುಟ್ಟಪ್ಪ ದೂರವೇ ಉಳಿದಿದ್ದರು. ಅವರನ್ನೊಮ್ಮೆ ಮುಖಾಮುಖಿ ಕಾಣುವ ಸನ್ನಿವೇಶ ಒದ ಗಿತು. ಭಾಷಾ ಸಮಸ್ಯೆಯನ್ನು ಕುರಿತು ಅವರೊಡನೆ ಮಾತನಾಡುವುದಕ್ಕಾಗಿ ನಾನು ನಿಯೋಜಿತನಾಗಿದ್ದೆ. ನಾನು ಸಾಮಾನ್ಯ ವಾಗಿ ಇಂಗ್ಲಿಷಿನಲ್ಲಿ ಬರೆಯುತ್ತೇನೆ. ಆದರೆ ನಾನು ಡಾ॥ ಪುಟ್ಟಪ್ಪನವರಿಗೆ ಸಾಂಪ್ರ ದಾಯಿಕ ಕನ್ನಡದಲ್ಲೇ ಬರೆದು ಅವರ ಸಂದರ್ಶನ ಸಮಯವನ್ನು ಕೇಳಿದ್ದೆ. ಉತ್ತರ ಒಡನೆಯೆ ಬಂತು. ಡಾ॥ ಪುಟ್ಟಪ್ಪ ತಮ್ಮ ಉದಯರವಿ ಮನೆಯಲ್ಲಿ ನನ್ನ ಕೂಡೆ ಮಾತನಾಡಿದರು. ಅವರ ಮಾತಿನಲ್ಲಿ ಪ್ರಾಮಾಣಿಕತೆ, ದೃಢ ಶ್ರದ್ಧೆ, ಉತ್ಕಟತೆ ಇತ್ತು. ಅವರ ಅರಿವು ನನ್ನ ಮನ

ಮುಟ್ಟಿತು. ನಿಮಗೆ ಮನದಟ್ಟಾಯಿತೆ ಎಂದು ಅವರು ಕೇಳುತ್ತಿದ್ದರು. ಸಂದರ್ಶನದ ಕೊಡುಗೆಯಾಗಿ ನನಗೆ ಅವರು ತಮ್ಮ ರಾಮಾಯಣ ದರ್ಶನಂ ನೀಡಿದರು.")

ಒಂದು ನಾಡಿನ, ಮಾತ್ರವಲ್ಲ, ಸಮಕಾಲೀನ ಜಗತ್ತಿನ ಮಹಾ ಲೇಖಕನ ಬಗೆಗೆ ಹೀಗೆ ಸಣ್ಣತನದಿಂದ ಬರೆದ ಇಂಗ್ಲಿಷ್ ಅಂಕಣಕಾರ ಅದೇ ಅಂಕಣದಲ್ಲಿ ತನ್ನ ವರ್ಗದ "ರಾಷ್ಟ್ರೀಯ ಲೇಖಕ"ನೊಬ್ಬನನ್ನು ಕುರಿತು ಹೇಗೆ ಬರೆದಿದ್ದಾರೆ, ಎಂಬುದನ್ನು ಇಲ್ಲಿ ನೋಡಬಹುದು.

"What a remarkable man Mr. S. Balu Rao is! To those who do not know him, it should suffice to say that he grew up in Sreerangapattana, for others a tourist historical spot, but Delhi became his home. Once he joined the sahitya Akadami, where he rose to occupy the editorial chair of Indian Literature.

He was here, on a vist, after 16 years, as he said, seeing places and people, among whom I was one. The loss should have been mine, and his affection for me is difficult to explain. So little in common between us: I am the easy-going sort, content with journalism; he is a serious writer.

Balu Rao has built a house, across the Jamuna, and nothing will tempt him to return. This is no place for serious work, he insists; he loves Delhi, with its extremes of cold and heat, and he has risen to its challenge. Among his achievements, are a dedicatory volume in Kannada 'Shakespeare-ge-Namaskara'.........The debt the Kannada language owes to Balu Rao grows formidably.

("ಎಂಥ ಅಸಾಧಾರಣ ಮನುಷ್ಯ ಶ್ರೀ ಎಸ್. ಬಾಲೂರಾವ್ ! ಅವರನ್ನು ತಿಳಿಯದವರಿಗೆ ಇಷ್ಟು ಹೇಳಿದರೆ ಸಾಕು: ಅವರು ಶ್ರೀರಂಗಪಟ್ಟಣದಲ್ಲಿ ಬೆಳೆದರು. ಇತರರಿಗೆ ಅದು ಚಾರಿತ್ರಿಕವಾದ ಪ್ರವಾಸಿ ಸ್ಥಾನ; ಆದರೆ ಡೆಲ್ಲಿ ಇವರ ಮನೆಯಾಯಿತು. ಒಮ್ಮೆ ಸಾಹಿತ್ಯ ಆಕಾಡಮಿಯನ್ನು ಸೇರಿದ ಮೇಲೆ ಅಲ್ಲೇ ಅವರು ಏರುತ್ತ ಏರುತ್ತ ಭಾರತೀಯ ಸಾಹಿತ್ಯದ ಸಂಪಾದಕ ಪೀಠವನ್ನು ಅಲಂಕರಿಸಿದರು. ೧೬ ವರ್ಷಗಳ ಅನಂತರ ಮೊನ್ನೆ ಅವರು ಇಲ್ಲಿಗೆ ಬಂದಿದ್ದರು; ಸ್ಥಳಗಳನ್ನು ಜನಗಳನ್ನು ಭೇಟಿಯಾಗಲೆಂದು ಬಂದಿದ್ದ ಅವರಿಗೆ ನೋಡಬೇಕಾದವರಲ್ಲಿ ನಾನೂ ಒಬ್ಬ

ಸೇರಿದ್ದೆ. ನಷ್ಟ ನನ್ನದಾಗುತ್ತಿತ್ತು. ನನ್ನ ಬಗೆಗಿನ ಅವರ ಪ್ರೀತಿಯನ್ನು ಮಾತಿನಲ್ಲಿ ವರ್ಣಿಸಲಾಗುವುದಿಲ್ಲ. ನಮ್ಮಿಬ್ಬರ ನಡುವೆ ಸಾಮಾನ್ಯವಾದದ್ದು ಅಷ್ಟೇನೂ ಇಲ್ಲ. ನಾನು ಒಂದು ಬಗೆಯ ಸುಲಭ ಯಾತ್ರಿ, ಪತ್ರಿಕಾ ಬರಹದಲ್ಲೇ ತೃಪ್ತ. ಅವರೊ, ಗಂಭೀರ ಲೇಖಕ. ಯಮುನಾ ನದಿಯ ಆಚೆ ಬಾಲುರಾವ್ ಮನೆಯೊಂದನ್ನು ಕಟ್ಟಿಕೊಂಡಿದ್ದಾರೆ. ಅವರು ಇಲ್ಲಿಗೆ ಹಿಂದಿರುಗುವಂತೆ ಮಾಡುವ ಯಾವ ಪ್ರಲೋಭನೆಯೂ ಇಲ್ಲ. ಇದು ಗಂಭೀರ ಕಾರ್ಯಕ್ಕೆ ಸ್ಥಳವೇ ಅಲ್ಲವಂತೆ. ಡೆಲ್ಲಿಯನ್ನು ಅವರು ಪ್ರೀತಿಸುತ್ತಾರೆ—ಅದರ ಚಳಿ, ಬಿಸಿಲುಗಳ ಅತಿರೇಕವಿದ್ದೂ. ಆ ಅತಿಗಳ ಸವಾಲನ್ನು ಎದುರಿಸಿದ್ದಾರೆ. 'ಷೇಕ್ಸ್‌ಪಿಯರ್‌ಗೆ ನಮಸ್ಕಾರ' ಎಂಬುದು ಅವರ ಸಾಧನೆಗಳಲ್ಲಿ ಒಂದು........ಬಾಲೂರಾಯರಿಗೆ ಕನ್ನಡ ಭಾಷೆ ದಿಗಿಲು ಹುಟ್ಟಿಸುವಷ್ಟು ಖುಣಿ.")

ಈ ಅಂಕಣ ಬರಹವನ್ನು ಓದಿದ ತಕ್ಷಣವೇ ನನಗೆ ಅನಿಸಿದ ದಿಗ್ಭ್ರಮೆ ಎಂದರೆ, 'ದೇವರೆ! ಈ ದೇಶದಲ್ಲಿ ಹೇಗೆ ಬದುಕಿರುವುದು!' ಇಪ್ಪತ್ತನೆಯ ಶತಮಾನದ ಕಡೆಯ ದಿನಗಳಲ್ಲಿ ಈ ವ್ಯವಸ್ಥಿತವಾದ ಸತ್ವಹತ್ಯೆ ವ್ಯಾಪಕವಾಗಿ ಅಬಾಧಿತವಾಗಿ ನಡೆಯುವುದು ಸಾಧ್ಯವಿದ್ದರೆ ಶಂಭೂಕ, ಏಕಲವ್ಯ, ಕರ್ಣರ ದಿನಗಳಲ್ಲಿ ಹೇಗಿದ್ದಿರಬೇಡ! ಶ್ರೀ ಕುವೆಂಪು ಇದನ್ನು ಹೇಗೆ ಅರಗಿಸಿಕೊಂಡರು? ಮೇಲೆ ಉದ್ಧರಿಸಿರುವ ಅಂಕಣ ಬರಹದ ಮಾತು ಮಾತೂ ಅಸ್ವಸ್ಥ ಮನಸ್ಸಿನ ವಿಕಾರವಾಗಿದೆ. ಅದರ ಬಗೆಗೆ ಕುಮಾರವ್ಯಾಸನ ಮಾತನ್ನೇ ಹೇಳಬೇಕು: "ಮಾತು ಹೊಲಸಿನ ಗಂಧವಾಗಿದೆ." ಇದು ಗಂಧ! ಆದರೆ........!

ವೆನಿಸ್ಸಿನ ಗಣರಾಜ್ಯ ನಾಶವಾದುದನ್ನು ಕುರಿತು ವರ್ಡ್ಸ್‌ವರ್ತ್ ಬರೆದ ಸಾನೆಟ್ಟಿನ ಕಡೆಯ ಎರಡು ಪಂಕ್ತಿಗಳು ಹೀಗಿವೆ:

Men are we, and must grieve when the shade of that which once was great is passed away."

"ನಾವು ಮನುಜರು, ಎಂದೊ ಹಿರಿದಾಗಿದ್ದುದರ ನೆಳಲು ಕಣ್ಮರೆಗೊಳಲು ದುಃಖಗೊಳ್ಳುವುದು ಸಾಧು." ಆದರೆ ಕಣ್ಣ ಮುಂದೆಯೇ ಮಹತ್ತಾಗಿ ಬೆಳೆದ ಬಾಳಿದ ಚೇತನವೊಂದರ ನಿರ್ಯಾಣದಲ್ಲಿ ಸಂತಾಪವೇ ಆಗದ ಜನರನ್ನು, ಸಂತಾಪಗೊಳ್ಳುವ ಇತರರನ್ನು ಕಂಡು ಅತಿರೇಕ ಎಂದು ಗೋಳಿಡುವ ಬುದ್ಧಿ ಜೀವಿಗಳನ್ನು ಕಂಡು ಏನೆನ್ನಬೇಕು, "ಹೊಟ್ಟೆಯ ಕಿಚ್ಚಿಗೆ ಕಣ್ಣೀರ್ ಸುರಿಸು", ಎಂದಲ್ಲದೆ?

---

ಆನಂದವು ಹೃದಯವನ್ನು ಪ್ರಫುಲ್ಲಗೊಳಿಸಿದರೆ ದುಃಖವು ಮನಸ್ಸನ್ನು ವಿಶಾಲಗೊಳಿಸುತ್ತದೆ.

—ಕಾರ್ಲೈಲ್

# ಬದಲಾವಣೆಯ ಹರಿಕಾರ

ಡಾ|| ಸಿ. ಪಿ. ಸಿದ್ಧಾಶ್ರಮ

ಕುವೆಂಪು ಜಗತ್ತಿನ ಮಹಾನ್ ಲೇಖಕರ ಪಂಕ್ತಿಗೆ ಸೇರಿದ ಹಿರಿಯ ಚೇತನ, ದೊಡ್ಡ ಸಾಧಕ. ಕನ್ನಡ ಸಾಹಿತ್ಯ, ಕರ್ನಾಟಕ ಕಂಡ ಅಪರೂಪವೂ ವಿಶಿಷ್ಟವೂ ಆದ ಸತ್ವ ಶಾಲಿ ಬರಹಗಾರ. ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮಟ್ಟಕ್ಕೆ ಏರಿಸಿದ ಧೀಮಂತ ಸಾಹಿತಿ. ಕಾವ್ಯ, ನಾಟಕ, ಕಥೆ, ಕಾಂದಬರಿ, ಮಹಾಕಾವ್ಯ, ವಿಚಾರ, ವಿಮರ್ಶೆ, ಜೀವನ ಚರಿತ್ರೆ—ಹೀಗೆ ಸಾಹಿತ್ಯದ ಎಲ್ಲ ಪ್ರಕಾರ ಗಳಲ್ಲೂ ತುಂಬ ಬೆಲೆಯುಳ್ಳ, ಸತ್ವಯುತ ವಾದ ಕೃತಿ ರಚನೆ ಮಾಡಿರುವ ಕುವೆಂಪು ಅವರು, ತಮ್ಮ ಬರವಣಿಗೆಯ ಮೂಲಕ, ಚಿಂತನೆಗಳ ಮೂಲಕ ನಮ್ಮ ಸಾಂಸ್ಕೃತಿಕ ಹಾಗೂ ಸಾಮಾಜಿಕ ವಲಯಗಳಿಗೆ ಜನಪರ ನಿಲುವಿನ ನವೀನ ದೃಷ್ಟಿಕೋನವನ್ನೂ, ಹೊಸ ಆಯಾಮವನ್ನೂ ತಂದುಕೊಟ್ಟಿದ್ದಾರೆ; ಕರ್ನಾಟಕದ ನೆಲದಲ್ಲಿ ಹೊಸ ಆಲೋಚನೆಗಳ, ತತ್ವಸಿದ್ಧಾಂತಗಳ ಅಂಕುರಾರ್ಪಣಕ್ಕೆ ನಾಂದಿ ಹಾಡಿದ್ದಾರೆ. ಯುಗ ಧರ್ಮದ ಎಲ್ಲ ಆಶಯ, ಧೋರಣೆಗಳನ್ನೂ ತಮ್ಮ ಕೃತಿಗಳಲ್ಲಿ ಸಮರ್ಥವಾಗಿ ಹಿಡಿದಿಟ್ಟಿರುವ ಕುವೆಂಪು ಅವರು, ಇಂದಿನ ಎಲ್ಲ ಎಡ ಪಂಥೀಯ ಚಳವಳಿ, ಹೋರಾಟಗಳ ಮೂಲ ಪ್ರೇರಕ ಶಕ್ತಿಯಾಗಿ ನಿಂತು ಕೊಂಡಿದ್ದಾರೆ.

ಮಲೆನಾಡಿನ ಕೃತ್ರಿಮವಲ್ಲದ ಸತ್ವಶಾಲಿ ಪರಿಸರದಲ್ಲಿ ಹುಟ್ಟಿ ಬೆಳೆದವರು, ಕುವೆಂಪು. ಕುವೆಂಪು ಅವರಿಗೆ ಮಲೆನಾಡು, ಅಲ್ಲಿನ ದಟ್ಟಕಾಡು, ಸಹ್ಯಾದ್ರಿಯ ಪಂಕ್ತಿ, ಋತುಮಾನಗಳ ಬದಲಾವಣೆ, ಬತ್ತದ ಗದ್ದೆ, ಅಡಿಕೆತೋಟ, ಮರಸುಬೇಟೆ, ಬೆಳದಿಂಗಳ ಬೇಟೆ, ಹಕ್ಕಿ ಕೂಗು, ಪ್ರಾಣಿಗಳ ಗರ್ಜನೆ, ಸೂರ್ಯೋದಯ - ಸೂರ್ಯಾಸ್ತಗಳು, ಹೂ-ಹಣ್ಣು, ಬಣ್ಣ–ಬೆಡಗುಗಳು ಕೇವಲ ಬಾಹ್ಯಲೋಕದ ವಸ್ತು ವಿಷಯಗಳಾಗಲಿ, ಅಂತರ ಸಾಧಿಸಿ ನೋಡುವ, ತಿಳಿದುಕೊಳ್ಳುವ ಸಾಮಗ್ರಿಗಳಾಗಿರಲಿಲ್ಲ. ನಿಸರ್ಗದ ಈ ಎಲ್ಲ ಬಣ್ಣ–ಬೆಡಗುಗಳು, ವೈಚಿತ್ರ್ಯ–ಸಾಹಸಗಳು, ಸಂತೋಷ–ವಿಸ್ಮಯಗಳು ಅವರ ಬದುಕಿನ ಅವಿಭಾಜ್ಯ ಅಂಗವಾಗಿದ್ದವು; ಅವರ ಭಾವಕೋಶದಲ್ಲಿ, ರಕ್ತನಾಳ ಗಳಲ್ಲಿ ಸಹಜವಾಗಿ ತುಂಬಿಕೊಂಡು ಹರಿದಾಡುತ್ತಿದ್ದವು. ಆದ್ದರಿಂದಲೇ ಕಾಡು ತನ್ನೆಲ್ಲ ವೈಚಿತ್ರ್ಯ-ವಿಸ್ಮಯಗಳ ಮೂಲಕ ಬಣ್ಣ-ಬೆಡಗುಗಳ ಮೂಲಕ ಕುವೆಂಪು ಸಾಹಿತ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ಪೂರ್ಣ ಪ್ರಮಾಣದಲ್ಲಿ ಕಾಣಿಸಿಕೊಳ್ಳಲು ಸಾಧ್ಯವಾಯಿತು. ಕುವೆಂಪು ನಿಸರ್ಗದಿಂದ, ಕಾಡಿನಿಂದ ಏನೆಲ್ಲ ಅನುಭವಗಳನ್ನು,

ಅನುಭವ ವಿಶೇಷವನ್ನು ಪಡೆದರೋ ಆ ಎಲ್ಲ ಅನುಭವಗಳನ್ನು, ಅನುಭವ ವಿಶೇಷವನ್ನು ತಮ್ಮ ಸಾಹಿತ್ಯದಲ್ಲಿ ಅರ್ಥಪೂರ್ಣವಾದ ರೀತಿಯಲ್ಲಿ ಸಮರ್ಥವಾಗಿ ಹಿಡಿದಿಟ್ಟರು; ಚಿತ್ರಿಸಿದರು. ನಿಸರ್ಗವನ್ನು ಅವರು ಕೇವಲ ಸೌಂದರ್ಯೋಪಾಸನೆಯ ದೃಷ್ಟಿಯಿಂದ ಮಾತ್ರ ಪರಿಭಾವಿಸದೆ, ನಿಸರ್ಗದ, ಕಾಡಿನ ಅಳಿವು-ಉಳಿವಿನಲ್ಲಿ ಮಾನವನ, ಸಂಸ್ಕೃತಿ-ನಾಗರಿಕತೆಗಳ ಅಳಿವು-ಉಳಿವಿನ ಪ್ರಶ್ನೆ ಅಡಗಿದೆ ಎಂದೂ ಮನಗಾಣಿಸಿದರು. ಪ್ರಕೃತಿಯಲ್ಲಿನ ಸಮತೋಲನವನ್ನೂ ಕಾಪಾಡುವುದಕ್ಕಾಗಿ, ನಾಗರಿಕತೆ-ಸಂಸ್ಕೃತಿಗಳ ಉಳಿವಿಗಾಗಿ, ಜ್ಞಾನ-ವಿಜ್ಞಾನಗಳ ವಿಕಾಸಕ್ಕಾಗಿ ಕಾಡನ್ನೂ, ನಿಸರ್ಗಸಂಪತ್ತನ್ನು ನಾಶಮಾಡದೆ, ಅದನ್ನು ನಿರಂತರವಾಗಿ ಪೋಷಿಸಿಕೊಂಡು, ಬೆಳಸಿಕೊಂಡು ಬರಬೇಕೆಂದು ಇಂದು ಪರಿಸರವಾದಿಗಳು ತೀಕ್ಷ್ಣವಾಗಿ ವಾದಿಸತೊಡಗಿದ್ದಾರೆ. ಆದರೆ ಕಾಡಿನ ಕವಿ, ಕುವೆಂಪು ತಮ್ಮ ಸಾಹಿತ್ಯದಲ್ಲಿ ಈ ಅಂಶವನ್ನು ಈ ಮೊದಲೇ ಬೆಳಕಿಗೆ ಹಿಡಿದಿದ್ದಾರೆ. ನಿಸರ್ಗ, ಮನುಷ್ಯನ ಅಂತರಂಗವನ್ನು ಬೆಳಗುವುದಲ್ಲದೆ, ಅವನ ಭೌತಿಕ ಅಗತ್ಯಗಳನ್ನೂ, ಪೂರೈಸುವುದರಿಂದ ಅದರ ರಕ್ಷಣೆ ಮತ್ತು ಪೋಷಣೆ ಅನಿವಾರ್ಯವೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಗುಡಿ-ಗುಂಡಾರಗಳಲ್ಲಿ, ಚರ್ಚು-ಮಸಜೀದಿಗಳಲ್ಲಿ ದೇವರ ಇರವನ್ನು ಕಾಣದ ಕುವೆಂಪು ಅವರು ನಿಸರ್ಗದಲ್ಲಿ, ನಿಸರ್ಗದ ಚೆಲುವಿನಲ್ಲಿ ಭಗವಂತನ ಬೆಳಕನ್ನು, ಅಸ್ತಿತ್ವವನ್ನು ಕಾಣುತ್ತಾರೆ. ದೇವರು-ಧರ್ಮಗಳ ಹೆಸರಿನಲ್ಲಿ ಇಂದು ನಾನಾ ರೀತಿಯ ಮತಗಳು, ಬಣಗಳು ಸೃಷ್ಟಿಯಾಗಿ ಮಾನವ ಜನಾಂಗ ಘರ್ಷಣೆಯಲ್ಲಿ ತೊಡಗಿರಬೇಕಾದರೆ, ಮೂರ್ತಿ ಪೂಜೆಯ ನಿರಾಕರಣೆಯನ್ನು ಮಾಡುತ್ತ ನಿಸರ್ಗದ ಚೆಲುವಿನಲ್ಲಿ ದೇವರ ಇರವನ್ನು ಕಾಣುವ ಕುವೆಂಪು ಅವರ ನಿಲವು ಬಹಳ ಮಹತ್ವದ್ದಾಗಿ ಕಾಣುತ್ತದೆ. ಮೇಲಿನ ನನ್ನ ವಿಷಯ ಪ್ರತಿಪಾದನೆಗೆ ಪೂರಕವಾಗಿ ಕುವೆಂಪು ಅವರ ನೈಸರ್ಗಿಕ ಗೀತೆಗಳನ್ನು ಸೃಜನಶೀಲ ಗದ್ಯ ಹಾಗೂ ನಾಟಕಗಳಲ್ಲಿ ಪ್ರಾಸಂಗಿಕವಾಗಿ ಮತ್ತು ಸಂದರ್ಭೋಚಿತವಾಗಿ ಬರುವ ನಿಸರ್ಗ ಬಣ್ಣನೆಯ ಭಾಗಗಳನ್ನು ಪರಿಶೀಲಿಸಬಹುದು.

ಕುವೆಂಪು ಅವರು ಅಕ್ಷರ ಸಂಸ್ಕೃತಿಯಿಂದ ವಂಚಿತವಾದ, ಆ ಕಾರಣಕ್ಕಾಗಿಯೇ ಸಾಂಸ್ಕೃತಿಕ ಅಭದ್ರತೆಯ ದುಗುಡ-ದುಮ್ಮಾನಗಳನ್ನು ಹೊತ್ತ ಸಮಾಜದಿಂದ ಬಂದಂತವರು. ಈ ಶತಮಾನದ ಆರಂಭದ ಕಾಲಘಟ್ಟದಲ್ಲಿ (೧೯೦೪ ರಲ್ಲಿ) ನಾಗರಿಕ ಪ್ರಪಂಚದಿಂದ ಬಹುದೂರವಿದ್ದ ಗೊಂಡಾರಣ್ಯದಲ್ಲಿ ಕುವೆಂಪು ಜನಿಸಿದರು. ಮರಳಿನ ಮೇಲೆ ತಮ್ಮ ಅಕ್ಷರಭ್ಯಾಸವನ್ನು ಆರಂಭಮಾಡಿದ ಕುವೆಂಪು ತಮ್ಮ ಕಾಲದ ಸಾಮಾಜಿಕ ಮತ್ತು ಸಾಂಸ್ಕೃತಿಕ ತೊಡಕುಗಳನ್ನು, ಪ್ರತಿರೋಧಗಳನ್ನು ಮೀರುತ್ತ, ಜಯಿಸುತ್ತ ತಮ್ಮನ್ನು ತಾವು ರೂಪಿಸಿಕೊಂಡವರು; ಬೆಳೆದವರು. ಆದರೆ ಸಾಂಸ್ಕೃತಿಕ ತೊಡಕುಗಳನ್ನು, ಪ್ರತಿರೋಧಗಳನ್ನು ಪರಿಹರಿಸಿಕೊಳ್ಳುವ ಜಯಿಸುವ ಛಲ, ಚೈತನ್ಯಗಳು ಎಲ್ಲರಿಗೂ ಇರುವುದಿಲ್ಲ, ಅಪರೂಪದ ಎದೆಗಾರಿಕೆ ಮತ್ತು ಮನೋಸ್ಥೈರ್ಯವನ್ನು ಹೊಂದಿದ್ದ ಕುವೆಂಪು ತಮಗೆ ಎದುರಾದ ಪ್ರತಿರೋಧ, ತೊಡಕು

ಗಳನ್ನು ಛಲದಿಂದಲೇ ಹಿಮ್ಮೆಟ್ಟಿಸಿ, ಕಷ್ಟ ಪಟ್ಟು ಓದಿ ವಿದ್ಯೆಯನ್ನು ಸಂಪಾದಿಸಿದರು. ಅಂದಿನ ಸಾಮಾಜಿಕ, ಸಾಂಸ್ಕೃತಿಕ ಅನ್ಯಾಯ, ಅಸಮಾನತೆಗಳ ಒಳಗುಟ್ಟನ್ನು ಅರಿತು ಅವುಗಳ ವಿರುದ್ಧ ಸಮರ ಸಾರಿದರು. ಹೀಗೆ ಕುವೆಂಪು ಅವರು ಶೋಷಿತ ಜನ ವರ್ಗದ. ಸಂವೇದನೆಗಳಿಗೆ ತಮ್ಮ ಸಾಹಿತ್ಯ ದಲ್ಲಿ ಪ್ರಮುಖಸ್ಥಾನ ಕೊಡುವುದರಿಂದ ಇಪ್ಪತ್ತನೆಯ ಶತಮಾನದ ಸಾಮಾಜಿಕ ಅರಿವಿನ ಲೇಖಕರಾಗಿ, ಸಾಂಸ್ಕೃತಿಕ ಕಾಳಜಿಯ ಸಾಹಿತಿಯಾಗಿ ಪ್ರಮುಖಸ್ಥಾನ ಪಡೆಯುತ್ತಾರೆ. ಇಪ್ಪತ್ತನೆಯ ಶತಮಾನದ ಸಾಹಿತ್ಯ ಚರಿತ್ರೆಯನ್ನು ಬರೆಯುವವರು ಇವರ ಬಹುಮುಖ ಪ್ರತಿಭೆಯ ಸಾಹಿತ್ಯ ಸಾಧನೆಗಾಗಿ ಇವರಿಗೆ ಅಗ್ರಸ್ಥಾನ ನೀಡು ವಾಗ, ಮೇಲಿನ ಅಂಶವನ್ನು ಬಿಡದೆ ಪ್ರಸ್ತಾಪಿಸುವುದು ಸಾಂಸ್ಕೃತಿಕ ಅಗತ್ಯ ವಾಗಿರುತ್ತದೆ.

ವರ್ಣಾಶ್ರಮ ಪದ್ಧತಿ, ಜಾತಿವ್ಯವಸ್ಥೆ, ಅನಕ್ಷರತೆ, ಗೊಡ್ಡು ಕಂದಾಚಾರಗಳನ್ನು ಕಿತ್ತೆಸೆದು, ಸರ್ವೋದಯ ಸಿದ್ಧಾಂತದ ಅಡಿಗಲ್ಲಿನ ಮೇಲೆ ಸರ್ವಸಮಾನತೆಯ ನಾಡನ್ನು ಕಟ್ಟಲು ಕುವೆಂಪು ಕರೆಕೊಟ್ಟಿ ದ್ದಾರೆ. ಸರ್ವೋದಯ, ಸಮಾನತೆ, ಪೂರ್ಣ ದೃಷ್ಟಿಗಳು ಅವರ ಸಾಹಿತ್ಯದ ಮೂಲ ಮಂತ್ರವಾಗಿವೆ. ಹಳೆಗಾಲದ ಶಾಸ್ತ್ರ, ಪುರಾಣಗಳು ಮಂಡಿಸುವ ಜನವಿರೋಧಿ ನಿಲುವುಗಳನ್ನು ತಿರಸ್ಕರಿಸಿ, ವೈಚಾರಿಕತೆ ಯನ್ನು ವೈಜ್ಞಾನಿಕ ಮನೋಧರ್ಮವನ್ನು ಬೆಳಸಿಕೊಳ್ಳಲು ಯುವಕರಿಗೆ ಸಾರಿ ಸಾರಿ ಹೇಳಿದ್ದಾರೆ. ಯುಗಧರ್ಮ ಅಪೇಕ್ಷಿತವಾದ ಈ ಎಲ್ಲ ಪ್ರಗತಿಪರ ಆಶಯ, ಧೋರಣೆ, ಹೊಸ ಆಲೋಚನೆ, ಚಿಂತನೆಗಳು ಅವರ ಸಾಹಿತ್ಯದ ವಸ್ತು, ಪಾತ್ರ, ಸನ್ನಿವೇಶಗಳ ಮಡಲಿನಲ್ಲಿ ಮಡುಗಟ್ಟಿ ನಿಂತಿವೆ. ಕುವೆಂಪು ಅವರ ಸ್ವೋಪಜ್ಞತೆಯನ್ನೂ ನಾವಿಲ್ಲಿ ಕಾಣುತ್ತೇವೆ. ಕುವೆಂಪು ಅವರ ವಿಶ್ವ ಮಾನವ ಗೀತೆಯಾದ, ಅನಿಕೇತನ, ಪದ್ಯದ ಚರ್ಚೆಯ ಮೂಲಕವಾಗಿ ಮೇಲಿನ ಅಂಶ ಗಳ ಅನಾವರಣಕ್ಕೆ ನಾವು ತೊಡಗಬಹುದು. ಮನುಷ್ಯ ಜಾತಿ, ಮತ, ಧರ್ಮ, ದೇಶ, ಭಾಷೆ, ವರ್ಣಗಳ ಸಂಕುಚಿತ ಭಾವನೆಗಳಿಂದ ತನ್ನನ್ನು ತಾನು ವಿಮೋಚನೆಗೊಳಿಸಿ ಕೊಂಡು ಕೇವಲ ಮನುಷ್ಯನಾಗಬೇಕು, ವಿಶ್ವಮಾನವನಾಗಬೇಕೆಂಬುದು ಇಲ್ಲಿನ ಮುಖ್ಯ ಆಶಯವಾಗಿದೆ.

ಓ ನನ್ನ ಚೇತನ
ಆಗು ನೀ ಅನಿಕೇತನ !

ರೂಪರೂಪಗಳು ದಾಟಿ,
ನಾಮಕೋಟಿಗಳನು ಮೀಟಿ
ಎದೆಯ ಬಿರಿಯೆ ಭಾವದೀಟಿ
ಓ ನನ್ನ ಚೇತನ
ಆಗು ನೀ ಅನಿಕೇತನ

ನೂರು ಮತದ ಹೊಟ್ಟತೂರಿ
ಎಲ್ಲ ತತ್ವದೆಲ್ಲೆ ಮೀರಿ
ನಿರ್ದಿಗಂತವಾಗಿ ಏರಿ
ಓ ನನ್ನ ಚೇತನ
ಆಗು ನೀ ಅನಿಕೇತನ

ಇವು ಆ ಪದ್ಯದ ಕೆಲವು ನುಡಿಗಳು, ಮನುಷ್ಯ ಜಾತಿ, ಮತ, ವರ್ಣಗಳ ಕೃತ್ರಿಮ ಅಡ್ಡಗೋಡೆಯನ್ನು ಕಟ್ಟಿಕೊಂಡು ಕುಬ್ಜ ನಾಗತೊಡಗಿದ್ದಾನೆ; ಮನುಷ್ಯತ್ವವನ್ನು ನಾಶಮಾಡಿಕೊಂಡು ಸದಾ ಕಲಹ, ತಂಟೆ ಗಳಲ್ಲಿ ತೊಡಗಿ ತನ್ನ ಗೋರಿಯನ್ನು ತಾನೇ

ತೋಡಿಕೊಳ್ಳತೊಡಗಿದ್ದಾನೆ. ಇಂದು ಮಾನವ ಎಷ್ಟು ಸಣ್ಣವನಾಗಿದ್ದಾನೆಂದರೆ, ಕಾಫಿಗೆ ಹೋಗಲು, ವಿಹಾರಕ್ಕೆ ಹೊರಡಲು, ಸಿನೇಮಾ ನೋಡಲು, ಊಟಮಾಡಲು, ನಿಲ್ಲಲು ಕುಳಿತುಕೊಳ್ಳಲು—ಹೀಗೆ ಪ್ರತಿಯೊಂದು ಚಟುವಟಿಕೆ, ವ್ಯವಹಾರಗಳಿಗೂ ಜಾತಿ ಬಂಧುಗಳನ್ನು, ಜಾತಿಗಳನ್ನು ಆಶ್ರಯಿಸತೊಡಗಿದ್ದಾನೆ. ತನ್ನದಲ್ಲದ ಬೇರೆ ಜಾತಿ-ಮತಗಳಲ್ಲಿ ಮನುಷ್ಯರಿದ್ದಾರೆ, ಅವರಿಗೂ ಮನಸ್ಸು ಮನುಷ್ಯತ್ವವಿದೆ ಎಂಬ ಸಾಮಾನ್ಯ ಅರಿವೂ ಇಲ್ಲದಾಗಿದೆ. ತನ್ನದಲ್ಲದ ಅನ್ಯ ಜಾತಿಯ ಮನುಷ್ಯ ಜೀವಿಯ ಬಗ್ಗೆ —ಅವನು ಬೇರೆ ಜಾತಿಗೆ ಸೇರಿದವನೆಂಬ ಕಾರಣಕ್ಕಾಗಿಯೇ—ನಮಗೆ ವಿಶ್ವಾಸ, ಪ್ರೀತಿ, ಆದರಗಳು ಇಲ್ಲದೆ ಹೋದರೆ ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಭ್ರಾತೃತ್ವ ರಾಷ್ಟ್ರೀಯ ಐಕ್ಯತೆ—ಮುಂತಾದ ಮಾತುಗಳಿಗೆ ಅರ್ಥತುಂಬುವುದು ಸಾಧ್ಯವಾಗುತ್ತದೆಯೇ? ನಾವು ಒಬ್ಬ ವ್ಯಕ್ತಿ ಬೇರೆ ಜಾತಿಗೆ ಸೇರಿದವನೆಂಬ, ಆತನ ಜಾತಿಭಿನ್ನತೆಯ ಕಾರಣಕ್ಕಾಗಿಯೇ ಅವನ ಸ್ನೇಹವನ್ನು, ಪ್ರೀತಿಯನ್ನು ಕಳೆದುಕೊಂಡರೆ ಅವನಿಂದ, ಅವನ ವರ್ಗದಿಂದ ದಕ್ಕಬಹುದಾದ ಅನುಭವ ವಿಶೇಷದಿಂದ ವಂಚಿತರಾಗುವುದಿಲ್ಲವೇ? ಇದರಿಂದಾಗಿ ನಮ್ಮ ಬದುಕಿನ ಸೃಜನಶೀಲತೆಗೆ ಕುಂದುಂಟಾಗುವುದಿಲ್ಲವೇ? —ಇವನೆಲ್ಲ ತುಂಬ ಗಂಭೀರವಾಗಿ ಆಲೋಚಿಸಿಯೇ ಕುವೆಂಪು ಈ ವಿಶ್ವಮಾನವ ಗೀತೆಯನ್ನು ಅತ್ಯಂತ ಅರ್ಥಪೂರ್ಣವಾದ ರೀತಿಯಲ್ಲಿ ಹೆಣೆದು ಅನಿಕೇತನ ಪ್ರಜ್ಞೆಯನ್ನು ರೂಢಿಸಿಕೊಳ್ಳಲು ಕರೆಕೊಟ್ಟಿದ್ದಾರೆ. ಆದರೆ ಎಷ್ಟೋ ಜನಕ್ಕೆ ಕುವೆಂಪು ಅವರ ಈ ವಿಶ್ವಮಾನವ ಗೀತೆಯ ಅರ್ಥಗೊತ್ತಿಲ್ಲದೆ ಹೋಗಿದೆ. ಆದ್ದರಿಂದ ಈ ಗೀತೆಯ ಅರ್ಥ, ಧ್ವನಿಗಳನ್ನು ಮನೆಮನೆಗೂ ತಲುಪಿಸಿ ಯುವಕ-ಯುವತಿಯರಲ್ಲಿ ಜಾಗೃತಿಯನ್ನುಂಟು ಮಾಡುವ ಕೆಲಸ ಮೊದಲು ಆಗಬೇಕಿದೆ.

೧

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?
ಎಂದೊ ಮನು ಬರೆದಿಟ್ಟುದಿಂದೆಮಗೆ
ಕಟ್ಟೇನು?
ನಿನ್ನೆದೆಯ ದನಿಯೆ ಋಷಿ! ಮನು ನಿನಗೆ
ನೀನು।

'ಯಾವ ಕಾಲದ ಶಾಸ್ತ್ರವೇನು ಹೇಳಿದರೇನು'

೨

ಹಳೆಮತದ ಕೊಳೆಯೆಲ್ಲ ಹೊಸಮತಿಯ
ಹೊಳೆಯುಲ್ಲಿ
ಕೊಚ್ಚಿ ಹೋಗಲಿ: ಬರಲಿ ವಿಜ್ಞಾನ ಬುದ್ಧಿ.
ವೇದ ಪ್ರಮಾಣತೆಯ ಮರುಮರೀಚಿಕೆಯಲ್ಲಿ
ನೀರಡಿಸಿ ಕೆಡದಿರಲಿ ಸ್ವಾತಂತ್ರ್ಯ ಸಿದ್ಧಿ
ತರುಣರಿರ, ಎದ್ದೇಳಿ! ಎಚ್ಚರಗೊಳ್ಳಿ!
ಬಾಳಿ।

'ತರುಣರಿರ ಎದ್ದೇಳಿ'

೩

ಗುಡಿ ಚರ್ಚು ಮಸಜೀದಿಗಳ ಬಿಟ್ಟು
ಹೊರಬನ್ನಿ,
ಬಡತನವ ಬುಡಮುಟ್ಟ ಕೀಳಬನ್ನಿ
ಮೌಢ್ಯತೆಯ ಮಾರಿಯನು ಹೊರದೂಡ
ಲೈತನ್ನಿ
ವಿಜ್ಞಾನದೀವಿಗೆಯ ಹಿಡಿಯಬನ್ನಿ
ಓ ಬನ್ನಿ, ಸೋದರರೆ, ಬೇಗ ಬನ್ನಿ!

'ಓ ಬನ್ನಿ, ಸೋದರರೆ, ಬೇಗ ಬನ್ನಿ!'

೪

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ
ಮತಿಯಿಂದ ದುಡಿಯಿರೈ ಲೋಕಹಿತಕೆ
ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜಮತಕೆ
ಓ ಬನ್ನಿ ಸೋದರರೆ, ವಿಶ್ವಪಥಕೆ !

'ಓ ಬನ್ನಿ, ಸೋದರರೆ, ಬೇಗ ಬನ್ನಿ!' ಮೊದಲನೆಯ ನುಡಿ, ಮನುಧರ್ಮಶಾಸ್ತ್ರ ಮುಂತಾದ ಹಳೆಗಾಲದ ಮಾನವವಿರೋಧಿ ಶಾಸ್ತ್ರಪುರಾಣಗಳು ಮಾನವಜನಾಂಗಕ್ಕೆ ಮಾಡಿದ ಮೋಸ, ಅನ್ಯಾಯಗಳ ಅರಿವು ಮೂಡಿಸುತ್ತಲೇ ಅಂಥ ಗೊಡ್ಡು ಶಾಸ್ತ್ರ-ಪುರಾಣಗಳಿಗೆ ಬೆಲೆ ಕೊಡದೆ ತಿರಸ್ಕರಿಸಿ, ಅಂತರಂಗದ ದನಿ ಎಂಬ ವೇದ ಹೇಳುವ ಮಾತಿಗೆ ಬೆಲೆಕೊಟ್ಟು ಬದುಕನ್ನು, ಬದುಕಿನ ಅರ್ಥವನ್ನು ವಾಸ್ತವಿಕತೆಯ ಆಧಾರದ ಮೇಲೆ ಪುನರ್‌ಸೃಷ್ಟಿಸಿಕೊಳ್ಳಬೇಕೆಂಬ ಸ್ಪಷ್ಟ ತಿಳಿವಳಿಕೆಯನ್ನು ಕೊಡುತ್ತದೆ. ಎರಡನೆಯ ನುಡಿ ಮೊದಲ ನುಡಿಯ ಅಂಶವನ್ನೆ ವ್ಯಕ್ತಪಡಿಸುತ್ತ, ಅವೈಜ್ಞಾನಿಕವಾದ, ಅವೈಚಾರಿಕವಾದ ಹಳೆಗಾಲದ ನಂಬುಗೆ, ತಿಳಿವಳಿಕೆಗಳು ಹೊಸ ವಿಜ್ಞಾನ, ಆಲೋಚನೆಗಳ ಬೆಳಕಿನಲ್ಲಿ ಕೊಚ್ಚಿಹೋಗಿ ನವೀನ ವಿಚಾರ, ಚಿಂತನೆ-ಮಂಥನೆಗಳು ರೂಪಗೊಳ್ಳಲಿ, ಆ ಮೂಲಕ ಬದುಕು ಅರ್ಥಪೂರ್ಣವಾಗಲಿ ಎಂಬ ಧೋರಣೆಯನ್ನು ವ್ಯಕ್ತಪಡಿಸುತ್ತದೆ.

ದೇವತಾಸ್ತುತಿಯಿಂದ, ಆರಾಧನೆಗಳಿಂದ, ಪುಣ್ಯಕ್ಷೇತ್ರಗಳ ದರ್ಶನದಿಂದ ಈ ದೇಶಕ್ಕೆ ಶಾಪವಾಗಿ ಅಂಟಿರುವ ಬಡತನ, ಅಜ್ಞಾನಗಳು ನಿವಾರಣೆಯಾಗಲು ಸಾಧ್ಯವಿಲ್ಲವಾದ್ದರಿಂದ ಜನರು ಧಾರ್ಮಿಕ ಕ್ರಿಯೆಗಳಿಂದ ಹೊರಬಂದು, ಅಂತರಂಗದಲ್ಲಿ ಹುತ್ತ ಕಟ್ಟಿರುವ ಅಜ್ಞಾನ ಮೂಢನಂಬಿಕೆಗಳನ್ನು ತೊಲಗಿಸಿ, ಮತಭಾವನೆಯಿಂದ ಮುಕ್ತರಾಗಿ, ವೈಜ್ಞಾನಿಕವಾಗಿ ವಿಚಾರಮಾಡುವುದನ್ನು, ಬದುಕುವುದನ್ನು ಕಲಿತು, ತಾನು ಕೇವಲ ಮನುಷ್ಯನೆಂಬ ದೃಢ ನಿರ್ಧಾರ ಹೊಂದಿ, ಮನುಜಮತಕೆ ವಿಶ್ವಪಥಕೆ ಸೇರಿ ವಿಶ್ವಮಾನವನಾಗಬೇಕೆಂಬುದು ಮೂರು ಮತ್ತು ನಾಲ್ಕನೆಯ ನುಡಿಗಳ ಆಶಯವಾಗಿದೆ.

'ಗೊಬ್ಬರ' ಎಂಬ ಕವನ ಕುವೆಂಪು ಅವರ ಅಪಾರ ಸಾಮಾಜಿಕ ಕಾಳಜಿಗೆ, ದುಡಿಯುವ ವರ್ಗದ ಮೇಲೆ ಅವರಿಗಿರುವ ಅಪ್ಪಟ ಪ್ರೀತಿ, ಗೌರವಗಳಿಗೆ ಹಿಡಿದ ಕನ್ನಡಿಯಾಗಿದೆ. ರೈತರು, ಕೂಲಿಕಾರರು, ಕಾರ್ಮಿಕರು-ಒಟ್ಟಿನಲ್ಲಿ ದುಡಿಯುವ ಶ್ರಮಿಕ ವರ್ಗ ಕಾವ್ಯದ ವಸ್ತುವಾಗುವುದು, ಕಾವ್ಯ ರಚಿಸುವುದು, ಅಧಿಕಾರದ ಗದ್ದುಗೆಗೆ ಏರುವುದು ಸಂಪ್ರದಾಯವಾದಿಗಳ, ಮೂಲಭೂತವಾದಿಗಳ ಪ್ರಕಾರ ಅಸಂಭವ, ಅಸಾಧ್ಯ, ಧರ್ಮಗ್ಲಾನಿ. ಆದರೆ ಹೊಸ ಆಲೋಚನೆ, ನವೀನ ದೃಷ್ಟಿಕೋನಗಳನ್ನು ಹೊಂದಿರುವ ಜನಪರ ಕವಿ, ಮಣ್ಣಿನ ಮಗ ಕುವೆಂಪು ಅವರು ಈ ಕವನದಲ್ಲಿ 'ಗೊಬ್ಬರ'ವನ್ನು ಅಂದರೆ ಜನಸಾಮಾನ್ಯ ರೈತ, ಕಾರ್ಮಿಕ ಶ್ರಮಿಕ ವರ್ಗದ ಜನರನ್ನು ಅಧಿಕಾರದ ಗದ್ದುಗೆಗೆ ಏರಿಸಿದ್ದಾರೆ; ಆ ಮೂಲಕ ಅವರಿಗೆ ಚರಿತ್ರೆಯಲ್ಲಿ ಮೊಟ್ಟಮೊದಲ ಬಾರಿಗೆ ಸ್ಥಾನಮಾನಗಳನ್ನು ನೀಡಿ ಗೌರವಿಸಿದ್ದಾರೆ; ಅವರ ಮಹತ್ವ, ಮಹಿಮೆಗಳನ್ನು ಎತ್ತಿ ಹಿಡಿದಿದ್ದಾರೆ. ಈ ಕವನದ ಆಶಯ ಇಷ್ಟಕ್ಕೆ

ಮುಕ್ತಾಯವಾಗುವುದಿಲ್ಲ. ಇಲ್ಲಿಯವರೆಗೂ ಅಕ್ಷರ ಸಂಸ್ಕೃತಿಯ ಸಂಪರ್ಕಕ್ಕೆ ಬರದ ಶೂದ್ರರು, ಶೂದ್ರಾತಿಶೂದ್ರರು ಮೊಟ್ಟ ಮೊದಲಬಾರಿಗೆ ಅಕ್ಷರ ಕಲಿತು ಬರವಣಿಗೆಗೆ ಇಳಿದಾಗ, ಪ್ರತಿಷ್ಠಿತ ವರ್ಗದ ಮೂಲಭೂತವಾದಿಗಳು 'ಶೂದ್ರ ಬರವಣಿಗೆ ಮಾಡ ಬಲ್ಲನೆ!" ಎಂದು ಅಸಹನೆಯಿಂದ ಮೂದಲಿಸಿದಾಗ ಅದಕ್ಕೆ ಗಟ್ಟಿ ಉತ್ತರವನ್ನೂ ಸ್ಪಷ್ಟವಾಗಿಯೇ ನೀಡಿದ್ದಾರೆ. ಒಂದು ಅರ್ಥದಲ್ಲಿ ಕುವೆಂಪು ಅವರ ದೈತ್ಯ ಪ್ರತಿಭೆಯ ಸಾಧನೆ ಸಿದ್ಧಿಗಳು, ವ್ಯಕ್ತಿತ್ವದ ಹಿರಿಮೆ ಗರಿಮೆಗಳು ಅವಕ್ಕೆಲ್ಲ ಉತ್ತಮ ಉತ್ತರಗಳೆನ್ನಬೇಕು.

'ಶ್ರೀಸಾಮಾನ್ಯರ ದೀಕ್ಷಾಗೀತೆ, ಪ್ರಜಾಪ್ರಭುತ್ವ ವ್ಯವಸ್ಥೆಯು ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಸಾಮಾನ್ಯ ವ್ಯಕ್ತಿಗೆ ಇರಬೇಕಾದ ಸ್ಥಾನಮಾನಗಳ ವ್ಯಾಖ್ಯಾನವಾಗಿದೆ. ಗಣರಾಜ್ಯ ವ್ಯವಸ್ಥೆಯಲ್ಲಿ ಸಾಮಾನ್ಯ 'ಪ್ರಜೆ'ಯೇ 'ಪ್ರಭು' ಎಂಬ ನಿಲುವನ್ನು ಈ ಕವನ ಅನೇಕ ಮಜಲುಗಳಲ್ಲಿ ಉತ್ತಮವಾಗಿ ಮಂಡಿಸುತ್ತದೆ. 'ಕಲ್ಕಿ' ಕವನ ಕವಿಯ ವರ್ಗಪ್ರಜ್ಞೆಯ ದ್ಯೋತಕವಾಗಿ ಮೂಡಿಬಂದಿದೆ. ಬಡವರ ದುಡಿಮೆಯ ಫಲವನ್ನು, ಅವರ ರಕ್ತಮಾಂಸವನ್ನು ಹೀರಿ ಸುಖಲೋಲುಪತೆಯಲ್ಲಿ ಮೆರೆಯುವ ಶ್ರೀಮಂತವರ್ಗ, ಬಡವರ ಸಹನೆ ಮೀರಿದಾಗ, ಅವರಿಗೆ ಪ್ರಜ್ಞೆ ಮೂಡಿದಾಗ ಅವರು ಯಾವ ರೀತಿ ಆಕ್ರೋಶಭರಿತ ಕ್ರಾಂತಿ ಕೈಕೊಂಡು ಶ್ರೀಮಂತ ವರ್ಗದ ಸೊಕ್ಕನ್ನು ಮುರಿದು, ವರ್ಗಭೇದವನ್ನು ತೊಡೆದುಹಾಕುತ್ತಾರೆಂಬುದನ್ನು ಎರಡು ಸಾರ್ಥಕ ಪ್ರತಿಮೆಗಳ ಮೂಲಕ ಧ್ವನಿಪೂರ್ಣವಾಗಿ ಕಟ್ಟಿಕೊಡಲಾಗಿದೆ. ಇಲ್ಲೆಲ್ಲ ಕವಿ ಬಡವರ, ಶೋಷಿತರ, ಜನಸಾಮಾನ್ಯರ ಪರವಾಗಿ ತಮ್ಮ ದನಿಯನ್ನು ಎತ್ತರಿಸಿ ಮಾತನಾಡಿದ್ದಾರೆ; ತಮ್ಮ ಪ್ರಾಮಾಣಿಕ ಕಾಳಜಿಯನ್ನು ತುಂಬ ಜೀವಂತವಾಗಿ ಪ್ರಕಟಗೊಳಿಸಿದ್ದಾರೆ. 'ಕ್ರಾಂತಿಕಾಳಿ', ರೈತನ ದೃಷ್ಟಿ', 'ದೇವರು–ಪೂಜಾರಿ', ಹೊಸಬಾಳಿನ ಗೀತೆ' 'ಚಂದ್ರಗ್ರಹಣ ಮತ್ತು ಸಾಕ್ರೆಟೀಸ್'–ಮುಂತಾದ ಅನೇಕ ಕವನಗಳಲ್ಲಿ ಕುವೆಂಪು ಅವರ ವೈಚಾರಿಕ ನಿಲವನ್ನು, ಸಾಮಾಜಿಕ ಪ್ರಜ್ಞೆ ಮತ್ತು ಕಾಳಜಿಯನ್ನು, ಜನಪರ ನಿಲವನ್ನು ನಾವು ಕಾಣಬಹುದಾಗಿದೆ.

'ಶೂದ್ರ ತಪಸ್ವಿ', 'ಬೆರಳ್‌ಗೆ ಕೊರಳ್' ನಾಟಕಗಳು ಪುರಾಣ ಕಾಲದ ವಸ್ತುವನ್ನು ಸಮಕಾಲೀನ ಬದುಕಿನ ಆಶಯ, ಧೋರಣೆಗಳಿಗೆ, ಯುಗಧರ್ಮದ ಅಪೇಕ್ಷೆಗೆ ತಕ್ಕನಾಗಿ ಮಾರ್ಪಡಿಸಿಕೊಂಡ ಉತ್ತಮ ನಾಟಕಗಳು. ಶೂದ್ರರ, ಕೆಳವರ್ಗದವರ ಬೌದ್ಧಿಕ ಸಾಧನೆಗೆ, ಆ ಮೂಲಕವಾದ ಅವರ ವ್ಯಕ್ತಿತ್ವಕ್ಕೆ ಇಂಬುಕೊಡುವ, ಬೆಲೆಕೊಡುವ ಸ್ತುತ್ಯ ಕಾರ್ಯವನ್ನು 'ಶೂದ್ರ ತಪಸ್ವಿ' ನಾಟಕದಲ್ಲಿ ಮಾಡಲಾಗಿದೆ. ರಾಮಾಯಣ ಕಾಲದಲ್ಲಿ ಅನ್ಯಾಯಕ್ಕೆ ಅವಜ್ಞೆಗೆ ಒಳಗಾಗಿದ್ದ ಶಂಬೂಕ ಋಷಿ ಇಲ್ಲಿ ಆ ಅನ್ಯಾಯ ಅವಜ್ಞೆಗಳಿಂದ ಬಿಡಿಸಿಕೊಂಡು ಬೌದ್ಧಿಕವಾಗಿ ವಿಕಾಸಹೊಂದಿದ ಶೂದ್ರರ ಸಿದ್ಧಿ–ಸಾಧನೆಗಳ ಪ್ರತೀಕವಾಗಿ, ಸಮಾನತೆಯ ಮೌಲ್ಯಕ್ಕೆ ಸಂಕೇತವಾಗಿ ಚಿತ್ರಿತವಾಗಿದ್ದಾನೆ. ಏಕಲವ್ಯನ ಬೆರಳಿಗೆ ದ್ರೋಣನ ಕೊರಳು ಬಲಿಯಾಗುವುದೆಂಬ ಅಂಶವನ್ನು

ಏಕಲವ್ಯನ ತಾಯಿಯ ಶಾಪದ ಮೂಲಕ ಬೆಳಕಿಗೆ ಹಿಡಿದು ಶೂದ್ರಶಕ್ತಿಗೆ ಸಾಮಾಜಿಕ ನ್ಯಾಯವನ್ನು ಒದಗಿಸುವ ಪ್ರಯತ್ನವನ್ನು 'ಬೆರಳ್ ಗೆ ಕೊರಳ್' ನಾಟಕದಲ್ಲಿ ಸಾರ್ಥಕವಾದ ರೀತಿಯಲ್ಲಿ ಮಾಡಲಾಗಿದೆ. ದೇವರು–ಧರ್ಮಗಳ ಹೆಸರಿನಲ್ಲಿ ಪುರೋಹಿತಶಾಹಿ ವರ್ಗ ಜನಸಾಮಾನ್ಯ ಮುಗ್ಧ ಜನರನ್ನು ಶೋಷಣೆ ಮಾಡುವುದನ್ನು ತಿಳಿಯಪಡಿಸುತ್ತಾ, ಶ್ರಮಿಕ ವರ್ಗದವರ ದಲಿತರ ನಿಷ್ಕಾಮ ಕಾರ್ಯದಲ್ಲಿ ಭಗವಂತನ ಅಸ್ತಿತ್ವವಿದೆ ಎಂದು ಜಲಗಾರ ನಾಟಕದಲ್ಲಿ ಮನಗಾಣಿಸಿದ್ದಾರೆ. ಒಟ್ಟಿನಲ್ಲಿ ಈ ಮೂರೂ ನಾಟಕಗಳು ಸಮಕಾಲೀನ ಆಶೋತ್ತರಗಳನ್ನು, ಸಮಾನತೆಯನ್ನು, ಯುಗಧರ್ಮದ ಅಪೇಕ್ಷೆಗಳನ್ನು ಅತ್ಯಂತ ಸಮರ್ಥವಾಗಿ ಬಿಂಬಿಸುತ್ತವೆ. 'ಶೂದ್ರ ತಪಸ್ವಿ' ನಾಟಕ ಪ್ರಕಟವಾದ ಹೊಸತರಲ್ಲಿ ಮಾಸ್ತಿಯಂಥವರು ನಾಟಕದ ಧೋರಣೆಯನ್ನು ಆಕ್ಷೇಪಿಸಿದ್ದು ಆಶ್ಚರ್ಯ ತರುವ ಸಂಗತಿಯಾಗಿದೆ.

'ಪಾಪಿಗುದ್ಧಾರಮಿಹುದಾ ಸೃಷ್ಟಿಯ ಮಹದ್ವ್ಯೂಹ ರಚನೆಯಲಿ' ಎಂಬುದೇ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದ ಕೇಂದ್ರ ಬಿಂದುವಾಗಿದೆ. ಆದ್ದರಿಂದ ರಾವಣ, ಮಂಥರೆಯಂಥ ಪಾತ್ರಗಳಿಗೂ ಇಲ್ಲಿ ಉದ್ಧಾರವಿದೆ; ಏಳ್ಗೆಯಿದೆ. ಇಲ್ಲಿ ರಾಮ-ರಾವಣ ಬೇರೆಬೇರೆ ಅಲ್ಲ. ರಾಮ ಶಕ್ತಿಯೇ ರಾವಣ ಶಕ್ತಿಯಾಗಿದೆ. ಕೊನೆಗೆ ರಾವಣ ಶಕ್ತಿ ರಾಮಶಕ್ತಿಯಲ್ಲಿ ಲೀನವಾಗುತ್ತದೆ. ಸೀತೆ ರಾವಣನಿಗೆ ಮಾತೃಸ್ವರೂಪಿಯಾಗಿ ಕಂಡು ಬರುತ್ತಾಳೆ. ಒಟ್ಟಿನಲ್ಲಿ ಈ ಮಹಾಕಾವ್ಯದಲ್ಲಿ ಜನಪರ ದೃಷ್ಟಿಯೇ ಪ್ರಧಾನ ಆಶಯವಾಗಿದ್ದು, ಪೂರ್ಣ ದೃಷ್ಟಿ, ಸರ್ವೋದಯಗಳ ಚಿಂತನೆಯೂ ಇದೆ.

ಮಹಾಕಾವ್ಯದಂತೆ ಮಹಾಕಾದಂಬರಿಗಳನ್ನು ನೀಡಿದ ದೈತ್ಯ ಪ್ರತಿಭೆ, ಕುವೆಂಪು ಅವರದು. ಮಲೆನಾಡು ಮತ್ತು ಮಲೆನಾಡಿನ ಸಮಸ್ತ ಅನುಭವಗಳನ್ನು ತಮ್ಮಲ್ಲಿ ಅಡಗಿಸಿಕೊಂಡಿರುವ ಕಾದಂಬರಿಗಳಿವು. ಪ್ರೀತಿ–ಪ್ರೇಮದ ಮೂಲಕ ಮಾನವ ಬದುಕು ಸಹ್ಯವಾಗುತ್ತ, ವಿಕಾಸವಾಗುತ್ತ ಹೋಗುತ್ತದೆಂಬ ಅಂಶವನ್ನು ಈ ಕಾದಂಬರಿಗಳು (ಮಲೆಗಳಲ್ಲಿ ಮದುಮಗಳು, ಕಾನೂರು ಹೆಗ್ಗಡತಿ) ತಿಳಿಯಪಡಿಸುತ್ತವೆ. ಗುತ್ತಿಯಂಥ ದಲಿತ ಪಾತ್ರ ಇಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ ಎಂಬ ಅಂಶ ಗಮನಾರ್ಹವಾದುದು.

ನಾಡು-ನುಡಿಯ ಉಳಿವಿಗಾಗಿ, ಏಳ್ಗೆಗಾಗಿ ಕುವೆಂಪು ಸತತವಾಗಿ ಹೋರಾಟ ಮಾಡುತ್ತ ಬಂದವರು. 'ಕನ್ನಡಕ್ಕಾಗಿ ಕೈಯೆತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ!' ಎಂದು ಸಾರುತ್ತ ಬಂದವರು. ಹರಿದು ಹಂಚಿ ಹೋಗಿದ್ದ ಕರ್ನಾಟಕದ ಪ್ರದೇಶಗಳನ್ನು ಒಂದುಗೂಡಿಸಿ ಅಖಂಡ ಕರ್ನಾಟಕವನ್ನು ಕಟ್ಟಬೇಕೆಂಬ ಸ್ಪಷ್ಟ ನಿಲವನ್ನು ಹೊಂದಿದ್ದವರು. ಕನ್ನಡ ಶಿಕ್ಷಣದ ಮಾಧ್ಯಮದ ಭಾಷೆಯಾಗಬೇಕು, ಆಡಳಿತದ ಭಾಷೆಯಾಗಬೇಕೆಂಬ ದೃಢ ನಿರ್ಧಾರ ಹೊಂದಿದವರು. ಕನ್ನಡ ಭಾಷೆ ಎಂದರೆ ಅದು ಕೇವಲ ಒಂದು ಜನಾಂಗದ, ಒಂದು ರಾಜ್ಯದ ನುಡಿ ಮಾತ್ರವಲ್ಲ, ಸಮಾಜವನ್ನು, ಸಂಸ್ಕೃತಿಯನ್ನು ಜನರ ಬದುಕನ್ನು ಕಟ್ಟಿ, ರೂಪಿಸಿ, ಬೆಳೆಸುವ ಚೈತನ್ಯಶಾಲಿ ಶಕ್ತಿ ಎಂದು ನಂಬಿದ್ದವರು ಕುವೆಂಪು. ಆದ್ದರಿಂದಲೇ ದೇವಭಾಷೆ

ಯೆಂದು, ರಾಜನುಡಿಯೆಂದು, ರಾಷ್ಟ್ರಭಾಷೆಯೆಂದು, ಸಂಸ್ಕೃತ, ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳು ಕನ್ನಡ ನುಡಿಯ ಮೇಲೆ, ಜನತೆಯ ಮೇಲೆ ಮಾಡುವ ದಮನಕಾರಿ ಆಕ್ರಮಣವನ್ನು ತಡೆಯಲು ಕನ್ನಡ ಜನತೆಗೆ 'ಬಾರಿಸು ಕನ್ನಡ ಡಿಂಡಿಮವ' ಎಂದು ಕರೆ ಕೊಟ್ಟಿದ್ದಾರೆ. ಇಂಗ್ಲಿಷನ್ನು ಬಲವಂತಾಗಿ ಶಿಕ್ಷಣ ಮಾಧ್ಯಮದ ಭಾಷೆಯಾಗಿ ಮಕ್ಕಳ ಮೇಲೆ ಹೇರುವುದನ್ನು ಕಂಡು, ಮನನೊಂದವರಾಗಿ 'ಪಾರು ಮಾಡೆಮ್ಮನೀ ಇಂಗ್ಲಿಷಿನಿಂದ' ಎಂದು ಮೊರೆ ಇಡುತ್ತಾರೆ. ಇಂಗ್ಲೀಷ್ ಎಂಬ ಕಲ್ಲುಕುಂಡದಲ್ಲಿ ಕನ್ನಡ ಮಕ್ಕಳ ಪ್ರತಿಭೆ ಎಂಬ ಅರಳಿಮರ ಬೆಳೆದು ದೊಡ್ಡದಾಗಲು ಸಾಧ್ಯವಿಲ್ಲವಾದ್ದರಿಂದ ಇಂಗ್ಲಿಷನ್ನು ಶಿಕ್ಷಣದ ಮಾಧ್ಯಮದ ಭಾಷೆಯಾಗಿ ಸ್ವೀಕಾರ ಮಾಡುವುದು ಅತ್ಯಂತ ಅಪಾಯಕಾರಿಯಾದುದು ಎಂದು ರೋಷದಿಂದ ನುಡಿಯುತ್ತಾರೆ. ಒಟ್ಟಿನಲ್ಲಿ ಕುವೆಂಪು ತಮ್ಮ ಶ್ರೇಷ್ಠ ಮಟ್ಟದ ಬರವಣಿಗೆಯ ಮೂಲಕವಾಗಿ ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಶ್ರೀಮಂತಗೊಳಿಸಿದರು, ಕುವೆಂಪು ಮುದ್ರೆಯನ್ನು ಒತ್ತಿದರು. ತಮ್ಮ ಜನಪರ ಕಾಳಜಿ ಮತ್ತು ಸಂವೇದನೆಗಳಿಂದಾಗಿ, ಅಖಂಡ ಮಾನವ ಪ್ರೇಮದಿಂದಾಗಿ ಕರ್ನಾಟಕದಲ್ಲಿ ಮುಂದೆ ಹುಟ್ಟಿಬಹುದಾದ ಸಾಹಿತ್ಯಿಕ ಸಾಂಸ್ಕೃತಿಕ ಸಿದ್ಧಾಂತ-ಚಳವಳಿಗೆ ಪ್ರೇರಕ ಶಕ್ತಿಯಾಗಿ ಸ್ಫೂರ್ತಿಯ ಸೆಲೆಯಾಗಿ ನಿಂತುಕೊಂಡರು.



ಧರ್ಮಬುದ್ಧಿ ಇದ್ದವನನ್ನು ಮೃತ್ಯು ಕೂಡಾ ಮುಟ್ಟದು. ಪ್ರತಿ ಕೃತಿಯಲ್ಲಿಯೂ ಧರ್ಮವಿರಬೇಕು, ಆದರಿಂದಲೇ ವ್ಯಕ್ತಿಯು ಪರಿಪೂರ್ಣನಾಗುತ್ತಾನೆ.

—ಚಾಣಕ್ಯ

# ಕುವೆಂಪು ಅಮರರಾದರು

ಎಂ. ಎಸ್. ಲಿಂಗಪ್ಪ

ದಿನಾಂಕ ೧೦-೧೧-೯೪ ರ ಬೆಳಗು ಎಂದಿನ ಬೆಳಗಾಗಿರಲಿಲ್ಲ. ಎಲ್ಲರ ಹೃಯ ಬಡಿತವನ್ನು ಕ್ಷಣಕಾಲ ನಿಲ್ಲಿಸಿಬಿಡುವ ಸುದ್ದಿ ಎಲ್ಲರ ಕಿವಿಯನ್ನು ಆಕಾಶವಾಣಿ ಕೇಂದ್ರದ ಮೂಲಕ ಬಂದು ಅಪ್ಪಳಿಸಿತು. ಬೆಳಗಿನ ಸೂರ್ಯ ಮಂಕಾಗಿ ಕಂಡ. ಗಾಳಿ ನಿಂತಂತಾಯಿತು. ಆಕಾಶವೆಲ್ಲ ಮೋಡಕವಿದ ಅನುಭವವಾಯಿತು. ನಾಡಿನ ಕವಿಸೂರ್ಯ ಅಸ್ತಂಗತವಾಗಿದ್ದ. "ಹೋಗುವೆನು ನಾ ಮಲೆಯ ನಾಡಿಗೆ ಒಲುಮೆಯ ಗೂಡಿಗೆ" ಎಂದು ಎಂದೋ ಹಾಡಿದ್ದ ಕವಿ ಮತ್ತೆ ಬರಲಾರದ ನಾಡಿಗೆ ಹೊರಟು ಹೋಗಿದ್ದರು. ನಾಡಿಗೆ ವಿಧಾಯ ಹೇಳಿದ್ದರು.

ಕುಪ್ಪಳ್ಳಿಯ ಪುಟ್ಟಪ್ಪನಾಗಿ ಹುಟ್ಟಿ ಮೈಸೂರಿನ ಉದಯರವಿಯಲ್ಲಿ ಅರಳಿ ಕವಿಯಾಗಿ, ರಾಷ್ಟ್ರಕವಿಯಾಗಿ, ವಿಶ್ವಕವಿಯಾಗಿ. ಮಕ್ಕಳಿಗೆ ಪ್ರೀತಿಯ ತಂದೆಯಾಗಿ, ಶಿಷ್ಯರಿಗೆ ಪ್ರಿಯಗುರುವಾಗಿ, ವಿಶ್ವಮಾನವನಾಗಿ, ಜೀವನ ಯಾತ್ರೆಯನ್ನು ಸಾಗಿಸಿದ್ದರು.

ಶ್ರೀ ಕುವೆಂಪು ಅವರು ಹಾಸಿಗೆ ಹಿಡಿದು ಹತ್ತಿರ ಹತ್ತಿರ ಮೂರು ವರ್ಷಗಳೆ ಕಳೆದಿದ್ದವು. ಅವರ ಸಾವು ಅನಿರೀಕ್ಷಿತವಲ್ಲವಾದರೂ ಆ ಸುದ್ದಿ ಮಾತ್ರ ಕೇಳಿದವರ ಕಿವಿಗೆ ಬರಸಿಡಿಲೆ ಆಯಿತು. ಕಾರಣ, ಅವರು ನಾಡಿನ ಆಸ್ತಿಯಾಗಿದ್ದರು. ನಮ್ಮ ಸಂಸ್ಕೃತಿಯ ನೇತಾರರಾಗಿದ್ದರು. ಕನ್ನಡದ ಕೀರ್ತಿಯನ್ನು ವಿಶ್ವಮಟ್ಟಕ್ಕೆ ಏರಿಸಿದ್ದರು. ಅವರ ಸಾವಿನ ಸುದ್ದಿಯನ್ನು ಕೇಳುತ್ತಿದ್ದಂತೆಯೆ ಉದಯರವಿಗೆ ಜನ ಮುತ್ತಿಕೊಂಡರು. ಪೋಲೀಸಿನವರು ಬಂದರು. ಕವಿಯ ಅಂತಿಮ ದರ್ಶನವನ್ನು ಪಡೆಯಲು ತೊಂದರೆಯಾಗದಂತೆ ಎಲ್ಲ ಸಿದ್ಧತೆಗಳನ್ನು ಏರ್ಪಡಿಸಿದರು. ಪೋಲೀಸಿನವರು ಮುನ್ನೆಚ್ಚರಿಕೆ ವಹಿಸದಿದ್ದರೆ ಆ ಜನ ಜಂಗುಳಿಯನ್ನು ನಿಯಂತ್ರಿಸಲು ಸಾಧ್ಯವಾಗುತ್ತಿರಲಿಲ್ಲ.

ಕವಿಗಳ ಪಾರ್ಥಿವ ಶರೀರವನ್ನು ಉದಯರವಿಯಲ್ಲಿ ಇಡಲಾಗಿತ್ತು. ನೋಡಿದವರಿಗೆ ಚಿರನಿದ್ರೆಯಲ್ಲಿರುವಂತೆ ತೋರುತ್ತಿದ್ದರು. ಚಿತ್ರರಂಗದ ಮೇರುಪರ್ವತ ಡಾ|| ರಾಜ್‌ಕುಮಾರ್, ಕರ್ನಾಟಕದ ಮುಖ್ಯಮಂತ್ರಿಗಳಾದ ಶ್ರೀ ಎಂ. ವೀರಪ್ಪಮೊಯಿಲಿ, ಉಪಮುಖ್ಯಮಂತ್ರಿ ಶ್ರೀ ಎಸ್. ಎಂ. ಕೃಷ್ಣ, ಮಠಾಧಿಪತಿಗಳು, ಕಲಾವಿದರು, ರಾಜಕಾರಣಿಗಳು ಸಾಹಿತಿಗಳು ಮಾತ್ರವಲ್ಲ ಶಾಲಾ ಹುಡುಗರು, ಕೂಲಿನಾಲಿ ಮಾಡುವವರು, ಹಣ್ಣು ಹಣ್ಣು ಮುದುಕರು, ಎಳೆ

ಮಕ್ಕಳ ತಾಯಂದಿರು ಬಂದರು. ಸುಮಾರು ನೂರು ಕಿ. ಮೀ. ಉದ್ದದ ಸಾಲಿನಲ್ಲಿ ನಿಂತು ಬಿಸಿಲು ಗಾಳಿ ಎನ್ನದೆ ಕಾದು ಕವಿಗಳ ಅಂತಿಮ ದರ್ಶನ ಪಡೆದರು. ಮುಂಜಾನೆಯಿಂದ ಪ್ರಾರಂಭವಾದ ಜನ ಸಾಗರ ಪಾರ್ಥಿವ ಶರೀರವನ್ನು ಕುಪ್ಪಳ್ಳಿಗೆ ತೆಗೆದುಕೊಂಡು ಹೋಗುವವರೆಗೆ ನಡೆದೇ ಇತ್ತು. ಪಾರ್ಥಿವ ಶರೀರವನ್ನು ತೆಗೆದುಕೊಂಡು ಹೋದಮೇಲೂ ಪರ ಊರಿನಿಂದ ಜನಗಳು ಬರುತ್ತಲೇ ಇದ್ದರು. ಇಂಥ ಜನಸಾಗರವನ್ನು ನಾನು ನೋಡಿಯೇ ಇರಲಿಲ್ಲ. ಒಂದೇ ಮಾತಿನಲ್ಲಿ ಹೇಳುವುದಾದರೆ ಜನರಪರಸೆಯೇ ಸೇರಿತ್ತು.

ಕವಿಗಳ ಪಾರ್ಥಿವ ಶರೀರವನ್ನು ಬಹುಬೇಗ ತೆಗೆದುಕೊಂಡು ಹೋಗಿಬಿಟ್ಟರು. ಈ ರಾತ್ರಿ ಎಲ್ಲ ಇಲ್ಲಿಯೇ ಇಡಬೇಕಾಗಿತ್ತು ಎಂದು ಕೆಲವರು ಮಾತಾಡಿಕೊಳ್ಳುತ್ತಿದ್ದರು. ಇನ್ನೂ ಕೆಲವರು ಮೈಸೂರಿನ ಬೀದಿ ಬೀದಿಗಳಲ್ಲಿ ಮೆರವಣಿಗೆ ಮಾಡಲಿಲ್ಲವಲ್ಲ ಎಂದು ಕೊರಗುತ್ತಿದ್ದರು. ಕವಿಗಳ ಅಂತಿಮ ಕ್ರಿಯೆಯನ್ನು ಮೈಸೂರಿನಲ್ಲಿ ಮಾಡಬೇಕೆಂಬುದು ಹಲವರ ಅಭಿಪ್ರಾಯವಾಗಿತ್ತು. ಆದರೆ ಇವರುಗಳ ಆಸೆ ಈಡೇರದೇ ಹೋದದ್ದು ಆಶ್ಚರ್ಯಕರ ಸಂಗತಿ. ಕವಿಗಳ ಅಂತಿಮ ಸಂಸ್ಕಾರ ಮೈಸೂರಿನಲ್ಲಿ ಯಾವುದಾದರೂ ಒಳ್ಳೆ ಸ್ಥಳದಲ್ಲಿ ನಡೆದಿದ್ದರೆ ಶ್ರೀ ಕುವೆಂಪು ಟ್ರಸ್ಟಿನ ಕವಿಶೈಲ ಅಥವಾ ಮಾನಸ ಗಂಗೋತ್ರಿ ಆವರಣ—ಅದೊಂದು ಸಾಂಸ್ಕೃತಿಕ ಕೇಂದ್ರವಾಗುತಿತ್ತು. ಸ್ಫೂರ್ತಿಯ ನೆಲೆಯಾಗುತಿತ್ತು. ಶಿವಮೊಗ್ಗೆಯ ಮೂಲೆಯೊಂದಕ್ಕೆ ಯಾರು ತಾನೇ ಹೋಗಲು ಸಾಧ್ಯ. ಇಂಥ ಅವಕಾಶವನ್ನು ಕೆಲವು ವಿಚಾರವಾದಿಗಳು ಎನ್ನುವವರು ತಪ್ಪಿಸಿಬಿಟ್ಟರು.

ಕವಿಗಳ ಅಗಲಿಕೆಯ ಸುದ್ದಿಯನ್ನು ಕೇಳುತ್ತಿದ್ದಂತೆಯೇ ಮೈಸೂರಿನ ಬೀದಿ ಬೀದಿಗಳಲ್ಲಿ ಮಹಾಕವಿಗಳ ಭಾವಚಿತ್ರಗಳನ್ನಿಟ್ಟು, ಹೂಮಾಲೆ ಹಾಕಿ, ದೀಪಹಚ್ಚಿ ಜನ ತಮ್ಮ ಪ್ರೀತಿಯ ಕಾಣಿಕೆಯನ್ನು ಅಂತಿಮವಾಗಿ ಸಲ್ಲಿಸಿ ತೃಪ್ತಿಪಟ್ಟರು. ನಾಡಿನ ಪತ್ರಿಕೆಗಳೆಲ್ಲ ಇದೇ ಸುದ್ಧಿಯನ್ನು ಪ್ರಕಟಿಸಿದವು. ವಾರಪತ್ರಿಕೆಗಳೆಲ್ಲ ಸಂಪಾದಕೀಯ ಬರೆದವು. ಹಲವು ಜನ ಗಣ್ಯರು ಪತ್ರಿಕೆಗಳಿಗೆ ಲೇಖನ ಬರೆದರು. ವಾಚಕರವಾಣಿ ಕಾಲಂ ಎಲ್ಲ ಈ ವಿಷಯಕ್ಕೆ ಮೀಸಲಾಯಿತು. ನಾಡಿನ ಮೂಲೆ ಮೂಲೆಗಳಲ್ಲಿ ಸಂತಾಪ ಸಭೆಗಳು ಏರ್ಪಟ್ಟವು.

ಚಲನಚಿತ್ರದ ನಾಯಕಮಣಿಗಳು ಸತ್ತಾಗ, ಒಮ್ಮೊಮ್ಮೆ ತಮ್ಮ ಪ್ರೀತಿಯ ರಾಜಕಾರಣಿಗಳು ಸತ್ತಾಗ ಜನ ನಗರದ ಕೆಲವು ಕಡೆ ಅಂಥವರ ಫೋಟೋ ಇಟ್ಟು ಪೂಜೆ ಮಾಡುವುದನ್ನು ನಾನು ನೋಡಿದ್ದೇನೆ. ಆದರೆ ಒಬ್ಬ ಕವಿ, ಸಾಹಿತಿ ಸತ್ತಾಗ ಜನ ಈ ರೀತಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದ್ದು ಇದೇ ಮೊದಲಿರಬಹುದು. ನಗರದ ನಾನಾ ಕಡೆ ಜನ ಕವಿಗಳ ಭಾವಚಿತ್ರಕ್ಕೆ ಹೂಮಾಲೆ ಹಾಕಿ ಅಂತಿಮ ನಮನ ಸಲ್ಲಿಸುತ್ತಿದ್ದ ದೃಶ್ಯ ಅಂದು ಸರ್ವಸಾಮಾನ್ಯವಾಗಿತ್ತು. ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟಿನ ಮುಂಭಾಗದಲ್ಲಿ ಇಟ್ಟಿದ್ದ ಭಾವಚಿತ್ರಕ್ಕೆ ದಾರಿಯಲ್ಲಿ ಹೋಗುತ್ತಿದ್ದವರು ಚಪ್ಪಲಿ ದೂರ ಬಿಟ್ಟು ಬಳಿಗೆ ಬಂದು ನಮಸ್ಕಾರ ಮಾಡಿ ಹೋಗುತ್ತಿದ್ದರು.

ಒಂಟಿಕೊಪ್ಪಲಿನಲ್ಲಿ ಆಟೋ ಡ್ರೈವರ್‌ಗಳೆಲ್ಲ ಸೇರಿ ಕವಿಗಳ ಭಾವಚಿತ್ರವನ್ನು ಹೂವಿನಿಂದ ಅಲಂಕರಿಸಿದ್ದ ರೀತಿ ವಿನೂತನವಾಗಿತ್ತು. ಅಲ್ಲಿ ಸುರಿದಿದ್ದ ಹೂವಿನರಾಶಿ ಅವರೆಲ್ಲರ ಪ್ರೀತಿಯ ದ್ಯೋತಕವಾಗಿತ್ತು. ಅವರೆಲ್ಲ ಆಟೋಗಳನ್ನು ನಡೆಸದೆ ಮೌನವಾಗಿ ಕುಳಿತು ಪ್ರಾರ್ಥನೆ ಸಲ್ಲಿಸುತ್ತಿದ್ದರು. ಈ ದೃಶ್ಯ ಎಲ್ಲರ ಮನಮಿಡಿಯುವಂತಿತ್ತು. ಈ ದೃಶ್ಯವನ್ನು ನಗರದ ಹಲವು ಪತ್ರಿಕೆಗಳು ಮುಖಪುಟದಲ್ಲಿ ಪ್ರಕಟಿಸಿದವು.

ನಮ್ಮ ಕಾಲೇಜಿನಲ್ಲಿರುವ ಕವಿಗಳ ಭಾವಚಿತ್ರಕ್ಕೆ ಹಾಕಲು ಹೂವಿನ ಹಾರ ತರಲು ಹೋದೆ. ಹೂವೆಲ್ಲ ಖಾಲಿಯಾಗಿತ್ತು. ಒಂದೆರಡು ಮಾರು ಮಾತ್ರ ಹೂವಿತ್ತು. 'ಏನಮ್ಮ ಇಷ್ಟುಬೇಗ ಹೂವೆಲ್ಲ ಮುಗಿದಿದೆ' ಎಂದೆ. ಏನು ಸ್ವಾಮಿ ನಿಮಗೆ ಗೊತ್ತಿಲ್ಲವೆ, ಕುವೆಂಪು ಸತ್ತೋದರಂತೆ. ನಮಗೆಲ್ಲ ಇವತ್ತು ಸ್ವಲ್ಪ ಹೊತ್ನಲ್ಲೇ ಭಾರಿ ವ್ಯಾಪಾರ ಆಯ್ತು. ನಾನು ನಮ್ಮ ಹೊಲಕ್ಕೆ ಹೋಗುವಾಗ ಅವರನ್ನು ನೋಡಿದ್ದೆ, ದೊಡ್ಡ ಆಳು, ನೀವು ಇನ್ನೂ ನೋಡಾಕೆ ಹೋಗಲಿಲ್ವ ಎಂದಳು. ಉಳಿದಿದ್ದ ಎರಡು ಮಾರು ಹೂ ಕೊಡಮ್ಮ ಎಂದೆ. ಆಕೆ ಒಂದು ಮಾರಿಗೆ ಮಾತ್ರ ದುಡ್ಡುಕೊಡಿ. ಇನ್ನೊಂದು ಮಾರು ನನ್ನ ಕಡೆಯಿಂದ ಸೇರಲಿ" ಎಂದು ಹೇಳಿದಾಗ ನಾನು ಮರು ಮಾತಾಡಲಿಲ್ಲ. ಆಕೆಯ ಮುಖ ಬಾಡಿದ ಹಾಗೆ ಕಾಣಿಸಿತು. ಕುವೆಂಪು ಜನಮನದಲ್ಲಿ ಹೇಗೆ ಬೇರು ಬಿಟ್ಟಿದ್ದರು ಎಂಬುದಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ ?

ಕುವೆಂಪು ಕೀರ್ತಿಯನ್ನು ಶನಿ ಎಂದು ಕರೆದರು. ಆದರೆ ಕೀರ್ತಿ ಶನಿ ಮಾತ್ರ ಅವರನ್ನು ಜೀವನದುದ್ದಕ್ಕೂ ಹಿಂಬಾಲಿಸಿತು. ಸಾವಿನಲ್ಲೂ ಅದು ತನ್ನ ನಿಜ ಸ್ವರೂಪವನ್ನು ತೋರಿಸೇಬಿಟ್ಟಿತು.

ಕುವೆಂಪು ಅವರನ್ನು ನಾನು ಮೊದಲು ನೋಡಿದ್ದು ಮಹಾರಾಜ ಕಾಲೇಜಿನ ವಿದ್ಯಾರ್ಥಿಯಾಗಿದ್ದಾಗ. ಹಳ್ಳಿಯಿಂದ ಮೈಸೂರಿಗೆ ಓದಲು ಬಂದಾಗ ನಾನು ಮೊದಲು ನೋಡಬೇಕು ಎನಿಸಿದ್ದು ಕುವೆಂಪು ಅವರನ್ನು. ಕಾರಣ ಇಂದಿಗೂ ಗೊತ್ತಿಲ್ಲ. ಬಹುಶಃ ನಾನು ಕನ್ನಡವನ್ನು ಐಚ್ಛಿಕ ವಿಷಯವನ್ನಾಗಿ ಅಭ್ಯಾಸ ಮಾಡುತ್ತಿದ್ದುದು ಕಾರಣವಿರಬಹುದು. ಸಂಜೆ ಐದರ ಸಮಯಕ್ಕೆ ನಾನು ಮತ್ತು ನನ್ನ ಸ್ನೇಹಿತ ಇಬ್ಬರೂ ಉದಯರವಿಗೆ ಹೋದೆವು. ಕವಿಗಳು ಏನನ್ನೋ ಓದುತ್ತ ವರಾಂಡದಲ್ಲಿ ಕುಳಿತಿದ್ದರು. ನಮ್ಮ ಪರಿಚಯ ಮಾಡಿಕೊಂಡೆವು. ಅವರಿಗೆ ತುಂಬಾ ಸಂತೋಷವಾಯಿತು. ಅವರು 'ಇತ್ಯಾದಿ' ಎಂಬ ಪುಸ್ತಕಕ್ಕೆ ಸಹಿಮಾಡಿಕೊಟ್ಟರು. ನಮಗೆ ಹಿಡಿಸಲಾರದ ಆನಂದವಾಯಿತು. ಕವಿಗಳ ದರ್ಶನ ದುರ್ಲಭ ಎಂದು ಕೆಲವರು ಹೇಳುತ್ತಿದ್ದ ಮಾತು ಸತ್ಯ ದೂರವೆನಿಸಿತು. ಕೊನೆಯಲ್ಲಿ ನಮಗೆ ವಿಶ್ವಮಾನವ ಸಂದೇಶದ ಕೆಲವು ಪುಸ್ತಕಗಳನ್ನು ಕೊಟ್ಟರು ಆ ನೆನಪು ನನಗೆ ಇಂದಿಗೂ ಮಾಸಿಲ್ಲ.

ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟಿಗೆ ನಾನು ಸೇರಿದ ಮೇಲೆ ಪೂಜ್ಯ ದೇಜಗೌ ಅವರ ಜೊತೆಯಲ್ಲಿ ಕವಿಗಳ ಮನೆಗೆ ಆಗಿಂದಾಗ್ಗೆ ಹೋಗುವ ಭಾಗ್ಯ ದೊರೆಯುತ್ತಿತ್ತು.

ಕವಿಗಳು ಪತ್ನಿ ವಿಯೋಗದ ನಂತರ ಹೆಚ್ಚು ಹೆಚ್ಚು ಅಂತರ್ಮುಖಿಗಳಾಗ

ತೊಡಗಿದರು. ನಾವು ಮೊದಲು ನೋಡು ತ್ತಿದ್ದ ಕುವೆಂಪು ಮಾಯವಾಗಿ ಹೋಗಿದ್ದರು. ನಿಜವಾದ ಅರ್ಥದಲ್ಲಿ ಅವರು ವಿರಾಗಿಗಳಾಗಿದ್ದರು. ಸದಾಕಾಲ ಪತ್ನಿಯ ಭಾವಚಿತ್ರದ ಮುಂದೆ ಕುಳಿತಿರುತ್ತಿದ್ದರು. ಕವಿಗಳು ಕಣ್ಣುಮುಚ್ಚಿ ಯಾವುದೋ ಲೋಕದಲ್ಲಿ ಇರುವವರಂತೆ ಕುಳಿತಿರುತ್ತಿದ್ದರು. ಇಂಥ ದೃಶ್ಯವನ್ನು ನಾನು ಅನೇಕ ಬಾರಿ ನೋಡಿದ್ದೇನೆ. ಹಲವಾರು ಚಿಂತನೆಗಳು ನನ್ನ ಮನಸ್ಸನ್ನು ಕಾಡಿವೆ. ಅರ್ಧನಾರೀಶ್ವರರ ಚಿತ್ರ ನನ್ನ ಕಣ್ಣ ಮುಂದೆ ಬಂದಿದೆ. ಷಹಜಾನ್ ತನ್ನ ಪ್ರೀತಿಯ ಹೆಂಡತಿಯನ್ನು "ನನ್ನ ಮೇಲೆ ನಿನಗೆ ಪ್ರೀತಿ ಇರುವುದಾದರೆ ಈ ಅರಮನೆಯ ಉಪ್ಪರಿಗೆಯಿಂದ ಕೆಳಗೆ ಬೀಳು" ಎಂದನಂತೆ. ಆಕೆ ಅಲ್ಲಿಂದ ಬಿದ್ದು ಪ್ರಾಣಬಿಟ್ಟಳಂತೆ. ಆಕೆಯ ನೆನಪಿಗೆ ಆತ ತಾಜ್‌ಮಹಲ್ ಕಟ್ಟಿಸಿದನಂತೆ. ಇದು ಇತಿಹಾಸದ ಕಥೆ. ಗಂಡನಿಗಾಗಿ ತಮ್ಮ ಜೀವಿತವನ್ನೆಲ್ಲ ಮುಡುಪಾಗಿಟ್ಟ ಇಂಥ ಅನೇಕ ನಾರೀಮಣಿಗಳ ಬಗ್ಗೆ ಕೇಳಿದ್ದೇವೆ. ಆದರೆ ಹೆಂಡತಿಯ ಸಾವಿನ ನಂತರ ಆಕೆಯ ನೆನಪಿನಲ್ಲೆ ತಮ್ಮ ಜೀವಮಾನವನ್ನೆಲ್ಲ ಕಳೆದ ವ್ಯಕ್ತಿಗಳು ಅಪರೂಪ. ಹೇಮಾವತಿಯವರು ತೀರಿಕೊಂಡ ಬಳಿಕ ತಮ್ಮ ಕಾರ್ಯಿತ್ರೀ ಪ್ರತಿಭೆಯನ್ನು ಕುವೆಂಪು ಕಳೆದುಕೊಂಡರು. ಮುಂದೆ ಒಂದೇ ಒಂದು ಸಾಲನ್ನು ಅವರಿಂದ ಬರೆಯಲು ಸಾಧ್ಯವಾಗಲಿಲ್ಲ. ಇದು ನಿಜವಾದ ದಾಂಪತ್ಯ. 'ನನಗೆ ನೀನು, ನಿನಗೆ ನಾನು' ನಿಜವಾದ ಅರ್ಥದಲ್ಲಿ ಆಗಿದ್ದವರು ಕುವೆಂಪು ಮತ್ತು ಹೇಮಾವತಿಯವರು.

ಹೇಮಾವತಿಯವರು ತೀರಿಕೊಂಡ ಬಳಿಕ ಕುವೆಂಪು ಅವರು ಹಂತ ಹಂತವಾಗಿ ಹೊರ ಪ್ರಪಂಚದಿಂದ ದೂರ ಸರಿಯತೊಡಗಿದರು. ಪತ್ರಿಕೆ ಓದುವುದು, ರೇಡಿಯೊ ವಾರ್ತೆ ಕೇಳುವುದು, ಹಸಿವಾದಾಗ ಅಲ್ಲ, ಎಚ್ಚರವಾದಾಗ ಊಟ ತಿಂಡಿ, ಉಳಿದಂತೆ ಅಂತರ್ಮುಖಿ. ಇಂಥ ಸಮಯದಲ್ಲಿ ಮಗಳಾದ ತಾರಿಣಿಯವರು ಮಗಳ ಪಾತ್ರದ ಜೊತೆಗೆ ತಾಯಿಯಾಗಿಯೂ ನಡೆದುಕೊಂಡರು. ಕವಿಗಳ ಶರೀರ ದಿನೇ ದಿನೇ ಕೃಶವಾಗತೊಡಗಿತು. ಹಾಸಿಗೆ ಹಿಡಿದರು. ತಿಂಗಳುಗಳಲ್ಲ ವರ್ಷಗಳು ಕಳೆದವು. ಕವಿಗಳ ಆರೈಕೆಯ ಸಂಪೂರ್ಣ ಜವಾಬ್ದಾರಿ ತಾರಿಣಿಯವರದಾಯಿತು. ಆ ತಾಯಿ ಒಂದು ದಿನವೂ ಬೇಸರಪಟ್ಟುಕೊಳ್ಳಲಿಲ್ಲ. ಅನೇಕ ಸಂದರ್ಭಗಳಲ್ಲಿ ನಾನು ನೋಡಿದ್ದೇನೆ ತಾರಿಣಿಯವರು ಕವಿಗಳ ಪಕ್ಕದಲ್ಲಿ ನಿಂತು ಅವರ ಗಡ್ಡ ಸವರುತ್ತಾ, ತಲೆನೇವರಿಸುತ್ತಾ, ಅಣ್ಣಾ ಅಣ್ಣಾ ಎಂದು ಪ್ರೀತಿಯಿಂದ ಮಾತಾಡಿಸುವುದನ್ನು.

ಕವಿಗಳ ಆರೋಗ್ಯ ತೀರಾ ಹದಗೆಟ್ಟಾಗ ಸರ್ಕಾರ ಅವರಿಗೆ ಉಚಿತ ವೈದ್ಯಕೀಯ ಸೌಲಭ್ಯವನ್ನು ಒದಗಿಸುತ್ತದೆ. ಇಬ್ಬರು ದಾದಿಯರನ್ನು ನೇಮಿಸುತ್ತದೆ. ಆದರೆ ಇಬ್ಬರೂ ಒಟ್ಟಿಗೆ ರಜಹಾಕಿ ಹೋಗುವ ಸಂದರ್ಭಗಳು ಬರುತ್ತಿದ್ದವು. ಇಂಥ ಸಮಯದಲ್ಲೆಲ್ಲ ತಾರಿಣಿಯವರು ದಾದಿಯರ ಮೇಲೆ ಎಂದೂ ಕೋಪಿಸಿಕೊಂಡವರಲ್ಲ. ಈ ಸೇವೆ ನನ್ನ ಪುಣ್ಯವಿಶೇಷ ಎಂದು ತಿಳಿದು ಪ್ರೀತಿಯಿಂದ ತಂದೆಯನ್ನು ನೋಡಿಕೊಳ್ಳುತ್ತಿದ್ದರು, ಮಗಳಾಗಿ ಅಲ್ಲ, ತಾಯಿಯಾಗಿ.

ನಾನು ಪೂಜ್ಯ ದೇಜಗೌ ಅವರ ಜೊತೆಯಲ್ಲಿ ಅನೇಕ ಸಂದರ್ಭಗಳಲ್ಲಿ ಕವಿಗಳ ಮನೆಗೆ ಹೋಗಿದ್ದೇನೆ. ಸಾಮಾನ್ಯವಾಗಿ ಸಂಜೆ ಐದರ ಸಮಯದಲ್ಲಿ ಹೋಗು

ತ್ತಿದ್ದೆವು. ಅವರು ಆರೋಗ್ಯವಾಗಿದ್ದಾಗ ತಾಸುಗಟ್ಟಲೆ ಅನೇಕ ವಿಚಾರಗಳನ್ನು ಕುರಿತು ಮಾತನಾಡುತ್ತಿದ್ದರು. ನಾನು ತದೇಕಚಿತ್ತದಿಂದ ಕೇಳುತ್ತಿದ್ದೆ. ಕವಿಗಳು ಕೃಶವಾಗುತ್ತಾ ಹೋದರು. ಮಾತೆಲ್ಲಾ ನಿಂತುಹೋಯಿತು. ಗಾಲಿ ಕುರ್ಚಿಯಲ್ಲಿ ಕವಿಗಳು. ಪಕ್ಕದಲ್ಲಿ ತಾರಿಣಿಯವರು. ಕವಿಗಳಿಗೆ ಬಾಹ್ಯಪ್ರಪಂಚದ ಅರಿವಿದ್ದಂತೆ ತೋರುತ್ತಿರಲಿಲ್ಲ. ತಾರಿಣಿಯವರು ಜವರೇಗೌಡರು ಬಂದಿದ್ದಾರೆ ಎಂದಾಕ್ಷಣ ಕಣ್ಣನ್ನು ಇಷ್ಟಗಲ ಮಾಡುತ್ತಿದ್ದರು. ದೇಜಗೌ ಅವರ ಕೈಯನ್ನು ಹಿಡಿದುಕೊಂಡು ನೇವರಿಸುತ್ತಿದ್ದರು. ತಲೆಗೆ ಮುಟ್ಟಿಸುತ್ತಿದ್ದರು. ಇಬ್ಬರೂ ಮೌನವಾಗಿರುತ್ತಿದ್ದರು. ಇದು ಐದಾರು ನಿಮಿಷವಾದರೂ ನಡೆಯುತ್ತಿತ್ತು. ಇಂಥ ಸಂದರ್ಭದಲ್ಲೆಲ್ಲ ನನಗೆ ಶ್ರೀ ರಾಮಕೃಷ್ಣ ಪರಮಹಂಸರು ಶ್ರೀ ವಿವೇಕಾನಂದರಿಗೆ ದರ್ಶನ ನೀಡಿದ ಸಂದರ್ಭ ಜ್ಞಾಪಕಕ್ಕೆ ಬರುತ್ತಿತ್ತು. ಕುವೆಂಪು ಮತ್ತು ದೇಜಗೌ ಅಂತರಂಗದ ಗುರುಶಿಷ್ಯರು ಎಂಬ ಸತ್ಯ ನನಗೆ ಮನವರಿಕೆಯಾಗುತ್ತಿತ್ತು.

ಇಂಥ ವಿಷಯಗಳನ್ನು ಓದಿದಾಗ ಕೆಲವು ವಿಚಾರವಾದಿಗಳು ಅಪಸ್ವರ ಎತ್ತುವುದು ಇತಿಹಾಸ ಸಹಜ. ಅವರಿಗೆ ಇಂಥ ಟೀಕೆಗಳನ್ನು ಮಾಡುವುದು ಬಿಟ್ಟರೆ ಬೇರೆ ಕೆಲಸವಿರುವುದಿಲ್ಲ. ಕುವೆಂಪು ಸಾಹಿತ್ಯವನ್ನು ಆಳವಾಗಿ ಅಧ್ಯಯನಮಾಡಿ ಅದರ ನಾನಾ ಮುಖಗಳನ್ನು ವಿಶ್ಲೇಷಿಸಿದರೆ ಅಂಥವರನ್ನು ಈ ಜನ ಕುವೆಂಪು ಆರಾಧಕರು ಎನ್ನುತ್ತಾರೆ. ತಾವು ಮಾತ್ರ, ಪತ್ರಿಕೆಗಳಿಗೆ ಒಂದೆರಡು ಸಂದರ್ಶನರೂಪದ ಬರವಣಿಗೆಗಳನ್ನು ಬಿಟ್ಟರೆ ಕುವೆಂಪು ಸಾಹಿತ್ಯದ ಬಗ್ಗೆ ಎರಡು ಸಾಲನ್ನು ಬರೆದಿರುವುದಿಲ್ಲ. ಕುವೆಂಪು ಸಾಹಿತ್ಯ ಹಿಮಾಲಯವಿದ್ದಂತೆ. ಎಷ್ಟು ತೆಗೆದರೂ ಮುಗಿಯುವುದಿಲ್ಲ. ಯಾರು ಬೇಕಾದರೂ, ಯಾವ ದೃಷ್ಟಿಯಲ್ಲಿ ಬೇಕಾದರೂ ವಿಮರ್ಶೆ ಮಾಡಬಹುದು. ಅದು ಬಿಟ್ಟು ಬರಿ ಮಾತಿನಿಂದ ಪ್ರಯೋಜನ ಆಗುವುದಿಲ್ಲ. ಆನೆ ಹೋಗುವಾಗ ನಾಯಿ ಬೊಗಳುವುದು ಸಹಜ. ಇಂಥವರ ಬಗ್ಗೆ ಸುಮ್ಮನಿರುವುದೆ ಲೇಸು.

ಕುವೆಂಪು ಅವರನ್ನು ಅನೇಕ ಜನ ಅನೇಕ ರೀತಿಯಲ್ಲಿ ಕಂಡಿದ್ದಾರೆ. ಅವರ ಸಾಹಿತ್ಯವನ್ನು ಅನೇಕ ದೃಷ್ಟಿಯಲ್ಲಿ ವಿಶ್ಲೇಷಿಸಿದ್ದಾರೆ. ಬಸವೇಶ್ವರನನ್ನು ಬಿಟ್ಟರೆ ಕನ್ನಡದಲ್ಲಿ ಹೆಚ್ಚಿನ ವಿಮರ್ಶೆಗೊಳಗಾಗಿರುವ ಕವಿ ಎಂದರೆ ಕುವೆಂಪು ಒಬ್ಬರೆ. ಇಷ್ಟೆಲ್ಲ ಸತ್ಯ. ಕವಿಯಾಗಿ, ಅಧಿಕಾರಿಯಾಗಿ, ಸಂಸಾರಿಯಾಗಿ, ಸಮರ್ಥವಾಗಿ ಕಾರ್ಯನಿರ್ವಹಿಸಿದ್ದಾರೆ. ಒಂದರಿಂದ ಇನ್ನೊಂದಕ್ಕೆ ತೊಡಕಾಗಿಲ್ಲ. ಅವರು ಕುಲಪತಿಗಳಾಗಿದ್ದಾಗ ಕುಕ್ಕರಹಳ್ಳಿ ಕೆರೆಯ ದಂಡೆಯ ಮೇಲೆ ನಡೆದು ಹೋಗುತ್ತಾ ಒಂದು ಮರದ ಕೆಳಗೆ ಸ್ವಲ್ಪ ಹೊತ್ತು ನಿಲ್ಲುತ್ತಿದ್ದರಂತೆ. ಇದು ಪ್ರತಿನಿತ್ಯ ಹೀಗೆ ನಡೆಯುತ್ತಿತ್ತಂತೆ. ಯಾರೋ ಒಬ್ಬರು ಕುತೂಹಲದಿಂದ ಕುವೆಂಪು ಅವರನ್ನು ಕೇಳಿದರಂತೆ. "ಏನ್ಸಾರ್, ಪ್ರತಿನಿತ್ಯ ಈ ಮರದಕೆಳಗೆ ನಿಲ್ಲುತ್ತೀರಲ್ಲ. ಈ ಮರದಲ್ಲಿ ಏನು ವಿಶೇಷ ಇದೆ" ಎಂದು. ಅದಕ್ಕೆ ಕುವೆಂಪು ಹೇಳಿದರಂತೆ "ಮನೆಯಿಂದ ಇಲ್ಲಿ ಬರುವವರೆಗೆ ನಾನು ಕವಿ, ಇಲ್ಲಿಂದ ಮುಂದೆ ಕುಲಪತಿ" ಎಂದು. ಇದು ಕುವೆಂಪು ಅವರ ಕೆಲಸದ ರೀತಿಯನ್ನು ತಿಳಿಸುತ್ತದೆ.

ಕುವೆಂಪು ಅವರ ಹಾಸ್ಯದ ಮುಖ ಅಷ್ಟಾಗಿ ಪರಿಚಿತವಾಗಿಲ್ಲ. ಎಲ್ಲರೂ ಅವರ ಗಾಂಭೀರ್ಯದ ಮುಖವನ್ನೆ ಚಿತ್ರಿಸಿದ್ದಾರೆ. ಒಮ್ಮೆ ಸಮಾರಂಭ ಒಂದರಲ್ಲಿ ಬಿ.ಡಿ. ಜತ್ತಿಯವರು ಭಾಷಣಮಾಡಿದ ಮೇಲೆ ಕುವೆಂಪು ಅವರು ಭಾಷಣಮಾಡಿದರಂತೆ. ಜಗತ್ತಿನ ವಿಪರ್ಯಾಸದ ಬಗ್ಗೆ ಮಾತನಾಡುತ್ತಾ "ನೋಡಿ ಜತ್ತಿಯವರು ಇಷ್ಟುದ್ದ ಇದ್ದಾರೆ ಜನ ಅವರನ್ನು 'ಜಟ್ಟಿ' ಎಂದು ಕರೆಯುತ್ತಾರೆ, ನಾನು ಇಷ್ಟುಗಾತ್ರ ಇದ್ದೇನೆ, ಪುಟ್ಟಪ್ಪ ಎನ್ನುತ್ತಾರೆ" ಎಂದರಂತೆ. ಸಭೆ ನಗೆಗಡಲಿನಲ್ಲಿ ಮುಳುಗಿತಂತೆ.

ಇಂಥ ಕುವೆಂಪು ನಮ್ಮನ್ನಗಲಿ ಹೊರಟು ಹೋದರು. ಅವರ ಶರೀರ ನಮ್ಮಿಂದ ಕಾಣೆಯಾದರೂ ಅವರ ಆತ್ಮ ಇಲ್ಲಿ ಸಂಚರಿಸುತ್ತಿದೆ. ಅವರ ಸಾಹಿತ್ಯದಲ್ಲಿ, ಅವರು ನೀಡಿದ ತತ್ತ್ವಗಳಲ್ಲಿ ಕುವೆಂಪು ಬದುಕಿರುತ್ತಾರೆ. ನಾವು ಅವುಗಳನ್ನು ಅನುಸರಿಸುವವರೆಗೆ ಕುವೆಂಪು ಬದುಕಿರುತ್ತಾರೆ. ಅವರ ತತ್ತ್ವಗಳ ಅನುಸರಣೆನಿಂತಾಗ ಅವರು ನಿಜವಾದ ಅರ್ಥದಲ್ಲಿ ಸಾಯುತ್ತಾರೆ.

ಜಗದ ಕವಿಗೆ ಯುಗದ ಕವಿಗೆ ನನ್ನ ಅಂತಿಮ ನಮನಗಳನ್ನು ಈ ಮೂಲಕ ಸಲ್ಲಿಸುತ್ತೇನೆ.



ಯಜ್ಞವೆಂದರೆ ತ್ಯಾಗ. ನಮ್ಮಲ್ಲಿಯ ಸಕಲ ಶಕ್ತಿ-ಸಂಪತ್ತನ್ನೆಲ್ಲ ಜಗತ್ತಿಗಾಗಿ ಧಾರೆ ಎರೆಯುವುದೇ ಯಜ್ಞ. ಸ್ವಾರ್ಥ ಇಷ್ಟಗಳನ್ನು ಯಜ್ಞದಲ್ಲಿ ಅರ್ಪಿಸಿರಿ. ಯಜ್ಞವೆಂದರೆ ಪಶುವನ್ನು ಅಗ್ನಿಗೆ ಆಹುತಿ ಮಾಡುವುದೇ ಅಲ್ಲ. ಗೀತೆಯಲ್ಲಿ ವ್ಯಾಪಕ ಅರ್ಥವಿದೆ. ಜಗತ್ತಿನ ಕಲ್ಯಾಣಕ್ಕಾಗಿ ನಮ್ಮಲ್ಲಿಯ ಸಂಪತ್ತಿನ ಯಾಗ ಮಾಡಿರಿ.

—ವಿನೋಬಾ

# "ಮಲೆನಾಡಿನ ಚಿತ್ರಗಳು"—ಒಂದು ಪುನರ್ವಿಮರ್ಶೆ

ಸಿ. ನಾಗಣ್ಣ

ಕುವೆಂಪು ಸಾಹಿತ್ಯ ಸಾಗರದಲ್ಲಿ "ಮಲೆನಾಡಿನ ಚಿತ್ರಗಳು" ಒಂದು ನಯನ ಮನೋಹರವಾದ ನಡುಗಡ್ಡೆಯೆಂದು ಹೇಳಿದರೆ ಉತ್ಪ್ರೇಕ್ಷೆಯಾಗದು. ಕುವೆಂಪು ಅವರು ಮಲೆನಾಡಿನ ಚಿತ್ರಗಳನ್ನು ಬಿಡಿಸುವಾಗ ಅವರಿಗೆ ಮೂವತ್ತರ ಹರೆಯ; ತಮ್ಮ ಮೇಜರ್ ಕೃತಿಗಳನ್ನು ಅವರು ಗರ್ಭೀಕರಿಸಿಕೊಳ್ಳುತ್ತಿದ್ದ ಕಾಲ. ತಾವು ಚಿಕ್ಕವರಿದ್ದಾಗ ತಮ್ಮ ವಾರಗೆಯ ಬಂಧುಗಳೊಡನೆ, ಊರಿನವರೊಡನೆ ಕಳೆದ ಕ್ಷಣಗಳನ್ನು, ಘಟಿಸಿದ ಸ್ವಾರಸ್ಯಕರ ಘಟನೆಗಳನ್ನು ನೆನೆದು ಭೂತಕಾಲದ ಲೀಲಾ ವಿನೋದಗಳನ್ನು ಮೆಲುಕು ಹಾಕುವ ಒತ್ತಡಕ್ಕೆ ಉತ್ತರವಾಗಿ ಮೂಡಿಬಂದ ಚಿತ್ರಗಳು ಇವಾಗಿವೆ. ಈ ಚಿತ್ರಗಳು ರೂಪುತಳೆದ ಹಿನ್ನೆಲೆಯನ್ನು ಕುವೆಂಪು ಅವರು ತಮ್ಮ ಮುನ್ನುಡಿಯಲ್ಲಿ ದಾಖಲಿಸಿದ್ದಾರೆ.

ಒಂದು ದಿನ ಸಾಯಂಕಾಲ ನಾನು ಶ್ರೀನಿವಾಸ್ ವೆಂಕಣ್ಣಯ್ಯನವರೊಡನೆ ಕುಕ್ಕನಹಳ್ಳಿಯ ಕೆರೆಯ ಮೇಲೆ ವಾಯುವಿಹಾರಕ್ಕಾಗಿ ಹೋಗಿದ್ದಾಗ ಯಾವುದೋ ಮಾತು ಬಂದು ಮಲೆನಾಡಿನ ಅನುಭವಗಳನ್ನು ಹೇಳತೊಡಗಿದೆ. ಜೊತೆಯಲ್ಲಿ ತೀ. ನಂ. ಶ್ರೀ, ಡಿ.ಎಲ್.ನ. ಮೊದಲಾದ ಮಿತ್ರರೂ ಇದ್ದರು. ನಾವೆಲ್ಲರೂ ಹುಲುಸಾಗಿ ಹಸುರು ಹೊಮ್ಮಿ ಬೈಗುಗೆಂಪಿನ ಬಿಸಿಲಿನಲ್ಲಿ ಸಮನೋಹರವಾಗಿದ್ದ ಕೆರೆಯಂಚಿನ ಬಯಲಿನಲ್ಲಿ ಕುಳಿತಿದ್ದೆವು. ಮೆಲ್ಲೆಲರು ಸುಖದಾಯಕವಾಗಿ ತೀಡುತ್ತಿತ್ತು. ಬಹಳ ಹೊತ್ತು ಕತೆ ಹೇಳಿದೆ. ಅವರೂ ಸಾವಧಾನದಿಂದ, ಅದಕ್ಕಿಂತ ಹೆಚ್ಚು ವಿಶ್ವಾಸದಿಂದ ಆಲಿಸಿದರು. ಎಲ್ಲ ಮುಗಿದ ಮೇಲೆ ವೆಂಕಣ್ಣಯ್ಯನವರು ಆ ಅನುಭವಗಳನ್ನು ಬರೆದರೆ ಚೆನ್ನಾಗಿರುತ್ತದೆ ಎಂದು ಸೂಚನೆ ಕೊಟ್ಟರು. ಚಿತ್ರಗಳನ್ನು "ಪ್ರಬುದ್ಧ ಕರ್ನಾಟಕ"ದಲ್ಲಿ ಅಚ್ಚು ಹಾಕಿಸಬಹುದೆಂದೂ ಉತ್ತೇಜನ ಕೊಟ್ಟರು. ನಾನು ಒಪ್ಪಿಕೊಂಡು ಕೆಲವು ಚಿತ್ರಗಳನ್ನು ಬರೆದು ಅವರಿಗೆ ಓದಿದೆ. ನೀವು ಬಾಯಲ್ಲಿ ಹೇಳುತ್ತಿದ್ದಾಗ ಇದ್ದ ಸ್ವಾರಸ್ಯ ಈ ಚಿತ್ರಗಳಲ್ಲಿ ಇಲ್ಲ ಎಂದರು. ನನಗೂ ಹಾಗೆಯೇ ತೋರಿತು. ಸಜೀವವಾದ ವಾಣಿಯೂ ಮುಖ ನಯನ ಅಂಗಗಳ ಅಭಿ

ನಯವೂ ಮಾಡುವ ಕೆಲಸವನ್ನು
ನಿರ್ಜೀವವಾದ ಲೇಖಣಿ ಮಾಡ
ಬಲ್ಲುದೆ? ಆದರೆ ಆಲಿಸುವವರಲ್ಲಿ
ವಿಶ್ವಾಸವಿದ್ದರೆ ಮೃತದಲ್ಲಿಯೂ
ಶ್ವಾಸವಾಡುತ್ತದೆ.

ಆರು ದಶಕಗಳ ಹಿಂದೆ ನಡೆದ ಪ್ರಸಂಗವಿದು. ಕುವೆಂಪು ಅವರು ಕಂಡ ಕುಕ್ಕನಹಳ್ಳಿ ಕೆರೆ, ಅವರು ತಿರುಗಾಡಿದ ಕೆರೆಯ ಅಂಚು ಇಂದೂ ಇವೆ. ಆದರೆ ಬಹಳಷ್ಟು ಬದಲಾವಣೆಗೆ ಒಳಗಾಗಿವೆ. ನಾನೂ ಒಂದು ಕಾಲದಲ್ಲಿ ಈ ಕೆರೆಯ ಪರಿಸರವನ್ನು ತುಂಬಾ ಇಷ್ಟಪಟ್ಟು ಬಿಡುವು ಸಿಕ್ಕಾಗಲೆಲ್ಲ ಅಲ್ಲಿ ಹೋಗಿ ಸ್ನೇಹಿತರೊಂದಿಗೆಯೋ ಅಥವಾ ಒಂಟಿಯಾಗಿಯೊ ಕೂರುತ್ತಿದ್ದುದು ವಾಡಿಕೆ. ಮೈಸೂರು ನಗರ ಬೆಳವಣಿಗೆಯ ಬೇಗುದಿಗೆ ಪಕ್ಕಾದ ಕ್ಷಣದಿಂದ ಕಶ್ಮಲಾವೃತವಾಗಿ ಇಂದು ಕೆರೆಯ ಆಜುಬಾಜುವಿನಲ್ಲಿ ತಿರುಗಾಡುವಾಗ ಮೂಗು ಮುಚ್ಚಿಕೊಳ್ಳಬೇಕಾದ ಪರಿಸ್ಥಿತಿ ಒದಗಿದೆ.

ಈ ಲೇಖನ ಬರೆಯುವ ಪೂರ್ವ ತಯಾರಿಯ ಅಂಗವಾಗಿ ಕುಕ್ಕನಹಳ್ಳಿಯ ಕೆರೆ ಈಗ ಹೇಗಿದೆ ನೋಡೋಣವೆಂದು ಇತ್ತೀಚೆಗೆ ಅದರ ಸಮೀಪ ಹೋಗಿ ಸುಮಾರು ಹೊತ್ತು ನಿಂತೆ. ಅಂದು ಕುವೆಂಪು ಅಲ್ಲಿ ಕಂಡಿದ್ದ ದೃಶ್ಯಕ್ಕಿಂತ ತೀರಾ ಭಿನ್ನವಾದ ನೋಟ ನನಗೆ ಗೋಚರವಾಯಿತು. ನೋಡುವ ವ್ಯಕ್ತಿಯ ಪರಿಪೇಕ್ಷದ ಸಂಕುಚಿತತೆಯೋ ಈ ವ್ಯತ್ಯಯಕ್ಕೆ ಕಾರಣವೆಂದು ಯಾರೂ ಭಾವಿಸಬೇಕಾಗಿಲ್ಲ. ಹೊರ ಜಗತ್ತಿನಲ್ಲಿ ಆಗಿರುವ ಏರುಪೇರಿನ ಪ್ರಮಾಣದ ಅಗಾಧತೆಯನ್ನು ಯಾರು ತಾನೆ ಅಲಕ್ಷಿಸಲು ಸಾಧ್ಯ? ಯಾರೋ ಒಗೆದು ಹೋದ ಹಳದಿ ಬಣ್ಣದ ರೆಗ್‌ಜಿನ್ ಬ್ಯಾಗು; ಅರ್ಧ ಮುಳುಗಿ, ಅರ್ಧ ತೇಲುವ ಪಾಚಿ ಮೆತ್ತಿದ ಎಳನೀರು ಬುರುಡೆಗಳ ಸಾಲು; ಈ ದೃಶ್ಯ ಹುಟ್ಟುಹಾಕಿದ ವಿಚಿತ್ರ ಸಂಯೋಜನೆಯಿಂದಾಗಿ ಏನೋ ಜಿಗುಪ್ಸೆಯಿಂದ ಆಗ ತಾನೇ ಯಾರೋ ಕೆರೆಗೆ ಹಾರಿಕೊಂಡಿರಬಹುದೆಂಬ ವಿಲಕ್ಷಣವಾದ ಭಾವನೆ ಮನಸ್ಸಿನಲ್ಲಿ ಮೂಡತೊಡಗಿತು.

ಹಾಳು ಸುರಿಯುವ ಕೆರೆ ಪರಿಯನ್ನು ಇನ್ನಷ್ಟು ಕುರೂಪಗೊಳಿಸಲೋ ಎಂಬಂತೆ ದೂರದ ದಕ್ಷಿಣ ತುದಿಯಲ್ಲಿ ಬೋಳಾದ ಕುರುಚಲು ಗಿಡಗಳು ಬೃಹದಾಕಾರದ ಪೊರಕೆಗಳ ಹಾಗೆ ಆಕಾಶ ಗುಡಿಸುವ ತುಡಿತದಲ್ಲಿವೆ. ಬಗ್ಗಡದಲ್ಲಿಯೇ ಕೆಲವು ಬಾತುಕೋಳಿಗಳು ಉಸಿರು ಬಿಗಿಕಟ್ಟಿ ದೇಕುತ್ತಿವೆ. ಕೆರೆಯ ಅಂಚಿನ ಕಲ್ಲುಬೆಂಚುಗಳು, ಅವುಗಳ ತಲೆಯ ಮೇಲೆ ಒಂದು ವಿನ್ಯಾಸದಲ್ಲಿ ಬಾಗಿದ ಲತಾಮಂಟಪಗಳು, ಅವನ್ನು ಅಸ್ತಿತ್ವಕ್ಕೆ ತಂದ ಕಬ್ಬಿಣದ ಸಲಾಕೆಯ ಅಸ್ಥಿಪಂಜರಗಳು ಬಿಕೋ ಎನ್ನುತ್ತಾ, ಎಂದೋ ಬಂದು ಮರೆಯಾದ ಯುವ ಪ್ರೇಮಿಗಳ ನೆನಪಿನಲ್ಲಿ ಬಿಕ್ಕುತ್ತಿವೆ. ಒಟ್ಟಿನಲ್ಲಿ ಕುವೆಂಪು ಅವರು ಇಲ್ಲೆಲ್ಲಾ ತಿರುಗಾಡುವಾಗ ಈ ಕೆರೆಗೆ ಇದ್ದ 'ಕ್ಯಾರೆಕ್ಟರ್' ಈಗ ಇಲ್ಲವಾಗಿದೆಯೆಂದರೆ ಇದು ಪ್ರಗತಿವಿರೋಧಿ ಸಂವೇದನೆಯೆಂದು ಯಾರೂ ತಪ್ಪು ತಿಳಿಯಬೇಕಿಲ್ಲ. ಬದಲಾದ ಪರಿಸ್ಥಿತಿಯನ್ನು ನೆನೆದು ಭಾರವಾದ ಹೆಜ್ಜೆ ಕಿತ್ತಿಡುವಾಗ ಕೆರೆಯಿಂದ ತೂರಿ ಬರುವ ದುರ್ಗಂಧ ಅಸಹನೀಯವಾಗುತ್ತದೆ.

"ಮಲೆನಾಡಿನ ಚಿತ್ರ"ಗಳಲ್ಲಿ ಕುವೆಂಪು ಮಲೆ, ಕಾನುಗಳ ಸಿರಿಯನ್ನು ದಾಖಲಿಸು

ವುದರ ಜೊತೆಗೆ ಅಲ್ಲಿನ ಜನಜೀವನದ ಪರಿಯನ್ನೂ ನನಗೆ ಪರಿಚಯ ಮಾಡಿಕೊಡುತ್ತಾರೆ, "ನನ್ನ ಜೀವನದಲ್ಲಿ ಕಲ್ಪನೆ ಸ್ಮೃತಿಗಳ ಕೃಪೆಯಿಂದ ಸುಖಶಾಂತಿ ಪೂರ್ಣವಾಗಿದೆ" ಎಂದು ಹೇಳುವಾಗ ಈ ಕೃತಿ ರಚನೆಯಲ್ಲಿ ಸ್ಮೃತಿ ವಹಿಸಿರುವ ವಿಶಿಷ್ಟ ಪಾತ್ರವನ್ನು ನೆನೆಯಬೇಕಾಗುತ್ತದೆ. ಇಂಥ ಸ್ಮೃತಿಯೇ Remembrance of Things Past"(ಮಾರ್ಸಲ್ ಪ್ರೂಸ್ಟ್) ನಂಥ ಕೃತಿಗೆ ಜನ್ಮ ನೀಡುವುದು; ಇಂಥ ಸ್ಮೃತಿಯೇ "Tintern Abbey" ಯಂಥ ಪದ್ಯ ಸೃಷ್ಟಿಸುವುದು. ವರ್ಡ್ಸ್‌ವರ್ತ್ ಕವಿಯ "ಟಿಂಟರ್ನ್ ಅಬೆ" ಪದ್ಯವಾದರೆ ಕುವೆಂಪು ಅವರ "ಮಲೆನಾಡಿನ ಚಿತ್ರಗಳು" ಒಂದು ಗದ್ಯ ಕೃತಿ. ಆದರೆ ಇವೆರಡನ್ನೂ ನಾವು ಸ್ವೀಕರಿಸುವ ಸಂದರ್ಭದಲ್ಲಿ ನಮಗಾಗುವ ಅನುಭವದಲ್ಲಿ ಸಾಮ್ಯವಿರುವುದನ್ನು ನಾವು ಮನಗಾಣಬೇಕು.

"ಮಲೆನಾಡಿನ ಚಿತ್ರ"ಗಳನ್ನು ಮತ್ತೆ ಓದುವ ಕಾಲಕ್ಕೆ ವರ್ಡ್ಸ್‌ವರ್ತ್‌ರ "ಟಿಂಟರ್ನ್ ಅಬೆ" ಪದ್ಯ ಕುರಿತು ವಿಮರ್ಶಕ ರಿಚರ್ಡ್ ಎಬರ್ ಹಾರ್ಟ್ ಬರೆದಿರುವ ವ್ಯಾಖ್ಯಾನ ನೆನಪಾಯಿತು ಅಲ್ಲಿ ಎಬರ್ ಹಾರ್ಟ್ ಹೀಗೆ ಹೇಳುತ್ತಾರೆ:

> On reading Words worth's "Tintern Abbey" I was impres-sed with its density. It is like entering a dense thicket rather than in a light wood. It was the density, the fullness, the heaviness of langu-age that impressed me with the wholeness of the work while I held in mind at the same its difference, due to these qualities, from almost every poem one reads in contemporary literature.

ನಮ್ಮ ಸಮಕಾಲೀನ ಸಾಹಿತ್ಯ ಸಂದರ್ಭದಲ್ಲಿ. ಅಂದರೆ ನವೋದಯ ಕಾಲದ ಸೃಜನಾತ್ಮಕ ಬರವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ, ಮಲೆನಾಡಿನ ಚಿತ್ರಗಳಿಗೆ ಸಂವಾದಿಯಾದ ಪ್ರಬಂಧಗಳು ದೊರಕುವುದಿಲ್ಲ. ಅಷ್ಟರಮಟ್ಟಿಗೆ ಅದು ಅನನ್ಯವಾಗಿದೆ. ಈ ಗ್ರಂಥದ ಬರವಣಿಗೆ ಸಾಂದ್ರವಾಗಿದೆ ಎಂದು ಹೇಳುವಾಗ ಅದು ಸಮೃದ್ಧವಾಗಿದೆ, ಸತ್ವಭರಿತವಾಗಿದೆ ಎಂದು ಅರ್ಥವಾಗುತ್ತದೆಯೇ ವಿನಾ ಭಾರವೂ, ಅಪಾರದರ್ಶಕವೂ ಆಗಿದೆ ಎಂದು ತಿಳಿಯಲಾಗದು. "ಟಿಂಟರ್ನ್ ಅಬೆ" ಪದ್ಯದಲ್ಲಿ ಮನುಷ್ಯ ಮನುಷ್ಯನೊಡನೆ ಮಾತನಾಡುತ್ತಿದ್ದಾನೆ ಎಂಬುದಕ್ಕಿಂತ ನಿಸರ್ಗವೇ ಮನುಷ್ಯನಿಗೆ ಸಂದೇಶ ಕೊಡುತ್ತಿದೆ ಎನ್ನುವುದು ಸೂಕ್ತವಾಗಿರುವಂತೆಯೇ, ಭಾಷೆಯ ಗಾಂಭೀರ್ಯ, ಅರ್ಥವಂತಿಕೆ, ಅನುಭವದ ನಾವೀನ್ಯತೆಯ ಫಲವಾಗಿ ಈ ಪದ್ಯ ಒಬ್ಬ ವ್ಯಕ್ತಿ ಮಹಾಮೇಧಾಶಕ್ತಿಯನ್ನು ಏಕ

ಕಾಲದಲ್ಲಿ ಒಂದು ಜನಾಂಗದ ಒಂದು ಕಾಲ ಘಟ್ಟದ ವಿಲಕ್ಷಣತೆಯನ್ನು ಪ್ರತಿಫಲಿಸುತ್ತಿದೆ ಎನ್ನುವುದು ಸೂಕ್ತ. ಎಬರ್ ಮುಂದುವರಿದು ಹೇಳುವಂತೆ ಒಂದು ಶ್ರೇಷ್ಠವಾದ ಪದ್ಯವನ್ನು ಯಾವ ವಿಮರ್ಶೆಯೂ ಧ್ವಂಸ ಮಾಡಲಾರದು. ಆದರೆ ಒಂದು ದೊಡ್ಡ ಪದ್ಯ ನಮ್ಮಲ್ಲಿ ಹುಟ್ಟಿಸುವ ಉದಾತ್ತ ಭಾವನೆಗಳನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಆ ಪದ್ಯವನ್ನು ಮೆಚ್ಚುವುದರ ಮೂಲಕ ವಿಮರ್ಶೆ ಅರ್ಥ ಪಡೆದುಕೊಳ್ಳುತ್ತದೆ.

ವಾಸ್ತವವಾಗಿ "ಟಿಂಟರ್ನ್ ಅಬೆ" ಪದ್ಯವನ್ನು ವರ್ಡ್ಸ್‌ವರ್ತ್ಸ್ ಬರೆದದ್ದು ಅಬೆಯಿಂದ ಕೊಂಚ ದೂರದಲ್ಲಿ ನಿಂತು, ತೀರಾ ಸಮೀಪಕ್ಕೆ ಹೋಗಿ ಅಲ್ಲ. ೧೭೯೩ ರಲ್ಲಿ ವೈ ನದಿಯ ದರ್ಶನ ಮಾಡುವಾಗ ವರ್ಡ್ಸ್‌ವರ್ತ್‌ಗೆ ಇಪ್ಪತ್ತು ಮೂರು ವರ್ಷ. ಇದಾದ ಐದು ವರ್ಷಗಳ ನಂತರ, ಅಂದರೆ, ೧೭೯೮ ರಲ್ಲಿ, ತನ್ನ ಇಪ್ಪತ್ತೆಂಟನೆಯ ವಯಸ್ಸಿನಲ್ಲಿ ಈ ಪದ್ಯ ಬರೆದ. ಐದು ವರ್ಷಗಳ ಅವಧಿಯಲ್ಲಿ ಮಾಗದ ಮನಸ್ಸು ಹೊರಜಗತ್ತಿನಲ್ಲಿ ಕಂಡ ದೃಶ್ಯಾವಳಿಯನ್ನು ಒಂದು ನೆನಪಾಗಿಟ್ಟುಕೊಂಡು ಇಡೀ ಮನುಕುಲದ ಗಾಥೆಯನ್ನು ಹಾಡುವುದಕ್ಕೆ ಸಜ್ಜಾಗುವುದನ್ನು ಕಾಣುತ್ತೇವೆ. ಈ ಪದ್ಯವನ್ನು ಒಂದು ಘನವಾದ ಪದ್ಯವೆಂದು ನಾವು ಬಗೆಯುವುದೇಕೆಂದರೆ ಇದು ಮನುಷ್ಯನ ಬದುಕಿಗೆ ಕೇಂದ್ರಿಯವಾದ ಅರಿವನ್ನು ಬರೆಯುತ್ತದೆ ಮನುಷ್ಯ ಮತ್ತು ಭೂಮಿಯನ್ನು ಬೆಸೆಯುತ್ತದೆ ಅಥವಾ ಮನುಷ್ಯ ಮತ್ತು ಭೂಮಿಯ ನಡುವಿನ ಸಂಬಂಧವನ್ನು ನಮಗೆ ತಿಳಿಸುತ್ತದೆ. ಗದ್ದಲದ ಲೀಲೆಯಲ್ಲಿ ಮುಳುಗಿರುವ ಸಮಕಾಲೀನ ನಾಗರೀಕ ಸಮಾಜಕ್ಕೆ "ಮನುಕುಲದ ನೀರವ ವ್ಯಾಕುಲಭರಿತ ಸಂಗೀತ ಕೇಳಿಸುವುದೇ ಇಲ್ಲ." ಮನುಕುಲದ ನೀರವ, ವ್ಯಾಕುಲಭರಿತ ಸಂಗೀತ ಕವಿಗೆ ಕೇಳಿಸುತ್ತದೆ. ನಮ್ಮನ್ನೆಲ್ಲಾ ಸಾಂತ್ವನಗೊಳಿಸುವ ಶಕ್ತಿಯೆಂದರೆ ನಿಸರ್ಗದಲ್ಲಿನ ಆಧ್ಯಾತ್ಮಿಕ ಶಕ್ತಿಯೇ. ಈ ಆಧ್ಯಾತ್ಮಿಕ ಶಕ್ತಿಯನ್ನೇ ವರ್ಡ್ಸ್‌ವರ್ತ್ ಗಂಭೀರವಾದ, ಉತ್ಕಟವಾದ ಭಾಷೆಯಲ್ಲಿ ಪ್ರಕಟಪಡಿಸಿರುವುದು.

"ಮಲೆನಾಡಿನ ಚಿತ್ರಗಳನ್ನು" ಓದುವಾಗ ಈ ಎಲ್ಲಾ ಮಾತುಗಳನ್ನು ಸಾರಾಸಗಟಾಗಿ ದಾಖಲಿಸಬೇಕೆಂಬ ತುಡಿತ ಉಂಟಾದದ್ದು ಇದೇ ಕಾರಣದಿಂದ. ನಿಸರ್ಗಕ್ಕಿರುವ ಬಿಸಜ ಶಕ್ತಿಯನ್ನು ಕುವೆಂಪು ಈ ಪ್ರಬಂಧಗಳ ಮೂಲಕ ನಮಗೆ ದಕ್ಕಿಸುತ್ತಾರೆ.

೧೫೯೭ನೇ ಇಸವಿಯಲ್ಲಿ ಅತ್ಯುತ್ಕೃಷ್ಟವಾದ ಹತ್ತು ಪ್ರಬಂಧಗಳನ್ನು ಫ್ರಾನ್ಸಿಸ್ ಬೇಕನ್ ಪ್ರಕಟಿಸುವಾಗ ಪ್ರಬಂಧ ಸಾಹಿತ್ಯದ ಜನನವಾಯಿತೆಂದು ಇಂಗ್ಲಿಷ್ ಸಾಹಿತ್ಯ ಚರಿತ್ರಕಾರರು ಅಭಿಪ್ರಾಯಪಡುತ್ತಾರೆ. ಅದೇ ರೀತಿಯಲ್ಲಿ ಈ ಶತಮಾನದ ಕುವೆಂಪು ಅವರು ತಮ್ಮ ವಿಶಿಷ್ಟವಾದ ಈ ಹನ್ನೆರಡು ಪ್ರಬಂಧಗಳನ್ನು ಬೆಳಕಿಗೆ ತಂದಾಗ ಕನ್ನಡದ ಪ್ರಬಂಧ ಸಾಹಿತ್ಯದ ಉದಯವಾಯಿತೆಂದು ಹೇಳಬಹುದು. ಈ ಹನ್ನೆರಡು ಪ್ರಬಂಧಗಳಲ್ಲಿ ಒಂದೇ ಬಗೆಯಾದ ಲವಲವಿಕೆ, ನಿಸರ್ಗ ಮತ್ತು ಮನುಷ್ಯ ಸಂಬಂಧದ ಅರಿವು ಕಂಡುಬರುವುದಾದರೂ "ಕಾಡಿನಲ್ಲಿ ಕಳೆದ ಒಂದಿರುಳು", "ಅಜ್ಜಯ್ಯನ ಅಭ್ಯಂಜನ", "ಬಂದನಾ ಹುಲಿರಾಯನು", "ತೋಟದಾಚೆಯ ಭೂತ" ಹಾಗೂ "ಮಲೆನಾಡಿನ ಗೋಪಾಲಕರು ಪ್ರಬಂಧಗಳನ್ನು ಒಂದು ಗುಂಪಾಗಿ ಮಾಡಬೇಕು; ಈ ವಲಯದಲ್ಲಿ ಬರುವ ವಿಶಿಷ್ಟ ವ್ಯಕ್ತಿಗಳ ಪರಿಚಯ ಮಾಡಿಕೊಳ್ಳುವ

ಉದ್ದೇಶವಿದ್ದರೆ "ಪುಟ್ಟಾಚಾರಿಯ ಕಾಡುಕೋಳಿ", "ಮನೆಯ ಶಾಲೆಯ ಐಗಳ ಮಾಲೆ", "ಅಣ್ಣಪ್ಪನ ರೇಷ್ಮೆ ಕಾಯಿಲೆ", "ಕತೆಗಾರ ಮಂಜಣ್ಣ" ಇವುಗಳನ್ನು ಮತ್ತೊಂದು ಗುಂಪಾಗಿ ಮಾಡಿ ಓದಿದರೆ ಲಾಭವೆಂದು ತೋರುತ್ತದೆ.

ಒಡೆಯರ ಸ್ಥಾನದಲ್ಲಿರುವಾಗಲೂ ಲೇಖಕರು ತಮ್ಮ ಒಕ್ಕಲಾದ ಅಣ್ಣಪ್ಪನ ದೀನಸ್ಥಿತಿಯಲ್ಲಿ ವರ್ಗಭೇದದ ಜಾಡ್ಯಕ್ಕೆ ಬಲಿಯಾಗಿದೆ. ಅವನ ಪುಟ್ಟ ಗುಡಿಸಿಲಿನಲ್ಲಿ ಕುಳಿತ ಸಾವಂಚಿನಲ್ಲಿರುವ ಬಡವನಿಗೆ ಸಾಂತ್ವನ ಹೇಳುತ್ತಾರೆ. ದೀನನಿಗಿಂತ ತಾವು ಎಷ್ಟೋ ಪಾಲು ಮೇಲು ಎಂದು ಬೀಗದೆ ಅಣ್ಣಪ್ಪನ ದೊಡ್ಡತನವನ್ನು ಸಾರುವುದಕ್ಕಾಗಿ ಅವನಿಂದ ಈ ಮಾತುಗಳನ್ನು ಕೇಳಿಸುತ್ತಾರೆ: "ಅಯ್ಯಾ, ನಾನು ಸಾಯುತ್ತೇನೆ. ನನ್ನ ಸಾಲಕ್ಕೆ ನನ್ನ ಮನೆಯ ದನಕರು ಪಾತ್ರೆ ಎಲ್ಲದರ ಪಟ್ಟಿಯನ್ನು ತೆಗೆದುಕೊಳ್ಳಿ." ಅಣ್ಣಪ್ಪನು ಈ ಬಗೆಯಾಗಿ ಅಂಗಲಾಚುವಾಗ ಇವರು ಔಷಧಿಗಾಗಿ ಪರದಾಡುತ್ತಾರೆ. ಬಡವರು ಸಿಲುಕಿಕೊಂಡಿರುವ ಸಾಲದ ಬಲೆ ಮತ್ತವರ ಸಂಕಟದ ಸ್ಥಿತಿಯನ್ನು ದಾಖಲು ಮಾಡುವಾಗ ಲೇಖಕರ ಅನುಕಂಪದ ದರ್ಶನವಾಗುತ್ತದೆ. "ಮಲೆನಾಡಿನ ಗೋಪಾಲಕರು" ಎಂಬ ಪ್ರಬಂಧದಲ್ಲಿಯೂ ಇದೇ ಬಗೆಯಾದ ಅನುಕಂಪ ಹೊಳೆಯಾಗಿ ಹರಿದಿದೆ. ಉಳ್ಳವರ ಜಾನುವಾರುಗಳನ್ನು ಮೇಯಿಸಿ ತಾವು ಮಾತ್ರ ಅಗೋಚರವಾಗಿ ಬದುಕುವ ಗೋಪಾಲಕರ ಕಷ್ಟದ ಬದುಕನ್ನು ನೆನೆದು ಮರುಗುತ್ತಾರೆ: "ದನ ಕಾಯುವವರ ಜೀವನ ಏಕದೇಶೀಯವಾಗಿಲ್ಲ. ಪ್ರಪಂಚದ ಇತರ ಜೀವಗಳಂತೆ ಅವರ ಜೀವನವೂ ಸುಖದುಃಖ ಮಿಶ್ರವಾದುದಾಗಿದೆ. ಬಹು ಶಾಖೆಯುಳ್ಳದ್ದಾಗಿದೆ.... ಜೀವನದ ಮಹಾಮಾರ್ಗಗಳಲ್ಲಿ ಅವರ ಮಾರ್ಗವೂ ಒಂದು. ಜಗತ್ತಿನ ಮಹಾ ಪದವಿಗಳಲ್ಲಿ ಅವರ ಪದವಿಯೂ ಒಂದು!"

"ಜೇನು ಬೇಟೆ" ಎಂಬ ಪ್ರಬಂಧದಲ್ಲಿ ಜೇನುಬೇಟೆಯ ನಾನಾ ಪ್ರಭೇದಗಳನ್ನು ತಿಳಿಸುತ್ತಾರೆ. ಮಲೆನಾಡಿನ ಕಾಡಿನ ಮೂಲೆಯೊಂದರಲ್ಲಿ ಗೆಳೆಯರೊಡಗೂಡಿ ಜೇನುಬೇಟೆಯಲ್ಲಿ ತೊಡಗಿರುವ ಕಾಲಕ್ಕೆ ಲೇಖಕರು ತಮ್ಮ ಮುಸಲ್ಮಾನ ಸ್ನೇಹಿತ ಇಬ್ರಾಹಿಯನ್ನು ಕುರಿತು ಕೇಳುವ ಪ್ರಶ್ನೆ ಕಣ್ಣು ತೆರೆಸುವಂತಿದೆ. ಆ ಪ್ರಶ್ನೆಗೆ ಇಬ್ರಾಹಿ ಕೊಡುವ ಉತ್ತರವೂ ನಾಗರೀಕ ಜನರಿಗೆ ಕೊಟ್ಟ ಮರೆಯಲಾರದ ಸಂದೇಶದಂತಿದೆ. ಜೇನು ಅಳಿದು ಅತಿ ಮಧುರವಾದ ಜೇನು ಕುಡಿಯುವುದಕ್ಕೆ ಮುಂಚೆ ಲೇಖಕರು ಹೀಗೆ ಹೇಳುತ್ತಾರೆ: "ಲೋ, ಇಬ್ರಾಹಿ, ನಿಮ್ಮ ದೇವರ ನೆನೆಯೋ ಜೇನು ತಿನ್ನುವುದಕ್ಕೆ ಮುಂಚೆ. ಅಲ್ಲಾ ಹೋ ಅಕ್ಬರ್!" ಇಬ್ರಾಹಿಂ ಅದಕ್ಕೆ 'ನಮ್ಮ ದೇವರು ಬೇರೆ, ನಿಮ್ಮ ದೇವರು ಬೇರೆಯೋ' ಎಂದನಂತೆ. ಕಾಡಿನ ಅಂತರಂಗದಲ್ಲಿ ಇಬ್ಬರು ಗೆಳೆಯರ ನಡುವೆ ನಡೆಯುವ ಈ ಕ್ಷಿಪ್ರ ಸಂಭಾಷಣೆ ದೊಡ್ಡ ಜೀವನಾದರ್ಶವನ್ನು ತನ್ನ ಉದರದಲ್ಲಿ ಅಡಗಿಸಿಕೊಂಡಿದೆ. ತಮ್ಮ ತತ್ವ ಪ್ರಣಾಳಿಕೆಯನ್ನು ಪೂರ್ಣವಾಗಿ ಸೃಷ್ಟಿಸಿಕೊಳ್ಳುವ ಕಾಲಕ್ಕೆ ಕುವೆಂಪುರವರು ಇಬ್ರಾಹಿಯಂಥವರು ಜೀವನದರ್ಶನವನ್ನು ಅಳವಡಿಸಿಕೊಂಡಿರುವ ಸಾಧ್ಯತೆಯಿದೆ.

"ಅಜ್ಜಯ್ಯನ ಅಭ್ಯಂಜನ" ಕನ್ನಡ ಲಲಿತ ಪ್ರಬಂಧ ಸಾಹಿತ್ಯ ಪ್ರಕಾರದಲ್ಲಿ ಅತ್ಯಂತ ವಿಶಿಷ್ಟ ಸ್ಥಾನವನ್ನು ಪಡೆದು

ಕೊಂಡಿದೆ. ನಿರುದ್ವಿಗ್ನವಾದ ಮಲೆನಾಡಿನ ಜೀವನದಲ್ಲಿ ವನ್ಯವಾದರೂ ಅನಾಗರೀಕವಲ್ಲದ, ಶಾಂತಿ ಇದ್ದಂಥ ಕಾಲ. ನಾಗರೀಕತೆ ಬಂದ ಪರಿಣಾಮವಾಗಿ ಮಲೆನಾಡಿನಲ್ಲಿಯೂ ಅಭ್ಯಂಗ ಮರೆಯಾಯಿತೆಂದು ಕುವೆಂಪು ತಿಳಿಸುತ್ತಾರೆ. ಈ ಅಭ್ಯಂಗದ ಪರಿಯನ್ನು ವರ್ಣಿಸುತ್ತಾ ಕುವೆಂಪು ಹೀಗೆ ಹೇಳುತ್ತಾರೆ: "ಆಳುಗಳು, ಅಪ್ಪಯ್ಯ, ಚಿಕ್ಕಪ್ಪಯ್ಯ, ಸಣ್ಣಚಿಕ್ಕಪ್ಪಯ್ಯ, ದೊಡ್ಡಕಕ್ಕಯ್ಯ, ಅಣ್ಣಯ್ಯ, ಅಜ್ಜಯ್ಯ," ಇತ್ಯಾದಿಗಳಿಗೆ ಎಣ್ಣೆ ತಿಕ್ಕಿ ಸುಸ್ತಾದರೆ, ಚಿಕ್ಕವರಿಗೆಲ್ಲಾ ಅವರಿಗೆ ಪಾಠ ಹೇಳಿಕೊಡುತ್ತಿದ್ದ ಗುರುಗಳಾದ ಅರ್ಥಾತ್ ಪ್ರಿನ್ಸಿಪಾಲರಿಂದ ಈ ತೈಲ ಸೇವೆ ನಡೆಯುತ್ತದೆ. ಪ್ರಬಂಧದ ಕೊನೆಯಲ್ಲಿ ಅಜ್ಜಯ್ಯನ ಅಭ್ಯಂಜನವನ್ನು ತಿಳಿಸುತ್ತಾ ತಕಪಕ ಕುದಿಯುವ ಹಂಡೆಯ ನೀರನ್ನು ಮಂಡೆಯ ಮೇಲೆ ಹುಯಿಸಿಕೊಂಡು ಹಬೆಯಾಡುತ್ತಾ ಎದ್ದು ಹೋಗಿ ಕಂಬಳಿ ಹೊದ್ದು ವಿಶ್ರಮಿಸಿಕೊಳ್ಳುವ ಅಜ್ಜಯ್ಯನ ಪರಿಚಯ ಮಾಡಿಸುತ್ತಾರೆ.

ಮಲೆನಾಡಿನಲ್ಲಿ ಸ್ಥಿತಿವಂತರ ಮಕ್ಕಳಿಗೆ ಪಾಠ ಹೇಳಲು ಬರುವ ಐಗಳು ಒಂದೇ ಮನೆಯಲ್ಲಿ ನೆಲೆಯಾಗಿ ನಿಲ್ಲುವವರಲ್ಲ. ಅದರಂತೆಯೇ ಕುವೆಂಪುರವರ ಮನೆಯಲ್ಲಿ ಐಗಳ ಸಾಲು ಸಾಲೇ ಬಂದು ಹೋಗುತ್ತದೆ. ಒಂದು ಅರ್ಥದಲ್ಲಿ ಯೂರೋಪಿನ ಸಮಾಜದಲ್ಲಿ ಕಂಡು ಬರುವ ಗೌರ್ನೆಸ್‌ಗೆ ಈ ಐಗಳು ಸರಿಸಮಾನರೆಂದು ತೋರುತ್ತದೆ. ಬರಿ ಪಾಠ ಹೇಳುವುದಷ್ಟೇ ಅಲ್ಲದೆ ಇತರ ಪಾಲನೆಯಲ್ಲೂ ತೊಡಗುವುದು ಇವರ ಕರ್ತವ್ಯದಲ್ಲಿ ಸೇರಿಹೋಗುತ್ತದೆ. ದಿನ ಬೆಳಗಾದರೆ ನೆರಳಿನ ಹಾಗೆ ಹಿಂಬಾಲಿಸುವ ಈ ಐಗಳ ಬಗ್ಗೆ ಪ್ರೀತಿಗಿಂತ ಹೆಚ್ಚು ಭಯ ಉಂಟಾಗುವುದು ಮಾಡಿಕೆ. ಸ್ವೇಚ್ಛೆಯಾಗಿ ಆಡಿಕೊಳ್ಳಲು ಅಡ್ಡಿಯುಂಟಾಗುವುದರಿಂದ ಉಪ್ಪರಿಗೆಯೆಂಬ ಖಾಸಗಿ ಕಾಲೇಜು; ಈ ಪ್ರಿನ್ಸಿಪಾಲರುಗಳಾದರೊ ಮಕ್ಕಳ ಸಂತೋಷಕ್ಕೆ ಕಂಟಕಪ್ರಾಯರಾದವರು. ನಿಭಾಯಿಸಲಾರದೆ ತಾತ್ಕಾಲಿಕವಾಗಿ ಇದ್ದು ಹೊರಟು ಹೋಗುವ ಈ ಐಗಳ ಪೈಕಿ ಲೇಖಕರ ನೆನಪಿನಲ್ಲಿ ತಳವೂರಿದವರೆಂದರೆ ತತ್ವಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದಿದ್ದರೂ ಗ್ರಾಮಜೀವನಕ್ಕೆ ಹೆದರದೆ ಐಗಳಾಗಿ ಬಂದ ಶ್ರೀ ವ್ಯಾಸರಾಯರು. ಅವರು ತಮ್ಮ ವಿಲಕ್ಷಣ ನಡವಳಿಕೆಯಿಂದ ಮಕ್ಕಳ ಗಮನ ಸೆಳೆದು ಪಾಠಕ್ಕಿಂತ ಹೆಚ್ಚಾಗಿ ಆಟಕ್ಕೆ ಮನ್ನಣೆ ಕೊಟ್ಟವರು. ಅತಿಯಾಗಿ ಓದಿದವರಾದರೂ ಮಲೆನಾಡಿನ ಗ್ರಾಮಜೀವನವನ್ನು ಸ್ವಾಗತಿಸಿ ಬಂದ ಈತ ಅರೆಮರುಳರೆಂದು ಜನ ಆಡಿಕೊಳ್ಳುವಾಗ ಲೇಖಕರಿಗೆ ಮಾತ್ರ ಬೇರೆ ಪರಿಯಾಗಿಯೇ ಗೋಚರಿಸುತ್ತಾರೆ: "ವ್ಯಾಸರಾಯರು ಮಹನೀಯರು, ಜ್ಞಾನಿಗಳು, ಋಷಿಗಳು! ಮಂಗನಿಗೇನು ಗೊತ್ತು ಮಾಣಿಕ್ಯದ ಬೆಲೆ ಎಂಬಂತೆ ಹಳ್ಳಿಗಮಾರರು ವ್ಯಾಸರಾಯರ ಮಹಿಮೆ ಘನಶೀಲಗಳನ್ನು ಅರಿಯರಾದರು."

ಗೌಡರ ಅಗ್ರಹಕ್ಕೆ ಮಣಿದು ಪುಟ್ಟಾಚಾರಿ ಕಾಡುಕೋಳಿಗಳ ಬೇಟೆಗೆಂದು ಹೊರಟು ಹುಲಿಯ ಹುತ್ತದಲ್ಲಿ ಸಿಕ್ಕಿಹಾಕಿಕೊಳ್ಳುವ ಪ್ರಸಂಗವನ್ನು "ಪುಟ್ಟಾಚಾರಿಯ ಕಾಡುಕೋಳಿ" ಪ್ರಬಂಧ ದಾಖಲಿಸುತ್ತದೆ. ಹೆಣ್ಣು ಹುಲಿಯೊಂದು ತನ್ನ ಮರಿಗಳ ಲಾಲನೆಯಲ್ಲಿ ತೊಡಗಿರುವಾಗ, ಎದೆಯುದ್ದ ಬೆಳೆದ ಹುಲ್ಲಿನ ಮಧ್ಯೆ ಕಾಣದಿದ್ದರಿಂದ ಅವು ತಾನು ಹುಡುಕಿಕೊಂಡು ಹೊರಟ ಕಾಡುಕೋಳಿಗಳೇ ಇರಬೇಕೆಂದು ಕಮ್ಮಾರ

ಪುಟ್ಟಾಚಾರಿ ಕೋವಿಯೆತ್ತುವ ಸಮಯಕ್ಕೆ ನಿಜ ಸಂಗತಿ ಅರಿವಾಗಿ ಅವನಿಗೆ ಜಂಘಾಬಲ ಉಡುಗಿ ಹೋಗುತ್ತದೆ. ಕೋಳಿ ಸಂಹಾರಾರ್ಥವಾಗಿ ಪುಟ್ಟಾಚಾರಿ ಬರಿಚರೆಯನ್ನು ಮಾತ್ರ ಕೋವಿಗೆ ತುಂಬಿದ್ದ. ಅದಕ್ಕೆ ಬದಲು ಗುಂಡು ತುಂಬಿದ್ದರೆ ಹುಲಿಬೇಟೆಯಾಡಿ ಗೌಡರ ಶಹಭಾಸ್‌ಗಿರಿ ಸಂಪಾದಿಸಬಹುದಿತ್ತೆಂದು ಹಲುಬುವ ಪುಟ್ಟಾಚಾರಿ ಸದ್ಯ ಪ್ರಾಣಾಪಾಯದಿಂದ ಪಾರಾದನಲ್ಲ ಎಂದು ಓದುಗರು ನಿಟ್ಟುಸಿರು ಬಿಡುವಂತಾಗುತ್ತದೆ.

ಇದೇ ರೀತಿ ರಂಗಯ್ಯನ ಮರಸು ಬೇಟೆಯ ಪರಿಯನ್ನು ತಿಳಿಸುವ ಪ್ರಬಂಧ "ಬಂದನಾ ಹುಲಿರಾಯನು." ಒಂಟಿ ನಳಿಗೆಯ ಕೇಪಿನ ಕೋವಿ ತೆಗೆದುಕೊಂಡು ಮರಸುಬೇಟೆಗೆ ಹೊರಡುವ ರಂಗಯ್ಯನ ಬರುವನ್ನೇ ನಿರೀಕ್ಷಿಸುತ್ತಿರುವಂತೆ ಕೇವಲ ಒಂದೇ ಮಾರು ದೂರದಲ್ಲಿ ಹೆಬ್ಬುಲಿಯೊಂದು ಕುಳಿತಿರುತ್ತದೆ. ಆದರೆ ಏಕೊ ಏನೊ ಹುಲಿ ತಾನಾಗಿಯೇ ರಂಗಯ್ಯನ ಮೇಲೆ ಎರಗದೆ ಗುರಿಗಾಯಿಸುತ್ತಾ ಕುಳಿತು ಬಿಡುತ್ತದೆ. ನನ್ನ ಆಯುಸ್ಸು ಇಂದಿಗೆ ಮುಗಿಯಿತು ಎಂದು ನಿಶ್ಚಯಿಸಿಕೊಂಡು ರಂಗಯ್ಯ ನಿಲ್ಲುವಾಗ ಬೈಗು ಕಾಡನ್ನು ವ್ಯಾಪಿಸುತ್ತದೆ. ಆದದ್ದಾಗಲಿ ಎಂದು ಹೋ! ಹೋ ಅಂತ ರಂಗಯ್ಯ ಕೂಗಿಕೊಂಡು ಅತ್ತ ಸಮೀಪಿಸುವಾಗ ಹೆಬ್ಬುಲಿ ಮರೆಯಾಗಿ ಬಿಡುತ್ತದೆ.

"ಕಾಡಿನಲ್ಲಿ ಕಳೆದ ಒಂದಿರುಳು" ಇಂಥದೇ ಅನುಭವವನ್ನು ಹೇಳುವ ಪ್ರಬಂಧವಾದರೂ 'ಬೇಟೆಗಾರರಾಗಿ ಬನಕ್ಕೆ ಹೋದವರು ಕಬ್ಬಿಗರಾಗಿ ಹಿಂತಿರುಗುವ' ಪ್ರಕ್ರಿಯೆಯನ್ನು ಪ್ರಕಟಪಡಿಸುತ್ತದೆ. ಕುವೆಂಪುರವರ ಲಲಿತ, ಮನೋಹರವಾದ ಗದ್ಯಶೈಲಿಯನ್ನು ಕಾಣಬಯಸುವವರು ಈ ಪ್ರಬಂಧದ ಅಂತಿಮ ಭಾಗವನ್ನು ಗಮನಿಸಬೇಕು. ಇರುಳು ಕರಗಿ ಹಗಲು ಕಣ್ದೆರೆಯುವ ಸಂದರ್ಭವನ್ನು ಅವರು ವರ್ಣಿಸುವ ರೀತಿ ವಿಶಿಷ್ಟವಾದ ಕಂಪಿನಿಂದ ಕೂಡಿದ್ದು ನಾನು ಮೊದಲೇ ಪ್ರಸ್ತಾಪಿಸಿದ ಸಮೃದ್ಧಿ ('density') ಯಿಂದ ತೊನೆಯುತ್ತದೆ. ಆ ಒಂದು ಗದ್ಯ ಖಂಡವನ್ನು ಕೊಡಲೇಬೇಕಾದದ್ದು ಅಗತ್ಯವೆನಿಸಿದೆ:

> ಇಬ್ಬನಿಯು ಕಡಲಿನಿಂದ ತಲೆಯೆತ್ತಿ ನಿಂತಿದ್ದ ಗಿರಿಶೃಂಗಗಳು ಮುಂಬೆಳಕಿನ ಹೊಂಬಣ್ಣವನ್ನು ಹೊಂದಿದ್ದವು. ಬಾಲಸೂರ್ಯನ ಸ್ನಿಗ್ಧ ಕೋಮಲ ಸುವರ್ಣ ಜ್ಯೋತಿಯಿಂದ ವೃಕ್ಷರಾಜಿಗಳ ಶ್ಯಾಮಲ ಪರ್ಣವಿತಾನಗಳಲ್ಲಿ ಖಚಿತವಾಗಿದ್ದ ಸಹಸ್ರ ಸಹಸ್ರ ಹಿಮಮಣಿಗಳು ಅನರ್ಘ್ಯ ರತ್ನ ಸಮೂಹಗಳಂತೆ ವಿರಾಜಿಸುತಿದ್ದವು. ಬೆಳ್ನೊರೆಯಂತೆ ಹಬ್ಬಿದ ಇಬ್ಬನಿಯು ಕಡಲಿನಲ್ಲಿ ಮುಳುಗಿ ಹೋಗಿದ್ದ ಕಣಿವೆಯು ಕಾಡುಗಳಿಂದ ಕೇಳಿ ಬರುತ್ತಿದ್ದ ವಿವಿಧ ವಿಹಂಗಮಗಳ ಮಧುರವಾಣಿ ಅದೃಶ್ಯರಾಗಿ ಉಲಿಯುವ ಗಂಧರ್ವ ಕಿನ್ನರರ ಗಾಯನದಂತೆ ಸಮನೋಹರವಾಗಿತ್ತು. ನಾವು ಮೂವರೂ (ತಿಮ್ಮ, ಓಬು) ಅವಾಕ್ಕಾಗಿ ನಿಂತು ನೋಡಿದೆವು! ನೋಡಿದೆವು ಸುಮ್ಮನೆ ಭಕ್ತಿಯಿಂದ, ಭಾವಾವಿಷ್ಟರಾಗಿ!"

ಈ ಗದ್ಯವನ್ನು ಓದುವಾಗ ಭಾಷೆ ಬೇರೆ ಭಾವ ಬೇರೆ ಎಂದು ಭಾವಿಸಲಾಗದು. ಕೇವಲ ನುಡಿಲೋಲುಪತೆಯಿಂದ ಭಾಷೆ ಬಳಕೆಯಾಗುತ್ತಿದೆಯೇ ಅಥವಾ ದೃಶ್ಯಕ್ಕೆ ವಾಗ್ರೂಪದ ಉಡುಗೆ ತೊಡಿಸಲು ಲೇಖಕರು ಪ್ರಯತ್ನಿಸುರುವರಲ್ಲವೆ? ಇದಕ್ಕೆ ಉತ್ತರ ಪ್ರಶ್ನೆಯಲ್ಲಿಯೇ ಅಡಕವಾಗಿದೆ.

ವ್ಯಾಸರಾಯರು, ಪುಟ್ಟಾಚಾರಿ ಹಾಗೂ ರಂಗಯ್ಯರಂತೆಯೇ ಮರೆಯಲಾಗದ ಮತ್ತೊಬ್ಬ ವ್ಯಕ್ತಿಯೆಂದರೆ ಕತೆಗಾರ ಮಂಜಣ್ಣ. ಮಂಜಣ್ಣ ಈ ಪ್ರಸಂಗದಲ್ಲಿ ಕಂಡುಬರುವ ಕೇಂದ್ರ ವ್ಯಕ್ತಿ. ಮನೆಯ ಆಳು ಮಂಜಣ್ಣ ಕತೆಗಾರನಾಗಿದ್ದ ಪ್ರಯುಕ್ತ ಮನೆ ಮಕ್ಕಳಿಗೆ ಅವನ ಮೇಲೆ ಅಗಾಧವಾದ ಪ್ರೇಮ. ಲೇಖಕರಿಗೆ ಆಗ ಏಳೆಂಟು ವರ್ಷ, ಮಂಜಣ್ಣನಿಗೆ ಅರವತ್ತರ ಪ್ರಾಯ. ಸ್ವಕಪೋಲಕಲ್ಪಿತವಿರಲಿ ಅಥವಾ ಬೇರೆ ಮೂಲಗಳಿಂದ ಎರವಲು ತಂದದ್ದಿರಲಿ ಒಟ್ಟಿನಲ್ಲಿ ಅವನ ಬಾಯಿಯಿಂದ ಅದು ಜನ್ಮ ತಳೆಯುವಾಗ ಪ್ರತಿಯೊಂದು ಕತೆಗೂ ಮಂಜಣ್ಣನ ಮಾಂತ್ರಿಕತೆಯ ಛಾಪು ಇದ್ದೇ ಇರುತ್ತದೆ. ಜಿಟ್ಟೆಂದು ಸುರಿಯುವ ಮಲೆನಾಡ ಮಳೆಗೆ ಚಳಿ ಕಾಯಿಸುತ್ತಾ ಒಲೆಯ ಸುತ್ತಲೂ ಕುಳಿತುಕೊಂಡು ಕತೆಗಾರ ಮಂಜಣ್ಣ ಕಾಲದೇಶಗಳ ಬಂಧನವನ್ನು ಹರಿದು ಹಾಕಿ ಕೇಳುಗರಿಗೆ ಕತೆಯನ್ನೊದಗಿಸುವ ದೃಶ್ಯ ವಾಲ್ಮೀಕಿಯನ್ನು ನೆನಪಿಗೆ ತರುತ್ತದೆ.

> ವೃದ್ಧಮೂರ್ತಿ (ಮಂಜಣ್ಣ) ನುಸುಕಾದ ಆ ಬೆಂಕಿಯ ಬೆಳಕಿನಲ್ಲಿ ಕತೆ ಹೇಳುತ್ತಿರುವನು — ಎಂದಿಗೂ ಮುಗಿಯದ ಕತೆ! ನಾವು ಏಕಾಗ್ರಚಿತ್ತರಾಗಿ ಅವನ ಮುಖದ ಕಡೆ ನೋಡುತ್ತಾ ಕತೆ ಕೇಳುತ್ತಲೇ ಇರುವೆವು—ಎಂದಿಗೂ ಮುಗಿಯದ ಕತೆ!

"ರಾಮರಾಣ ಯುದ್ಧ" ಎಂಬ ಕೊನೆಯ ಪ್ರಬಂಧದಲ್ಲಿ ಕುವೆಂಪು ಅವರೂ ಸೇರಿದಂತೆ ಮಾನು, ದಾಗಿ, ಓಬು ಮತ್ತು ರಾಜಿ ಮುಂತಾದವರು ಪಾರ್ಟಿ ಹಾಕಿಕೊಂಡು ರಾಮಾಯಣ ನಾಟಕ ಶುರುಮಾಡಿದ ವಿಷಯ ಬರುತ್ತದೆ.

> ನಮಗೆ ವಾಲ್ಮೀಕಿ ರಾಮಾಯಣವೇ ಪ್ರಮಾಣ ಗ್ರಂಥವಾಗಿರಲಿಲ್ಲ. ಬೇಕಾದರೆ ನಮ್ಮದೇ ಒಂದು ಹೊಸ ರಾಮಾಯಣವನ್ನು ರಚಿಸುತ್ತಿದ್ದೆವು. ಏಕೆ ರಚಿಸಬಾರದು? ಕೋಟ್ಯಾಂತರ ರಾಮಾಯಣಗಳಿದ್ದುವಂತೆ. ನಮ್ಮ ರಾಮಾಯಣ ಕಳೆದುಹೋದ ರಾಮಾಯಣಗಳಲ್ಲಿ ಒಂದು!

ಈ ಮಾತಿನಲ್ಲಿ ಎಂಥ ಪ್ರವಾದಿನುಡಿ ಇದೆ! ಬಾಲ್ಯದಲ್ಲಿ ಬೇರೊಂದು ರಾಮಾಯಣವನ್ನು ಮಕ್ಕಳಾಟದಲ್ಲಿ ಸೃಷ್ಟಿಸಿದ ಕವಿ ಮುಂದೆ ನಿಜಕ್ಕೂ ಹೊಸ ರಾಮಾಯಣವನ್ನು ಬರೆದರಲ್ಲವೆ? ಮನುಕುಲದ ವ್ಯಾಕುಲದ ಗೀತವನ್ನು ಕೇಳಿಸಿದವರಲ್ಲವೆ? ಆದಕಾರಣವೇ ಎಬರ್ ಹಾರ್ಟ್ "ಟಿಂಟರ್ನ್ ಅಬೆ" ಕುರಿತು ಆಡಿದ ಮಾತುಗಳನ್ನು ನಾನು "ಮಲೆನಾಡಿನ ಚಿತ್ರಗಳು" ಸಂದರ್ಭದಲ್ಲಿ ನೆನಪು ಮಾಡಿಕೊಟ್ಟದ್ದು. ಇವೆರಡರ ಪ್ರಕಾರವೂ ಬೇರೆ: ಒಂದು ಪದ್ಯ, ಇನ್ನೊಂದು ಗದ್ಯ; ಒಬ್ಬ ಹತ್ತೊಂಬ

ತ್ತನೇ ಶತಮಾನದ ಆದಿ ಭಾಗದ ಆಂಗ್ಲ ಕವಿ, ಇನ್ನೊಬ್ಬರು ವರ್ತಮಾನದ ಕನ್ನಡ ಕವಿ—ಇವರಿಬ್ಬರನ್ನೂ ತಳಕು ಹಾಕುವ ಸರ್ಕಸ್ಸು ಅಸಂಗತವೂ, ಅತಾರ್ಕಿಕವೂ ಆಗಿ ಕೆಲವರಿಗೆ ಗೋಚರಿಸಬಹುದು. ಆದರೆ ನನ್ನ ಮಟ್ಟಿಗೆ ಈ ಹೋಲಿಕೆಯು ಸುಸಂಗತವೂ, ತರ್ಕಬದ್ಧವೂ, ಆಗಿ ತೋರುವುದಕ್ಕೆ ಕಾರಣವನ್ನು ಎಬರ್ ಹಾರ್ಟ್‌ರ ಮಾತು ಗಳಿಂದಲೇ ಕೊಡಬಯಸುತ್ತೇನೆ. "ಮಲೆ ನಾಡಿನ ಚಿತ್ರಗಳು" ಕೃತಿಯನ್ನು ಓದಿದಾಗ, "ಟಿಂಟರ್ನ್ ಅಬೆ" ಪದ್ಯ ಓದಿದಂಥ ಅನು ಭವ ಆಗುವ ಕಾರಣವೆಂದರೆ :

> It is tike entering a dense thicket rather than walking in a light wood. It is the density, the fullness, the heaviness and the richness of the language that impresses with the wholeness of the work....

ನಮ್ಮ ನವೋದಯದ ಬಾಲ್ಯ ಕಾಲದಲ್ಲಿ ಬಂದ ಈ ಕೃತಿ ಕನ್ನಡದ ಕವಿವರ್ಯ ರೊಬ್ಬರ ಬಾಲ್ಯ ಜೀವನದ ದಾಖಲೆಯೂ ಆಗಿರುವುದು ಕವಿ ಜೀವನವನ್ನು ತಿಳಿಯ ಬಯಸುವವರಿಗೆ ತುಂಬಾ ಸಹಾಯಕ ವಾಗಿದೆ ಕೂಡ. ಕವಿ ಜೀವನದ ವಿವರಗಳು ತಿಳಿಯದಿದ್ದರಿಂದಲ್ಲವೇ ಶೇಕ್ಸ್‌ಪಿಯರ್‌ನ ಸುತ್ತ ದಂತಕತೆಗಳು ಹಬ್ಬಿರುವುದು. ಎಲ್ಲಿಯೂ ದಕ್ಕದ ವಿವರಗಳನ್ನು ಅವನ ಸಾನೆಟ್ಟುಗಳಲ್ಲಿ ಹಿಂಡಿ ತೆಗೆಯುವ ಪ್ರಯತ್ನ ಗಳು ಕನಿಷ್ಟ ಪಕ್ಷ ಇನ್ನೂರು ವರ್ಷಗಳಿಂದಾ ದರೂ ನಡೆದುಕೊಂಡು ಬಂದಿವೆ; ಆದರೆ ಶೇಕ್ಸ್‌ಪಿಯರ್‌ನ ಜೀವನ ಮಾತ್ರ ಒಂದು ಒಗಟಾಗಿಯೇ ಉಳಿದಿದೆ. ಈ ದೃಷ್ಟಿ ಯಿಂದಲೂ ಕೂಡ "ಮಲೆನಾಡಿನ ಚಿತ್ರ ಗಳು" ನಮಗೆ ಉಪಕಾರ ಮಾಡಿರುವ ಕೃತಿಯಾಗಿದೆ. ಯಾರಾದರೂ ಕೊಂಚ 'ಎಡಿಟ್' ಮಾಡಿದ್ದಿದ್ದರೆ "ನೆನಪಿನ ದೋಣಿ ಯಲ್ಲಿ" ಕೃತಿಗೆ ಕುಂದು ಬರುತ್ತಿರಲಿಲ್ಲ, ಬದಲಾಗಿ ಅದು ಇನ್ನೂ ಹೆಚ್ಚು "ಪಟುತ್ವ" ಪಡೆಯುತ್ತಿತ್ತೆನ್ನುವ ಮಾತೊಂದು ಪ್ರಚ ಲಿತವಾಗಿದೆ. ಆದರೆ ಕನ್ನಡದ ಶ್ರೇಷ್ಠ ಕವಿ ಯೊಬ್ಬರ ಜೀವನ ವಿವರಗಳು ಹೆಚ್ಚಿಗೆ ದಕ್ಕಿರುವುದರಿಂದ ಬಾಧಕವಿಲ್ಲ, ಕಡಿಮೆ ಯಾಗಿದ್ದರೆ ತೊಂದರೆಯಾಗುತ್ತಿತ್ತೆಂದು ನನ್ನ ನಮ್ರ ತಿಳುವಳಿಕೆ.

ಕುವೆಂಪು ಸಾಹಿತ್ಯ ರಾಶಿಯಲ್ಲಿ ಈ ಪುಟ್ಟ ಕೃತಿಗೆ ಒಂದು ವಿಶಿಷ್ಟವಾದ ಸ್ಥಾನವಿದೆ.

## ಗ್ರಂಥ ಋಣ

೧. "ಟಿಂಟರ್ನ್ ಅಬೆ"—ವಿಲಿಯಂ ವರ್ಡ್ಸ್‌ವರ್ತ್
೨. "ಮಾಸ್ಟರ್ ಪೊಯೆಮ್ಸ್"—ರಿಚರ್ಡ್ ಎಬರ್ ಹಾರ್ಟ್
೩. "ರೋಮಾಂಟಿಕ್ ಇಮ್ಯಾಜಿನೇಷನ್"—ಸಿ. ಎಂ. ಬೋರಾ
೪. "ಮಲೆನಾಡಿನ ಚಿತ್ರಗಳು"—ಕುವೆಂಪು
೫. "ರಿಮೆಂಬ್ರೆನ್ಸ್ ಆಫ್ ಥಿಂಗ್ಸ್ ಪಾಸ್ಟ್"—ಮಾರ್ಸೆಲ್ ಪ್ರೂಸ್ಟ್

# ಕುವೆಂಪು—ಒಂದು ನೆನಪು

ಡಾ॥ ಮ. ಸು. ಕೃಷ್ಣಮೂರ್ತಿ

ಸುಮಾರು ಮೂವತ್ತೈದು ವರ್ಷಕ್ಕೂ ಹಿಂದಿನ ಘಟನೆ. ಆದರೆ ಅದು ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಆಗ ನಾನು ಬೆಂಗಳೂರಿನ ಬಸವನ ಗುಡಿಯ ನ್ಯಾಷನಲ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕನಾಗಿದ್ದೆ. ಅಲ್ಲೇ ಹತ್ತಿರದಲ್ಲೇ ಇದ್ದ ಒಕ್ಕಲಿಗರ ಸಂಘದಲ್ಲಿ ಅಂದು ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವವೋ ಇಲ್ಲವೆ ಮುಕ್ತಾಯ ಸಮಾರಂಭವೋ ಇರಬೇಕು. ಸಮಾರಂಭದ ಮುಖ್ಯ ಅತಿಥಿ ಕುವೆಂಪು, ಅಧ್ಯಕ್ಷರು ಕೆಂಗಲ್ ಹನುಮಂತಯ್ಯನವರು, ನಾನು ನನ್ನ ಗೆಳೆಯರಾದ ಶ್ರೀ ಎಂ. ಎಸ್. ವೆಂಕಟರಾಯರ ಜೊತೆ ಹೋಗಿದ್ದೆ. ನಾವಿಬ್ಬರೂ ಕುವೆಂಪು ಅವರ ಶಿಷ್ಯರು. ಹೀಗಾಗಿ ಸಮಾರಂಭ ಮುಗಿದ ಮೇಲೆ ಅವರನ್ನು ಕಂಡು ಅಭಿವಾದನೆ ಸಲ್ಲಿಸಿ ಅವರೊಡನೆ ಮಾತನಾಡುವ ತವಕ. ಅಂದು ಕುವೆಂಪು ಅವರ ಭಾಷಣ ಅಮೋಘವಾಗಿತ್ತು ಅದ್ಭುತವಾಗಿತ್ತು. ನಾನು ಕೇಳಿದ ಅವರ ಅತ್ಯುತ್ತಮ ಭಾಷಣಗಳಲ್ಲಿ ಅದೂ ಒಂದು. ಅವರು ತಮ್ಮ ಕವನವೊಂದರ ಮೂಲಕ ತಮ್ಮ ಭಾಷಣ ಮುಗಿಸಿದರು. ಅದಾದ ನಂತರ ಹನುಮಂತಯ್ಯನವರ ಭಾಷಣ. ಅವರು ಆ ಮಾತು ಈ ಮಾತು ಆಡುತ್ತ ಆಚಾರ್ಯ ವಿನೋಭಾವೆಯವರನ್ನು ಕುರಿತು ಲಘುವಾಗಿ ಮಾತನಾಡಿ ಕೊನೆಗೆ ನಿಂದಿಸತೊಡಗಿದರು. ಆಗ ಕುವೆಂಪು ಅವರು ಎದ್ದು ನಿಂತು ಹೇಳಿದರು. ವಿನೋಬಾ ಅವರು ನನ್ನ ಆರಾಧ್ಯ ಮೂರ್ತಿ, ನನ್ನ ಗುರುಗಳು. ಅವರ ನಿಂದೆಯನ್ನು ನಾನು ಕೇಳಲಾರೆ. ಇದರಿಂದ ನನ್ನ ಮನಸ್ಸಿಗೆ ತುಂಬ ನೋವಾಗಿದೆ. ದಯವಿಟ್ಟು ನೀವು ಅದನ್ನು ಬಿಟ್ಟು ಬೇರೆ ಮಾತನಾಡಿ.

'ಆಗಲಿ' ಎಂದು ಹೇಳಿ ಹನುಮಂತಯ್ಯನವರು ತಮ್ಮ ಮಾತಿನ ದಿಕ್ಕನ್ನು ಬದಲಾಯಿಸಿದರು. ಆದರೆ ಅದು ಕೆಲಕ್ಷಣ ಮಾತ್ರ, ಮತ್ತೆ ಹಳೆಯ ಜಾಡನ್ನೇ ಹಿಡಿದರು. ಅದನ್ನು ಕೇಳಿ ಕುವೆಂಪು ಅವರು ದಿಗ್ಗನೆ ಎದ್ದು ಯಾರಿಗೂ ಹೇಳದೆ ಕೇಳದೆ ರಪರಪನೆ ಹೊರಟು ಬಿಟ್ಟರು. ಅವರನ್ನು ತಡೆಯಲು ಕಾರ್ಯಕರ್ತರು ಪಟ್ಟ ಪ್ರಯತ್ನ ಫಲಕಾರಿಯಾಗಲಿಲ್ಲ. ಸಭೆ ಅಷ್ಟಕ್ಕೆ ಮುಕ್ತಾಯವಾಯಿತು. ಇದು ಕುವೆಂಪು ಅವರ ತತ್ವನಿಷ್ಠೆ, ಗುರುಭಕ್ತಿ, ಸಾತ್ವಿಕ ಕ್ರೋಧ ಹಾಗೂ ಅಸತ್ಯದೊಂದಿಗೆ ರಾಜಿಮಾಡಿಕೊಳ್ಳದ ಅವರ ದಿಟ್ಟ ನಿಲುವಿಗೆ ಕನ್ನಡಿ ಹಿಡಿಯುವಂಥ ಘಟನೆ. ಅನಂತರ ಹಾದಿಯಲ್ಲಿ ಅವರನ್ನು ಮಾತನಾಡಿಸುವ ಧೈರ್ಯ ನಮಗಾಗಲಿಲ್ಲ.

# ಪಂಪ ಮತ್ತು ಕುವೆಂಪು

ಡಾ|| ಸೋಮಶೇಖರಗೌಡ

ಇಪ್ಪತ್ತನೆಯ ಶತಮಾನದ ಉದ್ದಗಲಕ್ಕೂ ತಮ್ಮ ಪ್ರತಿಭಾ ಶ್ರೀಮಂತಿಕೆಯಿಂದ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ರಾರಾಜಿಸಿದವರು ಕುವೆಂಪು. ಈ ಶತಮಾನ 'ಕುವೆಂಪು ಯುಗ' ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. 'ಪಂಪನಿಂದ ಕುವೆಂಪುವರೆಗೆ' ಎಂಬ ಮಾತು ಕನ್ನಡ ಸಾಹಿತ್ಯ ಚರ್ಚೆಯ ಸಂದರ್ಭದಲ್ಲಿ ತೀರ ಪ್ರಚಲಿತವಿರುವಂಥದು. ಇದು ಕೇವಲ ಪ್ರಾಸ ಸಂಬಂಧಿಯಾದುದೆಂದು ನನಗೆ ಅನಿಸುವುದಿಲ್ಲ. ಪಂಪನೊಡನೆ ಸಮೀಕರಿಸುವಂಥ ಅನೇಕ ಗುಣಗಳು ಕುವೆಂಪು ಅವರಲ್ಲಿ ಇದ್ದವು. ಹಾಗೆ ನೋಡಿದರೆ ಹತ್ತು ಶತಮಾನಗಳ ನಂತರ ಕುವೆಂಪುವಾಗಿ ಪಂಪನೇ ಮರುಹುಟ್ಟು ಪಡೆದಿರಬಹುದು ಎನ್ನುವಂಥ ತೀರ್ಮಾನ ತಳೆಯಲು ಬೇಕಾಗುವಷ್ಟು ಪುನರ್ರಚನಾಸಾಮಗ್ರಿ ಇವರಿಬ್ಬರ ನಡುವಣ ಸಾಮ್ಯತೆಯಲ್ಲಿದೆ.

ಕದಳೀಗರ್ಭಶ್ಯಾಮನಾಗಿದ್ದ ಪಂಪ, ತನ್ನ ಹಿತಮಿತ ಮೃದುವಚನಗಳಿಂದ, ಲಲಿತ ಮಧುರ ಸುಂದರ ವೇಷದಿಂದ ಎಲ್ಲರ ಮನಸ್ಸನ್ನು ಸೂರೆಗೊಂಡಿದ್ದರ ಸುಳಿವು ಅವನ ಕಾವ್ಯದಿಂದಲೇ ನಮಗೆ ತಿಳಿದು ಬರುತ್ತದೆ. ನಾವು ಕಂಡಂತೆಯೇ ಕುವೆಂಪು ಅವರ ಚೆಲುವು ಲೋಕೋತ್ತರವಾದುದು. ಪಂಪನಂತೆಯೆ ಅವರ ವೇಷಭೂಷಣ ನಡೆನುಡಿ ಕೂಡ ಹಿತಮಿತ ಹಾಗೂ ಮೃದು ಮಧುರ. ಅಜಾತ ಶತ್ರುವಾಗಿ ಬದುಕಿದ ಕುವೆಂಪು ತಮ್ಮ ಕೃತಿಯಿಂದಾಗಲೀ ಮಾತಿನಿಂದಾಗಲೀ, ನಡವಳಿಕೆಯಿಂದಾಗಲೀ ಯಾರನ್ನೂ ಉದ್ದೇಶ ಪೂರ್ವಕವಾಗಿ ನೋಯಿಸಿದವರಲ್ಲ.

ಕನ್ನಡ ನಾಡಿನ ಮೇಲೆ ಪಂಪನಿಗೆ ಅಸದೃಶವಾದ ಪ್ರೀತಿ. ಅದನ್ನು ಎಷ್ಟು ಬಗೆಯಲ್ಲಿ ವರ್ಣಿಸಿದರು ಆತ ತಣಿಯ. ತಾನು ಸತ್ತಮೇಲೆ ಮರಿದುಂಬಿಯಾಗಿಯಾದರೂ ಮತ್ತೆ ಕನ್ನಡನಾಡಿನಲ್ಲೇ ಹುಟ್ಟಬೇಕೆಂಬ ಆಸೆಯನ್ನು ಆತ ವ್ಯಕ್ತಪಡಿಸಿದ್ದ. ಕನ್ನಡದ ವರ್ಡ್ಸ್‌ವರ್ತ್ ಎಂದು ಕರೆಸಿಕೊಂಡು ಕುವೆಂಪು ಅವರ ಪ್ರಕೃತಿ ಪ್ರೇಮ ಕೂಡ ಎಣೆಯಿಲ್ಲದ್ದು. ಕನ್ನಡ ನಾಡು ನುಡಿ ಪಂಪನಂತೆ ಕುವೆಂಪು ಅವರಿಗೂ ಉಚ್ಛ್ವಾಸ ನಿಶ್ವಾಸಗಳಾಗಿದ್ದವು. ಕನ್ನಡ ನಾಡಿನ ಮಲೆನಾಡ ಪ್ರಕೃತಿ ವೈಭವದ ವಿರಾಟ್ ದರ್ಶನ ಅವರ ಕೃತಿಗಳಲ್ಲಿ ನಮಗೆ ಲಭ್ಯ. ಮಲೆನಾಡಿನಲ್ಲಿ ಅವರು ಕಾಣದ ಹಾಗೂ ವರ್ಣಿಸದ ಪಶುಪಕ್ಷಿಯಿಲ್ಲ, ಗಿಡಗಂಟಿಯಿಲ್ಲ, ಗಿರಿಗುಡ್ಡಗಳಿಲ್ಲ, ನೆರೆತೊರೆಗಳಿಲ್ಲ. "ಹೋಗು

ವೆನು ಮಲೆನಾಡಿಗೆ ನನ್ನ ಒಲುವೆಯ ಗೂಡಿಗೆ" ಎಂಬ ಮಾತುಗಳ ಅಂತರ್ಯದಲ್ಲಿ ಪಂಪನಂತೆ ಕುವೆಂಪು ಅವರಿಗೂ ಪ್ರಕೃತಿಯ ಮಡಿಲಲ್ಲಿ ಲೀನವಾಗುವ ಆಸೆ.

ರಾಜಾಶ್ರಯದ ಹಂಗಿನಲ್ಲಿದ್ದರೂ ಪಂಪನದು "ಪೆರರೀವುದೇಂ ಪೆರರಿಂದ ಮಪ್ಪುದೇಂ" ಎಂಬ ಸ್ವಾಭಿಮಾನ. ಕುವೆಂಪು ಕೂಡ ಗುರುಹಿರಿಯರು, ದಾರ್ಶನಿಕರಿಗೆ ಮಣಿದರೇ ವಿನಃ ತಮ್ಮ ಜೀವಿತ ಅವಧಿಯಲ್ಲಿ ಅಧಿಕಾರ, ಅಂತಸ್ತು, ಗದ್ದುಗೆಗಳಿಗೆ ಎಂದೂ ಸೊಪ್ಪುಹಾಕಲಿಲ್ಲ. ಅಧ್ಯಾಪನ ಅವರ ಪ್ರಿಯ ಕಾಯಕವೇ ಆಗಿದ್ದರೂ ಅದನ್ನು ಅರಮನೆಗೆ ಹೋಗಿ ಧಾರೆ ಎರೆಯಲು ಅವರು ಸಿದ್ಧರಿರಲಿಲ್ಲ. ಇವರೇ ಕುಲಪತಿಯಾಗಿದ್ದಾಗಲೂ ಇವರ ಮೇಲಧಿಕಾರದ ಕುಲಾಧಿಪತಿಗಳನ್ನಾಗಲಿ, ಮುಖ್ಯ ಮಂತ್ರಿ ಅಥವ ಸಚಿವರನ್ನಾಗಲೀ ಕಂಡವರಲ್ಲ. ಅವರೇ ಬಂದು ಇವರ ಬಿಡುವು ತಿಳಿದು ಭೇಟಿಯಾಗಿ ಕೃತಾರ್ಥಭಾವನೆ ತಳೆಯುತ್ತಿದ್ದದ್ದುಂಟು. ಕೀರ್ತಿಯನ್ನು ಶನಿ ಎಂದು ಕರೆದು ಇವರು ದೂರ ಇಟ್ಟರೂ ಆತ ಮಾತ್ರ ಕುಪಿತನಾಗದೆ ಇವರನ್ನು ಸುಪ್ರೀತರನ್ನಾಗಿಸುವುದನ್ನೇ ತನ್ನ ಕಾಯಕವಾಗಿಸಿಕೊಂಡ. ಕುವೆಂಪು ಅವರು ಎಂದೂ ಏನನ್ನೂ ತಾವಾಗಿಯೇ ಬಯಸಿ ಯಾರ ಬಳಿಗೂ ಹಲ್ಲುಗಿಂಜಿ ಹೋದವರಲ್ಲ. ಅವರೊಬ್ಬ ಸ್ವಾಭಿಮಾನ ಮೇರು; ಪಂಪನಿಗಿಂತ ಒಂದು ಕೈ ಜೋರು.

"ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿ ಜಿನಾಗಮಮಂ" ಎಂದು ಹೇಳಿ ಸಾಮಾಜಿಕ ಮತ್ತು ಧಾರ್ಮಿಕ ಕಾವ್ಯ ಪರಂಪರೆಗೆ ರಾಜಮಾರ್ಗ ನಿರ್ಮಿಸಿದ ಮಹಾಕವಿ ಪಂಪ. ಅಂತೆಯೇ ಕುವೆಂಪು ತಮ್ಮ ಸಾಮಾಜಿಕ ಹಾಗೂ ದಾರ್ಶನಿಕ ಅನುಭವಗಳಿಗೆ ಕಾದಂಬರಿ ಹಾಗೂ ಕಾವ್ಯ ಪ್ರಕಾರಗಳನ್ನು ಆಯ್ದುಕೊಂಡರು. ದೊಡ್ಡ ಕ್ಯಾನ್‌ವಾಸಿನ ಮೇಲೆ ವಿಜೃಂಭಿಸಿರುವ ಅವರ ಬೃಹತ್ ಕಾದಂಬರಿಗಳು ಹಾಗೂ ಮಹಾಕಾವ್ಯದ ಪರಂಪರೆಯನ್ನು ಪುನರುತ್ಥಾನಗೊಳಿಸಿದ ಅವರ ಮಹಾ ಕಾವ್ಯ 'ಶ್ರೀ ರಾಮಾಯಣ ದರ್ಶನಂ' ಕುವೆಂಪು ಅವರನ್ನು ಅಮರಗೊಳಿಸಿವೆ. ಅಷ್ಟೇ ಅಲ್ಲ. ಪಂಪ ಪ್ರತಿಭೆ ದ್ವಿಮುಖಿಯಾಗಿ ಪ್ರವಹಿಸಿದ್ದರೆ ಕುವೆಂಪು ಪ್ರತಿಭೆ ಬಹುಮುಖಿಯಾಗಿ ಭೋರ್ಗರೆದಿದೆ'

ಪಂಪ ತನ್ನ 'ವಿಕ್ರಮಾರ್ಜುನ ವಿಜಯ. ದಲ್ಲಿನ ಒಂದೊಂದು ಪಾತ್ರವನ್ನು ಒಂದೊಂದು ಮೌಲ್ವಿಕ ಗುಣಕ್ಕೆ ಪರ್ಯಾಯವಾಗಿ ನಿಲ್ಲುವಂತೆ ಕಡೆದಿದ್ದರೆ, ಕುವೆಂಪು ತಮ್ಮ 'ರಾಮಾಯಣದರ್ಶನಂ' ನಲ್ಲಿನ ಪ್ರತಿಯೊಂದು ಪಾತ್ರಕ್ಕೂ ತಮ್ಮ ದರ್ಶನ ಪ್ರಭೆಯಿಂದ ಜೀವತುಂಬಿ ಉದ್ಧರಿಸಿದ್ದಾರೆ. ಮಂಥರೆ, ಕೈಕೆ, ಊರ್ಮಿಳೆ ಇಂಥ ದರ್ಶನ ಲಾಭ ಪಡೆದ ಪಾತ್ರಗಳು.

'ಮನುಷ್ಯಜಾತಿ ತಾನೊಂದೆ ವಲಂ' ಎಂದು ಸಾರಿ ಸರ್ವಸಮಾನತೆಯನ್ನು ಎತ್ತಿ ಹಿಡಿದ ಪಂಪ. ಅವನಂತೆಯೇ ಸಾರ್ವಕಾಲಿಕ ಸತ್ಯವೊಂದನ್ನು ತಮ್ಮ 'ವಿಶ್ವಮಾನವ ಗೀತೆ'ಯಲ್ಲಿ ಕುವೆಂಪು ಪ್ರತಿಪಾದಿಸಿದ್ದಾರೆ; ಮನುಜಮತ ತೊರೆದು ವಿಶ್ವಪಥದಲ್ಲಿ ನಡೆಯಲು ಕರೆಕೊಟ್ಟಿದ್ದಾರೆ.

ಹೀಗೆ ನೋಡುತ್ತ ಹೋದರೆ ಪಂಪ-ಕುವೆಂಪು ಅವರ ನಡುವೆ ಸಾವಿರ ವರ್ಷಗಳ ಕಾಲದ ಅಂತರವಿದೆಯೇ ವಿನಃ ವ್ಯಕ್ತಿ, ಶಕ್ತಿ, ಪ್ರಭಾವಗಳಲ್ಲಿ ಇವರಿಬ್ಬರೂ

ಸರ್ವತ್ರ ಏಕೀಭವಿಸಿದವರಾಗಿದ್ದಾರೆ; ಕಾಲದ ಇತಿಮಿತಿಗಳನ್ನು ಮೀರಿ.

ತಮ್ಮ ದೈತ್ಯ ಸೃಜನಾತ್ಮಕ ಶಕ್ತಿಯಿಂದ, ನಾನಾ ಪ್ರಕಾರಗಳಲ್ಲಿ ಪಡೆದ, ಸಾಧಿಸಿದ ಸಿದ್ಧಿಯಿಂದಾಗಿ ಕುವೆಂಪು, ದೇಜಗೌ ಅವರು ಹೇಳುವಂತೆ "ಅವರ ಸಮಕಾಲೀನ ಸಾಹಿತಿಗಳಿಗಿರಲಿ ಪಂಪ, ರನ್ನ, ನಾರಣಪ್ಪರಿಗೂ ಒಂದು ಕೈ ಮಿಗಿಲು."

ಕುವೆಂಪು ಅವರ ಬರವಣಿಗೆಯಷ್ಟೇ ವಿಸ್ತೃತವಾದದ್ದು ಅವರ ಓದು. ಅವರ ಓದಿನ ಹರವು, ಜ್ಞಾನದಿಗಂತ ಸಾಮಾನ್ಯ ಪ್ರಯತ್ನಕ್ಕೆ ವಿಮರ್ಶಕರಿಗೆ ದಕ್ಕುವಂಥದಾಗಿಲ್ಲ. 'ನಾನೇರುವೆತ್ತರಕೆ ನೀನೇರಬಲ್ಲೆಯ' ಎಂಬ ಸವಾಲಿನಲ್ಲಿ ಈ ಗುಟ್ಟು ಅಡಗಿದೆ. 'ಓದು ಬರಹದ ಶತ್ರು' ಎಂಬ ನುಡಿ ಕುವೆಂಪು ಅವರ ವಿಷಯಕ್ಕೆ ಅಕ್ಷರಶಃ ಸುಳ್ಳು. ಅವರು ಪ್ರಪಂಚ ಸುತ್ತಲಿಲ್ಲ; ಜನಗಳ ಜೊತೆ ಬೆರೆಯಲಿಲ್ಲ; ಕಲ್ಪನೆಯೇ ಅವರ ಸರಕು; ಅವರೊಬ್ಬ ದಂತಗೋಪುರದ ಕವಿ–ಎಂಬ ಮಾತುಗಳು ಕ್ಷುಲಕವಾದವು. ಏಕೆಂದರೆ, ಕುವೆಂಪು ತೆರೆದ ಕಣ್ಣಿನಿಂದ ಸಮಾಜದ ಪದರಪದರವನ್ನೂ ನೋಡಿ ಸೂಕ್ಷ್ಮಗ್ರಾಹಿಯಾಗಿ ಸೋಸಿರುವುದರಿಂದಲೇ 'ಕಾನೂರು ಹೆಗ್ಗಡತಿ', 'ಮಲೆಗಳಲ್ಲಿ ಮದುಮಗಳು' ಮಿನಂಥ ವಿಭಿನ್ನ ಸ್ತರವಿಶ್ಲೇಷಣೆಯ ಸಾಮಾಜಿಕ ಮಹಾಕಾದಂಬರಿಗಳು ಮೈದಾಳುವುದು ಸಾಧ್ಯವಾಯಿತು. ಇನ್ನು ಅವರ ಮಹಾ ಕಾವ್ಯದ ದರ್ಶನ ಧ್ವನಿಯಂತೂ ಯುಗಪ್ರಜ್ಞೆಯ ಸಂಕೇತ; ನಿರಂತರ ತಪಸ್ಸಿಗೆ ದೊರೆತ ವರ.

ಕುವೆಂಪು ದಂತಗೋಪುರದಲ್ಲುಳಿದು ಮಾಡದೇ ಹೋದದ್ದೇನು? ಉಳಿದವರು ಬೀದಿಸುತ್ತಿ ಜನರನ್ನು ಹೊಕ್ಕಿ ಕಡಿದು ಗುಡ್ಡೆ ಹಾಕಿದ್ದೇನು? ಹೋಲಿಸುವುದು ಥರವೇ? 'ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು', 'ಕನ್ನಡ ಎನೆ ಕುಣಿದಾಡುವುದೆನ್ನೆದೆ ಕನ್ನಡ ಎನೆ ಕಿವಿ ನಿಮಿರುವುದು', 'ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯ ಶಿವ', 'ಜೈ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ',–ಯಾವ ಕನ್ನಡಿಗ ಈ ಸಾಲುಗಳನ್ನು ಕೇಳಿಲ್ಲ? ಯಾವ ಮಕ್ಕಳು ಕರ್ನಾಟಕದಲ್ಲಿ ಈ ಸಾಲುಗಳನ್ನು ಹಾಡಿಲ್ಲ? ಯಾವ ಕನ್ನಡದ ಕವಿ ಹೀಗೆ ಕನ್ನಡಿಗರನ್ನು ತಲುಪಿದ್ದಾನೆ? ಕುವೆಂಪು ದಂತಗೋಪುರದಲ್ಲುಳಿದ ಕವಿಯೆ!

'ಕುವೆಂಪು' ಹೆಸರಿನ ಮೂರಕ್ಷರಗಳು 'ಕನ್ನಡ' ತ್ರ್ಯಕ್ಷರಿಗಿಂದು ಪರ್ಯಾಯ. ಇದು ಕೇವಲ ಕವಿಯೊಬ್ಬನ ಹೆಸರಾಗಿ ಕನ್ನಡದಲ್ಲಿ ಉಳಿದಿಲ್ಲ; ಕನ್ನಡವನ್ನು ಒಲಿಸಿಕೊಳ್ಳುವಂಥ ದಿವ್ಯಮಂತ್ರವಾಗಿದೆ. ಕುವೆಂಪು ಅವರ ಸಾಹಿತ್ಯ ಶ್ರೀಯಿಂದ ಕೋಟ್ಯಾಂತರ ಜನ ಓದಿದ ಬಗೆಗೆ, ಕನ್ನಡದ ಬಗೆಗೆ, ಸಾಹಿತ್ಯದ ಬಗೆಗೆ, ಆಕರ್ಷಿತರಾಗಿದ್ದಾರೆ. ಲಕ್ಷಾಂತರ ಜನ ಸಾಹಿತ್ಯ ಕೃಷಿಗೆ ಧುಮುಕಿದ್ದಾರೆ. ಹಸುಗೂಸಿನಿಂದ ಹಿಡಿದು ತಲೆ ನಡುಗುವ ವಯಸ್ಸಿನವರನ್ನೂ ಕುವೆಂಪು ತಲುಪಿದ್ದಾರೆ. ಓದನ್ನು ಬಲ್ಲ ಬಾರದ ಎಲ್ಲರನ್ನೂ ಅವರು ಸೂಜಿಗಲ್ಲಿನಂತೆ ಸೆಳೆದಿದ್ದಾರೆ. ಅವರ ಪ್ರಭಾವದಿಂದ ಮುಕ್ತರಾದ ಕನ್ನಡಿಗರು ಸಿಕ್ಕುವುದು ದುರ್ಲಭ. ಅವರ ಜನಪ್ರಿಯತೆಗೆ ಅವರೇ ಸರಿಸಾಟಿ.

೧೯೯೪ರ ನವೆಂಬರ್ ತಿಂಗಳ ನಡುರಾತ್ರಿಯಲ್ಲಿ ಕನ್ನಡದ 'ಉದಯರವಿ' ಅಸ್ತಂಗತ

ರಾದಾಗ ಸುದ್ದಿ ತಿಳಿದ ಕ್ಷಣದಿಂದಲೇ ದರ್ಶನ ಪಡೆಯಲು, ಹರಿಯಲು ಪ್ರಾರಂಭಿಸಿದ ಜನ ಜನಸಾಗರದ ಮೊರೆತ; ಮೆರವಣಿಗೆ ಮಾಡದಿದ್ದರೂ, ಮೈಸೂರು-ಶಿವಮೊಗ್ಗೆಯ ದಾರಿಯುದ್ದಕ್ಕೂ ಮಧ್ಯರಾತ್ರಿಯವರೆಗೂ ಕಾದು ನಿಂತು ನಮಿಸಿ ಸಾರ್ಥಕ್ಯ ಪಡೆದ ಧನ್ಯಭಾವ ಜನಮನದಲ್ಲಿ.

ಕವಿಶೈಲದಲ್ಲಿ ಕುವೆಂಪು ಅವರು ತಮ್ಮ ದೇಹಸಿರಿಯಿಂದ ಬೆಂಕಿಯ ಜ್ವಾಲೆಯನ್ನು ಬೆಳಗುವ ಮುನ್ನ ಮುಖ್ಯಮಂತ್ರಿ, ಮಂತ್ರಿವರೇಣ್ಯರು, ಅಧಿಕಾರಿಗಳು, ನೇತಾರರು, ಸಾಹಿತಿಗಳು, ಸಾಮಾನ್ಯ ಅಂತರವಿಲ್ಲದೆ ಬೆರೆತು ಬಿರುಬಿಸಿಲಿನಲ್ಲಿ ಮುಳ್ಳು ಕಲ್ಲುಗಳ ಮೇಲೆ ಕುಳಿತು ಕಡೇ ನಮನ ಸಲ್ಲಿಸಿದ ಪರಿಯಂತೂ ವಿಸ್ಮಯಕರವಾದ ದೃಶ್ಯವಾಗಿತ್ತು. ಅಲ್ಲಿ ಮೇಲು ಕೀಳಿನ ಕಲ್ಪನೆಯಿರಲಿಲ್ಲ; ಹಿರಿದು ಕಿರಿದರ ಅಂತರವಿರಲಿಲ್ಲ; ಸಮಾನತೆ ತಾನೇ ತಾನಾಗಿ ಮೈದಾಳಿತ್ತು. ಇಹಲೋಕದ ವ್ಯಾಪಾರ ಮುಗಿಸಿದ್ದರೂ ಅಲ್ಲಿ ಎಲ್ಲರಿಗೂ ಮುಖ್ಯರಾಗಿದ್ದವರು ಕುವೆಂಪು ಮಾತ್ರ, ಕುವೆಂಪು ನಾಮವನ್ನುಳಿದು ಬೇರಲ್ಲ ಆ ಕ್ಷಣದಲ್ಲಿ ನಗಣ್ಯ. ಎಲ್ಲರ ಕಣ್ಮನಗಳಲ್ಲಿ ಒಂದೇ ಆಸೆ; ಕುವೆಂಪು ಅವರ ಕಡೆಯ ನೋಟದ ಸಾಧ್ಯತೆಯನ್ನು ಸಾಧ್ಯವಾದಷ್ಟು ತಮ್ಮದಾಗಿಸಿಕೊಳ್ಳುವುದು.

ಕುವೆಂಪು ಈಗ ಅಸ್ತಂಗತರಾಗಿದ್ದಾರೆ. ಅವರ ಜೊತೆಗೇ ಒಂದು ಟೀಕಾಕಾರ ಪಂಥವೂ, ಸಾಹಿತ್ಯಕ ರಾಜಕೀಯವೂ ಸತ್ತಂತೆ ತೋರುತ್ತಿದೆ. ಬೇರೆ ಇನ್ನಾವ ಬಗೆಯ ಪಂಥಗಳು ಪುನರ್ ಸೃಷ್ಟಿಗೊಳ್ಳುವುವೋ ಗೊತ್ತಿಲ್ಲ. ಇನ್ನಾದರೂ ಈ ಮಹಾಚೇತನದ ವಿಶ್ವಮಾನವ ಶಕ್ತಿ ಕನ್ನಡಿಗರನ್ನು ಕಾಯಲಿ; ಭಾರತವನ್ನು ಬೆಳಗಲಿ; ತನ್ಮೂಲಕ ಜಾಗತಿಕ ಜಗತ್ತು ಉದ್ಧಾರವಾಗಲಿ.



ಎಲ್ಲ ಧರ್ಮಗಳು ಸಮಾನ ಮತ್ತು ಸತ್ಯವಾದುದನ್ನೇ ಸಾರಿವೆ, ಎಲ್ಲ ದೇವರು ಒಬ್ಬನೇ, ನಾವು ಮಾತ್ರ ದೇವದೇವರಲ್ಲಿ ಭೇದ ಮಾಡಿ ಕೂಡಿಸಿದ್ದೇವೆ.

—ಪರಮಹಂಸ

# ಕುವೆಂಪು: ಕನ್ನಡದ ಕಾರಣಪುರುಷ

ಎಚ್ಚೆಸ್ಕೆ

೧

ನಾನಾಗ ಹದಿವಯಸ್ಸಿನ ಹುಡುಗ. ನಮ್ಮ ಹಳ್ಳಿಗೂ ಪೇಟೆಯ ಪ್ರಪಂಚಕ್ಕೂ ಬಹಳ ದೂರ. ಶಾಲೆಯಲ್ಲಿ ಕಡ್ಡಾಯವಾಗಿ ಕಲಿಯಬೇಕಾಗಿದ್ದ ಪಾಠಗಳ ಜೊತೆಗೆ ರಾಮಾಯಣ, ಭಾರತ, ಭಾಗವತ, ನೀತಿ ಕಥೆ–ಇದಿಷ್ಟೇ ನನಗೆ ಗೊತ್ತಿದ್ದ ಸಾಹಿತ್ಯ, ಸಂಸ್ಕೃತಿ.

ನನಗಿಂತ ಆರೆಂಟು ವರ್ಷ ದೊಡ್ಡವರಾಗಿದ್ದ ನನ್ನ ಅಣ್ಣ ನಗರದಲ್ಲಿ ಕಲಿಯುತ್ತಿದ್ದರು. ರಜೆಯ ದಿನಗಳಲ್ಲಿ ಅವರು ಊರಿಗೆ ಬಂದಾಗ ಅವರಿಂದ ಅನೇಕ ವಿಸ್ಮಯಕಾರಿ ಸಂಗತಿಗಳು ನನಗೆ ಗೊತ್ತಾಗುತಿದ್ದುವು. ಅವರು ತರುತ್ತಿದ್ದ ಪುಸ್ತಕಗಳೂ ರುಚಿಕಟ್ಟಾಗಿರುತ್ತಿದ್ದುವು. ಅವರಿಂದಲೇ ನಾನು ಕುವೆಂಪು ಅವರ ಹೆಸರನ್ನು ಮೊದಲು ಕೇಳಿದ್ದು. ಆಗ ಕುವೆಂಪು ಅವರು ಇನ್ನೂ ಕುವೆಂಪು ಆಗಿರಲಿಲ್ಲ. ಕೆ. ವಿ. ಪುಟ್ಟಪ್ಪ ಎಂದೇ ಅವರು ಬರೆಯುತ್ತಿದ್ದದ್ದು.

ಅವರದೊಂದು ಸಣ್ಣ ನಾಟಕ 'ಯಮನ ಸೋಲು'. ಯಮ ಭಯಂಕರ. ಅವನನ್ನು ಎದುರಿಸಿ ಗೆದ್ದವರು ಯಾರೂ ಇಲ್ಲ, ಸಾವಿತ್ರಿ ಒಬ್ಬಳನ್ನು ಬಿಟ್ಟರೆ. ತನ್ನ ಗಂಡನನ್ನು ಬದುಕಿಸುವುದಕ್ಕಾಗಿ ಅವಳು ಪಡಲಾರದ ಕಷ್ಟಪಟ್ಟಳು. ಇದು ನನಗೆ ಗೊತ್ತಿತ್ತು. ಸಾವಿತ್ರಿಯ ಕಥೆಯನ್ನು ನಾನು ತಿಳಿದಿದ್ದೆ.

'ಯಮನ ಸೋಲು' ಸಾವಿತ್ರಿ ಸತ್ಯವಾನರ ಕಥೆಯನ್ನ ಕುರಿತದ್ದೇ ಎಂದು ನನ್ನ ಅಣ್ಣ ಹೇಳಿದರು. ಆತುರ–ಕುತೂಹಲ ಪುಸ್ತಕವನ್ನು ತೆಗೆದುಕೊಂಡೆ. ಕಥೆಗಳಿಂದ ಗೊತ್ತಿದ್ದುದರಿಂದ ಓದುವುದು ಕಷ್ಟವಾಗಲಿಲ್ಲ. ಆದರೆ ಅದುವರೆಗೂ ನಾನು ಪಡೆಯದಿದ್ದಂಥ ಒಂದು ಅನುಭವ ನನಗಾಯಿತು. ನಾನು ಬೇರೊಂದು ಲೋಕಕ್ಕೇ ಹೊರಟು ಹೋಗಿದ್ದೆ. ಗಂಡನ ಜೀವದೊಂದಿಗೆ ಸಾವಿತ್ರಿ ಮರ್ತ್ಯಲೋಕಕ್ಕೆ ಮರಳಿದ್ದರೂ ನಾನು ಮೋಡಗಳ ಮೇಲೆಯೇ ತೇಲಾಡುತ್ತಿದ್ದೆ. 'ಗಾಳಿವಟ್ಟೆಯೊಳಿಂತು ವೇಗದಿಂದೋಡುತಿಹೆ ಯಾವೆಡೆಗೆ ಯಮದೂತ?' ಎಂಬ ಯಕ್ಷನ ಪ್ರಶ್ನೆಯನ್ನು ನಾನೇ ಅನೇಕ ಸಾರಿ ಕೇಳಿದೆ. ನಾನು ಯಕ್ಷ ಕಿನ್ನರ ಕಿಂಪುರುಷರ ಲೋಕದಲ್ಲಿ ವಿಹರಿಸತೊಡಗಿದೆ.

ನನ್ನ ಆಸಕ್ತಿಯನ್ನು ಗಮನಿಸಿದ ನಮ್ಮಣ್ಣ ನನಗೆ ಇತರ ಸಾಹಿತಿಗಳ ಕೃತಿಗಳನ್ನೂ ಕುವೆಂಪು ಅವರ ಇತರ ಪುಸ್ತಕಗಳನ್ನೂ ತಂದುಕೊಡುತ್ತಿದ್ದರು. ಕುವೆಂಪು ನನ್ನ ಮನಸ್ಸನ್ನು ಸೆರೆಹಿಡಿದಿದ್ದರು. ಕಿಂದರಿ ಜೋಗಿಯ ಇಲಿಗಳೊಂದಿಗೆ ಚೆಲ್ಲಾಟ

ಮಾಡಿದೆ. ಕೊಳಲಿನ ದನಿ ಆಲಿಸಿದೆ. 'ಕಾಡಿನ ಕೊಳಲಿದು, ಕಾಡ ಕವಿಯು ನಾ, ನಾಡಿನ ಜನರೊಲಿದಾಲಿಪುದು' ಎಂಬ ಕವಿಯ ಗಾನ ಕಿವಿಯಲ್ಲಿ ಗುಂಯ್‌ಗುಟ್ಟಿತು. ನಾನು ಈ ಮೋಡಿಗಾರರಿಗೆ ಮಾರುಹೋಗಿದ್ದೆ.

ಒಮ್ಮೆ ನಮ್ಮಣ್ಣ ಹೇಳಿದರು. 'ಪುಟ್ಟಪ್ಪನವರು ರಾಗವಾಗಿ ಪದ್ಯಗಳನ್ನೋದುತ್ತಾರೆ, ನಾಟಕದಲ್ಲಿ ಅಭಿನಯಿಸುತ್ತಾರೆ.' 'ಯಮನ ಸೋಲು'. ನಾಟಕದಲ್ಲಿ ಅವರೇ ಸತ್ಯವಾನನ ಪಾತ್ರ ವಹಿಸಿದ್ದರಂತೆ. 'ನೋಡಬೇಕಾಗಿತ್ತು ನೀನು ಆ ಪಾತ್ರವನ್ನ!'

ನಾನು ಮನಸ್ಸಿನಲ್ಲೇ ಅದನ್ನು ಚಿತ್ರಿಸಿಕೊಂಡೆ. ನೀಳ ನಿಲುವು, ಹೊಳೆಯುವ ಕಣ್ಣು, ಕೋಮಲವಾದ ಕೆನ್ನೆ, ಅಗಲವಾದ ಹಣೆ, ಎಸಳಾದ ಮೂಗು, ನಿಡಿದಾದ ತೋಳು—ಹೀಗೆ. ನಾನು ನೋಡಿದ್ದ ದೇವರ ಪಟಗಳ ಚಿತ್ರಗಳು ಇರುವುದು ಹೀಗೇ ತಾನೇ? ಆದರ್ಶ ವ್ಯಕ್ತಿಗಳು ಹೀಗೇ ಇರಬೇಕು.

ಮುಂದೆ ನಾನು ಓದಲು ಮೈಸೂರಿಗೆ ಹೋದೆ. ದಿಕ್ಕು ದೆಸೆ ಗೊತ್ತಿಲ್ಲದ ಊರು. ಒಬ್ಬೊಂಟಿಗ. ಪರಕೀಯನೆಂದೇ ಭಾಸವಾಗುತ್ತಿದ್ದ ನೆಂಟರ ಮನೆ. ನನ್ನ ಉಸಿರು ಕಟ್ಟಿತ್ತು. ಕುವೆಂಪು ಕವನಗಳ ಸಾಲುಗಳೇ ನನ್ನ ನೆನಪಿನ ಬುತ್ತಿ. ಬೇಂದ್ರೆ, ರಾಜರತ್ನಂ, ಪು.ತಿ.ನ, ಮಾಸ್ತಿ—ಇವರೂ ನನಗೆ ಪ್ರಿಯರಾಗಿದ್ದರು.

ಕುವೆಂಪು ಅವರ ಮೋಡಿ ಬಿಡಿಸಿಕೊಳ್ಳಲಾಗದ್ದು. ಅವರು ರಾಮಕೃಷ್ಣಾಶ್ರಮದಲ್ಲಿ ಸ್ವಾಮಿಯಾಗಿ ಬಿಡುತ್ತಾರೆ ಎಂದು ಯಾರೋ ಹೇಳಿದ್ದರು. ಎಂದರೆ ಅವರೊಬ್ಬ ಆರಾಧ್ಯಮೂರ್ತಿಯಾಗುತ್ತಾರೆ ಎಂದಷ್ಟೇ ನನಗೆ ಆಗ ಅನಿಸಿದ್ದು.

ಕುವೆಂಪು ಅವರು ಮಲೆನಾಡಿನವರು ಎಂದೂ ಗೊತ್ತಿತ್ತು. ನಮ್ಮ ಹಳ್ಳಿ ಮಲೆನಾಡಿನಲ್ಲಿರದಿದ್ದರೂ ಆಗ ಅಲ್ಲೂ ದಟ್ಟವಾಗಿ ಮರಗಳಿದ್ದುವು. ಮಳೆ ಈಗಿಗಿಂತ ಹೆಚ್ಚಾಗಿ ಸುರಿಯುತ್ತಿತ್ತು. ಬೆಟ್ಟಗುಡ್ಡಗಳನ್ನು ನಾನು ಕಾಣದವನಾಗಿರಲಿಲ್ಲ. ಇವೆಲ್ಲವೂ ಅತಿಶಯವಾಗಿದ್ದರೆ ಅದು ಮಲೆನಾಡು ಎಂಬುದು ನನಗಿದ್ದ ಕಲ್ಪನೆ. ಅವರ ಕವನಗಳ ಸಾಲುಗಳೇ ನನಗೆ ಮಲೆನಾಡಿನ ಪರಿಚಯ ಮಾಡಿಕೊಟ್ಟಿದ್ದವು. 'ಮಲೆನಾಡಮ್ಮನ ಮಡಿಲು. ಕರ್ಮುಗಿಲಿನ ಒಡಲು ಸಿಡಿಲು ಮಿಂಚಿನ ಕಡಲು. ಬನಗಳ ಬೀಡು. ಚೆಲ್ವಿನ ನಾಡು. ಮೋಹನ ಭೀಷಣ ಮಲೆನಾಡು.'

'ನೇಸರು ಮೂಡುವ ಪೆಂಪು. ಮುಳುಗುವ ಸೊಂಪು. ತಿಂಗಳ ಬೆಳಕಿನ ಕಾಂತಿ. ಇರುಳಿನ ಶಾಂತಿ. ಕೋಗಿಲೆ ಲಾವುಗೆ ಗಿಣಿಗಳ ನುಣ್ಚರ.'

'ಮೊರೆಯುತೆ ಹರಿಯುವ ತೊರೆ. ತುಂಬಿದ ಕೆರೆ. ಹಾಡುತ ಏರಲು ಬೆಟ್ಟ, ಘಟ್ಟ. ಬಿಸಿಲು ತಂಪು, ಹೂಗಳ ಕಂಪು. ಹಸುರಿನ ಹಣ್ಣುಗಳಿಂಪು'. 'ಬೆಲೆಯಿಂದ ಕೈಮೆ ಕೃತಿ, ಗಾವಿಲ! ಭುವನದ ಭಾಗ್ಯದಿಂದಮಕ್ಕುಂ, ನೋಳ್ಪಿಂ, ಬೆಲೆಗೊಟ್ಟು ತಾರ ಮಧುವಂ, ಮಲಯಾನಿಲನಂ, ಮನೋಜನಂ, ಕೌಮುದಿಯಂ!"

ರನ್ನ, ಪಂಪ, ಶ್ರೀಗುರು, ವಿಲ್ಸನ್, ಶೆಲ್ಲಿ—ಕುವೆಂಪು! ಕವಿಶೈಲ, ನವಿಲುಕಲ್ಲು!

'ತೀರ್ಥಹಳ್ಳಿಯ ಕಳೆದು, ತಾಯಿ ತುಂಗೆಯ ದಾಟಿ, ಒಂಬತ್ತು ಮೈಲಿಗಳ ದೂರದಲಿ ನಮ್ಮೂರು ಕುಪ್ಪಳಿ. ಊರಲ್ಲ ನಮ್ಮ ಮನೆ. ನಮ್ಮ ಕಡೆ ಊರೆಂದರೊಂದೆ ಮನೆ.'

ಅವರ ಕವನಗಳ ಸಾಲಿನಿಂದ ನಾನು ಕುವೆಂಪು ಅವರನ್ನೂ ಅವರ ಪರಿಸರವನ್ನೂ ಮನಸ್ಸಿನಲ್ಲೇ ಚಿತ್ರಿಸಿಕೊಂಡಿದ್ದೆ. ಇಂದಿಗೂ ಅಚ್ಚಳಿಯದ ಚಿತ್ರಗಳು ಅವು. ಕುವೆಂಪು ಅವರ ಕೃತಿಗಳು ನನ್ನ ಅಂತರಾಳವನ್ನು ಆವರಿಸಿಕೊಂಡಿದ್ದವು,ತುಂಬಿಕೊಂಡಿದ್ದುವು. ಆದರೆ ಅವರನ್ನು ಪ್ರತ್ಯಕ್ಷ ಕಾಣುವುದಾಗಲಿ ಮಾತಾಡಿಸುವುದಾಗಲಿ ಅಸಾಧ್ಯಎನಿಸಿತ್ತು. ಇತರರೊಂದಿಗೆ ಬೆರೆಯುವುದೂ ಮಾತಾಡುವುದೂ ನನ್ನ ಸ್ವಭಾವವಾಗಿರಲಿಲ್ಲ. ಎಂದಾದರೊಂದು ದಿನ ಅವರನ್ನು ನೋಡಿದರೆ ನಾನು ಕಲ್ಪಿಸಿಕೊಂಡ ಚಿತ್ರಕ್ಕಿಂತ ಅವರು ಭಿನ್ನವಾಗಿರಲಾರರು ಎಂಬ ನಂಬಿಕೆಯಿತ್ತು.

ಆ ಕಾಲ ಬಂತು. ನಾನು ಪ್ರೌಢಶಾಲೆಯ ಓದು ಮುಗಿಸಿ ಮೈಸೂರಿನ ಇಂಟರ್ಮೀಡಿಯೆಟ್ ಕಾಲೇಜು ಸೇರಿದ್ದೆ. ಅದು ಈಗ ಯುವರಾಜ ಕಾಲೇಜು ಆಗಿದೆ.

ಕುವೆಂಪು ಅವರು ಆಗ ಪಕ್ಕದ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ಮಹಾರಾಜ ಕಾಲೇಜಿನ ಅಧ್ಯಾಪಕರು ಕೆಲವರು ಇಂಟರ್ಮೀಡಿಯೆಟ್ ತರಗತಿಗಳಿಗೂ ಬೋಧಿಸುತ್ತಿದ್ದದ್ದುಂಟು. ಆದರೆ ಕುವೆಂಪು ಅವರು ಬರುತ್ತಿರಲಿಲ್ಲ. ಅಲ್ಲದೆ ನಾನು ಸಂಸ್ಕೃತ ವಿದ್ಯಾರ್ಥಿ. ಕನ್ನಡ ಅಧ್ಯಾಪಕರು ನಮ್ಮ ತರಗತಿ ತೆಗೆದುಕೊಳ್ಳುವರೆಂದು ನಿರೀಕ್ಷಿಸುವುದು ಹೇಗೆ?

ಒಂದು ದಿನ ನನ್ನ ಗೆಳೆಯನೊಬ್ಬ ನಮ್ಮ ಮುಂದೆ ದೂರದಲ್ಲಿ ಹೋಗುತ್ತಿದ್ದ ಕುವೆಂಪು ಅವರನ್ನು ತೋರಿಸಿದ. ನೀಳವಾದ ನಿಲುವು. ಗಂಭೀರವಾದ ನಡಿಗೆ.

ಆದರೆ ಹತ್ತಿರ ಹೋಗಿ ಅವರನ್ನು ನೋಡುವುದಾಗಲಿ, ಮಾತಾಡಿಸುವುದಾಗಲಿ ಹೇಗೆ? ಆ ಕಾಲದಲ್ಲಿ ಅಧ್ಯಾಪಕರೊಂದಿಗೆ ಆ ಬಗೆಯ ಸಲಿಗೆ ವಹಿಸುವ ಧೈರ್ಯ ವಿದ್ಯಾರ್ಥಿಗಳಿಗೆ ಇರಲಿಲ್ಲ.

ಒಂದು ದಿನ ನನ್ನ ಗೆಳೆಯ ಹೇಳಿದ: 'ಪುಟ್ಟಪ್ಪನವರು ಜ್ಯೂನಿಯರ್ ಬಿ.ಎ. ಹಾಲಿನಲ್ಲಿ ಪಾಠ ಮಾಡುತ್ತಿದ್ದಾರೆ. ನಾವು ನುಸುಳಿ ಹೋಗಿ ಕುಳಿತುಕೊಳ್ಳೋಣ.'

ನಮಗೆ ಆಗ ವಿರಾಮ ಇದ್ದದ್ದರಿಂದ ನಾನು ಕೂಡಲೆ ಈ ಸಲಹೆಗೆ ಒಗೊಟ್ಟೆ.

ಕಿಕ್ಕಿರಿದು ತುಂಬಿದ ಭವನ. ಮೆಟ್ಟಿಲು ಮೆಟ್ಟಿಲಾಗಿದ್ದ ಬೆಂಚುಗಳು. ಕುವೆಂಪು ಅವರು ಇನ್ನೊಂದು ಕಡೆ ಮುಖ ಮಾಡಿಕೊಂಡಿದ್ದಾಗ ನಾವು ಮೆಲ್ಲಗೆ ಈ ಕಡೆಯ ಬಾಗಿಲಿಂದ ಒಳ ನುಸುಳಿಕೊಂಡೆವು.

ಕುವೆಂಪು ಅವರು ನನ್ನ ಮನಸ್ಸಿನ ಚಿತ್ರಕ್ಕಿಂತ ಭಿನ್ನವಾಗಿರಲಿಲ್ಲ. ನೀಳದೇಹ. ಆಜಾನುಬಾಹು. ಗುಂಗುರು ಕೂದಲು. ನಸುಗೆಂಪು ಬಿಳುಪು ಮುಖ. ಅಗಲ ಹಣೆ. ಏನನ್ನೋ ಅನ್ವೇಷಿಸುವ ಕಣ್ಣುಗಳು. ಎಸಳು ಮೂಗು. ತುಂಬು ಕೆನ್ನೆ, ರೇಶ್ಮೆಯ ಹಳದಿಯ ಉದ್ದನೆಯ ಕೋಟು. ಬೆಳ್ಳಂಬಿಳುಪಾದ ಗರಿಮುರಿ ಷರಾಯಿ. 'ನಿಟ್ಟಿಸಿದರೆ ಮುತ್ತಮುದುಕಿಗಾದರೂ ಜುಮ್ಮು ದಟ್ಟೆಸದಿರದು' ಎಂಬಂಥ ರೂಪ.

ಕುವೆಂಪು ಭಾವಸಮಾಧಿಯಲ್ಲಿದ್ದರು. ತಾವು ಬಣ್ಣಿಸುತ್ತಿದ್ದ ಯಾವುದೋ ಸನ್ನಿವೇಶದಲ್ಲಿ ಕರಗಿಹೋಗಿದ್ದಂತಿತ್ತು. ಸುತ್ತಣ ಜಗತ್ತಿನ ಪರಿವೆ ಅವರಿಗೆ ಇದ್ದಂತಿರಲಿಲ್ಲ.

ಅವರು ಯಾವ ಪಾಠ ಮಾಡುತ್ತಿದ್ದರು ಎಂಬುದು ನಮಗೆ ಗೊತ್ತಾಗಲಿಲ್ಲ. ಕುವೆಂಪು ಅವರು ನಮ್ಮನ್ನು ನೋಡಿಬಿಟ್ಟರೆ ಏನು ಗತಿ ಎಂಬ ದಿಗಿಲು ಮೈತುಂಬ.

ತರಗತಿ ಮುಗಿಯಿತು. ವಿದ್ಯಾರ್ಥಿಗಳು ದಢದಢನೆ ಗ್ಯಾಲರಿಯ ಮೇಲಿಂದ ಇಳಿದು ಚದರತೊಡಗಿದರು. ಕುವೆಂಪು ಅವರೂ ಹೊರಹೊರಟರು. ಅವರೊಮ್ಮೆ ನಮ್ಮತ್ತ ತಿರುಗಿ ನೋಡಿದರು. ಮಿಂಚು ಹೊಳೆದಂತಾಯಿತು. ಅವರು ನಮ್ಮ ಕಳ್ಳತನವನ್ನು ಪತ್ತೆ ಹಚ್ಚಿದರೆ? ನಮ್ಮ ಅದೃಷ್ಟ. ಗುಡುಗು ಸಿಡಿಲುಗಳಿಲ್ಲ.

ಅನೇಕ ಲೇಖಕರ ನಿಜಜೀವನವೇ ಬೇರೆ. ಅವರ ಕೃತಿಗಳಲ್ಲಿ ಕಾಣುವ ಚಿತ್ರವೇ ಬೇರೆ. ಆದರೆ ಕುವೆಂಪು ಹಾಗಲ್ಲ. ಅವರ ಸಾಹಿತ್ಯವನ್ನೋದಿ ನಾನು ಕಲ್ಪಿಸಿಕೊಂಡಿದ್ದ ಚಿತ್ರಕ್ಕೆ ಸ್ವಲ್ಪವೂ ಊನವಾಗಲಿಲ್ಲ. ಬದಲಾಗಿ ಅದನ್ನು ಇನ್ನಷ್ಟು ತಿದ್ದಿದಂತಾಯಿತು. ಅದಕ್ಕೆ ಇನ್ನೂ ಹೊಳಪು ಕೊಟ್ಟಂತಾಯಿತು. ಕುವೆಂಪು ಅವರ ಬದುಕು ಬೇರೆಯಲ್ಲ, ಬರಹ ಬೇರೆಯಲ್ಲ. ಅವೆರಡಕ್ಕೂ ಅವಿನಾಭಾವಸಂಬಂಧ.

೨

ಮುಂದೆ ನಾನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಓದು ಮುಂದುವರಿಸಿದೆ. ಆ ವೇಳೆಗೆ ಕುವೆಂಪು ಅವರೂ ಅಲ್ಲಿಗೆ ಬಂದಿದ್ದರು. ಪ್ರತಿದಿನವೂ ಸಾಮಾನ್ಯವಾಗಿ ಅವರನ್ನು ನಾನು ನೋಡುತ್ತಿದ್ದೆ. ಸೆಂಟ್ರಲ್ ಕಾಲೇಜಿನ ಒಂದು ತುದಿಯಲ್ಲಿ ಅವರ ಕೊಟಡಿ. ಒಮ್ಮೆ 'ಕಾನೂರು ಹೆಗ್ಗಡಿತಿ' ಕಾದಂಬರಿಯಲ್ಲಿಯ ಒಂದು ಪ್ರಸಂಗ ನಿಜವಾದ ಘಟನೆಯೋ ಸ್ವಪ್ನವೋ ಎಂಬ ಜಿಜ್ಞಾಸೆ ನನಗೂ ನನ್ನ ಮಿತ್ರನಿಗೂ ನಡುವೆ ಬೆಳೆಯಿತು. ಕುವೆಂಪು ಅವರನ್ನೇ ಕೇಳಿಬಿಡೋಣ ಎಂದು ನಾವು ತೀರ್ಮಾನಿಸಿದೆವು. ಅವರು ಪಾಠ ಮುಗಿಸಿ ತಮ್ಮ ಕೊಟಡಿಗೆ ಮರಳುತ್ತಿದ್ದಾಗ ಅವರಿಗೆ ವಂದಿಸಿ, ನಮ್ಮದೊಂದು ಸಂಶಯ ಪರಿಹಾರ ಆಗಬೇಕು ಎಂದು ಕೇಳಿದೆವು. ಅವರು ನಗುತ್ತ ನಮ್ಮನ್ನು ಕೊಟಡಿಯೊಳಕ್ಕೆ ಕರೆದರು. ನಮ್ಮ ಸಂಶಯವನ್ನು ವಿಚಾರಿಸಿದರು.

ನಮ್ಮ ಪ್ರಶ್ನೆಯನ್ನು ಕೇಳಿ ಅವರು ಮುಸುನಕ್ಕರು. ಒಂದು ಗಳಿಗೆ ಮೌನ.

ಅನಂತರ ನಮ್ಮ ಪ್ರಶ್ನೆಗೆ ಉತ್ತರವಾಗಿ ಅವರೊಂದು ಪ್ರಶ್ನೆ ಕೇಳಿದರು. 'ಕನಸು ನಿಜವೋ ಸುಳ್ಳೋ ?

ಇದಕ್ಕೇನು ಹೇಳಬೇಕೆಂಬುದು ನಮಗೆ ತೋಚಲಿಲ್ಲ. ಅವರೇ ಮಾತು ಮುಂದುರಿಸಿದರು. 'ಕನಸಿನಲ್ಲಿ ರುಚಿಯಾದ ತಿಂಡಿ ತಿಂದು ಸುಖ ಅನುಭವಿಸುತ್ತೀರಿ. ಆ ಕ್ಷಣದಲ್ಲಿ ಅದು ನಿಜ ಆಗಿರುವುದಿಲ್ಲವೆ? ಕನಸು ಹರಿದ ಮೇಲೆ ಹೇಗಾದರೂ ಅನಿಸಲಿ.'

ನಾವು ಮೌನವಾಗಿ ತಲೆ ಆಡಿಸಿದೆವು. ಕುವೆಂಪು ಅವರು ಕಣ್ಣುಗಳನ್ನು ಅರೆ ಮುಚ್ಚಿ ಹೇಳಿದರು. 'ಜೀವನವೇ ಒಂದು ಕನಸು ಅನ್ನಬಹುದು. ಬದುಕಿರುವಾಗ ಸತ್ಯ. ಆಮೇಲೆ ?'

ನಾವು ಮಾತಾಡಲಿಲ್ಲ.

'ಯಾವುದು ನಿಜ ? ಯಾವುದು ಕನಸು ? ಕಾದಂಬರಿಯಲ್ಲಿ ಚಿತ್ರಿಸಿರುವುದೆಲ್ಲ ಒಂದು ರೀತಿಯಲ್ಲಿ ನಿಜ. ಆದರೆ ಜೀವನದಲ್ಲಿ ಎಲ್ಲ ಘಟನೆಗಳೂ ಅದೇ ರೀತಿ ನಡೆದಿರುವುದಿಲ್ಲ. ಎಂದೆಂದೋ ನಡೆದ ಘಟನೆಗಳು ಲೇಖಕನ ಮನಸ್ಸಿನಲ್ಲಿ ಅಚ್ಚೊತ್ತಿರುತ್ತವೆ. ಹೇಗೆ ಹೇಗೋ ಕೂಡಿಕೊಳ್ಳುತ್ತವೆ. ಕೃತಿಯ ಸೃಷ್ಟಿ ಆಗುತ್ತದೆ.'

ಕುವೆಂಪುಅವರ ಕಣ್ಣುಗಳು ಯಾವುದೋ ಸತ್ಯವನ್ನು ಬೆದಕುತ್ತಿದ್ದುವು.

ಥಟ್ಟನೆ ಅವರು ನನ್ನತ್ತ ತಿರುಗಿ, 'ಈಗ ನೀವು ಧರಿಸಿರುವ ಷರಟಿನ ಗುಂಡಿಯನ್ನ ನಾನು ನೋಡುತ್ತಿದ್ದೇನೆ. ಈ ಚಿತ್ರ ನನ್ನಲ್ಲಿ ಅಚ್ಚೊತ್ತಿರುತ್ತದೆ. ಇದು ಯಾವುದೋ ಸಂದರ್ಭದಲ್ಲಿ ಹೇಗೋ ಬರಬಹುದು. ಇದನ್ನು ನಾನು ಮರೆತಿರುವುದಿಲ್ಲ. ಕನಸಾಗಿಯೂ ಇರಬಹುದು. ಕೃತಿಯಲ್ಲಿ ನೇರವಾಗಿಯೇ ಇದನ್ನು ಹೇಳಬಹುದು.'

ಧ್ಯಾನಾಸಕ್ತರಾದಂತೆ ಕುವೆಂಪು ಮೌನ ತಳೆದರು. ಮಾತಿಗೂ ಮೀರಿದ ಆ ಮೌನ ತನ್ನ ಅರ್ಥದ ಹೊಂಗಿರಣವನ್ನು ನಮ್ಮತ್ತ ಹಬ್ಬಿಸಿತ್ತು.

ನಾವು ಅವರಿಗೆ ವಂದಿಸಿ ಹೊರಬಂದೆವು. ನಮ್ಮ ನಮಸ್ಕಾರವನ್ನಾಗಲಿ, ನಾವು ಹೊರಟದ್ದನ್ನಾಗಲಿ ಅವರು ಗಮನಿಸಿದಂತೆ ತೋರಲಿಲ್ಲ.

೩

ಸುಮಾರು ಇಪ್ಪತ್ತೈದು ವರ್ಷಗಳ ಅನಂತರ : ಆ ವೇಳೆಗೆ ನಾನು ಮೈಸೂರಿನಲ್ಲಿ ಅಧ್ಯಾಪಕನಾಗಿದ್ದೆ. ಅವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ, ಅದರ ಪ್ರಾಚಾರ್ಯರಾಗಿ, ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿ ನಿವೃತ್ತರಾಗಿದ್ದರು. ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಮಾಧ್ಯಮ ಶಿಕ್ಷಣದ ಆರಂಭ, ಮಾನಸಗಂಗೋತ್ರಿಯ ವಿಕಾಸ, ಬೋಧನಾಂಗ ಸಂಶೋಧನಾಂಗ ಪ್ರಸಾರಾಂಗಗಳೆಂಬ ಮೂರು ವಿಭಾಗಗಳ ನಿರ್ಮಾಣ— ಹೀಗೆ ಹಲವು ಸಾಧನೆಗಳು ಅವರವು. ಭಾರತಕ್ಕೆ ಸ್ವಾತಂತ್ರ್ಯ ಬಂದ ತರುಣದಲ್ಲಿ ಆಗ ಗವರ್ನರ್ ಜನರಲ್ ಆಗಿದ್ದ ರಾಜಾಜಿ ಅವರು ಮೈಸೂರಿಗೆ ಭೇಟಿ ನೀಡಿದಾಗಿನ ಸಂದರ್ಭ ನನಗೆ ನೆನಪಿಗೆ ಬರುತ್ತದೆ. ಆಗ ಎತ್ತರದ ವೇದಿಕೆಯ ಮೇಲಿಂದ ಅವರು ಓದಿದ ಒಂದು ಕವನ ನನ್ನ ಕಿವಿಗಳಲ್ಲಿ ಇಂದಿಗೂ ನಿನದಿಸುತ್ತಿದೆ. ತಮ್ಮ ಕನಸಿನ ಕರ್ನಾಟಕವನ್ನು ಕುರಿತ ಕವನ ಅದು. ಕರ್ನಾಟಕ ಏಕೀಕರಣದ ಬಗ್ಗೆ ಒಡಕು ಮಾತು ಕೇಳಿಬರುತ್ತಿದ್ದ ಕಾಲವದು. ತಮ್ಮ ಕನಸಿನ ಕರ್ನಾಟಕ ರಾಜಕೀಯ ಇತಿಮಿತಿಗಳಿಗೆ ಒಳಪಟ್ಟದ್ದಲ್ಲ. ಅದು ಮಾನಸ ಲೋಕದ ಸಾಮ್ರಾಜ್ಯ. ಅದಕ್ಕೆ ನೃಪತುಂಗನೆ ಚಕ್ರವರ್ತಿ. ಪಂಪನೇ ಮುಖ್ಯ ಮಂತ್ರಿ. ರನ್ನ ಜನ್ನ ನಾಗವರ್ಮ ರಾಘವಾಂಕ ಹರಿಹರ ಬಸವೇಶ್ವರ ನಾರಣಪ್ಪ ಸರ್ವಜ್ಞ ಷಡಕ್ಷರರನ್ನೊಳಗೊಂಡ ಮಂತ್ರಿಮಂಡಲ. ಈ ಮಾನಸಲೋಕದ ಕವಿತಾ ಸಾಮ್ರಾಜ್ಯಕ್ಕೆ ಆದಿಅಂತಗಳಿಲ್ಲ; ಏಳು ಬೀಳುಗಳಿಲ್ಲ; ಯುದ್ಧಡಾಮರಗಳ ಭೀತಿಯಿಲ್ಲ. ಈ ಸಾಮ್ರಾಜ್ಯದ ಅಡಿಯಲ್ಲಿ ಸಾಸಿಗರಿಗೆ ಲೆಕ್ಕವಿಲ್ಲ.

ನಾಡಿನ ಸುಪ್ರಸಿದ್ಧ ಪತ್ರಿಕೆಯಾದ 'ಸುಧಾ' ಪರವಾಗಿ ಕುವೆಂಪು ಅವರನ್ನು ಸಂದರ್ಶಿಸಿ ಲೇಖನವೊಂದನ್ನು ಬರೆಯುವ ಭಾಗ್ಯ ನನಗೆ ಲಭ್ಯವಾಗಿತ್ತು. ಈ ನೆವದಲ್ಲಿ ಒಂದೆರಡು ಗಂಟೆಗಳ ಕಾಲವಾದರೂ ಅವರೊಂದಿಗೆ ಇರಬಹುದೆಂಬ, ಮಾತಾಡಬಹುದೆಂಬ ಆಸೆ. ಆದರೆ ಅವರ ಸಂದರ್ಶನ ಗಿಟ್ಟಿಸಿಕೊಳ್ಳುವುದು ಸುಲಭಸಾಧ್ಯವೆಂದು ನನಗೆ ಎನಿಸಿರಲಿಲ್ಲ. ಅನೇಕರಿಗೆ ಅವರು ಭೇಟಿ ನಿರಾಕರಿಸುತ್ತಿದ್ದರು. ಅದೇ ತಾನೇ ಯಾರೋ ಒಬ್ಬರು ಅವರ ಸಂದರ್ಶನ ಮಾಡಿ, ಅವರು ಹೇಳಿದ್ದು ಹೇಳದಿದ್ದುದು

ಎಲ್ಲವನ್ನೂ ಸೇರಿಸಿ ಬರೆದು ಪ್ರಕಟಿಸಿದ್ದೆಂದು ಅವರಿಗೆ ಅಸಮಾಧಾನವಾಗಿತ್ತಂತೆ.

ಕೊನೆಗೂ ಅವರು ಒಪ್ಪಿಗೆ ನೀಡಿ ಬರೆದ ಕಾರ್ಡು ನನಗೆ ಬಂತು. ನನ್ನ ಆನಂದ ಹೇಳತೀರದು. ಗೊತ್ತಾದ ಸಮಯಕ್ಕೆ ಸರಿಯಾಗಿ 'ಉದಯರವಿ'ಯ ಮುಂದೆ ಛಾಯಾಚಿತ್ರಗ್ರಾಹಕರೊಂದಿಗೆ ನಾನು ಹಾಜರಾದೆ. ಕುವೆಂಪು ಪ್ರತ್ಯಕ್ಷ. ಎಳೆಯ ಮಗುವಿನ ನಗೆಯಂತೆ ಮುಖದ ಮೇಲೆ ನಗೆ: ಎಳಬಿಸಿಲು ಚೆಲ್ಲಿದಂತೆ ಹಿತ, ಮಿತ, ಪರಿಶುದ್ಧ, ಆಹ್ಲಾದಕರ. ಕುವೆಂಪು ಅವರದು ಮಗುವಿನ ಹೃದಯ, ವೃದ್ಧನ ವಿವೇಕ, ದಾರ್ಶನಿಕನ ದೃಷ್ಟಿ, ಕವಿಯ ಪ್ರಸನ್ನತೆ, ಪ್ರಚಾರಕನ ಆವೇಶ, ದ್ರಷ್ಟಾರನ ಕ್ರತುದರ್ಶನ, ತಪಸ್ವಿಯ ಮಂತ್ರಶಕ್ತಿ, ಲೌಕಿಕನ ಕಾರ್ಯಶ್ರದ್ಧೆ, ಯುವಕನ ಉತ್ಸಾಹ. ಅವರದು ಪರಿಪೂರ್ಣ ವ್ಯಕ್ತಿತ್ವ. ಇದು ಮಾತುಮಾತಿನಲ್ಲೂ ಸಹಜವಾಗಿ ವ್ಯಕ್ತವಾಗುತ್ತಿತ್ತು. ಕುವೆಂಪು ನಾನು ಕೇಳಿದ ಪ್ರಶ್ನೆಗಳಿಗೆಲ್ಲ ಸಂತೋಷದಿಂದ ಉತ್ತರಿಸಿದರು. ಮಾತುಮಾತಿಗೂ ಬಾಯಿ ಚಪ್ಪರಿಸುತ್ತಿದ್ದರು, ಪೆಪ್ಪರಮಿಂಟನ್ನು ಚಪ್ಪರಿಸುವ ಹುಡುಗನಂತೆ. ಛಾಯಾಗ್ರಾಹಕ ಹೇಳಿದಂತೆಲ್ಲ ಕೇಳಿದರು. ಬಗೆಬಗೆಯ ಭಂಗಿಗಳಲ್ಲಿ ಚಿತ್ರತೆಗೆಯಲು ಅವಕಾಶ ನೀಡಿದರು—ಬಟ್ಟೆ ಹೊಲಿಸಿಕೊಳ್ಳಲು ದರ್ಜಿಯ ಬಳಿಗೆ ಹೋದವರು ಅವರು ಹೇಳಿದಂತೆಲ್ಲ ಕೈಕಾಲು ಆಡಿಸುವ ಹಾಗೆ, ನಿಲ್ಲುವ ಹಾಗೆ. ಕುವೆಂಪು ಅವರು ಎಷ್ಟು ಸರಳರು ಎಂದು ನನಗೆ ವಿಸ್ಮಯವಾಯಿತು. ಇವರ ಬಗ್ಗೆ ನಾನು ತಪ್ಪು ತಿಳಿದುಕೊಂಡಿದ್ದೆನಲ್ಲ ಎನಿಸಿತು.

ಕುವೆಂಪು ಹುಟ್ಟಿ ಬೆಳೆದದ್ದು ಒಟ್ಟು ಕುಟುಂಬದಲ್ಲಿ. ತಾಳ ಮದ್ದಳೆ. ಗ್ರಂಥ ಪಠಣ, ಕಾವ್ಯವಾಚನ.

ಮನೆಯ ಉಪ್ಪರಿಗೆಯೇ ಕೂಲಿಮಠ. ಮರಳ ನೆಲದ ಮೇಲೆ 'ಶ್ರೀ ಓ ನಾಮ'. ದಕ್ಷಿಣ ಕನ್ನಡ ಜಿಲ್ಲೆಯ ಐಗಳು ಗುರುಗಳು, ಐದಾರು ತಿಂಗಳಿಗೆ ಒಬ್ಬೊಬ್ಬರು. ಅವರಲ್ಲೊಬ್ಬರು ಕ್ರೈಸ್ತರು. ಕುವೆಂಪು ಅವರಿಗೆ ರಾಮಾಯಣ ಭಾರತಗಳೊಂದಿಗೆ ಬೈಬಲ್ಲೂ ಪರಿಚಯವಾಯಿತು.

ಕುವೆಂಪು ಅವರಿಗೆ ಪ್ರಕೃತಿಯೇ ದೊಡ್ಡ ಗುರು. ಬನ ಗಿರಿ ಹೊಳೆ ತೊರೆ ಕೆರೆ ಹೊಲ ತೋಟ, ತಾಯಿ ತುಂಗೆ, ಸಿರಿಮಲೆನಾಡಿನ ಪಚ್ಚೆಯ ಪಸುರಿನ ನೋಟ, ಚೆಲುವಿನ ಬಾಲೆಯರು. ಒಡನಾಡಿದ ಬಾಲಕರು. ರಂಗು, ತಿಮ್ಮ, ಗಿರಿಜೆ. 'ನಿಮ್ಮೆಲ್ಲರ ಶಿಷ್ಯನು ನಾ.'

ಎಂಟು ವರ್ಷಕ್ಕೆ ತೀರ್ಥಹಳ್ಳಿಯ ಶಾಲೆ. ಕೈಯಲ್ಲಿ ಕ್ಯಾಟ್‌ಬಿಲ್, ಕಂಕುಳ ಚೀಲದಲ್ಲಿ ಕಲ್ಲುಗಳ ಚೂರುಗಳು, ಜೇಬಿನಲ್ಲಿ ಕಡಲೆ ಪುರಿ, ಬಾಳೆಹಣ್ಣು.

ಭಾವುಕತೆಯೊಂದಿಗೆ ವೈಚಾರಿಕತೆ. ತರ್ಕದ ಒರೆಗಲ್ಲಿಗೆ ಹಚ್ಚದೆ ಯಾವುದನ್ನೂ ಸ್ವೀಕರಿಸದ ಮನೋಧರ್ಮ.

ಒಮ್ಮೆ ಶಾಲೆಯಿಂದ ಮನೆಗೆ ಹೋಗುತ್ತಿದ್ದಾಗ ಅವರು ಈ ಸೃಷ್ಟಿಯ ರಹಸ್ಯವನ್ನೂ ಸೃಷ್ಟಿಕರ್ತನನ್ನೂ ಕುರಿತು ಯೋಚಿಸುತ್ತಿದ್ದರು. ಎಲ್ಲವೂ ದೇವರ ಇಚ್ಛೆಗೆ ಅಧೀನ ಎನಿಸಿತು ಅವರಿಗೆ. 'ಈ ಪೊದೆಯ ಬಳಿ ಹಸುರಿನ ಮೇಲೆ ಅರ್ಧ ಕಾಣಿಸಿಕೊಂಡು ಇಲ್ಲಿ ಬಿದ್ದಿರುವ ಈ ಕಲ್ಲುಗುಂಡು ಇಲ್ಲಿಯೇ ಹೀಗೆಯೇ ಬಿದ್ದಿರಬೇಕೆಂದು ದೇವರು ನಿಯಮಿಸಿದ್ದಾನೆ.'

ಅವರಾಗ ಬಾಳೆಯ ಹಣ್ಣೊಂದನ್ನು ತಿಂದು ಸಿಪ್ಪೆ ಬೀಸಾಡುತ್ತಿದ್ದರು. ಸಿಪ್ಪೆಯನ್ನು ಈ ಸ್ಥಳದಲ್ಲೇ ಹಾಕಬೇಕೆಂಬುದು ಭಗವಂತನ ಕಟ್ಟಳೆ' ಎಳಿಸಿತು.

ಆದರೆ ತಾವೇಕೆ ವಿಧಿಯ ಗುಲಾಮನಾಗಿರಬೇಕು? ಅದನ್ನು ಅಲ್ಲಿಂದ ಎತ್ತಿ ಬೇರೆಡೆ ಬಿಸಾಡಿದರು. ಹಾಗೆ ಮಾಡಬೇಕೆಂಬುದು ದೇವರ ಇಚ್ಛೆಯಾಗಿತ್ತೆ?

ಉತ್ತರ ಸಿಗಲಿಲ್ಲ. ಬಿಡಿಸಲಾರದ ಪೇಚು, ಬಾಳಿನ ಉದ್ದಕ್ಕೂ ಕುವೆಂಪು ಈ ರೀತಿ ಪ್ರತಿಯೊಂದನ್ನೂ ತರ್ಕದ ಒರೆಗಲ್ಲಿಗೆ ಹಚ್ಚುತ್ತಿದ್ದರು. ತಲತಲಾಂತರಗಳಿಂದ ಬೆಳೆದು ಬಂದ ಪುರೋಹಿತಶಾಹಿಯನ್ನು ಅವರು ವಿರೋಧಿಸುತ್ತಿದ್ದರು. ನಮ್ಮ ಧರ್ಮದಲ್ಲಿ ಸ್ವೀಕಾರಯೋಗ್ಯವಾದ್ದು ಯಾವುದು, ತಿರಸ್ಕರಿಸಬೇಕಾದ್ದು ಏನು-ಎಂಬ ವಿಮರ್ಶಜ್ಞಾನವನ್ನು ಅವರು ಉದ್ದಕ್ಕೂ ಪ್ರತಿಪಾದಿಸಿದರು. ಸನಾತನವಾದ್ದರಲ್ಲಿ ಉತ್ತಮವಾದ್ದನ್ನು ಎತ್ತಿಹಿಡಿಯುತ್ತ, ಅತ್ಯಂತ ಕ್ರಾಂತಿಕಾರಿ ವಿಚಾರಗಳನ್ನು ಅವರು ಬೋಧಿಸಿದರು. ಮೂಢಸಂಪ್ರದಾಯವಾದಿಗಳೂ ತಿರೋಗಾಮಿ ಶಕ್ತಿಗಳೂ ಅವರನ್ನು ವಿರೋಧಿಸಿದಂತೆ ಸುವಿಚಾರಿಗಳೂ ಬಂಡಾಯವಾದಿಗಳೂ ಅವರಲ್ಲಿ ಆದರ್ಶ-ವ್ಯಕ್ತಿತ್ವವನ್ನು ಕಂಡು ಆರಾಧಿಸಿದರು. 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎಂಬುದು ಕುವೆಂಪು ಅವರ ಸಂದೇಶ. 'ವಿಜ್ಞಾನ ಮತ್ತು ಅಧ್ಯಾತ್ಮ—(ಮತವನ್ನಲ್ಲ, ಮೌಢ್ಯವನ್ನಲ್ಲ, ಅಂಧಶ್ರದ್ಧೆಯನ್ನಲ್ಲ, ಅಂಧಾಚಾರವನ್ನಲ್ಲ)—ವಿಜ್ಞಾನ ಮತ್ತು ಅಧ್ಯಾತ್ಮ ಇವೆರಡನ್ನೂ ಕೆಚ್ಚಿನಿಂದ, ನಿಷ್ಠೆಯಿಂದ, ದೃಢಬುದ್ಧಿಯಿಂದ ಆಶ್ರಯಿಸಿ, ವಿಚಾರವಾದಿಯಾ ವೈಜ್ಞಾನಿಕದೃಷ್ಟಿ ಸಂಪನ್ನನಾಗಿ ಮುಂ ರಿದು (ಪ್ರತಿಯೊಬ್ಬನೂ) ತನಗು ಲೋಕಕ್ಕೂ ಕಲ್ಯಾಣವಾಗುವಂತೆ ಬಾ ಬೇಕು' ಎಂಬುದು ಅವರ ಕನಸು. ಪ್ರ ಯೊಬ್ಬನೂ ವಿಶ್ವಮಾನವನಾಗಿ ವಿಕಾ ಗೊಳ್ಳಬೇಕೆಂಬುದು ಅವರ ಆಶಯ.

ಪ್ರೌಢಶಾಲೆಯಲ್ಲಿ ಓದುತ್ತಿದ್ದಾಗಲೆ ಕುವೆಂಪು ಅವರಿಗೆ ಸಾಹಿತ್ಯದಲ್ಲಿ ಆಸಕ್ತಿ ತಂದೆತಾಯಿ ಊರುಕಾಡು ಶಾಲೆ ಓದ ಚಿಂತನಗಳಿಂದ ಪ್ರಭಾವಿತರಾಗಿದ್ದ ಕುವೆಂ ವ್ಯಕ್ತಿತ್ವ ವಿಕಾಸಗೊಂಡಿತು. ಪಾಶ್ಚಾತ ಕವಿಗಳ ಓದು. ವಿಶ್ವಸಾಹಿತ್ಯಕ್ಕೆ ತೆರೆದ ಕೊಂಡ ಒಳಗಣ್ಣು.

ಅವರ ಇಂಗ್ಲಿಷ್ ಪಠ್ಯಪುಸ್ತಕದ ಒಂದ ಪಾಠ ರಾಬಿನ್ಸನ್ ಕ್ರೂಸೋನನ್ನು ಕುರಿತದ್ದು. ಮರಳಿನ ಮೇಲೆ ಮೂಡಿದ್ದ ಹೆಜ್ಜೆ ಗುರುತುಗಳನ್ನು ಬಣ್ಣಿಸುವ ಆ ಗದ್ಯ ಭಾಗ ಅವರ ಮನಸ್ಸಿನ ಮೇಲೆ ವಿಚಿತ್ರ ಪರಿಣಾಮ ಉಂಟುಮಾಡಿತ್ತು. ಅದು ಒಂದು ಬಗೆಯ ಅತೀಂದ್ರಿಯವೂ ರಹಸ್ಯ ಗರ್ಭಿತವೂ ಆದ ಅನುಭವ. ಆ ಹೆಜ್ಜೆ ಯಾವುದೋ ಅವ್ಯಕ್ತ ಲೋಕಕ್ಕೆ ನೀಡಿ ಕರೆಯುಂತೆ ಅವರಿಗೆ ಭಾಸವಾಯಿತು.

ತರಗತಿ ಬಿಟ್ಟ ಕೂಡಲೇ ಅವರು ಸಾರ್ವಜನಿಕ ಪುಸ್ತಕ ಭಂಡಾರಕ್ಕೆ ಓಡಿ ಹೋಗಿ 'ರಾಬಿನ್ಸನ್ ಕ್ರೂಸೋ' ಪುಸ್ತಕ ಪಡೆದು ಲೈಬ್ರರಿಯ ಮೂಲೆಯೊಂದರಲ್ಲಿ ಕೂತು ಓದುತ್ತಿದ್ದರು—ಲೈಬ್ರರಿ ಮುಚ್ಚುವ ವೇಳೆಯಾದರೂ ಪರಿವೆಯಿಲ್ಲದೆ. ಲೈಬ್ರರಿಯ ನೌಕರ ಬಂದು ಎಬ್ಬಿಸುತ್ತಿದ್ದ 'ಹೊತ್ತಾಯಿತು ಅಯ್ಯಂಗಾರ್ರೆ!' ಎನ್ನುತ್ತ

ಪುಸ್ತಕವನ್ನು ಕೈಯಿಂದ ಕಸಿದುಕೊಳ್ಳುತ್ತಿದ್ದನಂತೆ. 'ನಾನು ಅಯ್ಯಂಗಾರ್ ಎಂದು ಆ ನೌಕರನ ಭಾವನೆ' ಎಂದು ಕುವೆಂಪು ಮನಸಾರ ನಗುತ್ತಿದ್ದರು.

ಅಗಾಧ ಗ್ರಂಥ ವ್ಯಾಸಂಗದಿಂದ ಮಹಾಕವಿಯಾಗಲು ಎಲ್ಲ ಪರಿಕರವೂ ಅವರಿಗೆ ಒದಗಿಬಂದಿತ್ತು. ಆದರೆ ಕಾವ್ಯ ಬರೆಯಲು ಪ್ರೇರಣೆ ಬಂದದ್ದು ಪ್ರಕೃತಿಯಿಂದಲೇ. ಎಲ್ಲೆಲ್ಲೂ ಅದರದೇ ಲಾಸ್ಯ, ಅದರದೇ ಪ್ರಭಾವ. ಗಿರಿಕಾನು ನದಿ ಹಕ್ಕಿ ಬೈಗು ಬೆಳಗುಗಳ ಸಾನ್ನಿಧ್ಯವೇ ಸ್ಫೂರ್ತಿಯ ಸೆಲೆ.

ಜೊತೆಗೆ ವಿವೇಕಾನಂದರ ಅಭಯ, ಮನೋಮುಕ್ತಿ. ಆ ವೀರಸಂನ್ಯಾಸಿಯ ಪ್ರತಿಭೆಯ ತೊಟ್ಟಿಲಲ್ಲಿ ತೂಗಾಡಿದ ಕುವೆಂಪು. ಷೇಕ್ಸ್‌ಪಿಯರ್, ಮಿಲ್ಟನ್, ರವೀಂದ್ರ ಮುಂತಾದವರ ಕಾವ್ಯ ಮಾದರಿಗಳನ್ನು ನೋಡಿ ಹೊಸ ಚೇತನ ಹೊಸ ಪ್ರತಿಭೆ ಹೊಸ ಬೆಡಗುಗಳಿಂದ ಕಾವ್ಯ ರಚನೆ ಮಾಡಿದರು. ಮತ್ತೆಂದೂ ಅವರು ಹಿಂದಿರುಗಿ ನೋಡಲಿಲ್ಲ. ಅದೊಂದು ನಿರಂತರ ರಸಯಾತ್ರೆ—Pilgrim's progress: ಅಮಲನ ಕತೆ, ಕೊಳಲು, ಪಾಂಚಜನ್ಯ, ನವಿಲು, ಕೃತ್ತಿಕೆ, ಪಕ್ಷಿಕಾಶಿ, ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಚಂದ್ರಮಂಚಕೆ ಬಾ ಚಕೋರಿ, ಕಿಂದರಿ ಜೋಗಿ, ಜಲಗಾರ, ರಕ್ತಾಕ್ಷಿ, ಶ್ಮಶಾನ ಕುರುಕ್ಷೇತ್ರ, ಬೆರಳ್‌ಗೆ ಕೊರಳ್, ಶೂದ್ರ ತಪಸ್ವಿ, ಮಹಾರಾತ್ರಿ, ಚಿತ್ರಾಂಗದಾ, ಶ್ರೀ ರಾಮಾಯಣ ದರ್ಶನಂ—ಸರಳರಗಳೆ, ಸಾನೆಟ್, ಭಾವಗೀತೆ, ನಾಟಕ, ಕಾದಂಬರಿ, ಸಣ್ಣಕತೆ, ಪ್ರಬಂಧ, ಭಾಷಣ, ಶಿಶು ಸಾಹಿತ್ಯ, ಜೀವನಚರಿತ್ರೆ, ವಿಮರ್ಶೆ, ಮಹಾಛಂದಸ್ಸು, ಸರ್ವಧರ್ಮಸಮನ್ವಯ ದೃಷ್ಟಿ, ಸರ್ವಸಮತಾಭಾವ, ದ್ವೇಷ ವಿದೂರ, ಬಾಳಬಟ್ಟೆಯ ಪರಮಾಗಮ, ಕಾವ್ಯ ವಿಹಾರ, ತಪೋನಂದನ, ರಸೋ ವೈಸಃ, ವಿಭೂತಿಪೂಜೆ, ಪಚ್ಚಿನವನ, ಮನುಜಮತ, ವಿಶ್ವಪಥ, ಅನಿಕೇತನತ್ವ, ಸ್ಥಳೀಯ ಪ್ರಜ್ಞೆಯಿಂದ ವಿಶ್ವಪ್ರಜ್ಞೆ, ಬ್ರಾಹ್ಮೀಪ್ರಜ್ಞೆ. ರಾಮಣ್ಣನ ಮಗನ ಸಾವಿನಂಥ ಸಣ್ಣ ಘಟನೆಯಾಗಲಿ, ಗಾಂಧೀಜಿಯ ದಂಡೀಯಾತ್ರೆಯಂಥ ಮಹಾ ಘಟನೆಯಾಗಲಿ ಎರಡೂ ಒಂದೇ, ಎರಡಕ್ಕೂ ಒಂದೇ ಬಗೆಯ ಪ್ರಾಮುಖ್ಯ ಎಂಬ ಸಮಭಾವ.

೪

ಅನಂತರ ಅನೇಕ ಸಾರಿ ನಾನು ಕುವೆಂಪು ಅವರನ್ನು ಕಂಡಿದ್ದೇನೆ, ಮಾತಾಡಿಸಿದ್ದೇನೆ, ಅವರ ಮಾತುಗಳನ್ನು ಕೇಳಿದ್ದೇನೆ—ಮನೆಯಲ್ಲಿ, ಸಭೆಗಳಲ್ಲಿ, ಭಾಷಣ ಕಾರ್ಯಕ್ರಮಗಳಲ್ಲಿ. ಎಲ್ಲ ಸಂದರ್ಭಗಳಲ್ಲೂ ಅವರು ಅವರೇ. ನಾನು ಹುಡುಗನಾಗಿದ್ದಾಗ ಮನಸ್ಸಿನಲ್ಲಿ ಮೂಡಿದ ಚಿತ್ರ ಒಂದಿಷ್ಟೂ ಮಾಸಿಲ್ಲ, ಮುಕ್ಕಾಗಿಲ್ಲ. ಅವರ ಕೃತಿಗಳ ಹಾಗೆಯೇ ವ್ಯಕ್ತಿ, ಭಿನ್ನವಲ್ಲ. ವೈರುಧ್ಯವೆಂಬುದೇ ಇಲ್ಲ.

ಕನ್ನಡದ ವಿಚಾರದಲ್ಲಿ ಅವರದು ರಾಜಿಯಿಲ್ಲದ ನಿಲುವು. 'ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಬೆಳೆದಿಲ್ಲವೆಂದಲ್ಲ. ಅದು ಸಮೃದ್ಧವಾಗಿ ಬೆಳೆದಿದೆ. ಯಾರಾದರೂ ಹೆಮ್ಮೆಪಡಬಹುದಾದಷ್ಟು ಬೆಳೆದಿದೆ. ಕನ್ನಡದಲ್ಲಿ ಆಗಿರುವುದರಲ್ಲಿ ಅರ್ಧದಷ್ಟು ಕೂಡ ಇತರ ಎಷ್ಟೋ ಸಾಹಿತ್ಯ

ಗಳಲ್ಲಿ ಆಗಿಲ್ಲ. ಆದರೆ ಇತರ ಭಾಷೆಗಳವರಿಗೆ ಇರುವ ಹೆಮ್ಮೆ ನಮ್ಮವರಲ್ಲಿ ಇಲ್ಲ. ಇರುವ ಶ್ರೀಮಂತಿಕೆಯನ್ನು ಅರಿತು ಮೆಚ್ಚುವ ಸತ್ಯಪ್ರಜ್ಞೆಯಾದರೂ ಕನ್ನಡಿಗರಿಗೆ ಇರಬೇಕು. ನಮ್ಮ ಸಾಹಿತ್ಯ ಇತರ ಭಾಷೆಗಳಿಗೆ ಅನುವಾದವಾಗಬೇಕು. ಆಗ ಕನ್ನಡದ ಹಿರಿಮೆಯನ್ನು ಇತರರು ಅರಿತುಕೊಂಡಾರು.'

ಕನ್ನಡ ಕಾವ್ಯಕ್ಷೇತ್ರದಲ್ಲಿ ನಡೆದಿರುವ ಅನೇಕ ಪ್ರಯೋಗಗಳ ಬಗ್ಗೆ ಕುವೆಂಪು ಅವರಿಗೆ ಅಸೂಯೆಯಾಗಲಿ, ದ್ವೇಷವಾಗಲಿ ಇರಲಿಲ್ಲ. 'ಹೊಸದಾಗಿ ಬರೆಯುತ್ತಿರುವವರು ಗಮನಿಸಬೇಕಾದ ಮುಖ್ಯಾಂಶವೆಂದರೆ, ಸಾಹಿತ್ಯದಲ್ಲಿ ರೂಪಾಂಶವೇ ಮುಖ್ಯವಲ್ಲ. ಹೊಸ ಆವಶ್ಯಕತೆ ಬಂದಾಗ ಮಾತ್ರ ಹೊಸ ರೂಪ ಬರಬೇಕು. ಪಶ್ಚಿಮದಲ್ಲಿ ಅಲ್ಲಿಯ ಪರಿಸ್ಥಿತಿಯ ಫಲವಾಗಿ ಏನೋ ನಡೆಯಿತು ಎಂದು ಇಲ್ಲಿ ಅದನ್ನು ಅನುಕರಿಸಿದರೆ ಅದು ಕೃತಕ ಎನಿಸುತ್ತದೆ. ಕಾವ್ಯಕ್ಕೆ ಚೀಟಿ ಅಂಟಿಸುವುದು ಬೇಡ. ಸಾಹಿತ್ಯದಲ್ಲಿ ಎಂಥ ಪಂಥ? ಸಾಹಿತ್ಯ ಸಾಹಿತ್ಯವಾಗಿರುವುದು ಮುಖ್ಯ.'

'ಇಂದು ಸಾಹಿತ್ಯರಚನೆ ಮಾಡುತ್ತಿರುವವರಿಗೆ ನಾನಾ ಬಗೆಯ ಪ್ರೋತ್ಸಾಹ ದೊರಕುತ್ತಿದೆ. ಇದು ಸಂತೋಷದ ಸಂಗತಿ. ಆದರೆ ಪ್ರೋತ್ಸಾಹವೇ ಪ್ರಗತಿಗೆ ಮಾರಕವಾಗಲೂಬಹುದು. ಸಹಜ ಸ್ವತಸ್ಸಿದ್ಧ ಪ್ರೇರಣೆ ಉಂಟಾದಾಗ ಮಾತ್ರ ಬರೆಯಬೇಕು. ಸಾಹಿತ್ಯವನ್ನೇ ಕಸುಬನ್ನಾಗಿ ಮಾಡಿಕೊಳ್ಳುವುದರಿಂದಲೂ ಅಪಾಯ. ಮಾರುಕಟ್ಟೆಯ ದೃಷ್ಟಿಯಿಂದ ಸಾಹಿತ್ಯದ ಕೊಲೆಯೇ ಆಗಬಹುದು. ಮಾರುಕಟ್ಟೆಯಲ್ಲಿ ಮಾರಾಟ ಮಾಡುವವರು ದಿನಕ್ಕೊಂದು ಹೊಸ ಮಾಲು ತರಬೇಕು. ಸಾಹಿತ್ಯದಲ್ಲಿ ಹೊಸ ಪ್ರಯೋಗವೆಂಬುದು ಮಾರುಕಟ್ಟೆಯ ಕೈವಾಡವಾಗಬಾರದು.'

'ನಾನು ಬರೆಯತೊಡಗಿದಾಗ ಯಾವ ಪ್ರೋತ್ಸಾಹ ಮೆಚ್ಚುಗೆಗಳನ್ನೂ ನಿರೀಕ್ಷಿಸಿಕೊಂಡು ಬರೆಯಲಿಲ್ಲ. ಪುರಸ್ಕಾರ, ಪ್ರಶಸ್ತಿ ಎಲ್ಲ ಆ ಮೇಲೆ ಬಂದುವು. ನಾನು ಅವಕ್ಕಾಗಿ ಬರೆಯಲಿಲ್ಲ.' 'ತೊಲಗಾಚೆ! ಕೀರ್ತಿಶನಿ' ಎಂಬುದು ಅವರ ನಿಲುವು.

ಕುವೆಂಪು ವೀರ ಕನ್ನಡಿಗರು. ಕನ್ನಡವೇ ಕನ್ನಡಿಗರಿಗೆ ರಕ್ಷೆ ಎಂದು ಎಷ್ಟು ಸಾರಿ ಹೇಳಿದರೂ ಅವರಿಗೆ ಬಳಲಿಕೆ ಇರಲಿಲ್ಲ. 'ಕನ್ನಡದ ನೆಲದಲ್ಲಿ ಕನ್ನಡದ್ದೇ ಆಡಳಿತ ಆಗಬೇಕು. ಅಲ್ಲೂ ಅದರ ರಾಜ್ಯಭಾರ ಇಲ್ಲದಿದ್ದರೆ ಬೇರೆಲ್ಲಿ ತಾನೆ ಅದಕ್ಕೆ ಸ್ಥಾನ?'

'ಇಂಗ್ಲಿಷ್ ಬೇಡವೆಂದಲ್ಲ. ಆದರೆ ಬಲಾತ್ಕಾರ ಬೇಡ. ಅದು ಐಚ್ಛಿಕವಾಗಲಿ. ಬೇಕಾದವರು ಕಲಿಯಲಿ.'

ಕುವೆಂಪು ಅವರು ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿದ್ದಾಗ ಅದರ ಶೈಕ್ಷಣಿಕ ಮಂಡಲಿಯಲ್ಲಿ ಕನ್ನಡಕ್ಕೆ ಸಂಬಂಧಿಸಿದ ವಿಚಾರ ಬಂದಾಗ ಅವರು ತಪ್ಪದೆ ಸಮಯಕ್ಕೆ ಸರಿಯಾಗಿ ಸಭೆಗೆ ಬರುತ್ತಿದ್ದರು. ಕನ್ನಡವನ್ನು ಸಮರ್ಥಿಸಿ ಮಾತಾಡುತ್ತಿದ್ದರು. ಅನೇಕ ಅಸೂಯಾಪರರೂ ಕನ್ನಡ ವಿರೋಧಿಗಳೂ ಗದ್ದಲ ಎಬ್ಬಿಸುತ್ತಿದ್ದರು. ಆದರೆ ಕುವೆಂಪು ಜಗ್ಗುತ್ತಿರಲಿಲ್ಲ. ಹುಲಿಗೆ ತನ್ನ ಕಾಡೇನು? ಪರರ ಕಾಡೇನು? ಆ ವಿಷಯದ ಚರ್ಚೆ ಮುಗಿದ ಮೇಲೆ ಅವರು ಆ ಸಭೆಯಲ್ಲಿರುತ್ತಿರಲಿಲ್ಲ. ಹಿರಿಯರಿಲ್ಲದ ವಿವೇಕಿಗಳಿಲ್ಲದ ಸಭೆ ಸಭೆಯಲ್ಲ, ಮೂರ್ಖರ ನೆರವಿ—ಎಂಬುದು ಅವರ ಧೋರಣೆ.

'ಕನ್ನಡ ನಾಡಿನಲ್ಲಿ ಕನ್ನಡವೇ ಮಾಧ್ಯಮವಾಗಬೇಕು. ಪಾರ್ಲಿಮೆಂಟಿನಲ್ಲಿ ಎಲ್ಲ ಪ್ರಮುಖ ಭಾಷೆಗಳೂ ಅಧಿಕೃತ ಭಾಷೆಗಳಾಗಿರಲಿ' ಎಂಬುದು ಅವರ ಅಭಿಪ್ರಾಯ.

ಸಂಪರ್ಕಭಾಷೆಯಾಗಿ ಮಾತ್ರ ಹಿಂದಿ ಇರಲಿ. ತ್ರಿಭಾಷಾ ಸೂತ್ರ ಬೇಡ. ಹಲವು ಭಾಷೆಗಳಲ್ಲಿ ಎರಡು ಭಾಷೆ, ಅವುಗಳಲ್ಲಿ ಒಂದು ಕನ್ನಡ. ಇದು ಅವರ ಸೂತ್ರ.

'ಸಂಪರ್ಕಭಾಷೆಯಾಗಿ ಹಿಂದಿಯನ್ನು ಬಳಸುವುದಾದರೆ ಅದಕ್ಕೆ ನಮ್ಮ ವ್ಯಾಕರಣವನ್ನೇ ಹಚ್ಚಿದರೂ ಪರವಾಯಿಲ್ಲ. ಇದು ಪೇಟೆಯ ಹಿಂದಿ.'

'ಮೀಸೆ ಎಂಬುದು ಸ್ತ್ರೀಲಿಂಗವಾಗಿಯೂ ಸ್ತನ ಎಂಬುದು ಪುಲ್ಲಿಂಗವಾಗಿಯೂ ಇರುವ ಸಾಹಿತ್ಯಕ ಹಿಂದಿ ಐಚ್ಛಿಕವಾಗಿರಲಿ— ಬೇಕಾದವರಿಗೆ. ಸಂಪರ್ಕ ಭಾಷೆಯಾದ ಹಿಂದಿಯಲ್ಲಿ ಇವೆರಡೂ ನಪುಂಸಕವೇ.'

'ನಮ್ಮ ಭಾಷೆಯಲ್ಲೇ ಕಲಿತರೆ, ನಮ್ಮ ಭಾಷೆಯನ್ನೇ ಕಲಿತರೆ ಏನೂ ತೊಂದರೆಯಾಗುವುದಿಲ್ಲ. ಪ್ರದೇಶದಿಂದ ಪ್ರದೇಶಕ್ಕೆ ಹೋಗುವವರಿಗೆ ಏನೂ ತೊಡಕಾಗುವುದಿಲ್ಲ, ಅಂಥವರು ಎಷ್ಟು ಜನ ಇದ್ದಾರು? ಅವರು ಎರಡಲ್ಲ ನಾಲ್ಕು ಭಾಷೆ ಬೇಕಾದರೂ ಕಲಿಯುತ್ತಾರೆ.'

ವೈಚಾರಿಕತೆಯೇ ಕುವೆಂಪು ಅವರ ಭಾಷಣಗಳ ಮುಖ್ಯ ಲಕ್ಷಣ. ಪ್ರತಿಯೊಂದು ಭಾಷಣದಲ್ಲೂ ಅವರು ಕೇಳುಗರನ್ನು ಯೋಚಿಸಲು ಹಚ್ಚುತ್ತಿದ್ದರು. ನಮ್ಮ ತಲೆಮಾರಿನವರಿಗಿಂತ ಬಹಳ ಮುಂದೆ ಚಿಂತಿಸುತ್ತಿದ್ದರು.

ಪರೀಕ್ಷೆ, ಕಡ್ಡಾಯ ಹಾಜರಾತಿ ಮುಂತಾದವುಗಳ ವಿಚಾರ ಒಮ್ಮೆ ಬಂತು. ವಿದ್ಯಾರ್ಥಿಗಳ ಮುಕ್ತ ಚಿಂತನೆಗೆ, ವಿಕಾಸಕ್ಕೆ ಅಡ್ಡಿಯಾಗುವ ಪರೀಕ್ಷಾ ಪದ್ಧತಿ ಅವರಿಗೆ ಒಪ್ಪಿಗೆಯಾಗುತ್ತಿರಲಿಲ್ಲ. ಪರಭಾಷಾ ಮಾಧ್ಯಮವೇ ವಿದ್ಯಾರ್ಥಿಗಳ ಕೊರಳಿಗೆ ತೊಡಿಸಿದ ಹೆಬ್ಬಂಡೆ ಎಂಬುದು ಅವರ ಭಾವನೆ. ವಿದ್ಯಾರ್ಥಿಗಳು ಚಿಂತನೆ ನಡಸಿ ಉತ್ತರ ನೀಡುವಂಥ ವ್ಯವಸ್ಥೆ ಬರಲಿ ಎನ್ನುತ್ತಿದ್ದರು. 'ಅವರ ಕೈಗೆ ಪಠ್ಯಪುಸ್ತಕಗಳನ್ನಾದರೂ ಕೊಡಿ, ಚಿಂತೆಯಿಲ್ಲ. ಅವನ್ನು ನೋಡಿ, ಪ್ರಶ್ನೆಗೆ ಸರಿಯಾದ ಉತ್ತರ ಯಾವುದೆಂಬುದನ್ನು ತಿಳಿದು ಬರೆಯಲಿ. ನಷ್ಟವಿಲ್ಲ. ಔಚಿತ್ಯಪ್ರಜ್ಞೆ, ವಿಮರ್ಶೆಯ ಸಾಮರ್ಥ್ಯ ಅವರಿಗೆ ಬರುತ್ತದೆ. ವಿವೇಚನೆಯನ್ನು ಬೆಳಸದ ಶಿಕ್ಷಣದಿಂದ ಏನು ಪ್ರಯೋಜನ?'

'ತರಗತಿಗಳಿಗೆ ವಿದ್ಯಾರ್ಥಿಗಳು ಬಂದೇ ಬರಬೇಕೆಂಬ ಕಡ್ಡಾಯವೂ ಬೇಡ' ಎಂದು ಅವರೊಮ್ಮೆ ಹೇಳಿದರು. 'ವಿದ್ಯಾರ್ಥಿಗಳು ಇಷ್ಟವಿದ್ದರೆ ತರಗತಿಗಳಲ್ಲಿ ಕೂರಲಿ. ಇಲ್ಲದಿದ್ದರೆ ಬೇಡ. ಯೋಗ್ಯತೆ ಇರುವ ಅಧ್ಯಾಪಕನ ತರಗತಿಗಳಿಗೆ ವಿದ್ಯಾರ್ಥಿಗಳು ತಾವಾಗಿಯೇ ಬರುತ್ತಾರೆ.'

ಅವರ ಮಾತು ಕೇಳಿದಾಗ ನಾನು ವಿದ್ಯಾರ್ಥಿಯಾಗಿ ಅವರ ತರಗತಿಯಲ್ಲಿ ಕದ್ದು ಕುಳಿತದ್ದು ನನಗೆ ನೆನಪಾಯಿತು. ನಾನು ಕುವೆಂಪು ಅವರ ಏಕಲವ್ಯ ಶಿಷ್ಯ ಎಂದುಕೊಂಡೆ.

ಕುವೆಂಪು ಅವರ ಭಾಷಣ ವಿಶಿಷ್ಟವಾದದ್ದು. ಅವರು ಒಳ್ಳೆಯ ಭಾಷಣಕಾರರಲ್ಲ ಎಂಬುದು ಕೆಲವರ ಅನಿಸಿಕೆ. ಅನೇಕ ವೇಳೆ ಅವರು ಸರಿಯಾದ ಪದಕ್ಕಾಗಿ ತಡಕಾಡುತ್ತಿದ್ದರು. ಆದರೆ ಅದು ವಿಷಯದ ಅಭಾವದಿಂದಲ್ಲ. ಭಾಷೆ ಸಮರ್ಥವಲ್ಲವೆಂದಲ್ಲ. Thinking aloud—ಗಟ್ಟಿಯಾಗಿ ನಡಸಿದ ಚಿಂತನೆ.

ಕಾಡಾನೆಯನ್ನು ಹಿಡಿಯುವ ರೀತಿ ಯಾವುದೋ ವಿಚಾರವನ್ನು—ಭಾವನೆಯನ್ನು—ನಾಲ್ಕೂ ಕಡೆಗಳಿಂದ ಸರಿಯಾದ ಶಬ್ದಗಳಲ್ಲಿ ಬಿಗಿದಿಡುವುದು ಅವರ ವಿಧಾನ. ಹೀಗಾಗಿ ಅವರ ಮಾತುಗಳು ತುಂಬ ಉಚಿತವಾಗಿರುತ್ತಿದ್ದುವು. ಅವರು ಮಂಡಿಸಿದ ವಿಚಾರವನ್ನು ಆ ಮಾತುಗಳಲ್ಲದೆ ಬೇರೆಯವಲ್ಲಿ ಅಷ್ಟು ಸ್ಪಷ್ಟವಾಗಿ, ಖಚಿತವಾಗಿ ಹೇಳುವುದು ಸಾಧ್ಯವಿಲ್ಲ ಎನಿಸುತ್ತಿತ್ತು. ಕಾಡುಮೇಡುಗಳಲ್ಲಿ ನಡೆಯುವ ಸಾಹಸ ಅವರ ಉಪನ್ಯಾಸ. ಅವರನ್ನು ಎಡೆಬಿಡದೆ ಅನುಸರಿಸತ್ತಿದ್ದರೆ ಅಪಾರ ಆನಂದ, ಹೊಸ ಚಿನ್ನದ ರೇಕನ್ನು ಎಡವಿದಂತೆ ಸಂತೋಷ. ಅದೊಂದು ರಸಯಾತ್ರೆ.

ನಮ್ಮ ಸರ್ಕಾರಗಳು ಯಾವುದೇ ಸಮಸ್ಯೆಯನ್ನು ಬಿಡಿಸುವ ರೀತಿಯನ್ನು ಕುರಿತು ಅವರು ಒಮ್ಮೆ ಹೇಳಿದ ಮಾತನ್ನು ನಾನು ಎಂದೂ ಮರೆಯಲಾರೆ. ಇಂದಿನ ರಾಜಕೀಯ ಪರಿಸ್ಥಿತಿಯನ್ನು ನೆನೆದಾಗಲೆಲ್ಲ ನನಗೆ ಅವರ ಆ ಮಾತುಗಳು ಜ್ಞಾಪಕಕ್ಕೆ ಬರುತ್ತವೆ:

'ನಾನು ಹುಡುಗನಾಗಿದ್ದಾಗ ಹುಲಿಯನ್ನು ಸಾಯಿಸುವುದು ಹೇಗೆ ಎಂಬ ವಿಚಾರವಾಗಿ ಗೆಳೆಯರೂ ನಾನೂ ಚರ್ಚಿಸುತ್ತಿದ್ದೆವು. ಹುಲಿಯನ್ನು ಸಾಯಿಸುವುದು ಬಹಳ ಸುಲಭ. ಹೇಗಾದರೂ ಮಾಡಿ ಅದರ ಮೈಮೇಲೆ ಒಂದು ಗಾಯ ಮಾಡಿಬಿಟ್ಟರೆ ಸಾಕು. ಆ ಗಾಯವನ್ನು ಮುಚ್ಚಲು ಹುಲಿ ತನ್ನ ಮೈಯ ಇನ್ನೊಂದು ಭಾಗದಿಂದ ಚರ್ಮವನ್ನು ಹರಿದು ಗಾಯದ ಮೇಲೆ ಅಂಟಿಸುತ್ತದೆ. ಹೊಸ ಗಾಯ ಮುಚ್ಚಲು ಶರೀರದ ಇನ್ನೊಂದು ಭಾಗದಿಂದ ಚರ್ಮ ಹರಿಯುತ್ತದೆ. ಅದನ್ನು ಮುಚ್ಚಲು ಇನ್ನೊಂದು ಕಡೆ ಗಾಯ. ಹೀಗೆ ಹುಲಿಯ ಮೈಯೆಲ್ಲಾ ಗಾಯವಾಗಿ ಹುಲಿ ಸತ್ತುಹೋಗುತ್ತದೆ ಎಂದು ನಾವು ಅಂದುಕೊಂಡಿದ್ದೆವು. ಇಂದಿನ ರಾಜಕಾರಣಿಗಳು ಸಮಸ್ಯೆಯನ್ನು ಬಗೆಹರಿಸುವುದೂ ಇದೇ ರೀತಿ. ಒಂದು ಸಮಸ್ಯೆ ಪರಿಹರಿಸಲು ಇನ್ನೊಂದು ಸಮಸ್ಯೆ ಸೃಷ್ಟಿಸುತ್ತಾರೆ. ಅದನ್ನು ಪರಿಹರಿಸಲು ಮತ್ತೊಂದು ಸಮಸ್ಯೆಯ ಸೃಷ್ಟಿ. ಅದರ ಪರಿಹಾರಕ್ಕೆ ಮಗುದೊಂದು. ಹೀಗೆ ಬರೀ ಸಮಸ್ಯೆಗಳೇ ಉಂಟಾಗಿ ಪರಿಸ್ಥಿತಿ ವಿಷಮಿಸುತ್ತದೆ' ಎಂದು ಅವರು ನಗುವಿನ ಮಧ್ಯೆ ವಿವರಿಸಿದರು.

ಕುವೆಂಪು ನಮ್ಮ ಕಾಲದ ಮಹಾನ್ ವಿಚಾರವಾದಿ. ಅವರದು ಕ್ರಾಂತ ದೃಷ್ಟಿ. ಅವರು ಮೂಲತಃ ದಾರ್ಶನಿಕ, ಅನಂತರ ಕವಿ. ಹೀಗೆಂದರೆ ಅವರ ಕವಿತೆ ಎರಡನೆಯ ದರ್ಜೆಯದಲ್ಲ. ಪಂಪನ ಅನಂತರ, ಕುಮಾರವ್ಯಾಸನಾದ ಮೇಲೆ, ಕನ್ನಡನಾಡು ಕಂಡ ಮಹಾನ್ ಕವಿ. ರವೀಂದ್ರರ ಹಾಗೆ ಅವರು ವಿಶ್ವಕವಿ. 'ನನ್ನ ನಿಜಸ್ಥಿತಿ, ನಿಮಗೆ ತಿಳಿಸುವುದಾದರೆ, ಸಾಹಿತ್ಯವಲ್ಲ, ತತ್ತ್ವವೆ' ಎಂದು ಅವರೊಮ್ಮೆ ಹೇಳಿಕೊಂಡಿದ್ದರು. ಅವರು ಕನ್ನಡದ ಮುಂಬರಿವಿಗಾಗಿ ಸದಾ ಶ್ರಮಿಸಿದ ಮಹಾನ್ ಚಿಂತಕ, ವಿಚಾರವಾದಿ, ಕಾರಣಪುರುಷ, ಶ್ರೀಸಾಮಾನ್ಯನೂ ಭಗವನ್ಮಾನ್ಯನೆಂದು ಬಗೆದ ವಿಶ್ವಪ್ರೇಮಿ. ಅವರದು ಈ ಶತಮಾನ ಕಂಡ ಮಹೋನ್ನತ ವ್ಯಕ್ತಿತ್ವ. ಹಲವು ಯುಗಕ್ಕೊಮ್ಮೆ ಇಂಥವರು ಬರುತ್ತಾರೆ. ಅವರು ನಮ್ಮ ಕಾಲದಲ್ಲಿದ್ದರು, ನಮ್ಮೊಡನೆ ಇದ್ದರು—ಎಂಬುದೇ ನಮ್ಮ ಭಾಗ್ಯ.

# ಮಹಾಕವಿಯೊಡನೆ ಚಿಂತನ ಮಂಥನ

ಪ್ರೊ|| ಕೆ. ಎಸ್. ಭಗವಾನ್

ನಾನು ಪ್ರೌಢಶಾಲೆಯ ವಿದ್ಯಾರ್ಥಿ. ನನ್ನ ಗೆಳೆಯನ ಕೊಠಡಿಗೆ ಹೋದಾಗ ಪುಸ್ತಕ ನೋಡಿದೆ. ಅದು 'ಗದ್ಯ ಮಣಿಮಾಲೆ.' (ಸಂ. ದೇ. ಜವರೇಗೌಡ; ಸೋ. ಕೊ. ರಾಮಣ್ಣ) ಅದರಲ್ಲಿ ನಿರಂಕುಶಮತಿಯಿಂದ ಆತ್ಮಶ್ರೀಗೆ' ಎಂಬ ಒಂದು ಪಾಠವಿತ್ತು. ಅದನ್ನು ಬರೆದ ಕವಿಯ ಬಗ್ಗೆ ಪರಿಚಯ ಕೊಟ್ಟಿದ್ದರು. ಆ ಕವಿಯೆ ಕುವೆಂಪು. ಅವರು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ 'ಬಿಗಿನರ್ಸ್ ಮ್ಯೂಸ್' ಎಂಬ ಕವಿತೆಯ ಪುಸ್ತಕವನ್ನು ಹೊರತಂದಿದ್ದರೆಂದು ಅದರಲ್ಲಿ ಬರೆದಿತ್ತು. ಅದನ್ನು ಓದಿ ನನಗೆ ಏನೊ ಒಂದು ಥರ ಅನ್ನಿಸಿತು. ನಾನೂ ಹೈಸ್ಕೂಲಿನಲ್ಲಿಯೆ ಓದುತ್ತಿದ್ದೇನೆ. ನಾನೇಕೆ ಪದ್ಯ ಬರೆಯಬಾರದು, ಎಂದು ಪ್ರಚೋದಿತನಾದೆ. ಬರೆಯಬೇಕಾದರೆ ಓದಬೇಕು ಎಂದು ನನಗೆ ತಿಳಿಯತೊಡಗಿತು. ಆಗ ಅವರ ಪುಸ್ತಕಗಳನ್ನು ಓದಲು ಪ್ರಾರಂಭಿಸಿದೆ. ನಾನು ಹೈಸ್ಕೂಲು ಮುಗಿಸುವ ಹೊತ್ತಿಗೆ ಕುವೆಂಪು ಅವರ ಎಲ್ಲಾ ಕೃತಿಗಳನ್ನು ಓದಿ ಮುಗಿಸಿದೆ. ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ'ವೂ ಸೇರಿದಂತೆ. ಆದರೆ ಅದು ಅರ್ಥವಾಯಿತು ಎನ್ನಲಾರೆ. ಆದರೆ ಓದುವ ಗೀಳು ಬೆಳೆಯಿತು. ಓದುವ ಹವ್ಯಾಸಕ್ಕಿಂತ ಸಂತೋಷ ಇಲ್ಲ ಎಂದು ಅರಿವಾಯಿತು. ಹೀಗೆ ಕುವೆಂಪು ನನ್ನ ಮನಸ್ಸನ್ನು ತುಂಬಿಕೊಂಡರು. ಒಂದು ಪಕ್ಷ ಕುವೆಂಪು ನನ್ನ ಬದುಕಿಗೆ ಬರದಿದ್ದರೆ ಈಗ ನಾನು ಏನಾಗಿದ್ದೇನೊ ಅದು ಖಂಡಿತ ಆಗುತ್ತಿರಲಿಲ್ಲ. ಬಹುಶಃ ನಾನೊಬ್ಬ ಅಪಾಪೋಲಿಯಾಗಿ, ಶುದ್ಧ ಲಫಂಗನಾಗಿ ಹೋಗುತ್ತಿದ್ದೆ. ಈಗ ಆಗಿಲ್ಲ ಅಂದಲ್ಲ, ಆದರೆ ಕಡಿಮೆ ಆಗಿದ್ದೇನೆ!

ಕುವೆಂಪು ಜೀವನ ಮನವರಿಕೆಯಿಂದ ಮೂಡಿದೆ. ಮನವರಿಕೆ ಬದುಕಿನ ಮಹಾಜ್ಯೋತಿ. ಅದು ಇಡೀ ಬಾಳನ್ನು ಬೆಳಗುತ್ತದೆ. ಮನವರಿಕೆ ಇಲ್ಲದ ಜೀವನ ಕತ್ತಲು. ಮನವರಿಕೆ ಜೀವನ ಪ್ರೇಮದಿಂದ ಆದರ್ಶಗಳ ಆವಾಹನೆಯಿಂದ ಬರುತ್ತದೆ. ಅದನ್ನು ಈಡೇರಿಸಿಕೊಳ್ಳುವುದೇ ಯಶಸ್ಸು. ಕುವೆಂಪು ಸಾಹಿತ್ಯವೆಲ್ಲ ಅಂಥ ಮೌಲ್ಯಗಳ ಅನುಭವದಿಂದ ಹುಟ್ಟಿದ ಸೃಷ್ಟಿಯಾಗಿದೆ. ಮಣ್ಣು ನೀರು ಶಾಖಗಳ ಹಿತವಾದ ಒಡನಾಟದಲ್ಲಿ ಬೀಜ ಮೊಳೆಯುವಂತೆ, ಅವರ ಕೃತಿಗಳ ಸತತ ಸಂಪರ್ಕದ ನಂಟಿನಲ್ಲಿ ನನ್ನ ಅಭಿರುಚಿ ಹದಗೊಂಡಿದೆ.

ಲೋಯರ್ ಸೆಕೆಂಡರಿಯಲ್ಲಿ ಓದುತ್ತಿದ್ದಾಗ ನನ್ನ ಅಣ್ಣ 'ಜನಪ್ರಿಯ ವಾಲ್ಮೀಕಿ

ರಾಮಾಯಣ' ನನಗೆ ಕೊಂಡುಕೊಟ್ಟಿದ್ದರು. ಆ ಪುಸ್ತಕವನ್ನು ಓದಿದೆ. ಆಗ ನಮ್ಮೂರಿನಲ್ಲಿ 'ಸಂಪೂರ್ಣ ರಾಮಾಯಣ ನಾಟಕ ಆಡಿದ್ದರಿಂದ ರಾವಣನೆ ಎಲ್ಲ ಕಡೆ ಕಾಣಿಸಿದನು. ಕನಸಿನಲ್ಲಿ ಬರುತ್ತಿದ್ದನು. ಅದು ಭಕ್ತಿಯ ಅಥವಾ ಮೂಢನಂಬಿಕೆಯ ಅಥವಾ ಪೌರಾಣಿಕ ವಾತಾವರಣ. ಆಮೇಲೆ ಆ ಪುಸ್ತಕ ಕುವೆಂಪು ಬರೆದದ್ದು ಎಂದು ಗೊತ್ತಾಯಿತು. ಅದನ್ನು ಓದಿದ್ದರಿಂದ ನನ್ನ ಕನ್ನಡ ಸುಧಾರಿಸಿತು.

ಬಿ.ಎ. ಪದವಿಯ ವ್ಯಾಸಂಗಕ್ಕಾಗಿ ನಾನು ಮೈಸೂರಿಗೆ ಬಂದೆ. ಕುವೆಂಪು ಮೈಸೂರಿನಲ್ಲೆ ಇದ್ದಾರೆ ನೋಡಬೇಕು ಎಂದು ಆಸೆಯಾಯಿತು. ಒಂಟಿಕೊಪ್ಪಲಿನ ಅವರ ಮನೆಯ ಬಳಿ ಹೋಗಿ ಅದರ ಹೊರಗೆ ನಿಂತು ಅವರು ಕಾಂಪೌಂಡಿನ ಒಳಗೆ ಅಡ್ಡಾಡುವುದನ್ನು ಕಂಡು ಪುಲಕಿತನಾಗಿ ಬಂದ ಕ್ಷಣಗಳು ಅನೇಕ. ಕುವೆಂಪು ಸಾರ್ವಜನಿಕ ಸಮಾರಂಭಗಳಲ್ಲಿ ಕಾಣಿಸಿಕೊಳ್ಳುತ್ತಿದ್ದುದೆ ಬಹಳ ಅಪರೂಪ. ವರ್ಷಕ್ಕೆ ಒಂದೆರಡು ಅಷ್ಟೆ. ಅಂಥ ಯಾವ ಸಂದರ್ಭಗಳನ್ನೂ ನಾನು ಕಳೆದುಕೊಂಡ ನೆನಪಿಲ್ಲ.

ಕುವೆಂಪು ಸದಾ ಒಬ್ಬ ಆಕರ್ಷಣೀಯ ಮತ್ತು ಪ್ರೇಕ್ಷಣೀಯ ವ್ಯಕ್ತಿಯಾಗಿ ಉಳಿದರು. ಅವರು ತಾವೇ ರಚಿಸಿದ ಬೊಮ್ಮನಹಳ್ಳಿಯ ಕಿಂದರಿಜೋಗಿಯಂತೆ ಹಿರಿಯರು ಕಿರಿಯರನ್ನು ತಮ್ಮತ್ತ ಸೆಳೆದುಕೊಳ್ಳುತ್ತಿದ್ದರು. ಅವರ ಸಾಹಿತ್ಯ ಕಿಂದರಿಯ ನಾದದಂತೆ ಕನ್ನಡ ನಾಡನ್ನು ಮರಳು ಮಾಡಿದೆ. ಕಿಂದರಿನಾದವನ್ನು ಕೇಳಿ ಹಿಂಬಾಲಿಸಿದ ಇಲಿಗಳು ಹೊಳೆಯಲ್ಲಿ ಮುಳುಗಿದವು; ಆ ಹಳ್ಳಿಯ ಮಕ್ಕಳು ಚೌಡಿಯ ಬೆಟ್ಟದಲ್ಲಿ ಮಾಯವಾದರು. ಆದರೆ ಕುವೆಂಪು ಸಾಹಿತ್ಯದ ಕಿಂದರಿ ಎಲ್ಲರನ್ನೂ ಬಿಡುಗಡೆಯ ದಾರಿಯಲ್ಲಿ ಕೊಂಡೊಯ್ಯುತ್ತಿದೆ; ನಿರಂಕುಶಮತಿಯನ್ನು ಬೆಳೆಸುತ್ತದೆ.

ನಾನು ಇಂಗ್ಲಿಷ್ ಸಾಹಿತ್ಯದ ವಿದ್ಯಾರ್ಥಿ ಆದರೆ ಕನ್ನಡವನ್ನು ಪ್ರೀತಿಯಿಂದ ಓದಿಕೊಂಡಿದ್ದೇನೆ; ಕುವೆಂಪು ಸಾಹಿತ್ಯವನ್ನು ಶ್ರದ್ಧೆಯಿಂದ ಅಧ್ಯಯನಿಸಿದ್ದೇನೆ. ಅವರ ಕೃತಿಗಳನ್ನು ಆಳವಾಗಿ ಅಭ್ಯಾಸಮಾಡಿದಂತೆಲ್ಲ ಅವರ ಮೇಲೆ ನನ್ನ ಗೌರವ ಹೆಚ್ಚುತ್ತಾ ಹೋಗುತ್ತಿದೆ. ಇದೇ ಮಾತನ್ನು ಇತರ ಸಾಹಿತಿಗಳ ಬಗ್ಗೆ ಹೇಳಲಾಗುವುದಿಲ್ಲ. ಭಾಷಿಕವಾಗಿ ಚೆನ್ನಾಗಿ ಕಂಡವರು ಪ್ರಗತಿಯ ತತ್ವಗಳನ್ನು ಅನ್ವಯಿಸಿ ನೋಡಿದಾಗ ತೆಳುವಾಗುತ್ತಾ ಕೆಲವೊಮ್ಮೆ ಜಳ್ಳಾಗುತ್ತಾರೆ ಕುವೆಂಪು ಸಾಹಿತ್ಯ ಅಗೆದಷ್ಟೂ ಅದಿರು ಸಿಗುವ ಶ್ರೀಮಂತ ಗಣಿ, ಅವರ ಸಾಹಿತ್ಯ ಭೂಮಿ ಆಪಾಗಿದೆ. ಅವರ ಫಸಲಿನಲ್ಲಿ ಅಲ್ಲೊಂದು ಇಲ್ಲೊಂದು ಚೀಕು ಕಾಳು ಇರಬಹುದು; ಆದರೆ ದೃಢವಾದ ಧಾನ್ಯ ಹೆಚ್ಚಾಗಿದೆ.

ನಾನು ಎಂ.ಎ. ವಿದ್ಯಾರ್ಥಿ ಆಗಿದ್ದ ಸಮಯ. ಮಾನಸ ಗಂಗೋತ್ರಿಯ ಸ್ನಾತಕೋತ್ತರ ವಿದ್ಯಾರ್ಥಿ ನಿಲಯದ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆ ಆದೆ. ಅದುವರೆಗೆ ಹಾಸ್ಟೆಲ್‌ನಲ್ಲಿ ಮ್ಯಾಗಜಿನ್ ತಂದಿರಲಿಲ್ಲ. ಅದಕ್ಕೆ ಯೋಜನೆ ರೂಪಿಸಿ, ನಮ್ಮ ನಿಲಯಪಾಲರಾದ ಸಂತಸದೃಶರಾದ ಪ್ರೊ|| ಉ. ಕಾ. ಸುಬ್ಬರಾಯಚಾರ್ ಅವರ ಅನುಮತಿ ಕೋರಿದೆ. ಅವರು ಸಂತೋಷದಿಂದ ಆಶೀರ್ವದಿಸಿದರು. ವಿದ್ಯಾರ್ಥಿ ಸಂಘ

ತರ ಬಯಸಿದ್ದ. ಮ್ಯಾಗಜಿನ್‌ಗೆ ನನ್ನನ್ನೆ ಸಂಪಾದಕನನ್ನಾಗಿ ಆರಿಸಿತು. ಅದಕ್ಕೆ ಒಂದು ಒಳ್ಳೆಯ ಪ್ರಾರ್ಥನಾರೂಪವಾದ ಪದ್ಯವನ್ನು ಬಳಸಿಕೊಳ್ಳಬೇಕೆಂದು ಹುಡುಕುತ್ತಿದ್ದಾಗ ನನಗೆ ಕುವೆಂಪು ಅವರ 'ನಿನ್ನ ಬಾಂದಳದಂತೆ ನನ್ನ ಮನವಿರಲಿ' ಎಂಬ ಸುಂದರ ಗೀತೆ ಅವರ ಕೊಳಲು ಸಂಕಲನದಲ್ಲಿ ಸಿಕ್ಕಿತು. ಅದನ್ನು ಪೂಜ್ಯ ಉಕಾಸು ತುಂಬ ಮೆಚ್ಚಿದರು. ನಾನು 'ಕುವೆಂಪು ಅವರ ಅನುಮತಿ ದೊರಕಿಸಿಕೊಡಿ' ಎಂದು ಕೋರಿದೆ. ಅದಕ್ಕೆ ಅವರು "ನೀವೆ ಹೋಗಿ ನೋಡಿ", ಎಂದರು. ನನಗೆ ನಿಜಕ್ಕೂ ಸೋಜಿಗವಾಯಿತು. ಅಲ್ಲಿಯ ತನಕ ಕುವೆಂಪು ಅವರನ್ನು ನೋಡುವುದು ಸುಲಭವಲ್ಲ ಎಂಬ ಮಾತೇ ನನ್ನೊಳಗಿತ್ತು. ಅವರು ಹಾಗೆಂದ ಕೂಡಲೆ ನನಗೆ ನಂಬಿಕೆಯೆ ಬರಲಿಲ್ಲ. "ಏನೂ ಸಂಕೋಚಪಡಬೇಡಿ, ಹೋಗಿ" ಎಂದು ಧೈರ್ಯ ತುಂಬಿದರು. "ದಯವಿಟ್ಟು ನೀವು ಕುವೆಂಪು ಅವರಿಗೆ ಹೇಳಿದರೆ ನನಗೆ ಸ್ವಲ್ಪ ಧೈರ್ಯ" ಎಂದು ಅವರಿಗೆ ಬಿನ್ನವಿಸಿದೆ. ಅವರು ಮರು ದಿನ "ನಮ್ಮ ಗುರುಗಳಾದ ಶ್ರೀ ಕುವೆಂಪು ಅವರಿಗೆ ಹೇಳಿದಿನಿ. ನೀವು ಐದು ಗಂಟೆಗೆ ಹೋಗಿ" ಎಂದರು. ನಾನು ಹೋದಾಗ ಕುವೆಂಪು ತಮ್ಮ ಕಾಂಪೌಂಡಿನಲ್ಲಿ ಅಡ್ಡಾಡುತ್ತಿದ್ದರು. ನಾನು ಹೋಗಿ ಅವರಿಗೆ ನಮಸ್ಕಾರ ಮಾಡಿ ಕೊಳಲು ಸಂಕಲನ ತೋರಿಸಿ ಈ ಪದ್ಯವನ್ನು ನಮ್ಮ ಮ್ಯಾಗಜಿನ್‌ಗೆ ಪ್ರಾರ್ಥನೆಯಾಗಿ ಬಳಸಿಕೊಳ್ಳುತ್ತೇನೆ. ತಾವು ದಯವಿಟ್ಟು ಅನುಮತಿ ನೀಡಬೇಕೆಂದು ಪ್ರಾರ್ಥಿಸಿದೆ. ಅವರು ಎಷ್ಟು ಚೆನ್ನಾಗಿ ನನ್ನ ಜೊತೆ ಮಾತನಾಡಿದರೆಂದರೆ ನಾನು ಭೂಮಿಯ ಮೇಲೆ ಇದ್ದೇನೆನ್ನುವುದೇ ಆಗ ಮರೆತು ಹೋಯಿತು. ಯಾವುದೋ ಎಟುಕದ ಮಹತ್ವದ ವಸ್ತು ಸಿಕ್ಕಾಗ ಏನಾಗುತ್ತದೊ ಹಾಗಾಯಿತು ನನಗೆ. ಅವರು ನನ್ನ ಬಗ್ಗೆ ವಿಚಾರಿಸಿಕೊಂಡರು. ನನ್ನ ಹೆಸರು ಕೇಳಿದರು. ಚೆನ್ನಾಗಿ ಓದು ಅಂದರು. ಅನುಮತಿ ಇತ್ತು. ತಮ್ಮ ಪದ್ಯದ ಪ್ರೂಫನ್ನು ಎಚ್ಚರಿಕೆಯಿಂದ ತಿದ್ದುವಂತೆ ಬಹುನಯವಾಗಿ ಸೂಚಿಸಿದರು. ಅವತ್ತೆಲ್ಲ ನಾನು ಗಾಳಿಯಲ್ಲಿ ತೇಲಿದೆ.

ನಾನು ಸಂಪಾದಿಸಿದ ಆ ಮ್ಯಾಗಜಿನ್–'ಗಂಗೋತ್ರಿ'–೨೦-೩-೬೮ರಂದು ಬಿಡುಗಡೆ ಆಯಿತು ನಮ್ಮ ವಿದ್ಯಾರ್ಥಿನಿಲಯ ವಾರ್ಷಿಕೋತ್ಸವದಲ್ಲಿ. ಅದೇ ವಾರ ಹೋಗಿ ಅವರಿಗೆ ಅದರ ಪ್ರತಿಯನ್ನು ಅರ್ಪಿಸಿದೆ. ಅವರು ಮನೆಯ ಮುಂದಿನ ಬಾಗಿಲ ಹಜಾರದಲ್ಲಿ ಕುಳಿತಿದ್ದರು. ಅವರ ಮಂದಸ್ಮಿತ ವದನ ನನ್ನನ್ನು ಸ್ವಾಗತಿಸಿತು. ಕುಳಿತುಕೊಳ್ಳುವಂತೆ ತಮ್ಮ ಬಲಗೈಯಿಂದ ನನಗೆ ಸನ್ನೆಮಾಡಿದರು. ನನ್ನ ಬಗ್ಗೆ ವಿವರವಾಗಿ ಕೇಳಿದರು. "ಇಂಗ್ಲಿಷನ್ನು ಚೆನ್ನಾಗಿ ವ್ಯಾಸಂಗ ಮಾಡಿ ಕನ್ನಡದಲ್ಲಿ ಬರೆಯಿರಿ" ಎಂದರು. ಇದು ಅವರು ನನಗೆ ಹೇಳಿದ ಬರಿಯ ಮಾತುಗಳಾಗಲಿಲ್ಲ. ಇದು ಅವರು ನನಗೆ ಕೊಟ್ಟ ದೀಕ್ಷಾಮಂತ್ರವಾಯಿತು. ತಮ್ಮ ಮಕ್ಕಳ ವಯಸ್ಸಿಗಿಂತಲೂ ಕಿರಿಯವನಾದ ನನ್ನನ್ನು ಬಹುವಚನದಲ್ಲಿ ಮಾತನಾಡಿಸಿದ್ದು ನನಗೆ ಆಶ್ಚರ್ಯವನ್ನುಂಟು ಮಾಡಿತು. ನನ್ನಂಥ ಅಪರಿಚಿತನನ್ನು ಎಷ್ಟು ವಾತ್ಸಲ್ಯದಿಂದ ಕಂಡುದನ್ನು ಎಂದೂ ಮರೆಯಲಾರೆ.

ಆನಂತರ ಅವರನ್ನು ನೋಡುವ ಅವರೊಡನೆ ಮಾತನಾಡುವ ಅವಕಾಶ ಕೂಡಿ ಬಂದಿರಲಿಲ್ಲ. ೧೯೬೭ರ ಡಿಸೆಂಬರ್ ತನಕ. ಈ ಮಧ್ಯೆ ಅವರ ಸಾಹಿತ್ಯವನ್ನು ಮತ್ತೆ ಮತ್ತೆ ಓದುತ್ತಿದ್ದೆ. ಸಾಹಿತ್ಯ ಪತ್ರಿಕೆಗಳಲ್ಲಿ, ಪುಸ್ತಕ ರೂಪದಲ್ಲಿ ಬರುತ್ತಿದ್ದ ಅವರ ಮೇಲಿನ ವಿಮರ್ಶೆಯನ್ನು ಎಚ್ಚರದಿಂದ ಗಮನಿಸುತ್ತಿದ್ದೆ. ಎಲ್ಲಿ ನನಗೆ ಒಪ್ಪಿಗೆಯಾಗುತ್ತದೆ, ಎಲ್ಲಿ ಆಗುವುದಿಲ್ಲ, ಯಾಕೆ ನನಗೆ ಭಿನ್ನಾಭಿಪ್ರಾಯ ಈ ವಿಮರ್ಶೆಯ ಬಗ್ಗೆ ಉಂಟಾಗುತ್ತಿದೆಂದು ಯೋಚಿಸುತ್ತಿದ್ದೆ. ಅದನ್ನು ಕುವೆಂಪು ಕೃತಿಗಳ ಅಧ್ಯಯನದಲ್ಲಿ ತುಲನೆ ಮಾಡಿಕೊಳ್ಳುವ ಅಭ್ಯಾಸ ಬೆಳೆಸಿಕೊಂಡು ಈ ಅಭಿಪ್ರಾಯಕ್ಕೆ ಕೃತಿಯಲ್ಲಿ ಆಧಾರ ವಿದೆಯೆ ? ಇಂಥ ನಿಲುವನ್ನು ಈ ವಿಮರ್ಶೆ ಏತಕ್ಕಾಗಿ ತಳೆಯಿತು ಎಂಬುದಾಗಿ ಪರಿಶೀಲಿಸುವ ಹುಚ್ಚು ಹುಟ್ಟಿತು.

೧೯೬೭ರ ನವೆಂಬರ್ ತಿಂಗಳಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಕೇಂದ್ರ ಮೌಲ್ಯಮಾಪನವನ್ನು ಶಿವಮೊಗ್ಗದಲ್ಲಿ ಏರ್ಪಡಿಸಿತ್ತು. ಅಷ್ಟು ದೂರ ಹೋದವನು ಕುವೆಂಪು ಅವರ ಮನೆ ಕುಪ್ಪಳ್ಳಿಯನ್ನು ನೋಡುವ ಆಸೆಯಾಗಿ ಹೊರಟೆ (ಈ ಅನುಭವ 'ತೀರ್ಥಹಳ್ಳಿ, ಡಾ|| ಗೊರೂರು ಮತ್ತು ನಾನು' ಎಂಬ ಲೇಖನದಲ್ಲಿ ಬಂದಿದೆ ನೋಡಿ ಬದಲಾವಣೆ, ನಾಲ್ಕನೆಯ ಮುದ್ರಣ ೧೯೯೪).

ಇಷ್ಟರೊಳಗೆ ಅವರ ಸಾಹಿತ್ಯವನ್ನು ಕುರಿತ ನನ್ನ ಒಂದೆರಡು ವಿಮರ್ಶಾ ಲೇಖನಗಳು ಪ್ರಕಟವಾಗಿದ್ದವು. 'ರಕ್ತಾಕ್ಷಿ ಮತ್ತು ಹ್ಯಾಮ್ಲೆಟ್' ಎಂಬ ತೌಲನಿಕ ಅಧ್ಯಯನ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದ ಕುವೆಂಪು ಮೇಲಿನ ಮೂರು ದಿನಗಳ ವಿಚಾರ ಸಂಕಿರಣದಲ್ಲಿ ಮಂಡಿತವಾಗಿದ್ದ ಪ್ರಬಂಧ 'ಕುವೆಂಪು ಅವರ ಗದ್ಯ.' ಅಖಿಲ ಭಾರತ ಮಟ್ಟದ ವೇದಿಕೆಯಲ್ಲಿ ಅಪರಿಚಿತನಾದ ನನ್ನನ್ನು ನಿಲ್ಲಿಸಿದವರು ಡಾ|| ಜಿ. ಎಸ್. ಶಿವರುದ್ರಪ್ಪನವರು.

ಕುವೆಂಪು ಅವರನ್ನು ಕಂಡು ಮಾತನಾಡಬೇಕೆಂಬ ಬಯಕೆ ಬೆಳೆಯಲು ಶುರುವಾಯಿತು. ಒಬ್ಬನೇ ಹೋಗಲು ಸಂಕೋಚ. ಗೆಳೆಯ ವಸಂತಕುಮಾರ್ ಅವರಿಗೆ ಪರಿಚಯ ಇದ್ದುದರಿಂದ ಅವರಲ್ಲಿ ನನ್ನ ಅಪೇಕ್ಷೆ ಹೇಳಿಕೊಂಡೆ. ೧೭-೧-೧೯೬೮ರಲ್ಲಿ ಇಬ್ಬರೂ ಕುವೆಂಪು ಅವರ ಮನೆಗೆ ಹೋದೆವು. ಸಂಜೆಯ ಸಮಯ. ಕುವೆಂಪು ಮುಂಭಾಗದ ವರಂಡಾದಲ್ಲಿ ಕುಳಿತಿದ್ದರು. ನಮಸ್ಕರಿಸಿದೆವು. ತಮ್ಮ ಮುಂದುಗಡೆ ಇದ್ದ ಕುರ್ಚಿಗಳಲ್ಲಿ ಕೂರುವಂತೆ ಪ್ರೀತಿಯೆ ಕೈಯಾದಂತೆ ತೋರಿಸಿದರು.

ತೀರ್ಥಹಳ್ಳಿಯಲ್ಲಿ ಅವರಿಗೆ ನಡೆದ ಸನ್ಮಾನದ (೨೬-೧೧-೧೯೬೭) ಪ್ರಸ್ತಾಪವಾಯಿತು. "ನಿಮ್ಮ ಊರಿಗೆ ಹೋಗಿದ್ದೆ, ಸರ್" ಎಂದೆ. "ಕವಿಶೈಲಕ್ಕೆ ಹೋಗಿದ್ರಾ ?" ಎಂದರು. ಹೌದೆಂದೆ, ತೀರ್ಥಹಳ್ಳಿಯಲ್ಲಿ ನಡೆದ ಸಮಾರಂಭದ ಕಡೆ ಮಾತು ಹೊರಳಿತು. "ನೀವು ಅವೊತ್ತು ಅಷ್ಟು ಚೆನ್ನಾಗಿ ಮಾತನಾಡಲಿಲ್ಲ" ಎಂದು ನನಗೆ ಹೇಳಿದರು. "ಹೌದು ಸರ್, ನನಗೆ ಸಾರ್ವಜನಿಕ ವೇದಿಕೆಯಿಂದ ಮಾತನಾಡಿ ಅಭ್ಯಾಸವಿಲ್ಲ" ಎಂದೆ. ಡಾ|| ಗೊರೂರರಿಗೂ ನನಗೂ ನಡೆದ ಮಾತುಕತೆಯನ್ನು ವಿವರವಾಗಿ ನಿರೂಪಿಸಿದೆ. (ಇದು ನನ್ನ ಲೇಖನದಲ್ಲಿ ವಿಶದವಾಗಿ ಬಂದಿದೆ.) ಕುವೆಂಪು ಅವರ

ಮುಖಭಾವ ಹೊಳೆಯಿತು. "ನಿಮ್ಮ ಹೆಸರಿನಿಂದ ನೀವ್ಯಾರು ಅಂತ ಅವರಿಗೆ ಗೊತ್ತಾಗ್ಲಿಲ್ಲ. ಈ ವಿಷಯವನ್ನು ನೀವು ಬೇರೆ ಯಾರಿಗೇ ಹೇಳಿದರೂ ನಿಮ್ಮ ಮಾತನ್ನು ನಂಬೋದಿಲ್ಲ. ನಿಮಗೆ ಡಾ|| ಗೊರೂರು ಏನು ಅಂತ ಗೊತ್ತಾಗಿದೆ. ಈ ಜನ ಏನು ಅಂತ ನನಗೆ ಮುವತ್ತು ನಲವತ್ತು ವರ್ಷಗಳ ಹಿಂದೆಯೆ ಗೊತ್ತಾಯಿತು. ತೀರ್ಥಹಳ್ಳಿಯಿಂದ ಶಿವಮೊಗ್ಗೆಗೆ ಬರುವಾಗ ನಮ್ಮ ಗಾಂಗೇಯ ಕಾರಿನಲ್ಲಿ ಗೊರೂರು ಜೊತೆ ಬಂದನಂತೆ ಅವನೇನೊ ಡ್ರೈವರ್ ಕಡೆ ಹುಡುಗ ಇರಬೇಕೂಂತ ತಿಳಿದು ಕಾರಿನಲ್ಲಿದ್ದವರ ಜೊತೆ ಡಾ|| ಗೊರೂರರು ನನ್ನನ್ನು ವಾಚಾಮಗೋಚರವಾಗಿ ಬೈದರಂತೆ. ಆ ಹುಡುಗ ಹೋಗಿ ಊರಿನಲ್ಲಿ ಎಲ್ಲರಿಗೂ ಹಾಗೆ ಹಾಗೇ ಹೇಳಿಬಿಟ್ಟಿದ್ದಾನೆ ಏನು ಜನ! "ಎಂದು ಬೇಸರಪಟ್ಟರು. ನಂತರ ಮುಂದುವರಿದು. "ಅವರೊಂದು ಕಾಗದ ಬರೆದಿದ್ದಾರೆ ಇರಿ" ಎಂದು ನಿಧಾನವಾಗಿ ಒಳಗೆ ಹೋಗಿ ಡಾ|| ಗೊರೂರರು ಬರೆದಿದ್ದ ಪತ್ರ ತಂದು ನನ್ನ ಕೈಗೆ ಕೊಟ್ಟು, "ಓದಿ, ಗಟ್ಟಿಯಾಗಿ ಓದಿ. ಅವರೂ ಕೇಳಲಿ" ಎಂದರು (ಈ ಪತ್ರವನ್ನು ಕುವೆಂಪು ನನಗೆ ಟೈಪ್ ಮಾಡಿಸಿ ಆಮೇಲೆ ಕೊಟ್ಟು, ಇದನ್ನು ನೀವು ಬಳಸಿಕೊಳ್ಳಬಹುದು ಎಂದು ಅನುಮತಿ ಸಹ ಇತ್ತರು.)

## ಕುವೆಂಪು ಅವರಿಗೆ ಡಾ|| ಗೊರೂರ ಪತ್ರ

ಹಿರಿಯ ಕವಿವರ್ಯ ಮಿತ್ರರಾದ ಶ್ರೀಮಾನ್ ಕೆ.ವಿ ಪುಟ್ಟಪ್ಪನವರ ಸ|| ಕೈ|| ನಮಸ್ಕಾರಗಳು.

ಈ ವೇಳೆಗೆ ತಾವು ಶಿವಮೊಗ್ಗದಿಂದ ಹಿಂದಿರುಗಿರುವಿರೆಂದೂ ಆಯಾಸ-ಪರಿಹಾರ, ಪೂರ್ಣ ವಿಶ್ರಾಂತಿ ಆಗಿದೆಯೆಂದೂ ನಂಬುತ್ತೇನೆ.

ತೀರ್ಥಹಳ್ಳಿಯ ಕಾರ್ಯಕ್ರಮ, ತುಂಬ ಹೃದಯಂಗಮವೂ ಆಪ್ಯಾಯಮಾನವೂ ಆಗಿತ್ತು. ಎರಡು ದಿನಗಳಿಂದಲೇ ಅಲ್ಲಿ "ಕುವೆಂಪುರಾಮ" ಆಗಮನದ ಸೊಗಡು ಆವರಿಸಿತ್ತು. ಯಾರ ಮುಖದಲ್ಲಿ ನೋಡಿದರೂ "ನೀವು ಬರುತ್ತೀರಿ, ಬರುತ್ತೀರಿ" ಎಂಬುದೇ ಮಾತು; ಸಂಭ್ರಮ. ನನಗೆ ಒಂದು ಆಶ್ಚರ್ಯವೆಂದರೆ, ಇದ್ದಕ್ಕಿದ್ದಂತೆ, ನನಗೆ "ಪತ್ತನದಿ ಪತ್ತನಕೆ, ಪಲ್ಲಿಯಿಂ ಪಲ್ಲಿಗಾ ಕೋಸಲದ ಮೂಲೆ ಮೂಲೆಯೊಳೆಲ್ಲಿಯುಂ ಪರ್ಚಿದುದಾವಾರ್ತೆ" ಎಂಬಂತೆ, ತೀರ್ಥಹಳ್ಳಿ ಪ್ರಾಂತವೆಲ್ಲ ಈ ಶುಭಸುದ್ದಿಯಿಂದ ಪ್ರಪುಲಿತವಾಗಿ ರಾಮಾಗಮ ಸಂಭ್ರಮದ ಅನುಭವವುಂಟಾಯಿತು. ಸಭೆಯಲ್ಲಿ ಕುಳಿತಿರುವಾಗ ಸಹ ನನಗೆ ಇದು ತೀರ್ಥಹಳ್ಳಿಯ ಸಭೆ ಎಂಬುದು ಪದೇ ಪದೆ ಮರೆತು, ಅಯೋಧ್ಯೆಯಲ್ಲಿ ರಾಮನ ಸಭೆ ಎಂದೇ ಭಾಸವಾಗುತ್ತಿತ್ತು. ನಾನೂ, ನೀವೂ, ವೇದಿಕೆಯ ಮೇಲಿನ ಬರಿಯ ಮರದ ಕುರ್ಚಿಗಳ

ಮೇಲೆ ಕುಳಿತಿದ್ದರೂ, ಅದು ಅರಮನೆಯ ಸಿಂಹಾಸನ ; ಎದುರಿಗೆ ಸಮುದ್ರದಂತೆ ಗಂಭೀರವಾಗಿ ಕುಳಿತಿರುವ ಅಗಾಧ ಜನಸ್ತೋಮ, ಅಯೋಧ್ಯಾಪ್ರಜೆಗಳು ಮೂಲ ವಿಗ್ರಹಕೆ ಕೆತ್ತಿದುತ್ಸವದ ಪಡಿಯೆನಲ್ ಒಂದುಗಳಿಗೆ ಸಮಸ್ತ ಅಯೋಧ್ಯೆ. ಮತ್ತೆ ರಾಮಾವತಾರ, ರಾಮಾಯಣಾವತಾರ ಎಲ್ಲ ಪುನರಾವರ್ತವಾದಂತೆ ಭಾಸವಾಯಿತು. ಈ ಎಲ್ಲ ಭಾವನೆಗಳನ್ನೂ ನೀವು ನಿಮ್ಮ ಭಾಷಣದಲ್ಲಿ ನೀಡಿದ ಸಂದೇಶ, ಹೆಚ್ಚು ದೃಢ ಪಡಿಸಿತು. ನಿಮ್ಮ ಆ ಭಾಷಣ ನಿಜವಾಗಿ ಸ್ಫೂರ್ತಿವಾಣಿ ; ನೀವು ನಿಮ್ಮ ಹಳೆಯ "ಶ್ಯಾಮಲ ಕಾನನ ಶೃಂಗತರಂಗಿತ ಸುಂದರಮಂದಿರಕೆ" ಅದರ ವಾತಾವರಣಕ್ಕೆ ಮತ್ತೆ ಸಂದು ಮಾಡಿದ ಋಷಿವಾಣಿ ; ಆ ಗಳಿಗೆಯಲ್ಲಿ ನನಗೆ ಅದು, ಆತ್ಮ ಆತ್ಮ ಗಳಿಗೆ ಹೇಳುತ್ತಿರುವ ಕವಿವಾಣಿಯೆಂದು ತೋರಿತು. ಆತ್ಮದ ಸಂಬಂಧ ದೇಹವನ್ನು ಮೀರಿದುದಷ್ಟೆ. ಆ ಗಳಿಗೆಯಲ್ಲಿ ನಿಮ್ಮಲ್ಲಿ ನನಗೆ ಒಂದು ಅಪೂರ್ವವಾದ ಪ್ರೇಮ ವುಂಟಾಯಿತು. ನಿಜವಾದ ಅರ್ಥದಲ್ಲಿಯೇ, ತೀರ್ಥಹಳ್ಳಿಯಲ್ಲಿ ರಾಮ ಮತ್ತು ರಾಮಾಯಣ ತೀರ್ಥಗಳ ಪುನರವತಾರವಾಯಿತು. ನೀವು ಬರದೇ ಇದ್ದಿದ್ದರೆ, ಖಂಡಿತ ಆ ವಾತಾವರಣ ಹಾಗಾಗುತ್ತಿರಲಿಲ್ಲ.

ಸಭೆಯಲ್ಲಿ ಮಾತನಾಡಿದ ಪ್ರತಿಯೊಬ್ಬರೂ, ನಿಮ್ಮ ಕವನಗಳ ಸ್ಫೂರ್ತಿ ಮಲೆನಾಡ "ಸುಜಲಾಂ ಸುಫಲಾಂ ಸಸ್ಯಶ್ಯಾಮಲಾಂ" ಎಂದು ಹೇಳಿದರು. ಆದರೆ ನನ್ನ ಅಭಿಪ್ರಾಯದಲ್ಲಿ ಪ್ರಕೃತಿ ಎಷ್ಟೇ ಪ್ರಬಲವೂ ಪರಿಣಾಮಕಾರಿಯೂ ಆದರೂ, ನಿಮ್ಮ ಸರ್ವಜಾಗೃತ ಊರ್ಧ್ವಮುಖಿ ಅಮೃತಚೇತನವೇ ನಿಮ್ಮ ಶ್ರೇಷ್ಠ ಕವನಗಳ ಉಗಮಸ್ಥಾನ. ಹಾಗಿಲ್ಲದಿದ್ದಲ್ಲಿ ಮಲೆನಾಡಿನ ಜನರೆಲ್ಲ ಕವಿಗಳೇ ಆಗಬೇಕಾಗಿತ್ತು. ಆದರೆ ಇಷ್ಟು ವರ್ಷಗಳಿಂದ ಮಲೆನಾಡು, ಒಂದೇ ಸಮನಾಗಿ ಹೂತು ಕಾತು ಮಾರುತ, ತುಂಗೆ ಭೋರ್ಗರೆದರೂ, ಅದರ ಕೋಗಿಲೆ ಕಾಜಾಣಗಳ ಕಂಠದಲ್ಲಿ ಕಟ್ಟಿ ಹೋಗಿದ್ದ, ಸಾರಸ್ವತರಸ ಪ್ರವಾಹವನ್ನು ಜಗತ್ತಿಗೆ ಹರಿಸಿದವರು ಪುಟ್ಟಪ್ಪನವರೊಬ್ಬರೇ. ನಿಮ್ಮ ಸಹಪಂಕ್ತಿಯಲ್ಲಿ ಈ ಆನಂದವನ್ನೆಲ್ಲ ಅನುಭವಿಸುವ ಅವಕಾಶ ನನಗೆ ಸಿಕ್ಕಿದುದಕ್ಕೆ ನಾನು ತುಂಬ ಸಂತೋಷಪಡುತ್ತೇನೆ. ಭಗವಂತನು ನಿಮಗೂ ನಿಮ್ಮ ಕುಟುಂಬದಲ್ಲಿ ಎಲ್ಲರಿಗೂ ದೀರ್ಘಾಯುಸ್ಸು ಆರೋಗ್ಯಭಾಗ್ಯ ಸೌಖ್ಯಗಳನ್ನು ಕರುಣಿಸಲೆಂದು ಹಾರೈಸುತ್ತೇನೆ.

ಈ ಕಾಗದಕ್ಕೆ ಜವಾಬು ಕೊಡುವ ಶ್ರಮ ವಹಿಸಬೇಕಾದುದಿಲ್ಲ.

ಇತಿ,

(ಸಹಿ)

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಕಾಗದ ಓದಿ ಮುಗಿದ ನಂತರ ಕುವೆಂಪು ಹೇಳಿದರು: "ನೋಡಿ ಇದು ಗಿಲ್ಟಿ ಮೈಂಡ್ (guilty mind) ನಿಂದ ಬರೆದಿರೋದು. ಹೋದ ಕೂಡಲೆ ಬರೆದಿದ್ದಾರೆ. ಅಲ್ಲದಿದ್ರೆ ಬರೆಯೋ ಅವಶ್ಯಕತೆ ಇರಲಿಲ್ಲ." ಡಾ|| ಗೊರೂರು ತಮ್ಮನ್ನು ಬೈದರೆಂದು ಗೊತ್ತಾಗಿದ್ದರೂ ಅವರ ಬಗ್ಗೆ ಮಾತನಾಡುವಾಗಲೆಲ್ಲ ಏಕವಚನ ಬಳಸದೆ ಬಹುವಚನ ಬಳಸಿದ್ದು ನನಗೆ ನಿಜಕ್ಕೂ ಆಶ್ಚರ್ಯವಾಯಿತು. ಅಂದು ಕುವೆಂಪು ಅವರು ನನಗೆ ಪರೋಕ್ಷವಾಗಿ ಕಲಿಸಿದ ಪಾಠ: ನಮ್ಮನ್ನು ಯಾರೋ ಬೈದರೆಂದು ಅದೇ ರೀತಿ ನಾವೂ ಬೈದರೆ ನಾವು ಸಣ್ಣವರಾಗುತ್ತೇವೆ.

ಆಮೇಲೆ ಮಾತು ಬೇರೆಡೆಗೆ ಹೊರಳಿತು. ನನ್ನ ಗೆಳೆಯ "ಸರ್, ನೀವು ಉಪಯೋಗಿಸಿರೋ ಮಹಾಛಂದಸ್ ಸರಳರಗಳೆ ಅಲ್ಲವೇ, "ಸರ್, ಎಂದು ಕೇಳಿದರು. ಅದಕ್ಕೆ ಕುವೆಂಪು ಇಲ್ಲ, ಇಲ್ಲ. ಎಲ್ಲರೂ ಹಾಗೇ ತಿಳಿದುಕೊಂಡಿದ್ದಾರೆ. ರಗಳೆಗೆ ಆದಿಪ್ರಾಸ ಅಂತ್ಯಪ್ರಾಸ ಇರೋದರಿಂದ ಸ್ವಾತಂತ್ರ್ಯವಿಲ್ಲ. ಅದು ಕೈಕಾಲು ಕಟ್ಟಿ ಕುಸ್ತಿಗೆ ಬಿಟ್ಟ ಹಾಗೆ ಇದೆ," ಎಂದರು. ನಾನು ಫಕ್ಕನೆ ನಕ್ಕುಬಿಟ್ಟೆ; ಅಷ್ಟು ಚೆನ್ನಾಗಿತ್ತು ಹೋಲಿಕೆ. ಆ ಒಂದು ಉಪಮೆಯಲ್ಲಿ ರಗಳೆಯ ಇತಿಮಿತಿಗಳನ್ನೆಲ್ಲ ಸುಂದರವಾಗಿ ಧ್ವನಿಸುವಂತೆ ವ್ಯಾಖ್ಯಾನಿಸಿದ್ದರು. ಕುವೆಂಪು ಮುಂದುವರೆದರು: "ಡಾ|| ಚಿದಾನಂದಮೂರ್ತಿಗಳು ಬಂದಿದ್ದರು. ಮಹಾಛಂದಸ್ ಬಗ್ಗೆ ವಿವರಣೆ ಕೊಟ್ಟೆ. Some how he has not grasped 'ಸಹ್ಯಾದ್ರಿ'ಯಲ್ಲಿ ಪ್ರಕಟವಾಗಿದೆ.

ನಾನು : ಸರ್. ಶಿವರಾಮ ಐತಾಳರದೂ ಒಂದು ಲೇಖನ ಇದೆ ಅದರಲ್ಲೆ. ಅವರೇನೋ ಮಹಾಛಂದಸ್ ಬಗ್ಗೆ ಗ್ರಹಿಸಿದ ಹಾಗೆ ಕಾಣುತ್ತೆ.

ಕುವೆಂಪು : ಹೌದೆ ನೋಡ್ತೀನಿ. ಟಿ.ಎಸ್. ಎಲಿಯಟ್ ಮಹಾಛಂದಸ್‌ಗೆ ಹತ್ತಿರ ಬರುವ ಕಲ್ಪನೆ ಹೊಂದಿದ್ದಾನೆ. ಅದು ಅವನ ಮಿಲ್ಟನ್ ಮೇಲಿನ ಎರಡನೇ ಪ್ರಬಂಧದಲ್ಲಿದೆ. 'ತರ್ತೀನಿ', ಎಂದು ಒಳಗೆ ಹೋಗಿ Selected prose ಪುಸ್ತಕವನ್ನು ತಂದು ಆ ಭಾಗವನ್ನು ಓದಿದರು. "ಇದು ನಮ್ಮ ಪ್ರೊ|| ಶಾಂತವೀರಪ್ಪನವರು ನನಗೆ ಬಳುವಳಿಯಾಗಿ ಕೊಟ್ಟ ಪುಸ್ತಕ, ನಾನು ವೈಸ್‌ಛಾನ್ಸ-ಲರ್ ಆಗಿದ್ದಾಗ.

ನಾವು ಹೊರಡುವ ಮೊದಲು, ತೀರ್ಥಹಳ್ಳಿಯ ಗೆಳೆಯರು, ಸನ್ಮಾನ ಸಮಾರಂಭದ ಸಂದರ್ಭದಲ್ಲಿ (೨೬–೧೧–೭೯) ನಾನು 'ಕುವೆಂಪು ; ಕವಿ ಮತ್ತು ಕೃತಿ' (ಸಂ. ಎನ್. ಶ್ರೀನಿವಾಸ ಉಡುಪ, ಜಿ. ಕೆ.ರಮೇಶ,ಎಂ ಎನ್.ಜೈಪ್ರಕಾಶ್) ಎಂಬ ಪುಸ್ತಕ ಬಿಡುಗಡೆ ಮಾಡಿ ಕುವೆಂಪು ಅವರಿಗೆ ಕೊಡುತ್ತಿರುವುದರ ಫೋಟೊ ಕಳಿಸಿದ್ದನ್ನು ಅವರಿಗೆ ತೋರಿಸಿ ಅದಕ್ಕೆ ಅವರ ಸಹಿ (ಕುವೆಂಪು ೧೬–೧-೧೯೮೦) ಪಡೆದೆ.

೧೯೮೦ ರ ಫೆಬ್ರವರಿ ತಿಂಗಳು. ನನ್ನ ವಿಮರ್ಶಾಕೃತಿ 'ಅಂತರ್ಯ' ಎರಡನೆಯ ಮುದ್ರಣಗೊಂಡು ಪ್ರಕಟವಾಗಿತ್ತು. ಅದರ ಪ್ರತಿಯೊಂದನ್ನು ಕೊಡುವ ಉದ್ದೇಶದಿಂದ ಅವರ ಮನೆಗೆ ಹೋದೆ. ಸಂಜೆ ಐದರ ಸಮಯ. ಕುವೆಂಪು ಎಂದಿನಂತೆ ಹಜಾರದಲ್ಲಿ ಕುಳಿತಿದ್ದರು. ಅವರ

ಎದುರುಗಡೆ ವೃದ್ಧರೊಬ್ಬರು, ಅವರಿಗಿಂತ ಸ್ವಲ್ಪ ಕಡಿಮೆ ವಯಸ್ಸಿನವರು ಆಸೀನರಾಗಿದ್ದರು. ಕುವೆಂಪು ಅವರ ಬಲಭಾಗದಲ್ಲಿ ಕೊಂಚ ದೂರದಲ್ಲಿ ನಡುಮನೆಗೆ ಹೋಗುವ ಬಾಗಿಲಿಗೆ ಒರಗಿಕೊಂಡಂತೆ, ಅವರ ಮಗಳು ನಿಂತಿದ್ದರು. ಅವರ ಪಕ್ಕದಲ್ಲಿದ್ದ ಕುರ್ಚಿಯ ಮೇಲಿದ್ದ ಪುಸ್ತಕಗಳನ್ನು ತೆಗೆಯುವಂತೆ ಅವರು ತಮ್ಮ ಮಗಳಿಗೆ ಕೈ ಸನ್ನೆ ಮಾಡಿದರು. ಅವುಗಳನ್ನು ಬೇರೊಂದು ಕಡೆಗಿಟ್ಟು ಅವರ ಪುತ್ರಿ ಒಳಗೆ ಹೋದರು. ಇಷ್ಟೆಲ್ಲ ನಾನು ಬಾಗಿಲಿನಿಂದ ಅವರೆಡೆಗೆ ಒಂದೆರಡು ಹೆಜ್ಜೆಗಳನ್ನು ಇಡುವಷ್ಟರಲ್ಲಿ ಜರುಗಿತು. ನಾನು ಅವರ ಎದುರುಗಡೆ ಖಾಲಿಯಿದ್ದ ಇನ್ನೊಂದು ಖುರ್ಚಿಯಲ್ಲಿ ಕುಳಿತುಕೊಳ್ಳುವಷ್ಟರಲ್ಲಿ ತಮ್ಮ ಬಲಪಕ್ಕದಲ್ಲಿ ಹತ್ತಿರವಿದ್ದ ಕುರ್ಚಿಗೆ ಬರುವಂತೆ ಕೈ ಸನ್ನೆ ಮಾಡಿದರು. ನಾನು ಹೋಗಿ ಕುಳಿತೆ 'ಇವರು ಪ್ರೊ॥ ಮಹಲಿಂಗಣ್ಣ' ಎಂದು ಆ ವೃದ್ಧರನ್ನು ಪರಿಚಯಿಸಿದರು. ನನ್ನ ಬಗ್ಗೆ ಅವರಿಗೆ ಹೇಳಿದರು.

ಕುವೆಂಪು : ನಿಮಗೆ ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ 'ಶ್ರೀ ಕುವೆಂಪು' ಬಂದಿದೆಯೆ?

ನಾನು : ಹೌದು. ಬಂದಿದೆ, ಸರ್. (ಇದೂ ಒಂದು ಮುಖ್ಯ ಕಾರಣ ನಾನು ಅಂದು ಅವರ ಬಳಿ ಹೋಗಲು),

ಕುವೆಂಪು ತಾವು ಕುಳಿತಿದ್ದ ಕುರ್ಚಿಯ ತೋಳುಗಳ ಮೇಲೆ ಆರಾಮವಾಗಿ ಮಲಗಿದ್ದ ತಮ್ಮ ಕೈಗಳನ್ನು ಎತ್ತಿ ಜೋಡಿಸಿಕೊಂಡು ತಮ್ಮ ತೊಡೆಯ ಮೇಲಿಟ್ಟುಕೊಂಡರು.

ಅವರ ಮುಖದಲ್ಲಿ ಖುಷಿಯ ಕಳೆ ಹೊಮ್ಮಿತು, ನಿಧಾನವಾಗಿ ಹೇಳಿದರು. "ನಿಮ್ಮ ಲೇಖನ–'ಕುವೆಂಪು ಅವರ ಗದ್ಯ'–ಓದಿದೆ. ತುಂಬಾ ಚೆನ್ನಾಗಿದೆ. I am highly satisfied. ಬಹಳ ಪರಿಶ್ರಮ ವಹಿಸಿ ಬರೆದಿದ್ದೀರಿ. ಬಹಳ ಹೊಸ ವಿಷಯಗಳನ್ನು ಹೇಳಿದ್ದೀರಿ. ....ಅಲ್ಲಿ ಎರಡೇ ಲೇಖನಗಳು ಚೆನ್ನಾಗಿರೋದು.ಒಂದು ನಿಮ್ಮದು;ಇನ್ನೊಂದು ನಮ್ಮ ಸುಜನಾ ಅವರದು. ಉಳಿದವರದು–ಅವರು ವಿಮರ್ಶೆಯ ಮಟ್ಟಕ್ಕೆ ಬರೋದಿರಲಿ, ಅವರಿಗೆ ವಿಮರ್ಶೆ ಎಂದರೇನೆಂದು ತಿಳಿಯದು" ಎಂದರು. (ನನಗೆ ಆಶ್ಚರ್ಯವಾಯಿತು). ಒಂದು ವಿಷಯದಲ್ಲಿ ನಿಮ್ಮೊಡನೆ ನಾನು ಚರ್ಚಿಸಬೇಕಾಗಿದೆ. ಅದೇನು ಅಂತ ನನ್ನ ಪ್ರತಿಯಲ್ಲಿ ಗುರುತು ಹಾಕಿದ್ದೇನೆ. ಪುಸ್ತಕ ಒಳಗೆ ಇದೆ. ಬಿಡುವಾದಾಗ ಇನ್ನೊಮ್ಮೆ ಬನ್ನಿ. ಚರ್ಚಿಸೋಣ. ನಿಮಗೆ ಸ್ಪಷ್ಟೀಕರಣ ಸಿಗಬಹುದು".

ನಾನು (ಮೈಸೂರು ವಿಶ್ವವಿದ್ಯಾನಿಲಯದ) ಸಂಜೆ ಕಾಲೇಜಿನಲ್ಲಿ ಆಗ ಇದ್ದುದರಿಂದ ಕ್ಲಾಸಿಗೆ ಹೊತ್ತಾಗುತ್ತದೆಂದು ಹಾಗೂ ಅದೇ ಸರಿಯಾದ ಸಮಯವೆಂದು ಎದ್ದು ನಮಸ್ಕರಿಸಿ ಬಂದೆ.

(ಆ ಲೇಖನ ಕುವೆಂಪು ಅವರಿಗೆ ಹಿಡಿಸಬಹುದೆಂದು ನನಗೆ ಪೂರ್ಣ ಭರವಸೆಯಿತ್ತು. ಆ ವಿಚಾರಸಂಕಿರಣದ ನಿರ್ದೇಶಕರೂ 'ಶ್ರೀ ಕುವೆಂಪು' ಕೃತಿಯ

ಸಂಪಾದಕರೂ ಆದ ಡಾ|| ಜಿ.ಎಸ್. ಶಿವರುದ್ರಪ್ಪನವರು ಗೆಳೆಯ ಎಸ್.ಜಿ. ಸಿದ್ಧರಾಮಯ್ಯನವರ ಜೊತೆ ಆ ಪ್ರಬಂಧದ ಬಗ್ಗೆ ಮುಕ್ತಮನಸ್ಸಿನಿಂದ ಮೆಚ್ಚಿಕೆಯ ಮಾತಾಡಿದ್ದು ನನಗೆ ಅಷ್ಟರಲ್ಲೆ ಮುಟ್ಟಿತ್ತು. ವಿಚಾರಸಂಕಿರಣ ದಲ್ಲಿ ಮಂಡಿತವಾದ ದಿನವೇ ಚರ್ಚೆಯ ನಂತರ ಅನೇಕರು ವಿದ್ವಾಂಸರು, ಪರಿಚಿತರು, ಅಪರಿಚಿತರು, ಅದೇ ಮಾತನ್ನು ಹೇಳಿದ್ದರಿಂದ ನನ್ನ ಶ್ರಮಕ್ಕೆ ಸೂಕ್ತ ಮನ್ನಣೆ ಸಿಕ್ಕಿತೆಂದು ಹರ್ಷ ವಾಗಿ ಆತ್ಮವಿಶ್ವಾಸ ಇಮ್ಮಡಿಸಿತ್ತು.

ಒಂದು ವಿಷಯದ ಬಗ್ಗೆ ಚರ್ಚಿಸ ಬೇಕೆಂದು ಅವರು ಹೇಳಿದ್ದು ಯಾವು ದೆಂದು ನನಗೆ ಕೂಡಲೆ ಗೊತ್ತಾಯಿತು. ಅದು ಅವರ ವಿಮರ್ಶಾ ಭಾಷೆಯ ಕ್ಲಿಷ್ಟತೆಯ ಬಗ್ಗೆ ನಾನು ಬರೆದ ಅಭಿಪ್ರಾಯಕ್ಕೆ ಸಂಬಂಧಿಸಿದ್ದಾಗಿರ ಬಹುದು.

ಸುಮಾರು ಇಪ್ಪತ್ತು ದಿನಗಳಾದ ನಂತರ ಸಾಯಂಕಾಲ ಹೋದೆ. ವೆರಾಂಡದಲ್ಲಿ ಒಬ್ಬರೆ ಕುಳಿತಿದ್ದರು. ಯೋಚನಾ ಮಗ್ನರಾಗಿದ್ದಂತೆ ಕಂಡರು: ಶ್ರೀ ಅರವಿಂದರ The Life Divine ಮಹಾಕೃತಿ ಅವರ ಮುಂದೆ ಸ್ಟೂಲಿನ ಮೇಲಿತ್ತು. ತೆಗೆದುಕೊಂಡು ನೋಡಿದೆ. ಸೀಸದಕಡ್ಡಿಯಲ್ಲಿ ಅಲ್ಲಲ್ಲೆ ಗುರುತು ಹಾಕಿದ್ದರು. ಪುಟದ ಪಕ್ಕದ ಖಾಲಿ ಜಾಗದಲ್ಲಿ ಒಂದೆರಡು ಮಾತುಗಳಲ್ಲಿ ಅಥವಾ ವಾಕ್ಯಗಳಲ್ಲಿ ಟೀಕು ಬರೆದಿರು ವುದು ಕಂಡಿತು. ಪುಸ್ತಕವನ್ನು ಕೆಳ ಗಿಟ್ಟೆ.

ಕುವೆಂಪು : ಅದನ್ನ ಮೂರನೆಯ ಸಾರಿ ಓದುತ್ತಿದ್ದೇನೆ, for the Sheer Joy of it. ಮನಃಶಕ್ತಿ ಮತ್ತು ದೇಹಶಕ್ತಿ ಎರಡೂ ಇದ್ದಾಗಲೇ ಎರಡು ಸಾರಿ ಓದಿಬಿಟ್ಟಿದ್ದೆ. Now the mind gets tired.

ನಾನು : ಅದನ್ನು ಓದಿ ಒಂದು ಕವಿತೆ ಬರೆದಿದ್ದೀರಿ "ಶಾಂತವಾದುದು ನನ್ನ ಧೀತೃಷ್ಣೆ..." ಅದು 'ಅಗ್ನಿಹಂಸ'ದಲ್ಲಿ ಇದೆ.

ಕುವೆಂಪು : ಅದು ನನ್ನ ಮನಃಸ್ಥಿತಿಯನ್ನು ಚೆನ್ನಾಗಿ ಅಭಿವ್ಯಕ್ತಿಸುತ್ತದೆ ನನಗಾದ ಅನುಭವ ಅದು.

ಆ ದಿನ ಕುವೆಂಪು ಶ್ರೀ ಅರವಿಂದರ ಬಗ್ಗೆ ಮಾತನಾಡಿದರು ಅವರ 'ವಿಭೂತಿಪೂಜೆ' ಯಲ್ಲಿರುವ 'ಶ್ರೀ ಅರವಿಂದರು' ಪ್ರಬಂಧ ಜ್ಞಾಪಿಸಿದೆ. "ನಾನು ತತ್ವಶಾಸ್ತ್ರದ ವಿದ್ಯಾರ್ಥಿ. ಪಾಶ್ಚಾತ್ಯರಲ್ಲಾಗಲೀ ಪೌರ್ವಾತ್ಯರಲ್ಲಾಗಲೀ metaphysicsನ ಆ ಮಟ್ಟಕ್ಕೆ ಏರಿದವರಿಲ್ಲ. ಏನು ಅದ್ಭುತ ವಿಶ್ಲೇಷಣೆ. From the known to the unknown (ಜ್ಞೇಯದಿಂದ ಅಜ್ಞೇಯದ ಕಡೆಗೆ) ಅವರು ಅನುಸರಿಸುವ ವಿಧಾನ" ಎಂದರು.

ಹಾಗೆ ಪ್ರಾಸಂಗಿಕವಾಗಿ ಮಾತು ಶ್ರೀರಾಮಕೃಷ್ಣ ಪರಮಹಂಸರತ್ತ ವಾಲಿತು. ಸ್ವಾಮಿ ಸಿದ್ಧೇಶ್ವರಾನಂದರನ್ನು ಭಾವ ಪೂರ್ವಕವಾಗಿ ನೆನಸಿಕೊಂಡರು. ಸಿದ್ಧೇಶ್ವರಾ ನಂದಜಿ ಫ್ರಾನ್ಸ್‌ನಲ್ಲಿ ಇದ್ದಾಗ ಅಲ್ಲಿ ತಮ್ಮ ಶಿಷ್ಯರಿಗೆ ಕುವೆಂಪು ಅವರನ್ನು ಕುರಿತು ಹೇಳಿದ್ದರಂತೆ. ಅವರ ಫ್ರೆಂಚ್ ಶಿಷ್ಯ

ರೊಬ್ಬರು ಇಂಡಿಯಾಕ್ಕೆ ಬಂದಾಗ ಮೈಸೂರಿಗೆ ಬಂದಿದ್ದನ್ನು ಹೇಳಿದರು :

ಕುವೆಂಪು : ಒಂದು ಸಂಜೆ ಕಾಂಪೌಂಡಿನಲ್ಲಿ ಅಡ್ಡಾಡುತ್ತಿದ್ದೆ. ಗೈರಿಕ ವಸನಧಾರಿಯೊಬ್ಬರು ಬಂದು ಗೇಟಿನ ಬಳಿ ನಿಂತು Which is Dr. Puttappa's house? ಎಂದರು. I am Dr. Puttappa ಎಂದೆ ಆ ವ್ಯಕ್ತಿ ಹಾಗೆನೇ ನನಗೆ ಉದ್ದಂಡ ನಮಸ್ಕಾರ ಮಾಡಿಬಿಟ್ಟರು. ನಾನು ಸ್ತಂಭೀಭೂತನಾದೆ. ನಂತರ ಅವರು ಎದ್ದು ಹೇಳಿದರು ; ನಾನು ಸ್ವಾಮಿ ಸಿದ್ಧೇಶ್ವರಾನಂದರ ಶಿಷ್ಯ. ಪ್ಯಾರಿಸ್‌ನಿಂದ ಬಂದಿದ್ದೇನೆ. ಇಂಡಿಯಾಕ್ಕೆ ನೀನೇನಾದರೂ ಹೋದರೆ ಡಾ|| ಪುಟ್ಟಪ್ಪನವರನ್ನು ನೋಡಲು ಮರೆಯಬೇಡ ; ಅವರು ಬಹಳ ದೊಡ್ಡ ಚೇತನ ಎಂದು ತಿಳಿಸಿದ್ದರು. ಆದ್ದರಿಂದ ಬಂದೆ. ಸ್ವಾಮೀಜಿಯವರ ಜೀವನ ಚರಿತ್ರೆ ಬರೀತಿದ್ದೀನಿ. ನಿಮಗೆ ಗೊತ್ತಿರುವ ವಿಷಯ ತಿಳಿಸಿ ಎಂದರು. ಆಮೇಲೆ ಮೂರು ದಿವಸ ಗಂಟೆಗಟ್ಟಲೆ ಅವರಿಗೆ ಸಿದ್ಧೇಶ್ವರಾನಂದಜಿಯರ ವ್ಯಕ್ತಿತ್ವ ವರ್ಣಿಸಿದೆ.

ನಂತರ ತುಸು ಹೊತ್ತಿನವರೆಗೆ ಮೌನವಾದರು. ಮುಖ ತೇಜಃಪುಂಜವಾಯಿತು. ಎದ್ದು ಒಳಗೆ ಹೋಗಿ ತಾವು ಬರೆದಿರುವ ಶ್ರೀರಾಮಕೃಷ್ಣ ಪರಮಹಂಸ ಗ್ರಂಥವನ್ನು ತಂದು ಅದ್ವೈತಾನುಭವವನ್ನು ಕುರಿತ ಕೆಲವು ವಾಕ್ಯಖಂಡಗಳನ್ನು ಓದಿದರು. "ಇದು ಇತ್ತೀಚಿನ ಆವೃತ್ತಿಯಲ್ಲಿದೆ. ಅರವಿಂದರ Evening Talks ನಿಂದ ಅನುವಾದ ಮಾಡಿದ್ದೇನೆ" ಎಂದು ತಿಳಿಸಿದರು.

ಇದು ಮುಗಿದ ಮೇಲೆ ನಾನೆಂದೆ: "ಸರ್, ನನ್ನ ಲೇಖನದ ಒಂದಂಶವನ್ನು ಚರ್ಚಿಸಬೇಕೆಂದಿರಿ."

ಕುವೆಂಪು : ಇವೊತ್ತು ನನ್ನ ಮನಸ್ಸು ಬಹಳ ಎತ್ತರದಲ್ಲಿದೆ. ಬೇರೆ ವಿಷಯದತ್ತ ನನ್ನ ಮನಸ್ಸು ಹೋಗ್ತಾ ಇಲ್ಲ. ಇನ್ನೊಮ್ಮೆ ಚರ್ಚಿಸೋಣ.

ನಾನು ವಂದಿಸಿ ಬಂದೆ.

ಎಪ್ಪತ್ತೈದರ ಇಳಿವಯಸ್ಸಿನಲ್ಲಿ ಕುವೆಂಪು ಅವರಿಗಿರುವ ಆಸಕ್ತಿಯನ್ನು ಕಂಡು ಮೂವತ್ತರ ಹರೆಯದ ನಾನು ವಿಸ್ಮಯಪಡುತ್ತಿದ್ದೇನೆ. ನನಗೆ ಅಂಥ ಕುತೂಹಲಾಸಕ್ತಿಗಳು ಅಷ್ಟಾಗಿ ಇಲ್ಲವಲ್ಲ ಎಂದು ಬೇಸರ, ನಾಚಿಕೆ ಆಗುತ್ತಿತ್ತು. ಕುವೆಂಪು ಅವರನ್ನು ಮತ್ತೆ ಮತ್ತೆ ನೋಡಬೇಕೆನಿಸುತ್ತಿತ್ತು, ಸಾಹಿತ್ಯ ತಪ್ಪಿದರೆ ಅಧ್ಯಾತ್ಮ ಇವುಗಳ ಬಗ್ಗೆ ಸಂಭಾಷಣೆ ಕೇಂದ್ರೀಕೃತವಾಗುತ್ತಿತ್ತು. ಅವರಲ್ಲಿ ಮೂರನೆಯವರ ಬಗ್ಗೆ ಮಾತಿಲ್ಲ. ಇದೇ ನಿಜವಾದ ಸಂಸ್ಕೃತಿ. ಉನ್ನತ ವ್ಯಕ್ತಿತ್ವದ ಲಕ್ಷಣ ಎಂಬ ಅರಿವು ನನಗಾಗುತ್ತಿತ್ತು.

ನಂತರ ಮಾತು ಚಿಕ್ಕಮಗಳೂರಿನಲ್ಲಿ ಅವರ ಸಾಹಿತ್ಯದ ಬಗ್ಗೆ ನಡೆಯಲಿದ್ದ ಮೂರು ದಿನಗಳ (೧೯೮೦ ಮೇ ೨೩, ೨೪, ೨೫) ವಿಚಾರ ಸಂಕಿರಣದ ಕಡೆಗೆ ಹರಿಯಿತು.

ಕುವೆಂಪು : ನೀವು ಅದರಲ್ಲಿ ಭಾಗವಹಿಸುತ್ತೀರಿ.

ನಾನು: ಹೌದು, ಸರ್, 'ಕಾನೂರು ಹೆಗ್ಗಡಿತಿ ಮತ್ತು ಬಂಡಾಯ' ಅಂತ ನನ್ನ ವಿಷಯ.

ಕುವೆಂಪು: ನಮ್ಮವರು ತಮ್ಮವರು ಎಂಬ ಒಲವರ ಇದ್ದೇ ಇರುತ್ತದೆ. ಅದನ್ನೆಲ್ಲ ನೀವು ಗೆಲ್ಲಬೇಕು. ವಸ್ತುನಿಷ್ಠತೆಯನ್ನು ಕಾಪಾಡಿಕೊಳ್ಳಿ. ಅದೇ ನಿಮ್ಮನ್ನು ದೊಡ್ಡ ವಿಮರ್ಶಕನನ್ನಾಗಿ ಮಾಡುವ ಗುಣ.

ನಾನು: ನಿಜ ಸರ್. ಬಹಳ ಅಮೂಲ್ಯವಾದ ಮಾತಾಡಿದ್ದೀರಿ. ನನ್ನ ದೃಷ್ಟಿಯಲ್ಲಿ ವಸ್ತುನಿಷ್ಠತೆ ಅಂದರೆ, ಕೃತಿಯಲ್ಲಿ ಅಭಿವ್ಯಕ್ತಿವಾಗಿರುವ ಅನುಭವ ಮತ್ತು ವಸ್ತುವಿಗೆ ನಿಷ್ಠವಾಗಿ ವಿಶ್ಲೇಷಿಸುವುದು, ವಿಮರ್ಶಿಸುವುದು, ಆ ಅನುಭಾವ ಎಷ್ಟರಮಟ್ಟಿಗೆ ನಮ್ಮ ಬದುಕನ್ನು ಸಹ್ಯಗೊಳಿಸಿ ಅರ್ಥಪೂರ್ಣ ಮಾಡಬಲ್ಲದು; ಆ ಅನುಭವದ ಬೆಲೆ ಏನು? ಎಂದು ಕೃತಿಯನ್ನು ವಿಮರ್ಶಿಸಿ ಮೌಲ್ಯಮಾಪನ ಮಾಡುವುದು-ಇದು ನನ್ನ ದೃಷ್ಟಿಯಲ್ಲಿ ವಸ್ತುನಿಷ್ಠತೆ. ಅದನ್ನು ಬಿಡಲಿಕ್ಕೆ ಸಾಧ್ಯವಿಲ್ಲ. ಇದುವರೆಗೂ ಬಿಟ್ಟಿಲ್ಲ. ಮುಂದೇನೂ ಬಿಡೋಲ್ಲ. ಅದ್ದರಿಂದಲೇ ನನ್ನನ್ನು ಕಟು ವಿಮರ್ಶಕ ಅಂತಾರೆ. 'ರಕ್ತಾಕ್ಷಿ ಮತ್ತು ಹ್ಯಾಮ್ಲೆಟ್' ಲೇಖನದಲ್ಲಿ ಅದನ್ನು ನೋಡಬಹುದು. 'ಗೊಡ್ಡು ಬ್ರಾಹ್ಮಣ್ಯ ಮತ್ತು ಧೂರ್ತ ಚಾರ್ವಾಕಮತ' ವಿಮರ್ಶಾ ಪ್ರಬಂಧದಲ್ಲಿ ಕಾಣಬಹುದು.

ಹೀಗೆ ಮಾತನಾಡುತ್ತಿದ್ದಾಗ ನಾನು ಗಡಿಯಾರ ನೋಡಿಕೊಳ್ಳುತ್ತಿದ್ದೆ. ಐದು ನಿಮಿಷ ದಾಟಿತ್ತು. "ಇನ್ನೊಮ್ಮೆ ಬನ್ನಿ" ಎಂದು ಎದ್ದು ನಿಂತರು. ವಂದಿಸಿದೆ. ದಾರಿಯಲ್ಲಿ ಬರುವಾಗ ಶಿವರಾಜ್ ಆಶ್ಚರ್ಯದಿಂದ "ಏನು ಸಿಂಪ್ಲಿಸಿಟಿ, ಸರ್, ಕುವೆಂಪು ಅವರದು!" ಎಂದರು.

('ಗೊಡ್ಡು ಬ್ರಾಹ್ಮಣ್ಯ ಮತ್ತು ಧೂರ್ತ ಚಾರ್ವಾಕಮತ' ಹೇಳಿದ್ದಕ್ಕೆ ಹಿನ್ನೆಲೆ ಇತ್ತು. ಒಮ್ಮೆ ಸಂಜೆಯ ಸಮಯ ನಾನು ನಮ್ಮ ಕಾಲೇಜಿನ (ಮಹಾರಾಜ) ಕಡೆಗೆ ಹೋಗುತ್ತಿದ್ದಾಗ, ಯುವರಾಜಾ ಕಾಲೇಜಿನಿಂದ ಬರುತ್ತಿದ್ದ ಪ್ರೊ॥ ಸುಜನಾ ಅವರು ನನ್ನನ್ನು ಕೈಬೀಸಿ ಕರೆದು 'ಬಾ'ಣ್ಣ ಇಲ್ಲಿ. "ನೀನು ಸಂಕ್ರಮಣದಲ್ಲಿ ಲೇಖನ ಬರೆದಿದ್ದೀಯಂತೆ. ಅದನ್ನು ನಮ್ಮ ಗುರುಗಳು (ಕುವೆಂಪು ಅವರು) ಮೆಚ್ಚಿದ್ದಾರೆ. ನಾನೂ ನೋಡಬೇಕು ಕೊಡು" ಎಂದಿದ್ದರು. ಆಮೇಲೆ ಪ್ರೊ॥ ಸುಜನಾ ಆ ಲೇಖನ ಮೆಚ್ಚಿ ಬರೆದರು.)

ಚಿಕ್ಕಮಗಳೂರು ವಿಚಾರ ಸಂಕಿರಣ ಮುಗಿಸಿಕೊಂಡು ಬಂದ. ಒಂದು ವಾರದ ನಂತರ ಉದಯರವಿಗೆ ಹೋದೆ. ಕುವೆಂಪು ಹಜಾರದಲ್ಲಿ ಒಬ್ಬರೆ ಆರಾಮವಾಗಿ ಮಂಡಿಸಿದ್ದರು. ನಸುನಗೆ ಸೂಸುತ್ತ ಬನ್ನಿ ಎಂದು ದೂರದಿಂದಲೇ ಸನ್ನೆ ಮಾಡಿದರು. ಅವರ ಎದುರು ಕುರ್ಚಿಯಲ್ಲಿ ಕುಳಿತೆ. ವಿಚಾರ ಸಂಕಿರಣದ ಬಗ್ಗೆ ಕೇಳಿದರು.

ನಾನು: ಯಶಸ್ವಿಯಾಗಿ ನಡೆಯಿತು. ಕೊನೆಯ ದಿನ ಪ್ರೊ॥ ಜಿ. ಎಸ್. ಶಿವರುದ್ರಪ್ಪನವರ ಭಾಷಣ ಬಹಳ ಪ್ರಭಾವಕಾರಿಯಾಗಿತ್ತು. ನಿಮ್ಮ

ಸಾಹಿತ್ಯದ ಶ್ರೇಷ್ಠತೆಯನ್ನು, ನಿಮ್ಮ ಕ್ರಾಂತಿಕಾರಿ ಮನೋಭಾವವನ್ನು ಚಿತ್ತಾಕರ್ಷಕವಾಗಿ ವರ್ಣಿಸಿದರು. ನೀವು ರಾಜಕುಮಾರ ಜಯಚಾಮರಾಜ ಒಡೆಯರ್ ಫೇಲ್ ಆಗಿದ್ದಾಗ ಹೆಚ್ಚು ಅಂಕಗಳನ್ನು ಕೊಟ್ಟು ಪಾಸು ಮಾಡಿಸಲು ನಿರಾಕರಿಸಿದ್ದನ್ನು ತಿಳಿಸಿದಾಗ ಲಂತೂ ಸಭಿಕರು ಅವಕ್ಕಾದರು.

ಕುವೆಂಪು : ಹೌದ....ಶಿವರುದ್ರಪ್ಪನವರು ಒಳ್ಳೆಯ ಭಾಷಣಕಾರರು, ವಿದ್ವಾಂಸರು, ಬೆಂಗಳೂರಿನಲ್ಲಿ ಮೊನ್ನೆ ಮಾತಾಡಿದರಂತೆ. ಅತ್ಯುತ್ತಮ ಭಾಷಣವಂತೆ. ಕೇಳಿದವರೆಲ್ಲ ಹಾಗೆಂದು ನನಗೆ ಹೇಳಿದರು. If it is not recorded, it is lost, lost for ever.

ನಾನು : ನಿಮ್ಮ ಮಹಾಕಾವ್ಯದ ಬಗ್ಗೆ ಬರೆಯಬೇಕೆಂದಿದ್ದೇನೆ. ಪಾಶ್ಚಾತ್ಯ ಮಹಾ ಕಾವ್ಯಗಳನ್ನು ಓದುತ್ತಿದ್ದೇನೆ. 'ರಾಮಾಯಣ ದರ್ಶನಂ' ಕುರಿತು ಬರೆದವರಲ್ಲಿ ಕೆಲವರು ಒಂದು ರೀತಿ ಉಡಾಫೆಯಿಂದ ಬರೆದವರಂತೆ ಭಾಸವಾಗುತ್ತದೆ.

ಕುವೆಂಪು : ನಿಜ. We are too near to the epic. It takes time to understand it.

ಅನಂತತೆಯಲ್ಲಿ ಅವರಿಗಿರುವ ವಿಶ್ವಾಸವನ್ನು ಕಂಡು ನನಗೆ ವಿಸ್ಮಯವಾಯಿತು.

ನಾನು : ವಿಶ್ವ ಸಾಹಿತ್ಯದಲ್ಲಿ There are two main streams; one is the lyrical, the other, the epical. ಈ ಎರಡೂ ಒಬ್ಬ ಕವಿಯಲ್ಲಿ ವ್ಯಕ್ತವಾಗಿದ್ದರೆ ಅಂಥವನನ್ನ ನಾನು ಮಹಾಕವಿ ಅಂತ ಕರೀತೀನಿ. ಇವೆರಡೂ ನಿಮ್ಮಲ್ಲಿ ಅಭಿವ್ಯಕ್ತವಾಗಿವೆ. I am convinced. You are one of the greatest writers of the world.

ಕುವೆಂಪು ಅವರ ಮುಗಳ್ನಗೆ ಧೀರ ಸಂಯಮಪೂರ್ಣವಾಗಿತ್ತು.

ಕುವೆಂಪು : 'ರಾಮಾಯಣ ದರ್ಶನಂ' ಕೆಲವು ಭಾಗಗಳು ರೆಕಾರ್ಡಾಗಿವೆ. ಬಿಡುವು ಮಾಡಿಕೊಂಡು ಬನ್ನಿ, ಹಾಕ್ತೀನಿ. ಎರಡು ಮೂರು ಗಂಟೆ ಕುಳಿತುಕೊಳ್ಳಲು ಸಿದ್ಧವಾಗಿ ಬನ್ನಿ. ನಿಮ್ಮ ಜೊತೆಯಲ್ಲಿ ಇನ್ನೊಂದಿಬ್ಬರನ್ನು ಕರೆದುಕೊಂಡು ಬನ್ನಿ.

ಸುತ್ತ ಕತ್ತಲು ಕವಿದುಕೊಳ್ಳುತ್ತಿತ್ತು. ನಾನು ಸಂಜೆ ಕಾಲೇಜಿಗೆ ಹೊತ್ತಾಗುತ್ತದೆಂದು ನಮಸ್ಕರಿಸಿ ಹೊರಟೆ.

'ನೆನಪಿನ ದೋಣಿಯಲ್ಲಿ' ಓದಲು ಪ್ರಾರಂಭಿಸಿದೆ ಮೈಮರೆಸುವ ಆಸಕ್ತಿಯನ್ನು ಕೃತಿ ನನ್ನಿಂದ ಅನೈಚ್ಛಿಕವಾಗಿ ಸಂಪಾದಿಸಿಬಿಟ್ಟಿತು. ಅವರ ಜೀವನ ಪ್ರವಾಹದಲ್ಲಿ ನಾನೂ ಕೊಚ್ಚಿಹೋಗಿದ್ದೆ.

ಒಂದು ರಾತ್ರಿ ಎರಡೂವರೆ ಗಂಟೆಗೆ ಎಚ್ಚರನಾಗಿ ಓದನ್ನು ಮುಂದುವರಿಸಿದೆ. ಓದು ಹೇಗೆ ನಿರಂತರವಾಗಿ ಸಾಗಿತ್ತೆಂದರೆ ಮನೆ ಮುಂದೆ ಆಟೊ ಸದ್ದಾದಾಗಲೇ ನನಗೆ ಬಾಹ್ಯ ಪ್ರಪಂಚದ ಅರಿವಾದದ್ದು. ಗಡಿಯಾರ ನೋಡುತ್ತೇನೆ ಆರು ಗಂಟೆ,

ಬೆಳಗಾಗಿವೆ. ನನ್ನನ್ನು ನೋಡಲು ಬಂದಿದ್ದ ನನ್ನ ಗೆಳೆಯರಿಗೆ ಹೇಳಿ ಅವರೂ 'ನೆನಪಿನ ದೋಣಿಯಲ್ಲಿ' ಓದುವಂತೆ ಹುಚ್ಚುಬರಿಸಿದೆ. ಮುಂದೆ (೩೦-೧೧-೧೯೮೦) ಕುವೆಂಪು ಅವರನ್ನು ಭೇಟಿ ಮಾಡಿದಾಗಲೂ ಹಾಗೆಂದು ಹೇಳಿದೆ.

ನಾನು 'ನೆನಪಿನ ದೋಣಿಯಲ್ಲಿ' ಓದುವಾಗ ನನಗೆ ಕಂಡುಬಂದ ಕೆಲವು ತಪ್ಪುಗಳನ್ನು ಪಟ್ಟಿಮಾಡಿಕೊಂಡಿದ್ದೆ. ಕುವೆಂಪು ಅವರನ್ನು ಕಾಣಲು ಹೋದೆ ಅವರು ಎಂದಿನಂತೆ ಹಜಾರದಲ್ಲಿ ಆರಾಮ ಕುಳಿತು ಹೊರಜಗತ್ತನ್ನು ಈಕ್ಷಿಸುತ್ತಿದ್ದರು. ನಮಸ್ಕರಿಸಿ ಅವರೆದುರು ಕುಳಿತೆ.

ನಾನು : 'ನೆನಪಿನ ದೋಣಿ' ಓದಿ ಮುಗಿಸಿದೆ.

ಕುವೆಂಪು : ಇಷ್ಟುಬೇಗ ಓದಿ ಮುಗಿಸಿ ಬಿಟ್ರಾ ?

ನಾನು : ಸಾಕಷ್ಟು ಹಿಂದೆ ಓದಿ ಮುಗಿಸಿದೆ ಊರಿನಲ್ಲಿ ಇರಲಿಲ್ಲ. Central Valuation ಗೆ (೧೪-೧೧-೮೦) ಉಡುಪಿಗೆ ಹೋಗಿದ್ದೆ. ಮೊನ್ನೆ ಬಂದೆ.

'ನೆನಪಿನ ದೋಣಿ is a great autobiography. ನಿಮ್ಮ formative tens ತುಂಬ ಚೆನ್ನಾಗಿ ಚಿತ್ರಿತವಾಗಿದೆ, ಓದಿದ ಎಳೆಯ ಚೇತನಗಳೂ ನಿಮ್ಮಂತಾಗಲೂ ತುಡಿಯುವಂತೆ ವರ್ಣಿತ ವಾಗಿದೆ. ನಿಮ್ಮ ಬಾಲ್ಯದ ಜನಜೀವನವನ್ನು ಬಹು ಮನೋಜ್ಞವಾಗಿ ಹಿಡಿದಿದ್ದೀರಿ. It is a rare social document. ಎಂಥೆಂಥ ಜನರ ಜೊತೆ ನಿಮ್ಮ ಸಂಪರ್ಕ ಬಂದಿದೆ! ಸರ್, I really envy you. ರಾಮಕೃಷ್ಣಾಶ್ರಮ ನಿಜಕ್ಕೂ ನಿಮ್ಮನ್ನು ಉದ್ಧಾರ ಮಾಡಿದೆ.

ಕುವೆಂಪು: ಹೌದು ಸ್ವಾಮಿ ಸಿದ್ಧೇಶ್ವರಾ ನಂದರು.

ನಾನು ಮೇಲಿನ ಮಾತುಗಳನ್ನು ಹೇಳುತ್ತಿದ್ದಾಗ ಕುವೆಂಪು ನನ್ನನ್ನೆ ನೆಟ್ಟ ದಿಟ್ಟಿಯಾಗಿ ನೋಡುತ್ತಿದ್ದರು. ಮಂದಸ್ಮಿತ ರಾಗಿದ್ದರು—ಶರತ್ಕಾಲದ ಶುಭ್ರ ಆಕಾಶ ದಲ್ಲಿ ಮೂಡಿದ ಚಂದ್ರನ ಕಿರಣಗಳು ಪ್ರಶಾಂತನಾಗಿ ಭೂಸ್ಪರ್ಶ ಮಾಡುವಂತೆ ಅವರ ಪ್ರಫುಲ್ಲನಯನಗಳು ವಾತ್ಸಲ್ಯ ವನ್ನು ವರ್ಷಿಸುತ್ತಿರುವಂತೆ ಅನುಭವ ವಾಯಿತು.

ನಾನು : ನಿಮ್ಮ ಆತ್ಮಕಥೆಯನ್ನು ಓದಿದ ಮೇಲೆ ನಿಮ್ಮನ್ನು ಸರಿಯಾಗಿ ಅರ್ಥ ಮಾಡಿಕೊಂಡಿದ್ದೇನೆಂಬ ಭರವಸೆ ನನಗೆ ಬಂದಿದೆ. ನಿಮ್ಮ ಎಲ್ಲಾ ಕೃತಿಗಳನ್ನು ಓದಿ ಅವು ಪ್ರಕಟಣೆಗೊಂಡ ಇಸವಿ ಗಳನ್ನು ಗಮನಿಸಿ, ನಿಮಗೆ ೨೦-೨೨ರ ಹರಯದ ಹೊತ್ತಿಗೆ ನಿಮ್ಮ ಜೀವನದ ಆದರ್ಶಗಳು, ಮನವರಿಕೆಗಳು ನಿಮಗೆ ಸ್ಪಷ್ಟವಾಗಿವೆ, ಎನ್ನಿಸಿತ್ತು. ಆದರೆ 'ನೆನಪಿನ ನೋಣಿಯಲ್ಲಿ' ಓದಿದರೆ ಅದ ಕ್ಕಿಂತಲೂ ಮೊದಲೇ ನಿಮಗೆ ಅವೆಲ್ಲ ಬೆಳ್ಳಂಬೆಳಗಾಗಿವೆ ಎಂದು ತಿಳಿಯುತ್ತದೆ.

ಕುವೆಂಪು ಸುಪ್ರಸನ್ನರಾಗಿ, ವಿಶ್ವಾಸ ಪೂರ್ಣ ಮೆಚ್ಚಿಕೆಯ ಮಂದಸ್ಮಿತ ವದನ ರಾಗಿ ನನ್ನನ್ನೇ ಎವೆಯಿಕ್ಕದೆ ನೋಡು ತ್ತಿದ್ದರು.

ನಾನು : ಸರ್, ಕೆಲವು ತಪ್ಪುಗಳು ಉಳಿದು ಬಿಟ್ಟಿವೆ, ಎಂದು ಗುರುತು ಹಾಕಿ ಕೊಂಡಿದ್ದ ಹಾಳೆಯನ್ನು ಜೇಬಿನಿಂದ ತೆಗೆದು ಹಿಡಿದುಕೊಂಡು ಹೇಳಿದೆ.

ಪು. ೨೦೪ ರಲ್ಲಿ 'ಶೆರ್ಲಿ' ಎಂಬುದಕ್ಕೆ ಬದಲಾಗಿ 'ಶೆಲ್ಲಿ' ಎಂದು ಅಚ್ಚಾಗಿದೆ. ಅದು ಜೇಮ್ಸ್ ಶೆರ್ಲಿ–ಆತನ Deaths the leveller ಕವಿತೆಯನ್ನು 'ಸಾವಿನ ಸಮತೆ' ಎಂದು ನೀವು ಅನುವಾದಿಸಿದ್ದೀರಿ; 'ನವಿಲು ಸಂಕಲನದಲ್ಲಿದೆ.

ಕುವೆಂಪು : ನಮ್ಮ ಪ್ರಿಂಟರ್ಸ್‌ಗೆ ಶೆಲ್ಲಿಗೂ ಶರ್ಲಿಗೂ ವ್ಯತ್ಯಾಸ ಗೊತ್ತಿಲ್ಲ ನೋಡಿ. ಪ್ರೂಫ್ ಸರಿಯಾಗಿ ನೋಡಿಲ್ಲ, ಎಂದು ತಳ್ಳಿಹಾಕಿದರು.

ನಾನು : ಪುಟ ೮ (೬೯೮) ರಲ್ಲಿ ಪೋಪ್ ಕವಿಯ Deserted village ಅಂತ ಬರೆದು ಬಿಟ್ಟಿದ್ದೀರಿ. ಅದು ಗೋಲ್ಡ್ ಸ್ಮಿತ್‌ನದು.

ಕುವೆಂಪು 'ದಿವ್ಯನಿರ್ಲಕ್ಷ್ಯತೆ' ಯಿಂದ ಕುರ್ಚಿಗೆ ಒರಗಿ ಕುಳಿತಿದ್ದವರು ತಕ್ಷಣ ಎಚ್ಚೆತ್ತವರಂತೆ 'ಎಲ್ಲಿ ಎಲ್ಲಿ' ಎಂದರು. ನಾನು ಪುಟ ಸಂಖ್ಯೆ ಮತ್ತೆ ಹೇಳಿದೆ. ಅವರು ತಮ್ಮ ಮುಂದೆ ಸ್ಟೂಲಿನ ಮೇಲಿದ್ದ 'ನೆನಪಿನ ದೋಣಿಯಲ್ಲಿ' ಪ್ರತಿಯನ್ನು ತೆಗೆದುಕೊಂಡು ನೋಡಿ 'ಛೇ! ಛೇ!' ಎಂದು ಕೈ ಒದರಿ ಡಾಟ್ ಪೆನ್ನಿನಿಂದ 'ಪೋಪ್' ಪದವನ್ನು ಹೊಡೆದು ಪುಸ್ತಕದ ಖಾಲಿ ಜಾಗದಲ್ಲಿ 'ಗೋಲ್ಡ್‌ಸ್ಮಿತ್' ಎಂದು ಬರೆದುಕೊಂಡರು. "It is an obvious mistake" ಎಂದರು.

ನಾನು : ನನಗೆ ನಿಜಕ್ಕೂ ಆಶ್ಚರ್ಯವಾಯಿತು, ಸರ್. ನಿಮ್ಮಲ್ಲಿ Factual errors ಬರೋದಿಲ್ಲ. ಅಷ್ಟು ಎಚ್ಚರದಿಂದ ನೀವು ಬರೀತೀರಿ. ನಿಮ್ಮ ದೀರ್ಘ ಕಾದಂಬರಿಗಳಲ್ಲಿ, 'ಕಾನೂರು ಹೆಗ್ಗಡಿತಿಯಲ್ಲಿ', 'ಮಲೆಗಳಲ್ಲಿ ಮದುಮಗಳು'ನಲ್ಲಿ ತಪ್ಪು ಸಿಗೋಲ್ಲ. ಅಂಥದರಲ್ಲಿ ಇಲ್ಲಿ ನುಸುಳಿರುವುದು ನಿಜಕ್ಕೂ ಸೋಜಿಗ....ಆಮೇಲೆ, ಪುಟ ೪೩೪ ರಲ್ಲಿ ೪೮ ನೆಯ ಅಧ್ಯಾಯದ ನಂತರ ೪೯ ನೆಯ ಅಧ್ಯಾಯದ ಸಂಖ್ಯೆ ಇಲ್ಲ....ಅನಂತರ ಒಂದು Contradiction ಇದೇ ಪು. ೬೮೬ರಲ್ಲಿ ಒಂದೆಡೆ ಸ್ವಾಮಿ ಸಿದ್ಧೇಶ್ವರಾನಂದರಿಗೆ "ನನಗೆ ಕಾಯಿಲೆಯಾಗಿರುವ ಸುದ್ದಿ ಮುಟ್ಟಿಸಿರಲಿಲ್ಲ", ಎಂದವರು ಇನ್ನೊಂದೆಡೆ (ಪುಟ ೧೧೧೦) "ನಾನು ಕಾಗದ ಬರೆದು ನನಗೆ ಬಹಳ ಕಾಯಿಲೆಯಾಗಿದೆ ಎಂದು ಸ್ವಾಮಿಜಿಗೆ ಹೇಳಿಕಳಿಸಿದೆ, ಆಮೇಲೆ ಬಂದರು" ಎಂದು ಬರೆದಿದ್ದೀರಿ. ಇದು ಏಕೆ ಹೀಗೆ?

ಈಗ ನಾನು ತೋರಿಸುತ್ತಿದ್ದ ವಿರೋಧೋಕ್ತಿ. ಬಗ್ಗೆ ಕುವೆಂಪು ಮೈಯೆಲ್ಲ ಕಣ್ಣಾಗಿ ನೋಡಿದರು. ಕೆಲವು ಕ್ಷಣ ಮೌನವಾದರು, ಗಂಭೀರವಾದರು. ತುಂಬ ಬೇಸರದ ಛಾಯೆ ಅವರ ಎಪ್ಪತ್ತಾರರ ಮಾಗಿದ ಮೊಗದಲ್ಲಿ ಇಣುಕುತ್ತಿದ್ದುದನ್ನು ನಾನು ಸೂಕ್ಷ್ಮವಾಗಿ ಗಮನಿಸುತ್ತಿದ್ದೆ.

ಆ ಕ್ಷಣದಲ್ಲಿ ಕುವೆಂಪು ತಾವೊಬ್ಬ ದೊಡ್ಡ ವ್ಯಕ್ತಿ, ಮಹಾ ಸಾಹಿತಿ, ಘನ ವಿದ್ವಾಂಸ, ಮಹಾ ಮೇಧಾವಿ ಎಂಬ ಭಾವನೆ ರವಷ್ಟೂ ಇಲ್ಲದೆ ಹಸುಗೂಸಿನಂತೆ

ಕಂಡು ಬಂದರು. ಅದೊಂದು ನನಗೆ ದೊರೆತ ವಿಶೇಷಾನುಭವ. ವ್ಯಾಸ, ವಾಲ್ಮೀಕಿ, ಹೋಮರ್, ಷೇಕ್ಸ್‌ಪಿಯರ್ ಟಾಲ್‌ಸ್ಟಾಯ್‌ರ ಕೃತಿಗಳನ್ನು ಓದುವಾಗ ಮಹಾ ಪ್ರತಿಭಾವಂತ ವ್ಯಕ್ತಿ ಮಗುವಿನಂತೆ ಮುಗ್ಧ ಎಂಬ ಭಾವನೆ ಬರುತ್ತಿತ್ತು. ಅದನ್ನು ಕಣ್ಣಾರೆ ಕಂಡು ಅನುಭವಿಸುವ ಅವಕಾಶ ಸಿಕ್ಕಿರಲಿಲ್ಲ. ಅದು ಅಂದು ಅನಾಯಾಸವಾಗಿ ಅಪ್ರಾರ್ಥಿತವಾಗಿ ಕುವೆಂಪು ಅವರಿಂದ ಅವರ ಸಾನಿಧ್ಯದಲ್ಲಿ ನನಗೆ ಲಭಿಸಿತು.

ಮುಗ್ಧತೆ ವಿಸ್ಮಯವನ್ನು ತರುತ್ತದೆ; ಅದರ ಜತೆಯಲ್ಲಿ ಅನ್ವೇಷಣೆ ಹುಟ್ಟುತ್ತದೆ. ಮುಗ್ಧತೆ ಇಲ್ಲದಿದ್ದರೆ ಮಹತ್ತಾದುದು ಮೂಡುವುದಿಲ್ಲ. ತಾಯಿ ತನ್ನ ಬೆತ್ತಲೆಯ ಕಂದನನ್ನು ಅಮುಚಿಕೊಳ್ಳುವಂತೆ, ಸೃಷ್ಟಿಯ ಎದುರು ಅನಾವರಣಗೊಂಡ ಪ್ರತಿಭೆಯನ್ನು ಪ್ರಕೃತಿ ಅಪ್ಪಿಕೊಳ್ಳುತ್ತದೆ; ತಾನೇ ಅದರ ಮೂಲಕ ಮಾತನಾಡುತ್ತದೆ. ಕುವೆಂಪು ಅಂಥ ಪ್ರತಿಭೆ.

ಕುವೆಂಪು ಇನ್ನೊಮ್ಮೆ ನೆನಪಿನ ದೋಣಿಯಲ್ಲಿ ಕಳೆದ ಕಾಲದ ಬಾಳಹೊಳೆಯನ್ನು ದಾಟಿ ಬಂದವರಂತೆ ಸಾವರಿಸಿಕೊಂಡು ಹೇಳತೊಡಗಿದರು:

"ಆಶ್ರಮದಲ್ಲಿ ಲಕ್ಷ್ಮಣ ಅಂತ ಇದ್ದರು. ಅವರನ್ನು ಸ್ವಾಮಿಜಿ ನನ್ನ ರೂಮಿಗೆ ಕಳುಹಿಸಿದ್ದರು, ಪುಟ್ಟಪ್ಪ ನಾಲ್ಕೈದು ದಿನ ಆಶ್ರಮದ ಕಡೆ ಬರಲಿಲ್ಲ. ನೋಡಿಕೊಂಡು ಬಾ ಅಂತ. ಅವರ ಜೊತೆ ನಾನು ಸ್ವಾಮಿಜಿಗೆ ಒಂದು ಚೀಟಿಯಲ್ಲಿ ನನ್ನ ಸ್ಥಿತಿ ಕುರಿತು ಬರೆದು ಕಳುಹಿಸಿದ್ದೆ. ಆಮೇಲೆ ಸ್ವಾಮಿಜಿ ಮತ್ತು ನಾ. ಕಸ್ತೂರಿ ಇಬ್ಬರೂ ನನ್ನ ರೂಮಿಗೆ ಬಂದು ಆಸ್ಪತ್ರೆಗೆ ಸೇರಿಸಲು ಎಲ್ಲಾ ಸಿದ್ಧತೆ ಮಾಡಿದರು."

ನಾನು: ಈ ವಿವರಣೆ ದಾಖಲಾಗಿಲ್ಲ. ಇಷ್ಟು ಸೇರಿದ್ದರೆ ವಿರೋಧೋಕ್ತಿ ಬರುತ್ತಿರಲಿಲ್ಲ.

ಕುವೆಂಪು: ಏನಾದರೂ ಎರಡನೆಯ ಮುದ್ರಣ ಬಂದರೆ ನೀವು ಹೇಳಿದ್ದನ್ನೆಲ್ಲ ಸರಿಪಡಿಸುತ್ತೇನೆ. ನಿಮ್ಮ ಹೆಸರನ್ನು ಅಕ್ನಾಲೆಜ್ ಮಾಡ್ತೀನಿ.... ಬಹಳ ಜನ ಬಂದು ನಿಮ್ಮ ಆತ್ಮ ಕಥೆ ಅದ್ಭುತವಾಗಿದೆ ಎಂದು ಹೇಳಿದರು. ಆದರೆ ಯಾರೂ ನಿಮ್ಮಷ್ಟು ಕ್ಲೋಸ್ ಆಗಿ ಓದಿಲ್ಲ. 'ನೆನಪಿನ ದೋಣಿಯಲ್ಲಿ' ಕುರಿತು ಒಂದು ಸೆಮಿನಾರ್ ನಡೆಸುತ್ತಾರಂತೆ ಜವರೇಗೌಡರು, ನಿಮ್ಮ ಹೆಸರನ್ನು ಅವರಿಗೆ ಸೂಚಿಸುತ್ತೇನೆ.

ನಾನು: ಆಗಲಿ, ಸರ್, ಥ್ಯಾಂಕ್ಸ್.

ಪುನರ್ಜನ್ಮದ ಬಗ್ಗೆ ನಮ್ಮ ಗಮನ ಹರಿಯಿತು. ನಾನು ಎಡ್ಗರ್ ಕೇಸಿವಿಷಯ ಹೇಳಿದೆ. "ನಿಮಗೆ ಇನ್ನೂ ಹೆಚ್ಚಿನ ವಿಚಾರ ತಿಳಿಯಲು ಕುತೂಹಲ ಇದ್ದರೆ ಈ ಪುಸ್ತಕಗಳನ್ನು ಓದಿ" ಎಂದು ಹೆಸರಿಸಿದರು.

1) Many Lives, 2) Many Mansions, 3) Mind through Space and Time ಮತ್ತು 4) The Search After Bride Murphy. ಹೇಳಿದರೆ ನೀವು ಓದುತ್ತೀರಿ ಅಂತ ನನಗನ್ನಿಸಿದೆ. ಆದ್ದರಿಂದ ಈ ಪುಸ್ತಕಗಳನ್ನು ನಿಮಗೆ ಸೂಚಿಸಿದ್ದೀನಿ. ಓದಿಕೊಂಡು ಬನ್ನಿ ಚರ್ಚಿಸೋಣ".

ನಾನು: ನೆನಪಿನ ದೋಣಿಯಲ್ಲಿ ಓದಿದ ಮೇಲೆ ನನಗೆ ಅನ್ನಿಸಿದ್ದು: you

are not tired of writing, and you are not exhausted. Could I know the secret Sir ?

ಕುವೆಂಪು: ಹಾಗೇನಿಲ್ಲ. ಆಗಲೇ ಅನೇಕ ತಿಂಗಳುಗಳಿಂದ ಒಂದು ಪಂಕ್ತಿ ನೂ ಬರೆದಿಲ್ಲ. ಮೊದಲ ಭಾಗ ಬರೆದ ಮೇಲೆ ಎರಡನೆಯ ಭಾಗ ಶುರು ಮಾಡಿಲ್ಲ.

ನಾನು: ಸರ್, ನೀವು ಎರಡನೆಯ ಭಾಗ ಬರೆಯದೆ ಹೋದರೆ ದೊಡ್ಡ ನಷ್ಟವಾಗುತ್ತೆ. ದಯವಿಟ್ಟು ನಿಮ್ಮ ಆತ್ಮಕಥೆ ಪೂರ್ಣವಾಗಬೇಕು, ಸರ್. ನಂತರದ ನಿಮ್ಮ ಜೀವನ ಬಹುಪಾಲು ಪಬ್ಲಿಕಾಗೆ ಇದೆ. ಆದರೆ ಎಷ್ಟೋ ಸಂಗತಿಗಳ ಹಿನ್ನೆಲೆ ಈಚಿನವರಿಗೆ ತಿಳಿದಿಲ್ಲ. ಕೊನೇ ಪಕ್ಷ main events ನ್ನಾದರೂ ಕೊಡಿ ಸರ್.

ಕುವೆಂಪು: ಅದೇ ಹಾಗಾದರೂ ಮಾಡಬೇಕು. ಇನ್ನೂ ಬರೆಯಲಿಕ್ಕೆ ಪ್ರಾರಂಭಿಸಿಲ್ಲ. ಬಹುಶಃ ಕೂತರೆ ಬರವಣಿಗೆ ಮುಂದುವರಿಯುತ್ತೆ ಅಂತ ಕಾಣುತ್ತೆ.

ನಾನು: ತಾವು ಬರೆಯಲಿಕ್ಕೆ ಪ್ರಾರಂಭಿಸಿದರೆ ವಿವರವಾಗಿ ಬರೀತೀರಿ ಅಂತ ನನಗೆ ಗೊತ್ತು.Conscentration and re-creation are your characteristic qualities. (ಏಕಾಗ್ರತೆ ಅಥವಾ ತನ್ಮಯತೆ ಮತ್ತು ಪುನರ್ ಸೃಜನೀಕರಣ ಕುವೆಂಪು ಸಾಹಿತ್ಯದ ವೈಶಿಷ್ಟ್ಯಪೂರ್ಣ ಲಕ್ಷಣಗಳು).

ಕುವೆಂಪು; ನೋಡೋಣ.

ಮಾತನಾಡುವಾಗ ನಾನು, "ಸರ್, ಬಾಯಾರಿಕೆ, ಒಂದು ಲೋಟ ನೀರು," ಎಂದೆ. ಮನೆಯೊಳಗಿದ್ದ ಮಕ್ಕಳನ್ನು ಕರೆದು ನೀರು ತರಲು ಹೇಳುತ್ತಾರೆಂದು ಭಾವಿಸಿದ್ದೆ. ಆದರೆ ಅವರೇ ಎದ್ದು ಬಹಳ ನಿಧಾನವಾಗಿ ಒಳಹೋಗಿ ಒಂದು ಉದ್ದನೆಯ ಗ್ಲಾಸಿನಲ್ಲಿ ತಂದುಕೊಟ್ಟರು. ನನಗೆ ಬಹಳ ಬೇಸರವಾಯಿತು, ಅವರೇ ಎದ್ದು ಹೋಗುವಂತೆ ಮಾಡಿದೆನಲ್ಲ, ಎಂದು.

ಆಗಲೇ ಬಹಳ ಹೊತ್ತಾಗಿತ್ತು. ಅವರ ಕಾಂಪೌಂಡಿನ ಮರಗಳಲ್ಲಿ ಹಕ್ಕಿಗಳಇಂಚರ ಸ್ತಬ್ಧವಾಗುತ್ತಿತ್ತು. ಆಕಾಶದಲ್ಲಿ ನಕ್ಷತ್ರಗಳು ಮಿಣುಕಲು ಪ್ರಾರಂಭಿಸಿದ್ದವು. ಬರುತ್ತೇನೆಂದು ಹೇಳಿ ನಮಸ್ಕರಿಸಿ ಹೊರಟೆ.

* * *

ಮುಖ್ಯ ಗ್ರಂಥಾಲಯಾಧಿಕಾರಿ ಆಗಿದ್ದ ಹೆಚ್.ಸಿ. ಮುಕುಂದನನ್ನು ನೋಡಲು ೨೩.೧.೮೧ ರ ಸಂಜೆ ಮೈಸೂರು ಜಿಲ್ಲಾ ಕೇಂದ್ರ ಗ್ರಂಥಾಲಯಕ್ಕೆ ಹೋಗಿದ್ದೆ. ಅದು ಇದು ಮಾತನಾಡುತ್ತ "ಈಗ ನಮ್ಮ ಒಂದು ಶಾಖೆಯನ್ನು ಹೆಚ್.ಡಿ. ಕೋಟೆಯಲ್ಲಿ ತೆರೆಯುತ್ತಿದ್ದೀವಿ, ಪುಸ್ತಕಗಳನ್ನು ಕೊಳ್ತಾ ಇವೀವಿ. ಯಾರೂ ಕುವೆಂಪು ಪುಸ್ತಕಗಳನ್ನು ಒದಗಿಸುತ್ತಿಲ್ಲ. ಏನೋ ಅವರು ನೋಡಿ ಕಡಿಮೆ ಕೊಡ್ತಾರೆ ಅಂತ ಹೇಳ್ತಾರೆ. ಅವರ ವೈಚಾರಿಕ ಸಾಹಿತ್ಯವನ್ನು ಜನಸಾಮಾನ್ಯರಿಗೆ ಮುಟ್ಟಿಸಬೇಕು ಅಂತ ಆಸೆ" ಎಂದು ಹೇಳಿದ.

ಅದಕ್ಕೆ ನಾನು "ನೀನು ಕುವೆಂಪು ಅವರಿಗೇ order place ಮಾಡು, ಅವರ

ಒದಗಿಸಬಹುದು," ಎಂದವನೆ "ಇರು ಕುವೆಂಪು ಅವರಿಗೆ ಫೋನ್ ಮಾಡಿ ಕೇಳ್ತೀನೆ", ಎಂದು ಅವರ ಕಛೇರಿಯಿಂದಲೇ ಫೋನ್ ಮಾಡಿದೆ. ಕುವೆಂಪು ಅವರು ಫೋನಿಗೆ ಬಂದರು. ನಾನು ವಿಷಯ ತಿಳಿಸಿದೆ. "ಹಾಗೇನಿಲ್ಲ ಹೆಚ್ಚು ಪ್ರತಿಗಳನ್ನು ಕೊಂಡರೆ ಹೆಚ್ಚು ಪ್ರತಿಗಳ ಸೋಡಿ ಕೊಡುತ್ತೇವೆ. ಕೆಲವು ಸಂಸ್ಥೆಗಳಿಗೆ ಒದಗಿಸಿದ್ದೇವೆ. ಅವರೇ ಶೇಕಡ ೧೫ ರಂತೆ ಅಂದರೆ ಆಗಬಹುದು" ಎಂದರು.

ಅವರು 'ರಾಮಾಯಣ ದರ್ಶನಂ' ಕ್ಯಾಸೆಟ್ ಹಾಕುತ್ತೇನೆ ಬನ್ನಿ' ಎಂದು ಹೇಳಿದ್ದನ್ನು ಜ್ಞಾಪಿಸಿದೆ. "ನಾಳೆ ಬನ್ನಿ, ಯಾರ್ಯಾರು ಬರ್ತೀರಿ" ಎಂದರು. ನನ್ನ ವಿದ್ಯಾರ್ಥಿಮಿತ್ರರು ತಮ್ಮನ್ನು ನೋಡಬೇಕೆಂದು ನನಗೆ ಪೀಡಿಸ್ತಾ ಇದ್ದಾರೆ. ಅವರನ್ನೂ ಕರೆದುಕೊಂಡು ಬರೋಣ ಅಂತಿದ್ದೀನಿ," ಎಂದೆ. ಅವರು ಆಗಲಿ, ನಾಳೆ ೫ ಗಂಟೆ ಹೊತ್ತಿಗೆ ಬನ್ನಿ" ಎಂದರು.

ಮರುದಿನ (೨೪.೧.೧೯೮೧) ನಾವು ಸೂಚಿತ ವೇಳೆಗೆ ಉದಯರವಿಗೆ ಹೋದೆವು. ಕುವೆಂಪು ತಮ್ಮ ಮಾಮೂಲಿ ಜಾಗದಲ್ಲಿ ಕುಳಿತಿದ್ದರು. ನನ್ನ ಜತೆಯಲ್ಲಿ ಬಂದಿದ್ದ ಮಿತ್ರರ ವಿವರ ಕೇಳಿದರು. ನಂತರ 'ಬನ್ನಿ ಒಳಗೆ ಕುಳಿತುಕೊಳ್ಳೋಣ' ಎಂದು ನಡುಮನೆಗೆ ನಮ್ಮನ್ನು ಕರೆದೊಯ್ದರು. ಗು. ಪರಮೇಶ, ಎಸ್. ಶಂಕರ್, ಬಿ. ಸಟೀಶ್ ಮತ್ತು ನಾನು ಒಳಕ್ಕೆ ಅವರ ಹಿಂದೆ ಹೋದೆವು. ಕೂರಲು ನಮಗೆ ಕುರ್ಚಿಗಳನ್ನೂ ಸೋಫಾವನ್ನೂ ತೋರಿದರು.

"ಸ್ರೀಂ ಮಹಚ್ಛಿಲ್ಪಿ ಬಟಂ' ಸಂಚಿಕೆ ಹಾಕುತ್ತೇನ್ಸೆ," ಎಂದು ಕ್ಯಾಸೆಟನ್ನು ಜೋಡಿಸಿ ಸ್ವಿಚ್ ಹಾಕಿದರು. ಹಾಕುವಾಗ "ಇದಕ್ಕೆ ಸಮನಾದ ಭಾಗ ಪ್ರಪಂಚದ ಸಾಹಿತ್ಯದಲ್ಲಿ ಇಲ್ಲ" ಎಂದರು. ನಮ್ಮ ಜೊತೆಯಲ್ಲಿ ಅವರ ಆಪ್ತಕಾರ್ಯದರ್ಶಿ ದಾಸೇಗೌಡ ಕುಳಿತಿದ್ದರು. ನಾನು ದಾಸೇಗೌಡರಿಗೆ ಹೇಳಿ ಹಾಕಿಸುತ್ತಾರೆಂದು ಭಾವಿಸಿದ್ದು ಸುಳ್ಳಾಯಿತು. ದಾಸೇಗೌಡ ಬಹಳ ಆರಾಮವಾಗಿ ಕುವೆಂಪು ಎದುರು ಕುಳಿತಿದ್ದರು.

ಕುವೆಂಪು ಟೇಪ್‌ರೆಕಾರ್ಡ್ ಕೇಳುತ್ತಾ ಚಿತ್ತದ ಕುರ್ಚಿಗೆ ಹಿಂದಕ್ಕೆ ಒರಗಿಕೊಂಡು ಕಣ್ಣು ಮುಚ್ಚಿದರು. ನನ್ನ ಜೊತೆ ಬಂದಿದ್ದ ವಿದ್ಯಾರ್ಥಿಮಿತ್ರರು ರೆಕಾರ್ಡ್ ಕೇಳುವುದಕ್ಕಿಂತ ಅವರನ್ನೇ ಎವೆಯಿಕ್ಕದೆ ನೋಡುತ್ತಿದ್ದರು. ಉತ್ತಮ ಛಾಯಾಗ್ರಾಹಕರಾದ ಗು. ಪರಮೇಶ್ ಫೋಟೊ ತೆಗೆದುಕೊಳ್ಳಲೇ? ಎಂದು ನನಗೆ ಸಂಜ್ಞೆ ಮಾಡಿದರು. ರೆಕಾರ್ಡ್ ಚಲಿಸಿದಂತೆ ಕುವೆಂಪು ಅವರ ಮುಖದಲ್ಲಿ ಆಗುತ್ತಿದ್ದ ಬದಲಾವಣೆಗಳನ್ನು ಗಮನಿಸಿ ೩-೪ ಫೋಟೋಗಳನ್ನು ತೆಗೆದುಕೊಂಡರು.

ರೆಕಾರ್ಡ್ ಶ್ರವಣ ಒಂದು ಗಂಟೆಯವರೆಗೆ ನಡೆಯಿತು. ನಂತರ ನಾನು The Illustrated Weekly of India (30 Nov. 1980 P. T) ದಲ್ಲಿ ಪ್ರಕಟವಾಗಿದ್ದ ನನ್ನ ಪತ್ರವನ್ನು ಅವರಿಗೆ ತೋರಿಸಿದೆ. ನನ್ನ ಮೂಲ ಕಾಗದದ ಒಂದೆರಡು ಪ್ಯಾರಾಗಳನ್ನು ಬಿಟ್ಟುಬಿಟ್ಟಿದ್ದಾರೆ" ಎಂದು ಹೇಳಿದೆ. ನನ್ನ ಅಚ್ಚಾದ ಕಾಗದವನ್ನು ಓದಲು ಪ್ರಾರಂಭಿಸಿದರು :

"Sir, L. S. Sheshagiri Rao's article ('A Literary Renaissance' Sept, 21, 1990) is disappointing. It is patching and lacks under-

standing. He has devoted two or three sentences to the Jnanapith Award Winners, while he writes a whole para on "Shikari." a shadow of Kafka.

Puttappa has made notable contributions to every form of literature: poetry, novel, short story, epic biography, essay, criticism, drama. Mr. Rao, however, chooses Shivaram Karanth to compare with the mighty Russian Novelist. No novel of Karanth has the canvas of "Kanooru Heggadithi" (the tittle of which Mr. Rao has given wrongly!) or "Malegalalli Madumagalu" of Puttappa. Puttappa alone favourably compares with Russian giants.

K.S. Bhagavan, Mysore."

ಶ್ರೀ ಎಲ್. ಎಸ್. ಶೇಷಗಿರಿರಾಯರು ಆಧುನಿಕ ಕನ್ನಡ ಸಾಹಿತ್ಯ ಕುರಿತು ಬರೆದಿದ್ದ ಲೇಖನದ ಬಗ್ಗೆ ನನ್ನ ಪ್ರತಿಕ್ರಿಯೆಯಲ್ಲಿ It lacks understandingಎಂದಿದ್ದೆ. ಆ ಮೊದಲ ವಾಕ್ಯವನ್ನು ಓದುತ್ತಿದ್ದಂತೆಯೆ ಕುವೆಂಪು ಹೇಳಿದರು: "They are lacking in something else." ನಾನು "ಸಹೃದಯತೆ?" ಎಂದೆ ಆದರೆ ಅವರು ಪತ್ರ ಓದುವುದರಲ್ಲಿ ಮಗ್ನರಾದರು ನಿಮ್ಮ Original letter ಕೊಡಿ, ಆ ಮೇಲೆ ಓದಿ ಕೊಡುತ್ತೇನೆ. ಅವರಿಗೆ ಅದನ್ನು ಕೊಟ್ಟೆ.

## 'ಇಲ್ಲಸ್ಟ್ರೇಟೆಡ್ ವೀಕ್ಲಿ ಆಫ್ ಇಂಡಿಯಾಕ್ಕೆ' ಕಳುಹಿಸಿದ ಪ್ರತಿಕ್ರಿಯೆ

Mysore
September 30, 1980

Sir,

Kudos to the WEEKLY for bringing out a special issue on Karnataka. But it is far from satisfying.

Mr. L. S. Sheshagiri Rao's write-up on modern Kannada literature is disappointing. It is patchy lacks understanding. It is surprising how he could slur over a writer like Purnachandra Thejaswi, a genuine Lohiaite, who has set a new trend in fiction. He has ignorad poets like P. T. Narasimhachar,

G. S. Shivarudrappa, Channaveera Kanavi, S. G. Siddaramaiah, Lakshmana Rao and writers like Prof. V. K. Gokak, Chaduranga, Besagarahally Ramanna, Sudhakara, Rajashekhara Neeramanvi, to mention only a few important ones.

Mr. Rao's article has no sense of proportion. He has given two-three sentences to the Jnanapeetha award winners, while he revals in devoting a whole paragraph to "Shikari, a shadow of Kafka. Puttappa has made notable contributions to every form of literature: Poetry, novel, short story, epic, biography, essay, criticism, drama- Mr. Rao, however, chooses Karanth to compare with the mighty Russian novelists. Those who are familiar with the epic novels of the Russian giants can handly agree with him. If Puttappa concentrates, Karanth ruminates. No novel of Karanth has the canvas of "Kanooru Heggadithi" (the title of which Mr. Rao has wrongly given!) or "Malegalalli Madumagalu" of Puttappa. He alone favourably compars with the Russian giants. He is, in fact, the titan of modern Kannada literature.

Mr. Kamath's panoramic view of Karnataka tempts tourists. He has, however, wrongly translated the last line of a vachana by Basavanna. The word "thumbi" is used in two senses: (i) fill; and (ii) bee. Hence it should be "O Lord of Kudalasangama. I am a bee at your lotus-feet (to suck the nectar of Divine Bliss).

**(K. S. BHAGAVAN)**
Lecturer in English,
University Evening College, Mysore-5

ಕುವೆಂಪು : ಇಂಗ್ಲೀಷಿನವರು ನಮ್ಮ ದೇಶಕ್ಕೆ ಬಂದದ್ದಕ್ಕೆ ಏನೇ ನಷ್ಟವಾಗಿರಲಿ ಒಂದು ಲಾಭವಾಯಿತು. ನಮಗೆಲ್ಲ ವಿದ್ಯಾಭ್ಯಾಸ ಮಾಡುವ ಅನುಕೂಲ ಸಿಕ್ಕಿತು. ಇಲ್ಲದಿದ್ದರೆ ನಾನು ಈ ಮಟ್ಟಕ್ಕೆ ಬರಲಿಕ್ಕೆ ಆಗುತ್ತಾನೆ ಇರಲಿಲ್ಲ. ಯಾವ ಹಾರುವನ ಮನೇಲಿ ಸಗಣಿ ಹೊತ್ತುಕೊಂಡು ಇರುತ್ತಿದ್ದೆನೊ. ನಾನು ವೈಸ್-ಛಾನ್ಸಲರ್ ಆಗುತ್ತಿರಲಿಲ್ಲ, 'ಶ್ರೀ ರಾಮಾಯಣ ದರ್ಶನಂ' ಬರೆಯುತ್ತಿರಲಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ಆದರೆ ನಿಜವಾದ ಸ್ವಾತಂತ್ರ್ಯ ಅಂದರೆ ಬ್ರಾಹ್ಮಣರ ಹಿಡಿತದಿಂದ ಶೂದ್ರರು ತಪ್ಪಿಸಿಕೊಳ್ಳುವುದು. ಅವರ ಕೈಯಿಂದ ಬಿಡಿಸಿಕೊಳ್ಳುವುದೇ ನಿಜವಾದ ಸ್ವಾತಂತ್ರ್ಯ ತಿಳಿದುಕೊಳ್ಳಿ.

ಗು. ಪರಮೇಶ : ಬ್ರಾಹ್ಮಣರು ಬಹಳ ಕನ್ನಿಂಗ್ ಅಲ್ಲ, ಯಾಕೆ, ಸರ್ ?

ನಾನು : ಅವರ ಹುಟ್ಟುಗುಣಾನೆ ಅದು,

ಕುವೆಂಪು : ನೀವು ಬ್ರಾಹ್ಮಣರಿಂದ ತಪ್ಪಿಸಿಕೊಳ್ಳಬೇಕಾದರೆ, ನೀವು ಮೊದಲು ಮಾಡಬೇಕಾದ ಕೆಲಸ, ಅವರು ಗೌರವಿಸುವುದನ್ನೆಲ್ಲ ಅಗೌರವಿಸುವುದನ್ನ ಕಲಿಯಿರಿ....ಈ ಶೂದ್ರರಿದ್ದಾರಲ್ಲಾ ಇವರಿಗೆ ಎಷ್ಟು ಹೇಳಿದರೂ ಹಿಡಿಯೋಲ್ಲ ಶತಮಾನಗಳ ಇಲ್ಲಣ ತಲೆಯಲ್ಲಿ ತುಂಬಿಕೊಂಡಿದೆ.

ಇದನ್ನು ಭಾವಾಭಿನಯಪೂರ್ವಕವಾಗಿ ತಮ್ಮ ಬಲಗೈನ ತೋರು ಬೆರಳನ್ನು ತಮ್ಮ ತಲೆಗೆ ತಿವಿದುಕೊಳ್ಳುತ್ತಾ ಹೇಳಿದರು.

ನಾನು : ಒಂದು ಸ್ಪಷ್ಟನೆಗಾಗಿ ಈ ಮಾತು ಕೇಳ್ತಿದ್ದೀನಿ. ನನಗೆ ಸರಿಯಾಗಿ ಗೊತ್ತಿದೆ. ಇಲ್ಲಿ ಬಂದಿರುವ ನನ್ನ ವಿದ್ಯಾರ್ಥಿ ಮಿತ್ರರಿಗೆ ತಿಳೀಲಿ ಅಂತ ಕೇಳ್ತಾ ಇದೀನಿ. ನೀವು ಬ್ರಾಹ್ಮಣರನ್ನು ಟೀಕಿಸುತ್ತ ನೀವೇ ಬ್ರಾಹ್ಮಣರಾಗಿ ಬಿಟ್ಟಿದ್ದೀರಿ, ಎಂದು ಆಡಿಕೊಳ್ತಾರೆ, ಇದು ವಿವೇಕಾನಂದರನ್ನು ಓದಿದರೆ ಆಧಾರ ಹೀನವಾದುದು ಎಂದು ತಿಳಿಯುತ್ತೆ.

ಕುವೆಂಪು : ನೋಡಿ, ಈ ಬ್ರಾಹ್ಮಣ ಪದ ಎನ್ನೋದು ಒಂದು ಕಾಲದಲ್ಲಿ ಒಳ್ಳೆ ಅರ್ಥದಲ್ಲಿ ಪ್ರಯೋಗವಾಗ್ತಿತ್ತು. ಈಗ ಅದು ತನ್ನೆಲ್ಲ ಅರ್ಥ ಕಳೆದುಕೊಂಡು ಕೇವಲ ಒಂದು ಜಾತಿಸೂಚಕ ಶಬ್ದವಾಗಿ ಬಿಟ್ಟಿದೆ. ಇಂಗ್ಲಿಷ್‌ನ tyrant ಅನ್ನುವ ಪದಕ್ಕೆ ಹಿಂದೆ ಒಳ್ಳೆ ಅರ್ಥ ವಿತ್ತು. ಒಳ್ಳೆಯ ರಾಜ, ಮಾನವೀಯ ಗುಣಗಳುಳ್ಳ ದೊರೆ ಎಂಬರ್ಥವಿತ್ತು. ಈಗ ಅದಕ್ಕೆ ವಿರುದ್ಧವಾದ ಅರ್ಥದಲ್ಲಿ ಅದು ಬಳಕೆಯಾಗುತ್ತಿದೆ. ಬ್ರಾಹ್ಮಣ ಶಬ್ದನೂ ಹಾಗೇ ಆಗಿದೆ.

ಗು. ಪರಮೇಶ್ : ಸರ್. ವೆಂಕಣ್ಣಯ್ಯನವರು ಬ್ರಾಹ್ಮಣರಲ್ಲವೆ ?

ಕುವೆಂಪು : ನಾನು ಹೇಳಿದ ಅರ್ಥದಲ್ಲಿ ಬ್ರಾಹ್ಮಣರು, ನೀವು ಹೇಳಿದ ಅರ್ಥದಲ್ಲಿ ಅಲ್ಲ, ಅವರಿಗೆ ಅಂತಜಾತಿ ಕಿಲ್ಬಿಷ ಇದ್ದರೆ ನಾನು ನನ್ನ ಮೇರುಕೃತಿ 'ಶ್ರೀ ರಾಮಾಯಣ ದರ್ಶನಂ' ಅನ್ನು ಅವರಿಗೆ ಅರ್ಪಿಸುತ್ತಿದ್ದೆನೆ ? ಖಂಡಿತ ಇಲ್ಲ. ಅವರನ್ನು ಬಿಟ್ಟು ನಾವು ಹೊರಟಾಗ ಆಗಲೇ ಸಾಕಷ್ಟು ಹೊತ್ತಾಗಿತ್ತು. ಬೀದಿಯಲ್ಲಿ ವಿದ್ಯುದ್ದೀಪಗಳು ಕತ್ತಲೆಯನ್ನು ಒತ್ತುತ್ತಿದ್ದವು.

**ಈ ಸಂಚಿಕೆಯ ಲೇಖಕರು—**

ಸರ್ವಶ್ರೀಗಳಾದ—

೧. ಡಾ॥ ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು
'ಕಲಾ ನಿಲಯ' ಕಾಳಿದಾಸ ರಸ್ತೆ, ಜಯಲಕ್ಷ್ಮಿಪುರಂ, ಮೈಸೂರು–೧೨

೨. ಜಿ. ಟಿ. ನಾರಾಯಣರಾವ್, ನಂ. ೮ "ಅತ್ರಿ" ಕಾಮಾಕ್ಷಿ ಆಸ್ಪತ್ರೆ ರಸ್ತೆ
ಕುವೆಂಪುನಗರ, ಮೈಸೂರು–೫೭೦ ೦೨೩

೩. ಡಾ॥ ಜೆ. ಶಶಿಧರ ಪ್ರಸಾದ್, ಪ್ರಾಧ್ಯಾಪಕರು
ಭೌತಶಾಸ್ತ್ರ, ಮಾನಸಗಂಗೋತ್ರಿ, ಮೈಸೂರು.

೪. ಡಾ॥ ಸಿ. ಆರ್. ಕಮಲಮ್ಮ (ಕಮಲಾ ಹಂಪನಾ)
ಎ–೫ 'ಸೌಗಂಧಿಕಾ' ನ್ಯೂ ಕಾಂತರಾಜ ಅರಸ್ ರಸ್ತೆ, ಕುವೆಂಪುನಗರ
ಮೈಸೂರು–೫೭೦ ೦೨೩.

೫. ಚಂದ್ರಶೇಖರಾರಾಧ್ಯ, ಸಾಹಿತ್ಯ ರಚನಾ ವಿಭಾಗದ ಮುಖ್ಯಸ್ಥ
ಅನೌಪಚಾರಿಕ ಶಿಕ್ಷಣ ಮತ್ತು ಸಂಪಾದಕ, ಕ.ರಾ.ವ.ಶಿ.ಸ, ಮೈಸೂರು-೬

೬. ಡಾ॥ ಅರವಿಂದ ಮಾಲಗತ್ತಿ, ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು–೬

೭. ಡಾ॥ ಕೆ. ಚಿದಾನಂದಗೌಡ, ಪ್ರಾಧ್ಯಾಪಕರು
ಜಯಚಾಮರಾಜ ತಾಂತ್ರಿಕ ಕಾಲೇಜು, ಮೈಸೂರು–೫೭೦ ೦೦೬

೮. ಡಾ॥ ತಿಪ್ಪೇಸ್ವಾಮಿ, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಹಿಂದಿ ವಿಭಾಗ, ಮಾನಸಗಂಗೋತ್ರಿ, ಮೈಸೂರು.

೯. ಶ್ರೀಮತಿ ಲತಾರಾಜಶೇಖರ್, ಬರಹಗಾರ್ತಿ
ನಂ. ೧೫, ಟೆಂಪಲ್ ರಸ್ತೆ, ಜಯಲಕ್ಷ್ಮಿಪುರಂ, ಮೈಸೂರು–೫೭೦ ೦೧೨

೧೦. ಪ್ರೊ॥ ಎಸ್. ನಾರಾಯಣಶೆಟ್ಟಿ (ಸುಜನಾ)
ನಂ. ೭ ಎ-೧, ಗೋಕುಲಂ ರಸ್ತೆ, ಜಯಲಕ್ಷ್ಮಿಪುರಂ, ಮೈಸೂರು–೧೨

೧೧. ಡಾ॥ ಸಿ. ಪಿ. ಸಿದ್ಧಾಶ್ರಮ, ಕನ್ನಡ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ
ಮೈಸೂರು–೫೭೦ ೦೦೬

೧೨. ಎಂ. ಎಸ್. ಲಿಂಗಪ್ಪ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮಿಪುರಂ
ಮೈಸೂರು–೫೭೦ ೦೧೨

೧೩. ಸಿ. ನಾಗಣ್ಣ, ಇಂಗ್ಲಿಷ್ ಪ್ರಾಧ್ಯಾಪಕರು
ಮಹಾರಾಜ ಕಾಲೇಜು, ಮೈಸೂರು.

೧೪. ಡಾ॥ ಎಂ. ಎಸ್. ಕೃಷ್ಣಮೂರ್ತಿ, ನಿವೃತ್ತ ಹಿಂದಿ ಪ್ರಾಧ್ಯಾಪಕರು
ನಂ. ೭೧೮, ೧೬ನೆಯ ಮುಖ್ಯ ರಸ್ತೆ, ಸರಸ್ವತಿಪುರಂ,
ಮೈಸೂರು–೫೭೦ ೦೦೯

೧೫. ಡಾ॥ ಸೋಮಶೇಖರಗೌಡ
ರೀಡರ್ ಭಾಷಾ ವಿಜ್ಞಾನ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬

೧೬. ಪ್ರೊ॥ ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್
ನಂ. ೪೧, ೬ನೆಯ ಮುಖ್ಯ ರಸ್ತೆ, ಸರಸ್ವತಿಪುರಂ
ಮೈಸೂರು–೫೭೦ ೦೦೯

೧೭. ಪ್ರೊ॥ ಕೆ. ಎಸ್. ಭಗವಾನ್, ಇಂಗ್ಲಿಷ್ ವಿಭಾಗದ ಮುಖ್ಯಸ್ಥರು
ಯುವರಾಜ ಕಾಲೇಜು, ಮೈಸೂರು.

G. S. Shivarudrappa, Channaveera Kanavi, S. G. Siddaramaiah, Lakshmana Rao and writers like Prof. V. K. Gokak, Chaduranga, Besagarahally Ramanna, Sudhakara, Rajashekhara Neeramanvi, to mention only a few important ones.

Mr. Rao's article has no sense of proportion. He has given two-three sentences to the Jnanapeetha award winners, while he revals in devoting a whole paragraph to "Shikari, a shadow of Kafka. Puttappa has made notable contributions to every form of literature: Poetry, novel, short story, epic, biography, essay, criticism, drama. Mr. Rao, however, chooses Karanth to compare with the mighty Russian novelists. Those who are familiar with the epic novels of the Russian giants can handly agree with him. If Puttappa concentrates, Karanth ruminates. No novel of Karanth has the canvas of "Kanooru Heggadithi" (the title of which Mr. Rao has wrongly given!) or "Malegalalli Madumagalu" of Puttappa. He alone favourably compars with the Russian giants. He is, in fact, the titan of modern Kannada literature.

Mr. Kamath's panoramic view of Karnataka tempts tourists. He has, however, wrongly translated the last line of a vachana by Basavanna. The word "thumbi" is used in two senses: (i) fill; and (ii) bee. Hence it should be "O Lord of Kudalasangama. I am a bee at your lotus-feet (to suck the nectar of Divine Bliss).

**(K. S. BHAGAVAN)**
Lecturer in English,
University Evening College. Mysore–5

ಕುವೆಂಪು : ಇಂಗ್ಲಿಷಿನವರು ನಮ್ಮ ದೇಶಕ್ಕೆ ಬಂದದ್ದಕ್ಕೆ ಏನೇ ನಷ್ಟವಾಗಿರಲಿ ಒಂದು ಲಾಭವಾಯಿತು. ನಮಗೆಲ್ಲ ವಿದ್ಯಾಭ್ಯಾಸ ಮಾಡುವ ಅನುಕೂಲ ಸಿಕ್ಕಿತು. ಇಲ್ಲದಿದ್ದರೆ ನಾನು ಈ ಮಟ್ಟಕ್ಕೆ ಬರಲಿಕ್ಕೆ ಆಗುತ್ತಾನೆ ಇರಲಿಲ್ಲ. ಯಾವ ಹಾರುವನ ಮನೇಲಿ ಸಗಣಿ ಹೊತ್ತುಕೊಂಡು ಇರುತ್ತಿದ್ದೆನೊ. ನಾನು ವೈಸ್-ಛಾನ್ಸಲರ್ ಆಗುತ್ತಿರಲಿಲ್ಲ, 'ಶ್ರೀ ರಾಮಾಯಣ ದರ್ಶನಂ' ಬರೆಯುತ್ತಿರಲಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದಿದೆ. ಆದರೆ ನಿಜವಾದ ಸ್ವಾತಂತ್ರ್ಯ ಅಂದರೆ ಬ್ರಾಹ್ಮಣರ ಹಿಡಿತದಿಂದ ಶೂದ್ರರು ತಪ್ಪಿಸಿಕೊಳ್ಳುವುದು. ಅವರ ಕೈಯಿಂದ ಬಿಡಿಸಿಕೊಳ್ಳುವುದೇ ನಿಜವಾದ ಸಾತಂತ್ರ್ಯ ತಿಳಿದುಕೊಳ್ಳಿ.

ಗು. ಪರಮೇಶ : ಬ್ರಾಹ್ಮಣರು ಬಹಳ ಕನ್ನಿಂಗ್ ಅಲ್ಲ, ಯಾಕೆ, ಸರ್ ?

ನಾನು : ಅವರ ಹುಟ್ಟುಗುಣಾನೆ ಅದು,

ಕುವೆಂಪು : ನೀವು ಬ್ರಾಹ್ಮಣರಿಂದ ತಪ್ಪಿಸಿಕೊಳ್ಳಬೇಕಾದರೆ, ನೀವು ಮೊದಲು ಮಾಡಬೇಕಾದ ಕೆಲಸ, ಅವರು ಗೌರವಿಸುವುದನ್ನೆಲ್ಲ ಅಗೌರವಿಸುವುದನ್ನ ಕಲಿಯಿರಿ.... ಈ ಶೂದ್ರರಿದ್ದಾರಲ್ಲಾ ಇವರಿಗೆ ಎಷ್ಟು ಹೇಳಿದರೂ ಹಿಡಿಯೋಲ್ಲ ಶತಮಾನಗಳ ಇಲ್ಲಣ ತಲೆಯಲ್ಲಿ ತುಂಬಿಕೊಂಡಿದೆ.

ಇದನ್ನು ಭಾವಾಭಿನಯಪೂರ್ವಕವಾಗಿ ತಮ್ಮ ಬಲಗೈನ ತೋರು ಬೇರಳನ್ನು ತಮ್ಮ ತಲೆಗೆ ತಿವಿದುಕೊಳ್ಳುತ್ತಾ ಹೇಳಿದರು.

ನಾನು : ಒಂದು ಸ್ಪಷ್ಟನೆಗಾಗಿ ಈ ಮಾತು ಕೇಳ್ತಿದ್ದೀನಿ. ನನಗೆ ಸರಿಯಾಗಿ ಗೊತ್ತಿದೆ. ಇಲ್ಲಿ ಬಂದಿರುವ ನನ್ನ ವಿದ್ಯಾರ್ಥಿ ಮಿತ್ರರಿಗೆ ತಿಳೀಲಿ ಅಂತ ಕೇಳ್ತಾ ಇದೀನಿ. ನೀವು ಬ್ರಾಹ್ಮಣರನ್ನು ಟೀಕಿಸುತ್ತ ನೀವೇ ಬ್ರಾಹ್ಮಣರಾಗಿ ಬಿಟ್ಟದ್ದೀರಿ, ಎಂದು ಆಡಿಕೊಳ್ತಾರೆ, ಇದು ವಿವೇಕಾನಂದರನ್ನು ಓದಿದರೆ ಆಧಾರ ಹೀನವಾದುದು ಎಂದು ತಿಳಿಯುತ್ತೆ.

ಕುವೆಂಪು : ನೋಡಿ, ಈ ಬ್ರಾಹ್ಮಣ ಪದ ಎನ್ನೋದು ಒಂದು ಕಾಲದಲ್ಲಿ ಒಳ್ಳೆ ಅರ್ಥದಲ್ಲಿ ಪ್ರಯೋಗವಾಗ್ತಿತ್ತು. ಈಗ ಅದು ತನ್ನೆಲ್ಲ ಅರ್ಥ ಕಳೆದುಕೊಂಡು ಕೇವಲ ಒಂದು ಜಾತಿಸೂಚಕ ಶಬ್ದವಾಗಿ ಬಿಟ್ಟಿದೆ. ಇಂಗ್ಲಿಷ್‌ನ tyrant ಅನ್ನುವ ಪದಕ್ಕೆ ಹಿಂದೆ ಒಳ್ಳೆ ಅರ್ಥ ವಿತ್ತು. ಒಳ್ಳೆಯ ರಾಜ, ಮಾನವೀಯ ಗುಣಗಳುಳ್ಳ ದೊರೆ ಎಂಬರ್ಥವಿತ್ತು. ಈಗ ಅದಕ್ಕೆ ವಿರುದ್ಧವಾದ ಅರ್ಥದಲ್ಲಿ ಅದು ಬಳಕೆಯಾಗುತ್ತಿದೆ. ಬ್ರಾಹ್ಮಣ ಶಬ್ದನೂ ಹಾಗೇ ಆಗಿದೆ.

ಗು. ಪರಮೇಶ್ : ಸರ್. ವೆಂಕಣ್ಣಯ್ಯನವರು ಬ್ರಾಹ್ಮಣರಲ್ಲವೆ ?

ಕುವೆಂಪು : ನಾನು ಹೇಳಿದ ಅರ್ಥದಲ್ಲಿ ಬ್ರಾಹ್ಮಣರು, ನೀವು ಹೇಳಿವ ಅರ್ಥದಲ್ಲಿ ಅಲ್ಲ, ಅವರಿಗೆ ಅಂತಜಾತಿ ಕಿಲ್ಬಿಷ ಇದ್ದರೆ ನಾನು ನನ್ನ ಮೇರುಕೃತಿ 'ಶ್ರೀ ರಾಮಾಯಣ ದರ್ಶನಂ' ಅನ್ನು ಅವರಿಗೆ ಅರ್ಪಿಸುತ್ತಿದ್ದೆನೆ? ಖಂಡಿತ ಇಲ್ಲ. ಅವರನ್ನು ಬಿಟ್ಟು ನಾವು ಹೊರಟಾಗ ಆಗಲೇ ಸಾಕಷ್ಟು ಹೊತ್ತಾಗಿತ್ತು. ಬೀದಿಯಲ್ಲಿ ವಿದ್ಯುದ್ದೀಪಗಳು ಕತ್ತಲೆಯನ್ನು ಒತ್ತುತ್ತಿದ್ದವು.

**ಈ ಸಂಚಿಕೆಯ ಲೇಖಕರು—**

ಸರ್ವಶ್ರೀಗಳಾದ—

೧. ಡಾ॥ ದೇ. ಜವರೇಗೌಡ, ವಿಶ್ರಾಂತ ಉಪಕುಲಪತಿಗಳು
'ಕಲಾ ನಿಲಯ' ಕಾಳಿದಾಸ ರಸ್ತೆ, ಜಯಲಕ್ಷ್ಮಿಪುರಂ, ಮೈಸೂರು-೧೨

೨. ಜಿ. ಟಿ. ನಾರಾಯಣರಾವ್, ನಂ. ೮ "ಅತ್ರಿ" ಕಾಮಾಕ್ಷಿ ಆಸ್ಪತ್ರೆ ರಸ್ತೆ
ಕುವೆಂಪುನಗರ, ಮೈಸೂರು-೫೭೦ ೦೨೩

೩. ಡಾ॥ ಜೆ. ಶಶಿಧರ ಪ್ರಸಾದ್, ಪ್ರಾಧ್ಯಾಪಕರು
ಭೌತಶಾಸ್ತ್ರ, ಮಾನಸಗಂಗೋತ್ರಿ, ಮೈಸೂರು.

೪. ಡಾ॥ ಸಿ. ಆರ್. ಕಮಲಮ್ಮ (ಕಮಲಾ ಹಂಪನಾ)
ಎ-೫ 'ಸೌಗಂಧಿಕಾ' ನ್ಯೂ ಕಾಂತರಾಜ ಅರಸ್ ರಸ್ತೆ, ಕುವೆಂಪುನಗರ
ಮೈಸೂರು-೫೭೦ ೦೨೩.

೫. ಚಂದ್ರಶೇಖರಾರಾಧ್ಯ, ಸಾಹಿತ್ಯ ರಚನಾ ವಿಭಾಗದ ಮುಖ್ಯಸ್ಥ
ಅನೌಪಚಾರಿಕ ಶಿಕ್ಷಣ ಮತ್ತು ಸಂಪಾದಕ, ಕ.ರಾ.ವ.ಶಿ.ಸ, ಮೈಸೂರು-೬

೬. ಡಾ॥ ಅರವಿಂದ ಮಾಲಗತ್ತಿ, ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೬

೭. ಡಾ॥ ಕೆ. ಚಿದಾನಂದಗೌಡ, ಪ್ರಾಧ್ಯಾಪಕರು
ಜಯಚಾಮರಾಜ ತಾಂತ್ರಿಕ ಕಾಲೇಜು, ಮೈಸೂರು-೫೭೦ ೦೦೬

೮. ಡಾ॥ ತಿಪ್ಪೇಸ್ವಾಮಿ, ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ಹಿಂದಿ ವಿಭಾಗ, ಮಾನಸಗಂಗೋತ್ರಿ, ಮೈಸೂರು.

೯. ಶ್ರೀಮತಿ ಲತಾರಾಜಶೇಖರ್, ಬರಹಗಾರ್ತಿ
ನಂ. ೧೫, ಟೆಂಪಲ್ ರಸ್ತೆ, ಜಯಲಕ್ಷ್ಮಿಪುರಂ, ಮೈಸೂರು-೫೭೦ ೦೧೨

೧೦. ಪ್ರೊ॥ ಎಸ್. ನಾರಾಯಣಶೆಟ್ಟಿ (ಸುಜನಾ)
ನಂ. ೭ ಎ-೧, ಗೋಕುಲಂ ರಸ್ತೆ, ಜಯಲಕ್ಷ್ಮಿಪುರಂ, ಮೈಸೂರು-೧೨

೧೧. ಡಾ॥ ಸಿ. ಪಿ. ಸಿದ್ಧಾಶ್ರಮ, ಕನ್ನಡ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ
ಮೈಸೂರು-೫೭೦ ೦೦೬

೧೨. ಎಂ. ಎನ್. ಲಿಂಗಪ್ಪ
ಶ್ರೀ ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಜಯಲಕ್ಷ್ಮೀಪುರಂ
ಮೈಸೂರು-೫೭೦ ೦೧೨

೧೩. ಸಿ. ನಾಗಣ್ಣ, ಇಂಗ್ಲಿಷ್ ಪ್ರಾಧ್ಯಾಪಕರು
ಮಹಾರಾಜ ಕಾಲೇಜು, ಮೈಸೂರು.

೧೪. ಡಾ॥ ಎಂ. ಎಸ್. ಕೃಷ್ಣಮೂರ್ತಿ, ನಿವೃತ್ತ ಹಿಂದಿ ಪ್ರಾಧ್ಯಾಪಕರು
ನಂ. ೭೧೪, ೧೬ನೆಯ ಮುಖ್ಯ ರಸ್ತೆ, ಸರಸ್ವತಿಪುರಂ,
ಮೈಸೂರು-೫೭೦ ೦೦೯

೧೫. ಡಾ॥ ಸೋಮಶೇಖರಗೌಡ
ರೀಡರ್ ಭಾಷಾ ವಿಜ್ಞಾನ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

೧೬. ಪ್ರೊ॥ ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್
ನಂ. ೪೧, ೬ನೆಯ ಮುಖ್ಯ ರಸ್ತೆ, ಸರಸ್ವತಿಪುರಂ
ಮೈಸೂರು-೫೭೦ ೦೦೯

೧೭. ಪ್ರೊ॥ ಕೆ. ಎಸ್. ಭಗವಾನ್, ಇಂಗ್ಲಿಷ್ ವಿಭಾಗದ ಮುಖ್ಯಸ್ಥರು
ಯುವರಾಜ ಕಾಲೇಜು, ಮೈಸೂರು.

# ಪುಸ್ತಕ ಪ್ರಪಂಚ

- ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ವತಿಯಿಂದ ಪ್ರಕಟವಾಗುತ್ತಿರುವ ಈ ಮಾಸಿಕ 44ನೆಯ ವರ್ಷಕ್ಕೆ ಅಡಿ ಇಟ್ಟಿದೆ.
- ಸಾಹಿತ್ಯ, ಕಲೆ, ವಿಜ್ಞಾನ, ಸೃಜನಶೀಲ, ವಾಙ್ಮಯ, ಸಾಹಸಗಾಥೆ, ವರ್ತಮಾನ ಸಾಧನೆಗಳು, ಮಹಾತ್ಮರ ಜೀವನ ಮುಂತಾದುವುಗಳನ್ನೊಳಗೊಂಡ ಜ್ಞಾನ ಸಂಕೀರ್ಣ ಇದು.
- ಇಂಗ್ಲಿಷ್‌ನ ರೀಡರ್ಸ್ ಡೈಜೆಸ್ಟ್ ಮಾದರಿಯಲ್ಲಿ ಕನ್ನಡ ಭಾಷೆ ಮತ್ತು ಪರಿಸರಕ್ಕೆ ಒಪ್ಪುವ ಸಂಪಾದನಾ ಕೃತಿಯಾಗಿದೆ.
- ಜಾಹೀರಾತುಗಳ ಕಣ್ಸೆಳೆತ, ಭಾವೋದ್ರೇಕ ಲೇಖನಗಳ ಮರುಳುತನ, ಬಣ್ಣದ ಚಿತ್ರಗಳ ಅಸಹ್ಯ ಓಕುಳಿಯಿಂದ ವಿಮುಕ್ತಗೊಂಡಿದೆ.
- ಸ್ವತಂತ್ರ ಲೇಖನಗಳು, ಪುಸ್ತಕ ಪರಿಚಯ, ಸಣ್ಣ ಕತೆಗಳು, ಸಾಹಸ ವಿವರಗಳು, ಸಮಕಾಲೀನ ಸಾಧನೆ ಸಿದ್ಧಿಗಳಿಗೆ ಸಹೃದಯತೆಯ ಸ್ಪಂದನ ಹೊಂದಿದೆ.
- ನೀವು ಬರಹಗಾರರಾಗಿದ್ದಲ್ಲಿ ಸ್ವತಂತ್ರ / ಅನುವಾದಿತ ಲೇಖನಗಳನ್ನು ಪ್ರಕಟಣೆಗಾಗಿ ಕಳುಹಿಸಿ. ಪ್ರಕಟಿತ ಲೇಖನಕ್ಕೆ ಯುಕ್ತ ಸಂಭಾವನೆಯುಂಟು. ಸಾದರ ಸ್ವೀಕಾರ ವಿಭಾಗಕ್ಕೆ ಕೃತಿ ಪರಿಚಯಕ್ಕಾಗಿ ನಿಮ್ಮ ಪ್ರಕಟಿತ ಕೃತಿಗಳ 2 ಪ್ರತಿಗಳನ್ನು ಕಳುಹಿಸಿ, ಆರೋಗ್ಯಕರ ವಿಮರ್ಶೆಯನ್ನು ನಿರೀಕ್ಷಿಸಿ.

ಈ ಜ್ಞಾನದೀವಿಗೆ ನಿಮ್ಮ ಮನ, ಮನೆ ಬೆಳಗುವಂತೆ ಮತ್ತು ಕನ್ನಡಿಗರು ಇರುವಲ್ಲೆಲ್ಲಾ ಪಸರಿಸುವಂತೆ ಮಾಡಲು ಕೂಡಲೇ ಚಂದಾದಾರರಾಗಿ. ನಿಮ್ಮ ನೆರೆಹೊರೆಯವರನ್ನು ಚಂದಾದಾರರನ್ನಾಗಿ ಮಾಡಿ ಸಹಕರಿಸಿ.

*ಸಂಪರ್ಕಿಸಬೇಕಾದ ವಿಳಾಸ :*

ಸಂಪಾದಕರು
**ಪುಸ್ತಕ ಪ್ರಪಂಚ**
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. 5/1, ವಿನೋಬ ರಸ್ತೆ,
ಮಾನಸಗಂಗೋತ್ರಿ, ಮೈಸೂರು-6
ದೂರವಾಣಿ : 512485, 515828

Reg.No. KRNN29/WPP6

**Licence No.21**
Licenced to post with payment

**ಎಲ್ಲರೂ ಓದಲೇಬೇಕಾದ ಕೃತಿ**

## 'ಶ್ರೀ ಕುವೆಂಪು' ಅವರ 'ಜನಪ್ರಿಯ ವಾಲ್ಮೀಕಿ ರಾಮಾಯಣ'

- ಒಂಬತ್ತನೆಯ ಮುದ್ರಣದಲ್ಲಿ ಸಮಿತಿಯಿಂದ ಪ್ರಕಟಗೊಂಡಿರುವ ಜನಪ್ರಿಯ ಕೃತಿ.
- ಹೊಸದಾಗಿ ಓದು ಬರಹ ಕಲಿತವರಿಗಾಗಿ ಸರಳ ಗದ್ಯದಲ್ಲಿ ವಿಷಯ ನಿರೂಪಣೆ.
- ಸುಂದರವಾದ ಚಿತ್ರಗಳು, ಅಂದವಾದ ಮುದ್ರಣದಲ್ಲಿ ಡೆಮಿ 1/8 ವಿನ್ಯಾಸದ 426 ಪುಟಗಳ ಸಮಗ್ರ ರಾಮಯಣವು ಕೈಗೆಟಕುವ ದರದಲ್ಲಿ ಲಭ್ಯ.
- ನಿಮ್ಮ ಪ್ರತಿಗಳನ್ನು ಇಂದೇ ಕಾಯ್ದಿರಿಸಿಕೊಳ್ಳಿ.

ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಪ್ರಧಾನ ಕಾರ್ಯದರ್ಶಿ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು,ಇವರನ್ನು ಸಂಪರ್ಕಿಸಿ.

ಕವಿ ಮಹರ್ಷಿ ಅಂದು ಹಾಡಿದ ರಾಮಾಯಣ ಇಂದು ಮತ್ತೊಮ್ಮೆ ನಮ್ಮಲ್ಲಿ ಮೂಡಿದ ಹೊರತು ಸಾರ್ಥಕವಾಗುವುದಿಲ್ಲ. ಏಕೆಂದರೆ ಕೃತಿಯ ರಸಾಸ್ವಾದನೆಯೂ ಕೃತಿರಚನೆಯಂತೆಯೇ ಒಂದು ಸೃಷ್ಟಿ ಕಾರ್ಯ. ಓದುವ ಅಥವಾ ಆಲಿಸುವ ನಮ್ಮ ಒಬ್ಬೊಬ್ಬರ ಹೃದಯದಲ್ಲಿಯೂ ರಾಮಾಯಣದ ಪುನಃಸೃಷ್ಟಿಯಾಗಬೇಕು. ಹಾಗೆ ಒಂದೊಂದು ಚೇತನ ದಲ್ಲಿಯೂ ರಾಮಾಯಣಾವತಾರವಾಗುವುದರಲ್ಲಿಯೇ ವಾಲ್ಮೀಕಿಯ ಕೃತಿ ಸಾರ್ಥಕತೆ ಪಡೆಯುತ್ತದೆ. ನಮ್ಮ ಬಾಳುವೆಗೂ ಪುರುಷಾರ್ಥ ಸಿದ್ಧಿ ಯಾಗುತ್ತದೆ.

—ಕೃತಿಯನ್ನು ಕುರಿತು ಶ್ರೀ ಕುವೆಂಪು ಅವರು

Edited by Chandrashekararadhya. Printed by H. V. Sreenivasachar, Manager, at Karnataka State Adult Education Council Press and Published by Karnataka State Adult Education Council, No. 5/1, Vinoba Road, Manasagangothri Campus, Mysore - 570 006.